# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ (ಮಾಮ್‌ಕೋಸ್)

ಸ್ಥಾಪನೆ 1939


ದೂರವಾಣಿ: (08182) 250513, 250514 (ಕೇಂದ್ರ ಕಛೇರಿ)

ಇ–ಮೇಲ್ : ho@mamcos.info ವೆಬ್‌ಸೈಟ್: www.mamcos.info


## 2025–26ನೇ ಸಾಲಿನ

# ಲೆಕ್ಕಪರಿಶೋಧನಾ ವರದಿ

ವಾರ್ಷಿಕ ಸಾಮಾನ್ಯ ಸಭೆಯ
ದಿನಾಂಕ 30 ಆಗಸ್ಟ್ 2026
ಭಾನುವಾರ ಬೆಳಿಗ್ಗೆ 11–00 ಗಂಟೆ

ಸ್ಥಳ: ಪ್ರೇರಣಾ ಸಭಾಂಗಣ, ಪೆಸಿಟಮ್ ಕಾಲೇಜು ಆವರಣ (PESITM CAMPUS) ಸಾಗರ ರಸ್ತೆ, ಶಿವಮೊಗ್ಗ



**ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ,**

**ಎ.ಪಿ.ಎಂ.ಸಿ ಆವರಣ ಸಾಗರ ರಸ್ತೆ ಶಿವಮೊಗ್ಗ– 577 204**

# ಸನ್ 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(ಹಣದುರುಪಯೋಗ ಹಾಗೂ ಗುರುತರವಾದ ನ್ಯೂನತೆಗಳ ಬಗ್ಗೆ 31 ಕಂಡಿಕೆಗಳನ್ನು ಓದುವುದು)**

| | | | |
|---|---|---|---|
| 1 | **ಸಂಘದ ಪರಿಚಯಾತ್ಮಕ ವಿವರಗಳು** | | |
| | 1 | ಸಂಘದ ಹೆಸರು (ನೊಂದಣಿ ಪತ್ರದಲ್ಲಿ ಇರುವಂತೆ) | ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, |
| | 2 | ಸಂಘದ ನೋಂದಣಿ ಸಂಖ್ಯೆ & ದಿನಾಂಕ | ಸಹಕಾರ ಸಂಘಗಳ ನಿಬಂಧಕರು, ಮೈಸೂರು ಇದರ ನೋಂದಣಿ ಪತ್ರ ಸಂಖ್ಯೆ: 5158 ನೋಂದಣಿ ಸಂಖ್ಯೆ : ಆರ್.ಸಿ.ಎಸ್. 1540, ದಿನಾಂಕ: 08/11/1939 |
| | 3 | ಸಂಘದ ಸಂಪೂರ್ಣ ಅಂಚೆ ವಿಳಾಸ | ಎ.ಪಿ.ಎಂ.ಸಿ ಆವರಣ ಸಾಗರ ರಸ್ತೆ ಶಿವಮೊಗ್ಗ– 577 204 |
| | 4 | ದೂರವಾಣಿ/ಮೊಬೈಲ್ ಸಂಖ್ಯೆ | 08182–250513, ಮೊಬೈಲ್ 94498–63251 |
| | 5 | ಮಿಂಚಂಚೆ ವಿಳಾಸ (email id) | ho@mamcos.info |
| | 4 | ಸಂಘದ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಸಂಘದ ಉಪವಿಧಿ ಭಾಗ–1, 3 ಪ್ರಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು (ಸಹಕಾರ ಸಂಘದ ಕಾರ್ಯವ್ಯಾಪ್ತಿಯು, ಕರ್ನಾಟಕ ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ. ಅಡಿಕೆ, ಕಾಳು ಮೆಣಸು ಮತ್ತಿತರ ತೋಟದ ಬೆಳೆಗಳ ಖರೀದಿ, ವಿಕ್ರಿ, ಸಂಸ್ಕರಣೆ ಇವುಗಳ ವ್ಯವಹಾರಕ್ಕೆ ಕಾರ್ಯ ವ್ಯಾಪ್ತಿಯ ನಿರ್ಬಂಧ ಇರುವುದಿಲ್ಲ. |
| 2 | **ಸಂಘದ ಉದ್ದೇಶಗಳ ಬಗ್ಗೆ** | | |
| | 1 | ಸಂಘದ ಉಪವಿಧಿಗಳಲ್ಲಿ ಉದ್ದೇಶಿಸಿದ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆಯೇ? | ಸಂಘವು ತನ್ನ ಉಪವಿಧಿಯಲ್ಲಿರುವ ಉದ್ದೇಶಗಳಿಗನುಗುಣವಾಗಿ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. |
| | 2 | ಉಪ ವಿಧಿಗಳಲ್ಲಿ ಇಲ್ಲದ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆಯೇ? | ನಮ್ಮ ಲೆಕ್ಕಪರಿಶೋಧನಾ ಅವಧಿಯಲ್ಲಿ ಉಪವಿಧಿಯಲ್ಲಿ ಉಲ್ಲೇಖಿಸದ ಚಟುವಟಿಕೆಯನ್ನು ನಡೆಸಿರುವುದು ಕಂಡುಬಂದಿಲ್ಲ. |
| | | ಸಹಕಾರಿಯ ಉಪವಿಧಿ ಭಾಗ–1 ಅಧ್ಯಾಯ 5 ರ ಪ್ರಕಾರ ಸಂಘದ ಮುಖ್ಯ ಉದ್ದೇಶಗಳು ಈ ಕೆಳಗಿನಂತಿದೆ | |
| | 1 | ಸಂಘದ ಸದಸ್ಯರ ಮತ್ತು ಬೆಳೆಗಾರರ ಬಾಗಾಯ್ತು ಉತ್ಪನ್ನಗಳಾದ ಅಡಿಕೆ, ಕಾಳು ಮೆಣಸು, ಕಾಫಿ, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನ ಬೆಳೆಗಳಿಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂತೆ ಎ.ಪಿ.ಎಂ.ಸಿ. ನಿಯಮಗಳಿಗೊಳಪಟ್ಟು ಕಮೀಷನ್ ಏಜೆಂಟ್ ಆಗಿ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು ಹಾಗೂ ಇವುಗಳನ್ನು ಖರೀದಿಸಿ, ಸಂಸ್ಕರಿಸಿ ರಾಜ್ಯದ ಒಳಗೂ ಹೊರಗೂ ಮತ್ತು ದೇಶ ವಿದೇಶಗಳಲ್ಲಿ ವ್ಯಾಪಾರ ಮಾಡುವುದು ಮತ್ತು ಮಾರುಕಟ್ಟೆಯನ್ನು ಕಂಡುಕೊಳ್ಳುವುದು. | |
| | 2 | ಉತ್ತಮ ದರ್ಜೆಯ ಅಡಿಕೆ, ಕಾಳು ಮೆಣಸು, ಕಾಫಿ, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸದಸ್ಯರನ್ನು ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಅಗತ್ಯವಾದ ನೆರವು ನೀಡುವುದು. | |

| | |
|---|---|
| 3 | ಅಡಿಕೆ ಕೊಳೆರೋಗ (ಶಿಲೀಂದ್ರ ರೋಗ) ನಿವಾರಣೆಗೆ ಅಗತ್ಯವಾದ ಕೊಳೆ ಔಷಧಿಗಳನ್ನು ನಗದಾಗಿ ಅಥವಾ ಸಾಲದ ರೂಪದಲ್ಲಿ ಸಂಘದ ಸದಸ್ಯರಿಗೆ ಒದಗಿಸುವುದು. |
| 4 | ಬಾಗಾಯ್ತು ಕೃಷಿಗೆ ಅಗತ್ಯವಾದ ರಾಸಾಯನಿಕ ಮತ್ತು ಇತರೆ ಗೊಬ್ಬರಗಳನ್ನು ಮತ್ತು ಜಾನುವಾರು ಆಹಾರಗಳನ್ನು, ವ್ಯವಸಾಯೋಪಕರಣಗಳು, ಕೃಷಿ ಯಂತ್ರೋಪಕರಣಗಳೇ ಮುಂತಾದವುಗಳನ್ನು ನಗದಾಗಿ ಅಥವಾ ಸಾಲದ ರೂಪದಲ್ಲಿ ಒದಗಿಸುವುದು. ಅಸ್ತ್ರ ಒಲೆ, ಡ್ರೈಯರ್, ಗಟಾರ್ ಸ್ಪ್ರೇಯರ್ ಮತ್ತು ಪವರ್ ಸ್ಪ್ರೇಯರ್ ಯಂತ್ರಗಳ ಖರೀದಿಗೆ ಸಹಾಯಧನ ಒದಗಿಸುವುದು. |
| 5 | ತೋಟದ ಉತ್ಪನ್ನಗಳ ಬೆಳೆಗಾರರಿಗೆ ಫಸಲು ಸಂರಕ್ಷಣೆಗೆ ಅನುಕೂಲವಾಗುವಂತೆ ಮದ್ದುಗುಂಡುಗಳ ವ್ಯವಹಾರವನ್ನು ಸಕ್ಷಮ ಪ್ರಾಧಿಕಾರದ ಪರವಾನಿಗೆ ಪಡೆದು ನಡೆಸುವುದು. |
| 6 | ಸಂಘದ ಸದಸ್ಯರಿಗೆ ಅಗತ್ಯವಾದ, ಸಂಘದ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡ ವಿವಿಧ ರೀತಿಯ ಸಾಲಗಳನ್ನು ಸದಸ್ಯರಿಗೆ ನೀಡುವುದು. |
| 7 | ಸಂಘಕ್ಕೆ ಅಗತ್ಯವಾದ ದುಡಿಯುವ ಬಂಡವಾಳ ಸಂಗ್ರಹಣೆಗಾಗಿ ಸದಸ್ಯರಿಂದ ವಿವಿಧ ಪ್ರಕಾರದ ಠೇವಣಿಗಳನ್ನು ಸ್ವೀಕರಿಸುವುದು. ಸಂಘದ ಹಾಗೂ ಸಾರ್ವಜನಿಕ ಸರ್ವೋಪಯೋಗಿ ಉದ್ದೇಶಕ್ಕಾಗಿ ಸದಸ್ಯರು ಮತ್ತು ಸಾರ್ವಜನಿಕರಿಂದ ದೇಣಿಗೆ, ಚಂದಾ ಮುಂತಾದವುಗಳ ಮೂಲಕ ನಿಧಿ ಸಂಗ್ರಹಿಸುವುದು ಮತ್ತು ಯಾವುದೇ ವ್ಯಕ್ತಿ, ಹಣಕಾಸಿನ ಸಂಸ್ಥೆಗಳು ಹಾಗೂ ಸಂಘಟನೆಗಳು, ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸರ್ಕಾರದಿಂದ ಸಹಕಾರಿ ಕಾಯಿದೆ, ನಿಯಮಗಳು ಹಾಗೂ ಸಂಘದ ಉಪ ನಿಯಮಗಳಿಗೊಳಪಟ್ಟು ಸಾಲ ಮತ್ತು ಇನ್ನಿತರ ಸಹಾಯ ಪಡೆಯುವುದು ಹಾಗೂ ಈ ಬಗೆಗೆ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆದು ಸ್ಥಿರ ಮತ್ತು ಚರಾಸ್ತಿಗಳನ್ನು ಅಡಮಾನು (Mortgage) ಮಾಡಿ ಸಾಲ ಪಡೆಯುವುದು. |
| 8 | ಸಂಘದ ಸದಸ್ಯರಿಗೆ ಪರಸ್ಪರ ಸಹಕಾರ, ಸ್ವ ಸಹಾಯ, ಮಿತವ್ಯಯ ಮತ್ತು ಉಳಿತಾಯ ಮನೋಭಾವನೆಗಳ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಅವರಲ್ಲಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಹಾಗೂ ಅವುಗಳ ಅನುಷ್ಠಾನಕ್ಕೆ ಅವಕಾಶ ಮಾಡಿಕೊಡುವುದು. |
| 9 | ಸಂಘದ ಮುಖ್ಯ ಉದ್ದೇಶ ಮತ್ತು ಹಿತಕ್ಕೆ ಧಕ್ಕೆ ಒದಗದ ರೀತಿಯಲ್ಲಿ ಸರ್ಕಾರವು ವಹಿಸಿ ಕೊಡಬಹುದಾದ ವ್ಯವಹಾರಗಳನ್ನು ನಿರ್ವಹಿಸುವುದು. |
| 10 | ತೋಟಗಾರಿಕೆ ಬೆಳೆಗಳ ಕೃಷಿ ಪದ್ಧತಿ, ಸಾವಯವ ಗೊಬ್ಬರ ತಯಾರಿಕೆ, ಎರೆಹುಳು ಗೊಬ್ಬರ ತಯಾರಿಕೆ, ಹೈನುಗಾರಿಕೆ, ಜೇನು ಸಾಕಾಣಿಕೆ, ಸೊಪ್ಪಿನ ಬೆಟ್ಟ ಸಂರಕ್ಷಣೆ ಮತ್ತು ಸಂವರ್ಧನೆ ಬಗ್ಗೆ ಮಾರ್ಗದರ್ಶನ ಮಾಡುವುದು. ಹಸಿರೀಕರಣ, ಭೂ ಸಂರಕ್ಷಣೆ, ಹೂಗಳ ಬೆಳೆಸುವಿಕೆ ಮತ್ತು ನರ್ಸರಿಗಳ ಪೋಷಣೆಗಾಗಿ ಸಾಲ ಸೌಕರ್ಯಗಳನ್ನು ಒದಗಿಸುವುದು ಮತ್ತು ಈ ಬಗ್ಗೆ ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಅಲ್ಪಾವಧಿ ತರಬೇತಿ ನೀಡಲು ವ್ಯವಸ್ಥೆಗೊಳಿಸುವುದು, ಈ ಕುರಿತು ಸಹಾಯ–ಸಹಕಾರ ನೀಡುವ ಮತ್ತಿತರ ಸಂಸ್ಥೆಗಳ ಹಾಗೂ ಸರ್ಕಾರಗಳ ನಬಾರ್ಡ್ ಯೋಜನೆಗಳ ಉಪಯೋಗ ಪಡೆಯುವುದು. |
| 11 | ಬೈಲಾ ಸಂಖ್ಯೆ 5(1)ರಲ್ಲಿ ತಿಳಿಸಿರುವ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಸಂಘದ ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಸದಸ್ಯರ ಅನುಕೂಲಕ್ಕಾಗಿ ಸಂಘದ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಯಾವುದೇ ಹೆಸರಿನಿಂದ ಕರೆಯಲ್ಪಡುವ ಶಾಖೆ/ಏಜೆನ್ಸಿ/ಖರೀದಿ ಅಥವಾ ಮಾರಾಟ ಕೇಂದ್ರಗಳನ್ನು ತೆರೆಯುವುದು ಮತ್ತು ಅವುಗಳ ಕಾರ್ಯ ನಿರ್ವಹಣೆ ಬಗ್ಗೆ ನಿಯಮಗಳನ್ನು ರೂಪಿಸುವುದು ಮತ್ತು ಅನಗತ್ಯವೆಂದು ಕಂಡು ಬಂದಲ್ಲಿ ಮುಚ್ಚುವುದು. |
| 12 | ಸಂಘದ ಸದಸ್ಯರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಸಮುದಾಯ ಭವನ ಮತ್ತು ವ್ಯಾಪಾರ ಮಳಿಗೆಗಳ ಸಂಕೀರ್ಣಗಳನ್ನು ನಿರ್ಮಿಸಿ ನಿರ್ವಹಿಸುವುದು. |
| 13 | ಸಂಘದ ವ್ಯವಹಾರಗಳಿಗೆ ಹಾಗೂ ಕಾರ್ಯ ನಿರ್ವಹಣೆಗೆ ಅಗತ್ಯವಾದ ನಿವೇಶನ ಅಥವಾ ಕಟ್ಟಡಗಳನ್ನು ಖರೀದಿಸುವುದು, ಸ್ವಾಧೀನಪಡಿಸಿಕೊಳ್ಳುವುದು, ಕಟ್ಟಡಗಳನ್ನು ನಿರ್ಮಿಸುವುದು, ಬದಲಾವಣೆ ಮಾಡುವುದು ಇತರೆ ಚರ ಸ್ವತ್ತುಗಳನ್ನು ಖರೀದಿಸುವುದು ಹಾಗೂ ಅವುಗಳನ್ನು ಸಂಘಕ್ಕೆ ಅವಶ್ಯಕತೆ ಇಲ್ಲದೇ ಇದ್ದ ಸಂದರ್ಭಗಳಲ್ಲಿ ಬಾಡಿಗೆಗೆ ಅಥವಾ ಲೀಸಿಗೆ ಕೊಡುವುದು ಅಥವಾ ಸಾಮಾನ್ಯ ಸಭೆಯ ಅನುಮತಿ ಪಡೆದು ನಿಯಮಾನುಸಾರ ವಿಲೇವಾರಿ ಮಾಡುವುದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಇತರೆ ಕಾರ್ಯಗಳನ್ನು ನಿರ್ವಹಿಸುವುದು. |

| | |
|---|---|
| 14 | ಸದಸ್ಯರ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಪ್ರವಾಸಿ ಸ್ಥಳಗಳಲ್ಲಿ ವಸತಿ ಗೃಹ ನಿರ್ಮಿಸುವುದು ಮತ್ತು ಇತರ ಸೌಕರ್ಯಗಳನ್ನು ಒದಗಿಸುವುದು. |
| 15 | ಸಂಘದ ಸದಸ್ಯರ ಮತ್ತು ನೌಕರರ ಕ್ಷೇಮಕ್ಕಾಗಿ, ಸಂಘದ ನಿವ್ವಳ ಲಾಭದಿಂದ ನಿಧಿಗಳನ್ನು ಸ್ಥಾಪಿಸಿ, ಸಹಾಯ ಅಗತ್ಯವಾದಾಗ ಅಂತಹ ಸದಸ್ಯರ ಅಥವಾ ನೌಕರರ ಕುಟುಂಬಕ್ಕೆ ಆ ನಿಧಿಯಿಂದ, ಆ ಸಂಬಂಧ ರಚಿಸಲಾದ ನಿಯಮಾನುಸಾರ ಸಹಾಯ ನೀಡುವುದು. |
| 16 | ಸಂಘದ ಸದಸ್ಯರ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು, ಪ್ರೋತ್ಸಾಹಿಸಲು, ಸದಸ್ಯರಿಂದ ಮತ್ತು ಇತರರಿಂದ ದಾನ ಅಥವಾ ದೇಣಿಗೆಗಳನ್ನು ಸಂಗ್ರಹಿಸಿ, ಅಗತ್ಯವಿದ್ದಲ್ಲಿ ಸಂಘದ ನಿವ್ವಳ ಲಾಭದಿಂದಲೂ ಸೇರಿಸಿ, ವಿದ್ಯಾನಿಧಿಯನ್ನು ಸ್ಥಾಪಿಸಿ, ಆಡಳಿತ ಮಂಡಲಿ ಈ ಸಂಬಂಧ ರೂಪಿಸಿ, ಸಾಮಾನ್ಯ ಸಭೆ ಅನುಮೋದನೆಗೊಳಪಟ್ಟ ಒಳ ನಿಯಮಗಳಿಗನುಸಾರ ಆ ನಿಧಿಯಿಂದ ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಸಹಾಯ |
| 17 | ಸಂಘದ ಸದಸ್ಯರ ಕುಟುಂಬಗಳಿಗೆ, ಸದಸ್ಯರ ಮರಣೋತ್ತರ ವಿಧಿಗಳನ್ನು ನಿರ್ವಹಿಸಲು ನೆರವು ನೀಡುವ ಬಗ್ಗೆ ಮತ್ತು ಅಗತ್ಯವಿದ್ದಲ್ಲಿ ಅಂತ್ಯ ಸಂಸ್ಕಾರ ನಿಧಿ ಪ್ರಾರಂಭಿಸಿ, ಅದಕ್ಕೆ ಅಗತ್ಯವಾದ ಹಣವನ್ನು ಸದಸ್ಯರಿಂದ ಸಂಗ್ರಹಿಸಿ ಅಥವಾ ಈ ಸಂಬಂಧ ರೂಪಿಸಲಾದ ನಿಯಮಾನುಸಾರ ಸದಸ್ಯರ ಕುಟುಂಬಗಳಿಗೆ ಆರ್ಥಿಕ ಸಹಾಯ ನೀಡುವುದು. |
| 18 | ಸಂಘದ ಸದಸ್ಯರ ಮಕ್ಕಳು ಸ್ವಂತ ಉದ್ಯೋಗ ಪ್ರಾರಂಭಿಸಲು ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಅಗತ್ಯ ಮಾರ್ಗದರ್ಶನ ನೀಡುವುದು. |
| 19 | ಸದಸ್ಯರಿಗೆ ಹಾಗೂ ಅವರ ಅವಲಂಬಿತರಿಗೆ, ಆರ್ಥಿಕ ಭದ್ರತೆ ಹಾಗೂ ಆರೋಗ್ಯ ಭದ್ರತೆಗಾಗಿ ಸಾಮಾನ್ಯ ವಿಮಾ ನಿಗಮ, ಜೀವ ವಿಮಾ ನಿಗಮ, ಇತರೆ ಜೀವ ವಿಮಾ ಸಂಸ್ಥೆಗಳು ನೀಡುವ ಸಾಮೂಹಿಕ ವಿಮಾ ಯೋಜನೆ ಹಾಗೂ ಇತರೆ ಸಂಸ್ಥೆಗಳು ಕೊಡ ಮಾಡುವ ಮೆಡಿಕ್ಲೈಮ್ ಸೌಲಭ್ಯಗಳ ನೀಡಿಕೆ, ಇವುಗಳನ್ನು ಸದಸ್ಯರಿಗೆ ಒದಗಿಸಲು ಅಂತಹ ಸಂಸ್ಥೆಗಳ ನಿಯೋಗಿಯಾಗಿ ಕಾರ್ಯ ನಿರ್ವಹಿಸುವುದು. |
| 20 | ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಅಡಿಕೆ ಬೆಳೆಗಾರ ಸದಸ್ಯರಿಗೆ ನೀಡಿದ ಸಾಲಗಳ ವಸೂಲಾತಿಗೆ, ಅಂತಹ ಸದಸ್ಯರ ಸಂಘದಲ್ಲಿನ ಮಾರಾಟದ ಮೊಬಲಗಿನಲ್ಲಿ ಅವರ ಅನುಮತಿಯೊಂದಿಗೆ ಅಂತಹ ಸಂಘಗಳಿಗೆ ಅವರಿಂದ ಸಂದಾಯವಾಗತಕ್ಕ ಬಾಕಿಯನ್ನು ಕಡಿತ ಮಾಡಿ, ಅವುಗಳ ಲೆಕ್ಕಕ್ಕೆ ಜಮಾ ಮಾಡುವುದು. |
| 21 | ಸಂಘದ ಸದಸ್ಯರು ರಬ್ಬರ್ ಬೆಳೆಯಲು ಸಹಾಯ, ಸಹಕಾರ ನೀಡಿ ಪ್ರೋತ್ಸಾಹಿಸುವುದು ಮತ್ತು ರಬ್ಬರ್ ಹಾಗೂ ರಬ್ಬರ್ ಉತ್ಪನ್ನಗಳ ತಯಾರಿಕೆ, ಖರೀದಿ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡುವುದು. |
| 22 | ಸದಸ್ಯರು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಶಾಲಾ ಕಾಲೇಜುಗಳೇ ಮುಂತಾದ ವಿವಿಧ ಸ್ತರದ ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು, ಕೃಷಿ ಹಾಗೂ ಸಹಕಾರಿ ಶಿಕ್ಷಣ ತರಬೇತಿ ಕೇಂದ್ರಗಳನ್ನು, ವ್ಯಾಯಾಮ ಶಾಲೆ (ಜಿಮ್) ಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು. |
| 23 | ಸದಸ್ಯರು ಮತ್ತು ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಅಗತ್ಯವಾದ ವೈದ್ಯಾಲಯಗಳು, ಆಸ್ಪತ್ರೆಗಳು, ಶುಶ್ರೂಶಾಲಯಗಳು, ಔಷಧಾಲಯಗಳೇ ಮುಂತಾದವು ಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು. |
| 24 | ಸಾರ್ವಜನಿಕ ಸುರಕ್ಷತೆಗಾಗಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಶುದ್ಧ ನೀರಿನ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು ಮತ್ತು ಶುದ್ಧ ನೀರನ್ನು ಸರಬರಾಜು ಮಾಡುವುದು. |
| 25 | ಲಾರಿ, ಗೂಡ್ಸ್ ಕ್ಯಾರಿಯರ್ ಮುಂತಾದ ಸಾರಿಗೆ ವಾಹನಗಳನ್ನು ಬಳಸಿ ಅಡಿಕೆ ಮತ್ತಿತರ ಸರಕು ಸಾಗಣೆ ವ್ಯವಸ್ಥೆಯನ್ನು ನಿರ್ವಹಿಸುವುದು. |
| 26 | ಸದಸ್ಯರಿಗೆ ಅಗತ್ಯವಾದ ಅಡಿಕೆ ಸುಲಿಯುವ ಯಂತ್ರ ಮುಂತಾದ ಕೃಷಿ ಉಪಕರಣಗಳನ್ನು ಖರೀದಿಸಿ ಬಾಡಿಗೆಗೆ ನೀಡುವುದು ಮತ್ತು ಕೃಷಿ ಸೇವಾ ಕೇಂದ್ರಗಳನ್ನು ತೆರೆಯುವುದು. |
| 27 | ಸೌರಶಕ್ತಿ ಉಪಕರಣಗಳ ತಯಾರಿಕಾ ಸಂಸ್ಥೆಗಳ ಸಹಯೋಗದೊಂದಿಗೆ ಅಂತಹ ಉಪಕರಣಗಳ ಸಗಟು ಹಾಗೂ ಚಿಲ್ಲರೆ ಮಾರಾಟ ಕಾರ್ಯ ನಿರ್ವಹಿಸುವುದು ಮತ್ತು ಸಂಘದ ಸದಸ್ಯರು ಇವುಗಳನ್ನು ಉಪಯೋಗಿಸಲು ಪ್ರೋತ್ಸಾಹಿಸುವುದು. ಆ ಬಗ್ಗೆ ಅಗತ್ಯವಾದ ಆರ್ಥಿಕ ನೆರವು ಪಡೆಯಲು ಸಹಾಯ ನೀಡುವುದು. |
| 28 | ಗೊಬ್ಬರ, ಕ್ರಿಮಿನಾಶಕಗಳು, ವ್ಯವಸಾಯೋಪಕರಣಗಳು, ಕೃಷಿ ಯಂತ್ರೋಪಕರಣಗಳ ತಯಾರಿಕಾ ಕಂಪನಿಗಳ ಉತ್ಪನ್ನಗಳನ್ನು ಸಗಟಾಗಿ ಖರೀದಿಸಿ, ಸಗಟು ಹಾಗೂ ಚಿಲ್ಲರೆಯಾಗಿ ಮಾರಾಟ ಮಾಡಲು ಅಂತಹ ಕಂಪನಿಗಳ ಮಾರಾಟದ ಏಜೆನ್ಸಿಯನ್ನು (ಡೀಲರ್‌ಶಿಪ್) ಪಡೆಯುವುದು. |

| | |
|---|---|
| 29 | ಕೊಳೆ ರೋಗದ ಔಷಧಿಗಳಾದ ಮೈಲುತುತ್ತ, ರಾಳ ಮುಂತಾದವುಗಳನ್ನು ಮತ್ತು ರಾಸಾಯನಿಕ ಗೊಬ್ಬರಗಳನ್ನು ತಯಾರಿಸಲು ಕಾರ್ಖಾನೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು. |
| 30 | ಸಂಘವು ಕೇಂದ್ರೀಯ ಅಡಿಕೆ ಹಾಗೂ ಕೋಕೋ ಮಾರಾಟ ಮತ್ತು ಪರಿಷ್ಕರಣ ಸಹಕಾರಿ ನಿ., ಮಂಗಳೂರು (ಕ್ಯಾಂಪ್ಕೋ) ಇದರ ಏಜೆಂಟ್ ಆಗಿ ಕಾರ್ಯ ನಿರ್ವಹಿಸುವುದು. |
| 31 | ಪೆಟ್ರೋಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮಾರಾಟವನ್ನು ಸಕ್ಷಮ ಪ್ರಾಧಿಕಾರದ ಪರವಾನಿಗೆ ಪಡೆದು ನಿರ್ವಹಿಸುವುದು. |
| 32 | ಬೆಳೆಗಾರರಿಗೆ ಅಗತ್ಯವಾದ ನೀರಾವರಿ ಪಂಪುಗಳು ಹಾಗೂ ಅದರ ಬಿಡಿಭಾಗಗಳು ಮತ್ತು ಪೈಪುಗಳೇ ಮುಂತಾದ ಇತರೇ ಸಾಮಗ್ರಿಗಳ ಖರೀದಿ ಹಾಗೂ ಮಾರಾಟ ವ್ಯವಹಾರ ನಿರ್ವಹಿಸುವುದು. |
| 33 | ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಸಂಘದ ಅಭಿವೃದ್ಧಿಗೆ ಪೂರಕವಾಗುವ ಹಾಗೂ ಕಾನೂನು ಮತ್ತು ಸಾಮಾಜಿಕ ಹಿತಾಸಕ್ತಿಗೆ ವಿರುದ್ಧವಾಗಿಲ್ಲದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. |
| | **ಸಂಘದ ಚಟುವಟಿಕೆಗಳ ಬಗ್ಗೆ** |
| 1 | ಸಂಘದ ಸದಸ್ಯರ ಮತ್ತು ಬೆಳೆಗಾರರ ಬಾಗಾಯ್ತು ಉತ್ಪನ್ನಗಳಾದ ಅಡಿಕೆ, ಕಾಳು ಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನ ಬೆಳೆಗಳಿಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂತೆ ಎ.ಪಿ.ಎಂ.ಸಿ. ನಿಯಮಗಳಿಗೊಳಪಟ್ಟು ಕಮೀಷನ್ ಏಜೆಂಟ್ ಆಗಿ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು ಹಾಗೂ ಇವುಗಳನ್ನು ಖರೀದಿಸಿ, ಸಂಸ್ಕರಿಸಿ ರಾಜ್ಯದ ಒಳಗೂ ಹೊರಗೂ ಮತ್ತು ದೇಶ ವಿದೇಶಗಳಲ್ಲಿ ವ್ಯಾಪಾರ ಮಾಡುವುದು ಮತ್ತು ಮಾರುಕಟ್ಟೆಯನ್ನು ಕಂಡುಕೊಳ್ಳಲಾಗುತ್ತಿದೆ. |
| 2 | ಉತ್ತಮ ದರ್ಜೆಯ ಅಡಿಕೆ, ಕಾಳು ಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸದಸ್ಯರನ್ನು ಪ್ರೋತ್ಸಾಹಿಸಲಾಗುತ್ತಿದೆ. |
| 3 | ಅಡಿಕೆ ಕೊಳೆರೋಗ (ಶಿಲೀಂದ್ರ ರೋಗ) ನಿವಾರಣೆಗೆ ಅಗತ್ಯವಾದ ಕೊಳೆ ಔಷಧಿಗಳನ್ನು ನಗದಾಗಿ ಅಥವಾ ಸಾಲದ ರೂಪದಲ್ಲಿ ಸಂಘದ ಸದಸ್ಯರಿಗೆ ಒದಗಿಸಲಾಗುತ್ತಿದೆ. |
| 4 | ರೈತರಿಗೆ ಅನುಕೂಲವಾಗುವಂತೆ ಉತ್ತಮ ದರ್ಜೆಯ ಸಾವಯವ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ. ಅಸ್ತ್ರ ಒಲೆ, ಡ್ರೈಯರ್, ಗಟಾರ್ ಸ್ಪ್ರೇಯರ್ ಖರೀದಿಗೆ ಸಹಾಯಧನ ಒದಗಿಸಲಾಗುತ್ತಿದೆ. |
| 5 | ಸಂಘದ ಸದಸ್ಯರಿಗೆ ಅಗತ್ಯವಾದ ಕಟಾವು ಸಾಲ, ಕೊಳೆಸಾಲ ಮತ್ತು ಅಡಿಕೆ ಆಧಾರ ಸಾಲಗಳನ್ನು ಸಂಘದ ಆಯಾ ವರ್ಷದ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡು ಸಾಲಗಳನ್ನು ಸದಸ್ಯರಿಗೆ ನೀಡಲಾಗುತ್ತಿದೆ. |
| 6 | ಸಂಘಕ್ಕೆ ಅಗತ್ಯವಾದ ದುಡಿಯುವ ಬಂಡವಾಳವನ್ನು–ಸದಸ್ಯರಿಂದ ಉಳಿತಾಯ ಖಾತೆ, ನಿಗದಿತ ಠೇವಣಿ ಮತ್ತು ಕರೆ ಠೇವಣಿ ಹಾಗೂ ವಾಣಿಜ್ಯ ಬ್ಯಾಂಕುಗಳಿಂದ ನಗದು ಸಾಲದ ರೂಪಗಳಿಂದ ಸಂಗ್ರಹಿಸಲಾಗುತ್ತಿದೆ.<br>ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ 26.11.2024ರಲ್ಲಿ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28–ಸಿ(2)(ಸಿ) ಅನ್ವಯ ಸಂಘದ ಉದ್ದೇಶಗಳನ್ನು ಸಾಧಿಸಲು ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಆಡಳಿತ ಮಂಡಲಿಗೆ ಅಧಿಕಾರ ದತ್ತವಾಗಿರುವುದರಿಂದ ಆಡಳಿತ ಮಂಡಲಿಯು ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿರುತ್ತಾರೆ. |
| 7 | ಸಂಘದ ಸದಸ್ಯರಿಗೆ ಪರಸ್ಪರ ಸಹಕಾರ, ಸ್ವ ಸಹಾಯ, ಮಿತವ್ಯಯ ಮತ್ತು ಉಳಿತಾಯ ಮನೋಭಾವನೆಗಳ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಅವರಲ್ಲಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಹಾಗೂ ಅವುಗಳ ಅನುಷ್ಠಾನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. |
| 8 | ಸಂಘದ ಮುಖ್ಯ ಉದ್ದೇಶ ಮತ್ತು ಹಿತಕ್ಕೆ ಧಕ್ಕೆ ಒದಗದ ರೀತಿಯಲ್ಲಿ ಸರ್ಕಾರವು ವಹಿಸಿದ ವರ್ಷಗಳಲ್ಲಿ ವ್ಯವಹಾರಗಳನ್ನು ನಿರ್ವಹಿಸಲಾಗುತ್ತಿದೆ. ಈ ಸಾಲಿನಲ್ಲಿ ಯಾವುದೇ ರೀತಿಯಲ್ಲಿ ಸರ್ಕಾರವು ಯಾವುದೇ ವ್ಯವಹಾರಗಳನ್ನು ವಹಿಸಿಲ್ಲ. |
| 9 | ಷೇರುದಾರರ ಸಮಾವೇಶ ಕರೆಯುವ ಮೂಲಕ ಮಾರ್ಗದರ್ಶನ ನೀಡಲಾಗುತ್ತಿದೆ. ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ವಿಜ್ಞಾನಿಗಳಿಂದ ಈ ಬಗೆಗೆ ಮಾಹಿತಿ ನೀಡಲಾಗುತ್ತಿದೆ. |
| 10 | ಸದಸ್ಯರ ಅನುಕೂಲಕ್ಕಾಗಿ ಸಂಘದ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಸಂಘದ ಹೆಸರಿನಲ್ಲಿ 13 ಶಾಖೆಗಳನ್ನು ತೆರೆಯಲಾಗಿದೆ ಹಾಗೂ ಶಾಖೆಗಳಿಗೆ ಹೊಂದಿಕೊಂಡಂತೆ 16 ಏಜೆನ್ಸಿಗಳ ಮೂಲಕ ಸದಸ್ಯರು ಸಂಘದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅನುಕೂಲ ಮಾಡಿಕೊಡಲಾಗಿದೆ.<br>ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು 13 ಶಾಖೆ ಮತ್ತು 16 ಏಜೆನ್ಸಿಗಳು ಹಾಗು 7 ನೇರ ಖರೀದಿ ಕೇಂದ್ರ ಹೊಂದಿರುತ್ತದೆ. |

| | |
|---|---|
| 11 | ಸಂಘದ ಸದಸ್ಯರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ವ್ಯಾಪಾರ ಮಳಿಗೆಗಳ ಸಂಕೀರ್ಣಗಳನ್ನು ನಿರ್ಮಿಸಿ ಹಾಗೂ ಬಾಡಿಗೆ ಪಡೆದು ನಿರ್ವಹಿಸಲಾಗಿದೆ. |
| 12 | ನೌಕರರ ಕ್ಷೇಮ ನಿಧಿಗೆ ನಿವ್ವಳ ಲಾಭದ ಶೇಕಡ 2 ಮೀರದಂತೆ ಮತ್ತು ಸದಸ್ಯರ ಕ್ಷೇಮ ನಿಧಿಗೆ ಶೇಕಡ 40 ಮೀರದಂತೆ ನಿವ್ವಳ ಲಾಭದಲ್ಲಿ ತೆಗೆದಿರಿಸಲಾಗುತ್ತಿದೆ. ಅಗತ್ಯವಾದಾಗ ಅಂತಹ ಸದಸ್ಯರ ಅಥವಾ ನೌಕರರ ಕುಟುಂಬಕ್ಕೆ ಆ ನಿಧಿಯಿಂದ, ಆ ಸಂಬಂಧ ರಚಿಸಲಾದ ನಿಯಮಾನುಸಾರ ಸಹಾಯ ನೀಡಲಾಗುತ್ತಿದೆ. |
| 13 | ವಿದ್ಯಾನಿಧಿಯನ್ನು ಸ್ಥಾಪಿಸಿಲ್ಲದಿದ್ದರೂ ಸಹ, ಸಹಕಾರಿಯು ಶಿವಮೊಗ್ಗ ಶಾಖೆಯಲ್ಲಿ ವಿಶೇಷ ನಿಧಿ ಎಂಬ ಹೂಡಿಕೆಯನ್ನು ಮಾಡಿ, ಅದರಿಂದ ಬಂದಿರುವ ಬಡ್ಡಿಯಲ್ಲಿ ಕ್ರೀಡೆ ಹಾಗೂ ಎಸ್.ಎಸ್.ಎಲ್.ಸಿ ಮತ್ತು ಅದಕ್ಕಿಂತ ಉನ್ನತ ಶಿಕ್ಷಣದಲ್ಲಿ ಅತಿ ಹೆಚ್ಚು ಅಂಕ ಪಡೆದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗಿದೆ. |
| 14 | ಸದಸ್ಯರ ಮರಣೋತ್ತರ ನಿಧಿ ಮತ್ತು ಅಂತ್ಯಸಂಸ್ಕಾರ ನಿಧಿಗೆ ಆಯಾ ವರ್ಷಗಳಲ್ಲಿ ನಿವ್ವಳ ಲಾಭದಿಂದ ಮೊತ್ತವನ್ನು ತೆಗೆದಿರಿಸಿ ಫಲಾನುಭವಿಗಳಿಗೆ ನಿಯಾಮಾನುಸಾರ ಸಹಾಯ ನೀಡಲಾಗುತ್ತಿದೆ. |
| 15 | ದಿ ಓರಿಯಂಟಲ್ ಇನ್ಸುರೆನ್ಸ್ ಕಂಪೆನಿಯ ಸಹಯೋಗದೊಂದಿಗೆ ಗುಂಪು ವಿಮಾ ಅಭಿರಕ್ಷಾ ಯೋಜನೆಯನ್ನು ಸಂಘದ ಸದಸ್ಯರಿಗೆ ಹಾಗು ಸದಸ್ಯರ ಅವಲಂಬಿತ ಕೂಲಿ ಕಾರ್ಮಿಕ ವರ್ಗದವರಿಗೆ ಸಂಘದಿಂದ ಗುಂಪು ವಿಮೆ ಯೋಜನೆಯನ್ನು ಕಲ್ಪಿಸಲಾಗಿದೆ. |
| 16 | ಸದಸ್ಯರು ಮತ್ತು ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಅಗತ್ಯವಾದ ವೈದ್ಯಾಲಯಗಳು, ಆಸ್ಪತ್ರೆಗಳು, ಶುಶ್ರೂಶಾಲಯಗಳು, ಔಷಧಾಲಯಗಳೇ ಮುಂತಾದವುಗಳನ್ನು ಸ್ಥಾಪಿಸಿಲ್ಲ ಹಾಗೂ ನಿರ್ವಹಿಸದಿದ್ದರೂ ಸಹ ಶಂಕರ ಕಣ್ಣಿನ ಆಸ್ಪತ್ರೆ, ಶಿವಮೊಗ್ಗ ಇವರ ಜೊತೆ ಒಪ್ಪಂದದ ಪ್ರಕಾರ ಸದಸ್ಯರಿಗೆ ಹೊರರೋಗ ಚಿಕಿತ್ಸೆಗೆ ತಲಾ ಗರಿಷ್ಠ ರೂ.150ರಂತೆ ವೆಚ್ಚವನ್ನು ಭರಿಸಲಾಗಿದೆ. |
| 17 | ಶಿವಮೊಗ್ಗ ಎ.ಪಿ.ಎಂ.ಸಿ.ಯಿಂದ ಐಷರ್ ವಾಹನ ನೀಡಿದ್ದು ಈ ವಾಹನವನ್ನು ಬಳಸಿಕೊಂಡು ಅಡಿಕೆ ಮೂಟೆಗಳ ಸಾಗಣೆ ವ್ಯವಸ್ಥೆಯನ್ನು ಸದಸ್ಯರ ಅನುಕೂಲಕ್ಕಾಗಿ ನಿರ್ವಹಿಸಲಾಗುತ್ತಿದೆ. |
| 18 | ಕೃಷಿಯ ಬಗ್ಗೆ ಸಂಘದ ಷೇರುದಾರರ ಸಭೆಗಳಲ್ಲಿ ಮತ್ತು ಡೈರಿ ಕ್ಯಾಲೆಂಡರ್ ಗಳಲ್ಲಿ ಅಗತ್ಯ ಮಾಹಿತಿಗಳನ್ನು ನೀಡಲಾಗುತ್ತಿದೆ. |
| 19 | ಕೊಳೆ ರೋಗದ ಔಷಧಿಗಳಾದ ಮೈಲುತುತ್ತ, ಸುಣ್ಣ, ರಾಳ ಮುಂತಾದವುಗಳನ್ನು ತಯಾರಕರಿಂದ ಖರೀದಿಸಿ ಸದಸ್ಯರಿಗೆ ನೀಡಲಾಗುತ್ತಿದೆ. |

**3 ಸಂಘದ ಪದಾಧಿಕಾರಿಗಳ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ 31–03–2026 ರಲ್ಲಿದ್ದಂತೆ :**

| | ಪದಾಧಿಕಾರಿಗಳ ಹೆಸರು | ಹುದ್ದೆ | ಅವಧಿ |
|---|---|---|---|
| 1 | ಶ್ರೀ ಪ್ರಭುಲಿಂಗ ಕವಳಿಕಟ್ಟಿ ಭಾ.ಆ.ಸೇ | ಅಧ್ಯಕ್ಷರು | ದಿನಾಂಕ: 02–01–2026 ರಿಂದ ತಹಲ್‌ವರೆಗೆ |
| 2 | ಶ್ರೀ ಹೆಚ್.ಎಸ್.ಮಹೇಶ್ | ಉಪಾಧ್ಯಕ್ಷರು | ದಿನಾಂಕ: 07–03–2025 ರಿಂದ ತಹಲ್‌ವರೆಗೆ |
| 3 | ಶ್ರೀ ಶ್ರೀಕಾಂತ್ ಬರುವೆ | ವ್ಯವಸ್ಥಾಪಕ ನಿರ್ದೇಶಕರು | ದಿನಾಂಕ: 24–07–2023 ರಿಂದ ತಹಲ್‌ವರೆಗೆ |

**4 ಶಾಖೆಗಳು ಮತ್ತು ಅವುಗಳ ವಿಳಾಸ**

| ಕ್ರ.ಸಂ | ಶಾಖೆಯ ಹೆಸರು, ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ | ಶಾಖಾ ವ್ಯವಸ್ಥಾಪಕರು (ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ.) | ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದ ದಾಖಲೆಗಳ ವಿವರ |
|---|---|---|---|
| 1 | ಶಿವಮೊಗ್ಗ ಶಾಖೆ<br>ಎ.ಪಿ.ಎಂ.ಸಿ ಆವರಣ ಸಾಗರ ರಸ್ತೆ ಶಿವಮೊಗ್ಗ–577 204<br>9449863266 | ಶ್ರೀ ಸುರೇಶ್ ಎಸ್<br>ಶಾಖಾ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಸಾಗರ ರಸ್ತೆ, ಶಿವಮೊಗ್ಗ<br>9449698886 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |

| | | | |
|---|---|---|---|
| 2 | ಸಾಗರ ಶಾಖೆ<br>ಎಪಿಎಂಸಿ ಯಾರ್ಡ್<br>ಈಳಿ ರಸ್ತೆ, ಸಾಗರ–577401<br>9449863265 | ಶ್ರೀ ಪ್ರಕಾಶ ಎಂ. ಎನ್<br>ಉಪ ಪ್ರಧಾನ ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್<br>ಈಳಿ ರಸ್ತೆ, ಸಾಗರ<br>9448608238 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 3 | ಹೊಸನಗರ ಶಾಖೆ<br>ಎಪಿಎಂಸಿ ಯಾರ್ಡ್<br>ಹೊಸನಗರ–577 418<br>9449863264 | ಶ್ರೀ ಗಣಪತಿ ಎಸ್.ಕೆ.<br>ಶಾಖಾ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಹೊಸನಗರ<br>9481623715 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 4 | ತೀರ್ಥಹಳ್ಳಿ ಶಾಖೆ<br>ಎಪಿಎಂಸಿ ಯಾರ್ಡ್,<br>ಆಗುಂಬೆ ರಸ್ತೆ,<br>ತೀರ್ಥಹಳ್ಳಿ –577 432<br>9449863267 | ಶ್ರೀ ಮುರಗೇಶ್ ಬಿ.ಎನ್<br>ಹಿರಿಯ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್,<br>ಆಗುಂಬೆ ರಸ್ತೆ, ತೀರ್ಥಹಳ್ಳಿ<br>9972722565 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 5 | ಕೊಪ್ಪ ಶಾಖೆ<br>ಮೇಲಿನ ಪೇಟೆ, ಕೊಪ್ಪ –577 126<br>9449863259 | ಶ್ರೀಮತಿ ನಾಗವೇಣಿ ಎನ್.ಪಿ.<br>ಹಿರಿಯ ವ್ಯವಸ್ಥಾಪಕರು<br>ಮೇಲಿನ ಪೇಟೆ, ಕೊಪ್ಪ<br>9449160457 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 6 | ಶೃಂಗೇರಿ ಶಾಖೆ<br>ಭಾರತಿಬೀದಿ ಶೃಂಗೇರಿ–577 139<br>9449863260 | ಶ್ರೀ ಚರಣ್ ಕುಮಾರ ಆರ್<br>ಶಾಖಾ ವ್ಯವಸ್ಥಾಪಕರು<br>ಭಾರತಿಬೀದಿ ಶೃಂಗೇರಿ<br>8197798596 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 7 | ಭದ್ರಾವತಿ ಶಾಖೆ<br>ಎಪಿಎಂಸಿ ಯಾರ್ಡ್<br>ಚನ್ನಗಿರಿ ರಸ್ತೆ,<br>ಭದ್ರಾವತಿ– 577 301<br>9449863263 | ಶ್ರೀ ಎಲ್.ವಿ ಮಹೇಶ್<br>ಹಿರಿಯ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಚನ್ನಗಿರಿ ರಸ್ತೆ, ಭದ್ರಾವತಿ<br>9449540959 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 8 | ಚನ್ನಗಿರಿ ಶಾಖೆ<br>ಎಪಿಎಂಸಿ ಯಾರ್ಡ್<br>ಚನ್ನಗಿರಿ –<br>577 213<br>9449863262 | ಶ್ರೀ ಚನ್ನೇಶ ಸಿ.ಎಂ.<br>ಶಾಖಾ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಚನ್ನಗಿರಿ<br>9113287996 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |

| | | | |
|---|---|---|---|
| 9 | ತರೀಕೆರೆ ಶಾಖೆ<br>ಬಿ ಹೆಚ್‌ರಸ್ತೆ, ತರೀಕೆರೆ– 577 228<br>9449863261 | ಶ್ರೀ ಎಲ್.ಎಸ್. ಪ್ರದೀಪ್ ಕುಮಾರ್ ಶಾಖಾ ವ್ಯವಸ್ಥಾಪಕರು<br>ಬಿ ಹೆಚ್‌ರಸ್ತೆ, ತರೀಕೆರೆ<br>9482647765 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 10 | ಬೀರೂರು ಶಾಖೆ<br>ಎಪಿಎಂಸಿ ಯಾರ್ಡ್<br>ಬಿ ಹೆಚ್‌ರಸ್ತೆ, ಬೀರೂರು– 577 116<br>9449863258 | ಶ್ರೀ ಚನ್ನಕೇಶವ ಸಿ.ಸಿ.<br>ಹಿರಿಯ ವ್ಯವಸ್ತಾಪಕರು<br>ಎಪಿಎಂಸಿ ಯಾರ್ಡ್<br>ಬಿ ಹೆಚ್‌ರಸ್ತೆ, ಬೀರೂರು<br>9449998480 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 11 | ಶಿಕಾರಿಪುರ ಶಾಖೆ<br>ಎಪಿಎಂಸಿ ಯಾರ್ಡ್<br>ಶಿಕಾರಿಪುರ– 577 427<br>9448285788 | ಶ್ರೀ ಪರಶುರಾಮ್ ಸಿ.ಆರ್.<br>ಶಾಖಾ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಶಿಕಾರಿಪುರ<br>9844411861 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 12 | ಸೊರಬ ಶಾಖೆ<br>ಎಪಿಎಮ್‌ಸಿ ಯಾರ್ಡ್<br>ಸೊರಬ – 577 429<br>9380484039 | ಶ್ರೀ ಶ್ರೀನಿವಾಸ ಹೆಚ್.<br>ಹಿರಿಯ ವ್ಯವಸ್ಥಾಪಕರು<br>ಎಪಿಎಮ್‌ಸಿ ಯಾರ್ಡ್<br>ಹಿರಿಯ ವ್ಯವಸ್ಥಾಪಕರು<br>9663266280 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 13 | ಜಯಪುರ ಶಾಖೆ<br>ಶೃಂಗೇರಿ ರಸ್ತೆ, ಜಯಪುರ – 577 123<br>9449863268 | ಶ್ರೀಮತಿ ಪೂರ್ಣಿಮಾ ಹೆಚ್.ಎಸ್.<br>ಶಾಖಾ ವ್ಯವಸ್ಥಾಪಕರು<br>ಜಯಪುರ<br>8762781249 | ಅಗತ್ಯವಿರುವ ಲೆಕ್ಕಪತ್ರಗಳು, ಆವಕ–ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು ಶಿಲ್ಕು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 14 | ಅಡಿಕೆ ಖರೀದಿ ಶಾಖೆ, ಶಿವಮೊಗ್ಗ<br>ಕೋಟೆರಸ್ತೆ, ಶಿವಮೊಗ್ಗ – 577 201<br>9448285791 | ಶ್ರೀ ಅಶ್ವಿನ್ ಕೆ.ಜೆ. ಉಪ ಪ್ರಧಾನ ವ್ಯವಸ್ಥಾಪಕರು<br>ಕೋಟೆರಸ್ತೆ, ಶಿವಮೊಗ್ಗ<br>8971476598 | ಅಗತ್ಯವಿರುವ ಲೆಕ್ಕಪತ್ರಗಳು, ಖರೀದಿ, ಮಾರಾಟ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ಸಾಗಾಣಿಕೆದಾರರು ಮತ್ತು ದಲ್ಲಾಲಿದಾರರ ದಾಖಲೆ, ಅಡಿಕೆ ಸಾರ್ಟಿಂಗ್ & ಗ್ರೇಡಿಂಗ್ ವಿವರ ಹಾಗೂ ಇತ್ಯಾದಿ. |

**5 ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ**

| ಹೆಸರು | ಹುದ್ದೆ | ಕಛೇರಿ |
|---|---|---|
| ಶ್ರೀ ಶ್ರೀಕಾಂತ್ ಬರುವೆ | ವ್ಯವಸ್ಥಾಪಕ ನಿರ್ದೇಶಕರು | ಕೇಂದ್ರ ಕಛೇರಿ ಶಿವಮೊಗ್ಗ |
| ಶ್ರೀಮತಿ ಜಯಂತಿ ಪಿ.ಎಂ. | ಪ್ರಧಾನ ವ್ಯವಸ್ಥಾಪಕರು | ಕೇಂದ್ರ ಕಛೇರಿ ಶಿವಮೊಗ್ಗ |
| ಶ್ರೀ ರಮಾನಂದ ವಿ.ಎಸ್. | ಉಪ ಪ್ರಧಾನ ವ್ಯವಸ್ಥಾಪಕರು | ಕೇಂದ್ರ ಕಛೇರಿ ಶಿವಮೊಗ್ಗ |
| ಶ್ರೀ ಭರತ್‌ಕುಮಾರ್ ಎಂ.ವಿ. | ವ್ಯವಸ್ಥಾಪಕರು | ಕೇಂದ್ರ ಕಛೇರಿ ಶಿವಮೊಗ್ಗ |
| ಶ್ರೀ ಸುರೇಶ್ ಎಸ್ | ಶಾಖಾ ವ್ಯವಸ್ಥಾಪಕರು | ಶಿವಮೊಗ್ಗ ಶಾಖೆ |
| ಶ್ರೀ ಪ್ರಕಾಶ ಎಂ. ಎನ್ | ಉಪ ಪ್ರಧಾನ ವ್ಯವಸ್ಥಾಪಕರು | ಸಾಗರ ಶಾಖೆ |

| | | |
|---|---|---|
| ಶ್ರೀ ಗಣಪತಿ ಎಸ್.ಕೆ. | ಶಾಖಾ ವ್ಯವಸ್ಥಾಪಕರು | ಹೊಸನಗರ ಶಾಖೆ |
| ಶ್ರೀ ಮುರಗೇಶ್ ಬಿ.ಎನ್ | ಹಿರಿಯ ವ್ಯವಸ್ಥಾಪಕರು | ತೀರ್ಥಹಳ್ಳಿ ಶಾಖೆ |
| ಶ್ರೀಮತಿ ನಾಗವೇಣಿ ಎನ್.ಪಿ. | ಹಿರಿಯ ವ್ಯವಸ್ಥಾಪಕರು | ಕೊಪ್ಪ ಶಾಖೆ |
| ಶ್ರೀ ಚರಣ್ ಕುಮಾರ ಆರ್ | ಶಾಖಾ ವ್ಯವಸ್ಥಾಪಕರು | ಶೃಂಗೇರಿ ಶಾಖೆ |
| ಶ್ರೀ ಎಲ್.ವಿ ಮಹೇಶ್ | ಹಿರಿಯ ವ್ಯವಸ್ಥಾಪಕರು | ಭದ್ರಾವತಿ ಶಾಖೆ |
| ಶ್ರೀ ಚನ್ನಕೇಶವ ಸಿ.ಸಿ. | ಹಿರಿಯ ವ್ಯವಸ್ಥಾಪಕರು | ಬೀರೂರು ಶಾಖೆ |
| ಶ್ರೀ ಎಲ್.ಎಸ್. ಪ್ರದೀಪ್ | ಶಾಖಾ ವ್ಯವಸ್ಥಾಪಕರು | ತರಿಕೆರೆ ಶಾಖೆ |
| ಶ್ರೀ ಚನ್ನೇಶ ಸಿ.ಎಂ | ಶಾಖಾ ವ್ಯವಸ್ಥಾಪಕರು | ಚನ್ನಗಿರಿ ಶಾಖೆ |
| ಶ್ರೀ ಪರಶುರಾಮ್ ಸಿ.ಆರ್. | ಶಾಖಾ ವ್ಯವಸ್ಥಾಪಕರು | ಶಿಕಾರಿಪುರ ಶಾಖೆ |
| ಶ್ರೀ ಶ್ರೀನಿವಾಸ ಹೆಚ್. | ಹಿರಿಯ ವ್ಯವಸ್ಥಾಪಕರು | ಸೊರಬ ಶಾಖೆ |
| ಶ್ರೀಮತಿ ಪೂರ್ಣಿಮಾ ಹೆಚ್.ಎಸ್. | ಶಾಖಾ ವ್ಯವಸ್ಥಾಪಕರು | ಜಯಪುರ ಶಾಖೆ |
| ಶ್ರೀ ಅಶ್ವಿನ್ ಕೆ.ಜೆ. | ಉಪ ಪ್ರಧಾನ ವ್ಯವಸ್ಥಾಪಕರು | ಅಡಿಕೆ ಖರೀದಿ ಶಾಖೆ |

6 **ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ :**

| | | |
|---|---|---|
| 1 | ಲೆಕ್ಕಪರಿಶೋಧಕರ ಹೆಸರು | ಮಧುಕರ ಹೆಗಡೆ & ಕಂ.<br>CHARTERED ACCOUNTANTS<br>FRNo-007954S<br>M No-206777 |
| 2 | ವಿಳಾಸ | 616/ಎ, 1ನೇ ಮಹಡಿ, 1ನೇ ಮುಖ್ಯರಸ್ತೆ, 2ನೇ ಹಂತ, ಇ ಬ್ಲಾಕ್, ರಾಜಾಜಿನಗರ–10, ಬೆಂಗಳೂರು |
| 3 | ದೂರವಾಣಿ ಸಂಖ್ಯೆ,ಮಿಂಚಂಚೆ ವಿಳಾಸ (email id) | 9448151454,<br>madhukarhegdeandco@gmail.com |
| 4 | ಎಂಪಾನಲ್‌ಮೆಂಟ್ ನಂಬರ್ | C-27/2/2013 |
| 5 | ಲೆಕ್ಕಪರಿಶೋಧನಾ ಅವಧಿ | ದಿನಾಂಕ 01–04–2024 ರಿಂದ 31–03–2025 |

7 **ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ :**

| | |
|---|---|
| ಲೆಕ್ಕಪರಿಶೋಧಕರ ಹೆಸರು | RBV & CO<br>CHARTERED ACCOUNTANTS<br>F.RNo-027625S<br>M.No-028679 |
| ಹುದ್ದೆ ಹಾಗೂ ವಿಳಾಸ | ಮಾಲಿಕರು: ರವೀಂದ್ರನಾಥ ಬಿ.ವಿ<br>ಸನ್ನದು ಲೆಕ್ಕ ಪರಿಶೋಧಕರು,<br>ಶ್ರೀ ಆನೆಗುಡ್ಡೆ, ಜಿ ಪಿ ರಸ್ತೆ, ಸಾಗರ 577 401 |
| ದೂರವಾಣಿ ಸಂಖ್ಯೆ. | 7353765599 |
| ಮಿಂಚಂಚೆ ವಿಳಾಸ (email id) | bvrnath@gmail.com |
| ಎಂಪಾನಲ್‌ಮೆಂಟ್ ನಂಬರ್ | ಎಸ್ ಎಂ ಜಿ – 02 |
| ವಾರ್ಷಿಕ ಮಹಾಸಭೆಯ ನೇಮಕಾತಿ ದಿನಾಂಕ ಹಾಗೂ ಠರಾವು ಸಂಖ್ಯೆ/ ನಿರ್ದೇಶಕರ ಆದೇಶ ಸಂಖ್ಯೆ ಮತ್ತು ದಿನಾಂಕ | ಸಂಘದ ಸಾಮಾನ್ಯ ಸಭೆಯ ದಿನಾಂಕ: 20–09–2025. ಠರಾವು ನಂ. 11 |
| ಲೆಕ್ಕಪರಿಶೋಧನೆಯ ಆರಂಭದ ದಿನಾಂಕ | 18–04–2026 |
| ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ | 20–07–2026 |
| ಲೆ ಪ ಗೆ ತೆಗೆದುಕೊಂಡ (ಮಾನವ) ದಿನಗಳು | 128 |

| | | | |
|---|---|---|---|
| | ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿದ ದಿನಾಂಕ | | ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿಯನ್ನು ಸಹಕಾರರ ಸಂಘಗಳ ಉಪನಿರ್ದೇಶಕರು ಶಿವಮೊಗ್ಗ ಇವರಿಗೆ ದಿನಾಂಕ 23–09–2025 ಪತ್ರ ಸಂಖ್ಯೆ ಕ್ರ.ಸಂ. 1026/2025–26 ರಂದು ಖುದ್ದಾಗಿ ಸಲ್ಲಿಸಿರುವುದನ್ನು ಪರಿಶೀಲಿಸಲಾಗಿದೆ. |
| **8** | **ಲೆಕ್ಕಪರಿಶೋಧನಾ ವರ್ಗೀಕರಣ : (ನಿರ್ದೇಶಕರ ಸುತ್ತೋಲೆ ಸಂಖ್ಯೆ 6.4 ರಂತೆ)** | | |
| | (ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.) | | |
| | ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ | | ’ಎ” |
| | ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ | | ’ಎ” |
| **9** | **ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಶೆ** | | |
| | 1 | ಸಂಘದ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ? | ಸಂಘದ ಉಪವಿಧಿ ಭಾಗ–11, 78ರ ಪ್ರಕಾರ ಆಂತರಿಕ ಲೆಕ್ಕ ತಪಾಸಣೆ : ಸಂಘವು ಅರ್ಹ ವ್ಯಕ್ತಿಯನ್ನು ಸಂಘದ ಆಂತರಿಕ ಲೆಕ್ಕ ತಪಾಸಣೆಗಾರರನ್ನಾಗಿ ನೇಮಿಸಿಕೊಂಡು, ಅವರಿಗೆ ಸೂಕ್ತ ಸಂಭಾವನೆ ನಿಗದಿಗೊಳಿಸಿ, ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿ ಮಾಡಿ ತ್ರೈಮಾಸಿಕ ವರದಿ ಪಡೆಯತಕ್ಕದ್ದು. ಲೆಕ್ಕ ತಪಾಸಣೆಯಲ್ಲಿ ತೀವ್ರ ತರಹದ ಲೋಪ, ದೋಷಗಳು ಕಂಡುಬಂದಲ್ಲಿ ತಕ್ಷಣ ಅವನು ವರದಿ ಮಾಡತಕ್ಕದ್ದು. ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಬೆಳಕಿಗೆ ತರದೆ ಇರುವ ಅವ್ಯವಹಾರಗಳಿಗೆ ಆಂತರಿಕ ಲೆಕ್ಕ ಪರಿಶೋಧಕನು ಜವಾಬ್ದಾರನಾಗಿರತಕ್ಕದ್ದು. ಆದರೆ ಸಂಘವು ಆಂತರಿಕ ಲೆಕ್ಕಪರಿಶೋಧನೆಗೆ ಯಾವುದೆ ಬಾಹ್ಯ ವ್ಯಕ್ತಿಯನ್ನು ನೇಮಿಸಿಕೊಂಡಿರುವುದಿಲ್ಲ. ಸಂಘದ ಸಿಬ್ಬಂದಿಗಳಿಗೆ ಆಂತರಿಕ ಲೆಕ್ಕ ಪರಿಶೋಧನೆಯ ಜವಾಬ್ದಾರಿಯನ್ನು ನೀಡಲಾಗಿದೆ. ಸಂಘದ ಸಿಬ್ಬಂದಿಗಳೆ ಎಲ್ಲಾ ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತಾರೆ. |
| | | **ಲೆಕ್ಕ ಪರಿಶೋಧಕರ ಸಲಹೆ ಹಾಗೂ ಸೂಚನೆಗಳು:** ಸಂಘದಲ್ಲಿ ಸಮವರ್ತಿ (Concurrent) / ಆಂತರಿಕ (Internal) ಲೆಕ್ಕಪರಿಶೋಧನೆಯನ್ನು ಸಂಘದ ಸಿಬ್ಬಂದಿಯೇ ನಡೆಸಿರುವುದು ಗಮನಕ್ಕೆ ಬಂದಿದೆ. ಆಂತರಿಕ ಲೆಕ್ಕಪರಿಶೋಧನೆಯ ಮೂಲ ಉದ್ದೇಶವೆಂದರೆ ಸಂಘದ ಕಾರ್ಯವೈಖರಿ, ಲೆಕ್ಕಪತ್ರಗಳು, ಆಂತರಿಕ ನಿಯಂತ್ರಣ ವ್ಯವಸ್ಥೆ ಹಾಗೂ ಕಾನೂನು ಪಾಲನೆಯನ್ನು ಸ್ವತಂತ್ರವಾಗಿ (Independent) ಮತ್ತು ನಿಷ್ಪಕ್ಷಪಾತವಾಗಿ (Objective) ಪರಿಶೀಲಿಸಿ ಆಡಳಿತ ಮಂಡಲಿಗೆ ವಿಶ್ವಾಸಾರ್ಹ ವರದಿಯನ್ನು ಸಲ್ಲಿಸುವುದಾಗಿದೆ. ಆದರೆ, ಸಂಘದ ಸಿಬ್ಬಂದಿಯೇ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಿದಲ್ಲಿ ಅವರು ತಾವು ನಿರ್ವಹಿಸಿರುವ ಅಥವಾ ತಮ್ಮ ಮೇಲ್ವಿಚಾರಣೆಯಲ್ಲಿರುವ ವ್ಯವಹಾರಗಳನ್ನೇ ಪರಿಶೀಲಿಸುವ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ ಲೆಕ್ಕಪರಿಶೋಧನೆಯ ಸ್ವಾತಂತ್ರ್ಯ (Independence) ಹಾಗೂ ನಿಷ್ಪಕ್ಷಪಾತತೆ (Objectivity) ಹಾನಿಗೊಳಗಾಗುತ್ತದೆ. ಇದರಿಂದ ಆಂತರಿಕ ಲೆಕ್ಕಪರಿಶೋಧನೆಯ ಉದ್ದೇಶವೇ ದುರ್ಬಲಗೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಸಂಘವು ಉತ್ತಮ ಆಡಳಿತ (Good Governance) ಮತ್ತು ಪರಿಣಾಮಕಾರಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ, ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆಯನ್ನು ಸಂಘದ ಸಿಬ್ಬಂದಿಯಿಂದ ನಡೆಸಿಸದೇ, ಸಂಘದ ದೈನಂದಿನ ಆಡಳಿತದಲ್ಲಿ ಭಾಗಿಯಾಗದ ಸ್ವತಂತ್ರ ಹಾಗೂ ಅರ್ಹ ವೃತ್ತಿಪರರಿಗೆ (ಉದಾಹರಣೆಗೆ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಇತರ ಅರ್ಹ ಲೆಕ್ಕಪರಿಶೋಧಕರಿಗೆ) ವಹಿಸುವಂತೆ ಕ್ರಮ ಕೈಗೊಳ್ಳುವುದು ಸೂಕ್ತ. | |

<table>
<tr><td rowspan="6">2</td><td rowspan="6">ಆಂತರಿಕ ಲೆಕ್ಕಪರಿಶೋಧನೆ ಕೈಗೊಂಡಿರುವ ಲೆಕ್ಕಪರಿಶೋಧಕರ ಹೆಸರು, ಹುದ್ದೆ ಹಾಗೂ ವಿಳಾಸ.</td><td>ಆಂತರಿಕ ಲೆಕ್ಕ ಪರಿಶೋಧಿಸಿದ ಸಿಬ್ಬಂದಿಗಳ ಹೆಸರು</td><td>ಸಂಘದಲ್ಲಿ ವಹಿಸಿದ ಹುದ್ದೆ</td></tr>
<tr><td>ರಮಾನಂದ ವಿ.ಎಸ್</td><td>ಉಪಪ್ರಧಾನ ವ್ಯವಸ್ಥಾಪಕರು</td></tr>
<tr><td>ರಂಜಿತಾ ಎಚ್. ಎಸ್</td><td>ವ್ಯವಸ್ಥಾಪಕರು</td></tr>
<tr><td>ಭರತ್ ಕುಮಾರ ಎಮ್.ವಿ</td><td>ವ್ಯವಸ್ಥಾಪಕರು</td></tr>
<tr><td>ಶಿವಕುಮಾರ ಎ</td><td>ಹಿರಿಯ ಸಹಾಯಕರು</td></tr>
<tr><td colspan="2"></td></tr>
<tr><td rowspan="6">3</td><td rowspan="6">ಆಂತರಿಕ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ತ್ರೈಮಾಸಿಕಕ್ಕೆ ನೀಡಲಾಗಿದೆಯೇ?</td><td colspan="2">ಆಂತರಿಕ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ತ್ರೈಮಾಸಿಕವಾಗಿ ನೀಡಲಾಗಿದೆ. ಇದರ ವಿವರ ಕೆಳಕಂಡಂತಿದೆ</td></tr>
<tr><td>ತ್ರೈಮಾಸಿಕ</td><td>ವರದಿ ಸಲ್ಲಿಸಿದ ದಿನಾಂಕ</td></tr>
<tr><td>1 ನೇ ತ್ರೈಮಾಸಿಕ</td><td>12–08–2025</td></tr>
<tr><td>2 ನೇ ತ್ರೈಮಾಸಿಕ</td><td>20–11–2025</td></tr>
<tr><td>3 ನೇ ತ್ರೈಮಾಸಿಕ</td><td>28–03–2025</td></tr>
<tr><td>4 ನೇ ತ್ರೈಮಾಸಿಕ</td><td>10–06–2026</td></tr>
<tr><td>4</td><td>ಆಂತರಿಕ ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು.</td><td colspan="2">ಆಂತರಿಕ ಪರಿಶೋಧನಾ ವರದಿಯಲ್ಲಿ ಸಂಘದ ಆರ್ಥಿಕ ಸ್ಥಿತಿಗತಿಗಳಿಗೆ ವ್ಯತಿರಿಕ್ತವಾಗಿ ಪರಿಣಾಮ ಬೀರುವ ಗಂಭೀರ ನ್ಯೂನತೆಗಳು ಇರುವುದಿಲ್ಲ. ಆದರೆ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಕೆಲವು ನ್ಯೂನತೆಗಳನ್ನು ಗುರುತಿಸಲಾಗಿದ್ದು ಅವುಗಳು ಕೆಳಗಿನಂತಿವೆ.<br>1) ಸಾಲದ ಕರಾರು ಪತ್ರ ಹಾಗೂ ದಾಖಲಾತಿಗಳಲ್ಲಿ ಗಮನಿಸಿದ ನ್ಯೂನತೆಗಳು.<br>2) ಉಪವಿಧಿಯ ಉಲ್ಲಂಘನೆಯ ಕುರಿತು.<br>3) ಆದಾಯ ತೆರಿಗೆ ಕಾಯ್ದೆಯ ಪರಿಪಾಲನೆಯ ಬಗ್ಗೆ.<br>4) ಸಂಘದ ಆಸ್ತಿಯ ಮೂಲ ದಾಖಲೆಗಳ ಬಗ್ಗೆ.<br>5) ಸಂಘದ ಭೌತಿಕ ದಾಸ್ತಾನು ಪರಿಶೀಲನೆ ಬಗ್ಗೆ.<br>6) ಹಳೆ ಸಾಲಗಳ ವಸೂಲಾತಿಯ ಬಗ್ಗೆ.</td></tr>
<tr><td>5</td><td>ಅವುಗಳನ್ನು ಸರಿಪಡಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ವಿವರ.</td><td colspan="2">ಸಂಘದ ಉಪವಿಧಿಯ ಪ್ರಕಾರ ಸಂಘವು ಲೆಕ್ಕ ಪರಿಶೋಧನಾ ಮತ್ತು ಹಣಕಾಸು ಸಮಿತಿಯನ್ನು ಹೊಂದಿದ್ದು ಈ ಸಮಿತಿಯಲ್ಲಿ ಆಂತರಿಕ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸಿ ಇದಕ್ಕೆ ಸಂಬಂಧಿಸಿದಂತೆ ಶಾಖಾವಾರು ವ್ಯವಸ್ಥಾಪಕರು ನೀಡಿದ ಸಮಜಾಯಷಿಗಳನ್ನು ಚರ್ಚಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ.</td></tr>
<tr><td>6</td><td>ಅಂತಹ ಗಂಭೀರ ಸ್ವರೂಪದ ನ್ಯೂನತೆಗಳು ಮುಂದುವರೆದಿದ್ದಲ್ಲಿ ಅವುಗಳನ್ನು ಶಾಸನಬದ್ಧ ಅಂತಿಮ ವರದಿಯಲ್ಲಿ ಅಳವಡಿಸಲಾಗಿದೆಯೇ?</td><td colspan="2">ಗಂಭೀರ ಸ್ವರೂಪದ ನ್ಯೂನತೆಗಳು ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುವುದಿಲ್ಲ.</td></tr>
</table>

| 10 | (ಎ) ಕರ್ನಾಟಕ ಸಹಕಾರ ಸಂಘಗಳ ನಿಯಮ 29(3) ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ? | |
|---|---|---|
| ಎ | ಸಂಘದ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಹೌದು |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು |
| ಇ | ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಎಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | ಹೌದು |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಹೌದು |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಹೌದು |
| ಕೆ | ಹೂಡಿಕೆಗಳು ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಇಲ್ಲ |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಹೌದು |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು |
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಲಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | ಹೌದು |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | ಹೌದು |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | ಇಲ್ಲ |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಹೌದು |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು |
| ವಿ | ಠೇವಣಿದಾರರ ಷೆಡ್ಯೂಲು; | ಹೌದು |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು; | ಹೌದು |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗಾವಾರು; | ಇಲ್ಲ |
| ಝಿ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು |
| | ವಿಮರ್ಶೆ: ಸಹಕಾರಿಯು ಕರ್ನಾಟಕ ಸಹಕಾರ ಸಂಘಗಳ ನಿಯಮ 29(3) ರಲ್ಲಿ ಸೂಚಿಸಿದಂತಹ ಎ ದಿಂದ ಝಡ್ ವರೆಗಿನ ಷೆಡ್ಯೂಲಗಳು ಮತ್ತು ರಿಟರ್ನಗಳಲ್ಲಿ ಸಹಕಾರಿಗೆ ವ್ಯವಹಾರಕ್ಕೆ ಅಗತ್ಯವಿರುವುದನ್ನು ಸಿದ್ದಪಡಿಸಿ ನಮ್ಮ ಲೆಕ್ಕ ಪರಿಶೋಧನೆಗೆ ಪೂರೈಸಿರುತ್ತಾರೆ. ಅವುಗಳನ್ನು ಪರಿಶೀಲಿಸಲಾಗಿದ್ದು ಅವುಗಳು ಸಮಾಧಾನಕರವಾಗಿರುತ್ತದೆ ಹಾಗೂ ಸದರಿ ಅಗತ್ಯ ಷೆಡ್ಯೂಲಗಳಲ್ಲಿ ಅಗತ್ಯವಿರುವುದನ್ನು ಲೆಕ್ಕ ಪರಿಶೋಧನಾ ವರದಿಗೂ ಸಹ ದೃಢೀಕರಿಸಿ ಲಗತ್ತಿಸಿದೆ. ಸಹಕಾರಿಯು ಪೂರೈಸಿದ ಮಾಹಿತಿ ತ:ಖ್ತೆಯಲ್ಲಿನ ಅನುಕ್ರಮ ಸಂಖ್ಯೆ : ಎಲ್, ಆರ್, ವೈ ಗೆ ಸಂಬಂಧಿಸಿದಂತೆ ಸಂಘವು ಮಾಹಿತಿಯನ್ನು ನಿರ್ವಹಿಸಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿರ್ವಹಿಸಲು ಸೂಚಿಸಿದೆ. | |

| 11 | ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ | |
|---|---|---|
| | ಸಂಘದ ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ | |

| | | |
|---|---|---|
| 1 | ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 63(10) ರಂತೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? | ಸಂಘವು ಸನ್ 2024-25 ನೇ ಸಾಲಿನ ಶಾಸನಬದ್ಧ ಲೆಕ್ಕ-ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಸಿದ್ದಪಡಿಸಲಾಗಿರುತ್ತದೆ. ಸಂಘದ ವಾರ್ಷಿಕ ಮಹಾಸಭೆ ದಿನಾಂಕ: 20-09-2025 ರಂದು ಮಂಡಿಸಲಾಗಿದೆ. ಆದರೆ ಹಿಂದಿನ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದ ಅಂಶಗಳಿಗೆ ಪ್ರತ್ಯೇಕವಾಗಿ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 63(10) ರಂತೆ ಪ್ರತ್ಯೇಕವಾಗಿ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿರುವುದಿಲ್ಲ. ಆದರೆ ಸಂಘವು ವಿದ್ಯುಕ್ತ ವರದಿಯಲ್ಲಿಯೆ ಅನುಪಾಲನಾ ವಿವರಗಳನ್ನು/ ಸಮಜಾಯಿಷಿಗಳನ್ನು ನೀಡಿರುವುದನ್ನು ಗಮನಿಸಲಾಗಿದೆ. ಮುಂದಿನ ದಿನಗಳಳ್ಲಿ ಲೆಕ್ಕ ಪರಿಶೋಧನಾ ವರದಿಯಲ್ಲಿ ಟಿಪ್ಪಣಿ ಮಾಡಿರುವ ಆಕ್ಷೇಪಣೆಗಳಿಗೆ ಸೂಕ್ತ ಸಮಜಾಯಿಷಿಯನ್ನು ಪ್ರತ್ಯೇಕವಾಗಿ ನೀಡಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. |
| 2 | ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ & ದಿನಾಂಕ: | ಸಂಘವು ವಿದ್ಯುಕ್ತ ವರದಿಯನ್ನು ದಿನಾಂಕ 23-09-2025 ಪತ್ರ ಸಂಖ್ಯೆ ಮ್ಯಾಮಕೋಸ್/ಕೌನ್ಸಿಲ್/1029/2025-26 |
| 3 | ಗಂಭೀರ ಸ್ವರೂಪದ ನ್ಯೂನತೆಗಳು/ಆಕ್ಷೇಪಣೆಗಳು ಕಂಡುಬಂದಿರುವುದಿಲ್ಲ. ಹಿಂದಿನ ಸಾಲಿನಿಂದ ಮುಂದುವರೆದ ಕೆಲವು ಆಕ್ಷೇಪಣೆಗಳು ಕೆಳಕಂಡಂತಿದೆ. | |

| ಕ್ರಸ | ಪುಟ ಸಂಖ್ಯೆ/ ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|
| 1 | 12, 12(1) | ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು 1960 ನಿಯಮ 28 ರ ಪ್ರಕಾರ ದ್ರವ್ಯಾಸ್ತಿ ನಿರ್ವಹಣೆ ಮಾಡಿರುವುದಿಲ್ಲ. | ಈ ಸಾಲಿನಿಂದ ದ್ರವ್ಯಾಸ್ತಿ ನಿರ್ವಹಣೆ ಮಾಡಲು ಕ್ರಮವಿಡಲಾಗಿದೆ. | ಮುಂದುವರೆದಿರುತ್ತದೆ. |
| 2 | 12, 12(1) | ಹೊರರಾಜ್ಯದ ದಲ್ಲಾಳಿಗಳನ್ನು ನಾಮಮಾತ್ರ ಸದಸ್ಯರನ್ನಾಗಿ ಸೇರಿಸಿಕೊಂಡು ಕಾಯ್ದೆ ಕಲಂ 18 ರ ಉಲ್ಲಂಘನೆಯಾಗಿರುತ್ತದೆ. | ಸಂಘದ ಉಪವಿಧಿ ಸಂಖ್ಯೆ 3(2)ರನ್ವಯ ಕಾರ್ಯವ್ಯಾಪ್ತಿಯ ಹೊರಗಡೆ ಖರೀದಿ ಮತ್ತು ವಿಕ್ರಿಗೆ ಯಾವುದೇ ನಿರ್ಬಂಧವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಘವು ರೈತ ಸದಸ್ಯರ ಅಡಿಕೆ ಖರೀದಿಸಿ ಉತ್ತರ ಭಾರತದ ಕಡೆ ಅಂದರೆ ಕೋಲ್ಕತ್ತಾ, ಲಕ್ನೋ, ಕಾನುರ, ದೆಹಲಿ ಮುಂತಾದ ಕಡೆಗಳಲ್ಲಿ ಇರುವ ಏಜೆಂಟರ ಮೂಲಕ ಪಾನ್ ಮಸಾಲ ಕಂಪನಿಗಳಿಗೆ ಮಾರಾಟ ಮಾಡುತ್ತಿರುವುದರಿಂದ ವ್ಯವಹಾರಕ್ಕೋಸ್ಕರ ಅಂತಹ ಏಜೆಂಟರನ್ನು ನಾಮಮಾತ್ರ ಸದಸ್ಯರನ್ನಾಗಿ ಸೇರ್ಪಡೆ ಮಾಡಿಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಲೆಕ್ಕಪರಿಶೋಧಕರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು. | ಮುಂದುವರೆದಿರುತ್ತದೆ. |

| | | | | |
|---|---|---|---|---|
| 3 | 19, 16(7) | ಸಂಘವು ಇತರೆ ಸಂಘಗಳಲ್ಲಿ ಮಾಡಿದ ಹೂಡಿಕೆಗಳಲ್ಲಿ ಬಹಳಷ್ಟುಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆಯಿರುವಷ್ಟು ನ್ನು ಹೊರತುಪಡಿಸಿ ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ. ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ. | ಪರಿಶೀಲಿಸಿ, ಅಗತ್ಯ ಕ್ರಮವಿಡಲಾಗುವುದು. | ಮುಂದುವರೆದಿರ ುತ್ತದೆ. |

**12 ಸಹಕಾರ ಸಂಘಕ್ಕೆ ಅನ್ವಯಿಸುವ ಕಾನೂನುಗಳ ಉಲ್ಲಂಘನೆ ಕುರಿತು**

(ವರದಿ ಸಾಲಿನಲ್ಲಿ ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಉಪವಿಧಿಗಳ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)

1 **ಸಹಕಾರಿ ಕಾಯ್ದೆ, ನಿಯಮಗಳ ಉಲ್ಲಂಘನೆ ಬಗ್ಗೆ ಟಿಪ್ಪಣಿ**

| | ಸಹಕಾರಿ ಕಲಂ | ಸಹಕಾರಿ ಕಾನೂನು ನಿಯಮ | ಉಲ್ಲಂಘನೆಯ ಸಂಕ್ಷಿಪ್ತ ವಿವರ |
|---|---|---|---|
| 1 | | 29(3) | ಕರ್ನಾಟಕ ಸಹಕಾರ ಸಂಘಗಳ ನಿಯಮ 29(3) ರಲ್ಲಿ ನಿರ್ದಿಷ್ಟಪಡಿಸಿದಂತೆ ಕೆಲವು ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿರುವುದಿಲ್ಲ. |
| 2 | 18 | | ಕಾರ್ಯಕ್ಷೇತ್ರ ಮೀರಿ ಸದಸ್ಯರನ್ನಾಗಿ ಮಾಡಿಕೊಂಡು ವ್ಯವಹರಿಸಲಾಗಿರುತ್ತದೆ. |
| 3 | | 23 | ಮೀಸಲು ನಿಧಿಯ ಮೊತ್ತವನ್ನು ಜಿಲ್ಲಾಮದ್ಯವರ್ತಿ ಸಹಕಾರಿ ಬ್ಯಾಂಕಿನಲ್ಲಿ ಅಥವಾ ಪಟ್ಟಣ ಸಹಕಾರ ಬ್ಯಾಂಕ ಅಥವಾ ಅಪೆಕ್ಸ ಬ್ಯಾಂಕಿನಲ್ಲಿ ಸಂಪೂರ್ಣವಾಗಿ ಹೂಡಿಕೆ ಮಾಡದೆ ರಿಸರ್ವ ಬ್ಯಾಂಕಿನ ನಿಯಂತ್ರಣದಲ್ಲಿ ಇರುವ ಷೆಡ್ಯುಲ್ಡ ಬ್ಯಾಂಕಿನಲ್ಲಿ ಹೂಡಿಕೆ ಮಾಡಲಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನಿಕಾಯದ ಅನುಮೋದನೆಯನ್ನು ಪಡೆಯದೆ ಹಾಗೂ ರಿಜಿಸ್ಟ್ರಾರಿಂದ ಪೂರ್ವಾನುಮತಿ ಪಡೆಯದೆ ಹೂಡಿಕೆ ಮಾಡಲಾಗಿರುತ್ತದೆ. |
| 4 | | 28 | ದ್ರವ ಸಂಪನ್ಮೂಲಗಳ ನಿರ್ವಹಣೆ – ಠೇವಣಿಗಳನ್ನು ಸ್ವೀಕರಿಸುವ ಮತ್ತು ನಗದು ಪತ್ತಿನ ಸಾಲಗಳನ್ನು ನೀಡುವ ಪ್ರತಿಯೊಂದು ಸಹಕಾರ ಸಂಘವು, ರಿಜಿಸ್ಟಾರನು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಪ್ರಮಾಣಗಳಿಗನುಸಾರವಾಗಿ ದ್ರವ ಸಂಪನ್ಮೂಲಗಳನ್ನು ನಿರ್ವಹಿಸತಕ್ಕದು. ಆದರೆ ಸಹಕಾರಿಯು ದ್ರವ್ಯಾಸ್ತಿಯನ್ನು ನಿರ್ವಹಿಸಿರುವುದಿಲ್ಲ. |
| 5 | 28(ಯು) | | ಮಂಡಲಿಯ ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು. ಆದರೆ ಸಂಘವು ಈ ನಿಯಮವನ್ನು ಪಾಲಿಸಿರುವುದಿಲ್ಲ. |
| 6 | 58 | | ಕರ್ನಟಕ ಸಹಕಾರಿ ಸಂಘಗಳ ಅಧಿನಿಯಮ 1959 ರ ಕಾಯ್ದೆ ಕಲಂ 58 ಕ್ಕೆ ದಿನಾಂಕ 12–09–2025 ರಂದು ತಿದ್ದುಪಡಿಯಾದಂತೆ ಸಂಘವು ಅದರ ನಿಧಿಗಳನ್ನು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಥವಾ ಪಟ್ಟಣ ಸಹಕಾರ ಬ್ಯಾಂಕನಲ್ಲಿ ಅಥವಾ ರಿಜಿಸ್ಟ್ರಾರರ ಪೂರ್ವಾನುಮತಿಯೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೊಳಪಡುವ ಯಾವುದೇ ಷೆಡ್ಯೂಲ್ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇರಿಸತಕ್ಕದ್ದು. ಸಂಘವು ಕೆಲವು ಹೂಡಿಕೆಗಳನ್ನು ನಿಯಮ ಬಾಹಿರವಾಗಿ ಮಾಡಲಾಗಿದೆ. |

| 2 | ಉಪವಿಧಿಗಳ ಉಲ್ಲಂಘನೆ ಬಗ್ಗೆ ವರದಿ | |
|---|---|---|
| | **ಉಪವಿಧಿ ಸಂಖ್ಯೆ** | **ಉಲ್ಲಂಘನೆಯ ವಿವರ** |
| 1 | ಸಂಘದ ಉಪವಿಧಿ ಭಾಗ–1, 3 | ಸಂಘದ ಉಪವಿದಿಯ ಪ್ರಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು (ಸಹಕಾರ ಸಂಘದ ಕಾರ್ಯವ್ಯಾಪ್ತಿಯು, ಕರ್ನಾಟಕ ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ. ಅಡಿಕೆ, ಕಾಳು ಮೆಣಸು ಮತ್ತಿತರ ತೋಟದ ಬೆಳೆಗಳ ಖರೀದಿ, ವಿಕ್ರಿ, ಸಂಸ್ಕರಣೆ ಇವುಗಳ ವ್ಯವಹಾರಕ್ಕೆ ಕಾರ್ಯ ವ್ಯಾಪ್ತಿಯ ನಿರ್ಬಂಧ ಇರುವುದಿಲ್ಲ. ಆದರೆ ಸಂಘವು ಈ ನಿಯಮವನ್ನು ಮೀರಿ ನಾಮಮಾತ್ರ ಸದಸ್ಯರನ್ನು ಕಾರ್ಯವ್ಯಾಪ್ತಿ ಮೀರಿ ಸೇರ್ಪಡಿಸಿಕೊಂಡಿರುತ್ತಾರೆ. |
| 2 | ಉಪವಿಧಿ ಭಾಗ 4, 23 | ಸಂಘದ ಉಪವಿಧೀಯ ಪ್ರಕಾರ ಸಂಘದ ಪ್ರತಿಯೊಬ್ಬ ಸದಸ್ಯನಿಗೆ, ಅವನು ಸಂಘದಲ್ಲಿ ಹೊಂದಿದ ಒಟ್ಟು ಷೇರುಗಳು ಹಾಗೂ ಷೇರು ಮೊಬಲಗನ್ನು ನಮೂದಿಸಿ, ಸಂಘದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರ ಸಹಿಗಳು ಮತ್ತು ಸಂಘದ ಮುದ್ರೆಯೊಂದಿಗೆ ಕ್ರಮಾಗತ ಸಂಖ್ಯೆಯುಳ್ಳ ಷೇರು ದೃಢೀಕರಣ ಪತ್ರ/ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು. ಹೆಚ್ಚುವರಿ ಷೇರು ಪಡೆದಾಗ ಈ ಬಗ್ಗೆ ಪ್ರತ್ಯೇಕವಾಗಿ ದೃಢೀಕರಣ/ ಪ್ರಮಾಣ ಪತ್ರ ನೀಡತಕ್ಕದ್ದು ಮತ್ತು ನಿಗದಿತ ಷೇರು ಶುಲ್ಕ ಪಡೆಯತಕ್ಕದ್ದು. ಆದರೆ ಸಹಕಾರಿಯು ಕೆಲವು ಸದಸ್ಯರಿಗೆ ಷೇರು ಪ್ರಮಾಣ ಪತ್ರವನ್ನು ನೀಡಲು ಬಾಕಿ ಇರುತ್ತದೆ. |
| 3 | ಉಪವಿಧಿ ಭಾಗ 4, 22 (1) | ಸಹಕಾರಿಯ ಉಪವಿಧಿಯ ಪ್ರಕಾರ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅವರಿಂದ ನಿರ್ದೇಶಿತರಾದವರು, ಈಗಾಗಲೇ ಸದಸ್ಯತ್ವ ಪಡೆದ ಸದಸ್ಯರಿಂದ, ಅಗತ್ಯ ಮಾಹಿತಿ ಹಾಗೂ ಅಗತ್ಯ ಸಂಖ್ಯೆಯ ಭಾವಚಿತ್ರಗಳನ್ನು ಪಡೆದು ಹಾಗೂ ಹೊಸದಾಗಿ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದವರಿಂದ, ಸದಸ್ಯತ್ವ ಅರ್ಜಿಯೊಂದಿಗೆ ಅಗತ್ಯ ಮಾಹಿತಿ, ಭಾವಚಿತ್ರ ಹಾಗೂ ಆಡಳಿತ ಮಂಡಲಿ ನಿಗದಿಪಡಿಸುವ ಗುರುತಿನ ಚೀಟಿ ಶುಲ್ಕ ಪಡೆದು, ಸದಸ್ಯನ ಹೆಸರು, ವಿಳಾಸ, ಸದಸ್ಯತ್ವದ ಷೇರು ಖಾತೆ ಸಂಖ್ಯೆ, ವಯಸ್ಸು ಮುಂತಾದ ವಿವರಗಳನ್ನೊಳಗೊಂಡ ಗುರುತಿನ ಕಾರ್ಡ್‌ನ ಮೇಲೆ, ಸದಸ್ಯನ ಸಹಿ ಇರುವ ಭಾವಚಿತ್ರವನ್ನು ಅಂಟಿಸಿ, ಕಾರ್ಡ್‌ನ ಮೇಲೆ ತನ್ನ ಸಹಿ ಮಾಡುವ ಮೂಲಕ ಅದರಲ್ಲಿನ ವಿವರಗಳನ್ನು ದೃಢೀಕರಿಸಿ, ಅಂತಹ ಕಾರ್ಡ್‌ನ್ನು ಪ್ರತಿ ಸದಸ್ಯನಿಗೂ ನೀಡತಕ್ಕದ್ದು. ಆದರೆ, ಈ ನಿಯಮ 'ಬಿ', 'ಸಿ' ಮತ್ತು 'ಡಿ' ತರಗತಿಯ ಸದಸ್ಯರಿಗೆ ಅನ್ವಯಿಸುವುದಿಲ್ಲ. ಆದರೆ ಸಹಕಾರಿಯು ಕೆಲವು ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡಲು ಬಾಕಿ ಇರುತ್ತದೆ. |
| 4 | ಉಪವಿಧಿ ಭಾಗ 11, 78(4) | ಸಂಘದ ಉಪವಿಧಿಯ ಪ್ರಕಾರ ಆಂತರಿಕ ಲೆಕ್ಕ ತಪಾಸಣೆ : ಸಂಘವು ಅರ್ಹ ವ್ಯಕ್ತಿಯನ್ನು ಸಂಘದ ಆಂತರಿಕ ಲೆಕ್ಕ ತಪಾಸಣೆಗಾರರನ್ನಾಗಿ ನೇಮಿಸಿಕೊಂಡು, ಅವರಿಗೆ ಸೂಕ್ತ ಸಂಭಾವನೆ ನಿಗದಿಗೊಳಿಸಿ, ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿ ಮಾಡಿ ತ್ರೈಮಾಸಿಕ ವರದಿ ಪಡೆಯತಕ್ಕದ್ದು. ಲೆಕ್ಕ ತಪಾಸಣೆಯಲ್ಲಿ ತೀವ್ರ ತರಹದ ಲೋಪ, ದೋಷಗಳು ಕಂಡುಬಂದಲ್ಲಿ ತಕ್ಷಣ ಅವನು ವರದಿ ಮಾಡತಕ್ಕದ್ದು. ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಬೆಳಕಿಗೆ ತರದೆ ಇರುವ ಅವ್ಯವಹಾರಗಳಿಗೆ ಆಂತರಿಕ ಲೆಕ್ಕ ಪರಿಶೋಧಕನು ಜವಾಬ್ದಾರನಾಗಿರತಕ್ಕದ್ದು. ಆದರೆ ಸಂಘವು ಬಾಹ್ಯ ವ್ಯಕ್ತಿಯನ್ನು ಆಂತರಿಕ ಲೆಕ್ಕ ಪರಿಶೋಧನೆಗೆ ನೇಮಿಸಿಕೊಳ್ಳದೆ ಈ ನಿಯಮವನ್ನು ಪಾಲಿಸಿರುವುದಿಲ್ಲ. |
| 5 | ಭಾಗ 4, 29(3) | ಸಂಘದ ಉಪವಿಧೀಯ ಪ್ರಕಾರ ನಾಮಮಾತ್ರ ಸದಸ್ಯತ್ವದ ಅವಧಿಯು ಸದಸ್ಯತ್ವ ಪಡೆದ ದಿನಾಂಕದಿಂದ ಮೂರು ವರ್ಷಗಳು ಅಥವಾ ಅವರು ಸಂಘದಲ್ಲಿ ಮಾಡುವ ವ್ಯವಹಾರ ಮುಕ್ತಾಯಗೊಳ್ಳುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಗೆ ಕೊನೆಗೊಳ್ಳತಕ್ಕದ್ದು. ಈ ಸದಸ್ಯತ್ವವು ಕೊನೆಗೊಂಡಲ್ಲಿ ಪುನಃ ನಿಯಮಾನುಸಾರ ಹೊಸ ಸದಸ್ಯತ್ವವನ್ನು ಪಡೆಯಬಹುದು. ಆದರೆ ಸಂಘವು ಕೆಲವು ಅವಧಿ ಮುಗಿದ ನಾಮ ಮಾತ್ರ ಸದಸ್ಯರ ಜೊತೆ ವ್ಯವಹರಿಸಿರುತ್ತದೆ. |

| | | |
|---|---|---|
| 6 | ಉಪವಿಧಿ ಭಾಗ–<br>14, 86 | ಎ) ಸಹಕಾರಿ ಕಾಯಿದೆ ಕಲಮು 57(1) ರ ಉಪಬಂಧಗಳಿಗೊಳಪಟ್ಟು ಸಂಘದ ನಿವ್ವಳ ಲಾಭವನ್ನು ಸಂಘದ ಸಾಮಾನ್ಯ ಸಭೆಯು ಈ ಕೆಳ ಕಂಡಂತೆ ವಿಲೇವಾರಿ ಮಾಡತಕ್ಕದ್ದು.<br>1. ನಿವ್ವಳ ಲಾಭದ ಶೇ.25ಕ್ಕಿಂತ ಕಡಿಮೆ ಇಲ್ಲದ ಮೊಬಲಗನ್ನು ಆಪದ್ಧನ/ಕಾಯ್ದಿರಿಸಿದ ನಿಧಿಗೆ,<br>2. ಉಳಿದ ಲಾಭದ ಶೇ. 2 ರಷ್ಟುನ್ನು ಸಹಕಾರ ಶಿಕ್ಷಣ ನಿಧಿಗೆ,<br>ಆ ನಂತರ, ಉಳಿದ ಲಾಭದಲ್ಲಿ,<br>3. ಶೇ. 20 ಕ್ಕೆ ಮೀರದಂತೆ ಕಟ್ಟಡ ನಿಧಿಗೆ,<br>4. ಶೇ. 10 ಕ್ಕೆ ಮೀರದಂತೆ ಹೋಕು ಬಾಕಿ ನಿಧಿಗೆ,<br>ಶೇ.40ಕ್ಕೆ ಮೀರದಂತೆ ಸದಸ್ಯರ ಕ್ಷೇಮಾಭಿವೃದ್ಧಿ ನಿಧಿಗೆ ಹಾಗೂ ಸದಸ್ಯರ ವ್ಯವಹಾರದ ಪ್ರಮಾಣಕ್ಕನುಸರಿಸಿ ನೀಡುವ ಬೋನಸ್ಸಿಗಾಗಿ<br>5. ಶೇ. 2 ಕ್ಕೆ ಮೀರದಂತೆ ಲಾಭಾಂಶ ಸಮತೋಲನ ನಿಧಿಗೆ,<br>7. ಶೇ. 2 ಕ್ಕೆ ಮೀರದಂತೆ ನೌಕರರ ಕ್ಷೇಮಾಭಿವೃದ್ಧಿ ನಿಧಿಗೆ,<br>8. ಶೇ. 10 ಕ್ಕೆ ಮೀರದಂತೆ ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗೆ,<br>9. ಶೇ. 3 ಕ್ಕೆ ಮೀರದಂತೆ ಅಡಿಕೆ ಸಂಶೋಧನಾ ನಿಧಿಗೆ,<br>10. ಶೇ. 2 ಕ್ಕೆ ಮೀರದಂತೆ ಮಹೋತ್ಸವ ನಿಧಿಗೆ,<br>11. ಶೇ.15 ಕ್ಕೆ ಮೀರದಂತೆ ಮರಣೋತ್ತರ ನಿಧಿ ಯೋಜನೆಗೆ.<br>12. ನೌಕರರಿಗೆ ಬೋನಸ್ಸು ಅಥವಾ ಎಕ್ಸ್‌ಗ್ರೇಷಿಯಾ ಮೊತ್ತವನ್ನು ನಿಯಮಾನುಸಾರ ನೀಡುವುದು, ಮತ್ತು<br>13. ಉಳಿದ ಲಾಭಾಂಶದಲ್ಲಿ ಸಂಘದಲ್ಲಿ ಸದಸ್ಯರು ಹೊಂದಿದ ಷೇರು ಮೊಬಲಗಿನ ಮೇಲೆ ಶೇ. 25 ಕ್ಕೆ ಮೀರದಂತೆ ಸಾಮಾನ್ಯ ಸಭೆ ನಿರ್ಧರಿಸಿದ ದರದಲ್ಲಿ (ಡಿವಿಡೆಂಡ್) ಲಾಭಾಂಶ ನೀಡಲು,<br>ಆದರೆ ಸಂಘವು ನಿಯಮವನ್ನು ಪಾಲಿಸಿರುವುದಿಲ್ಲ. |
| 7 | ಠೇವಣಾತಿ ಉಪ ನಿಯಮಾವಳಿ –7 | ಸದಸ್ಯರ ಸಣ್ಣ ಉಳಿತಾಯ ಖಾತೆಯ ನಿಯಮ 7 ರ ಪ್ರಕಾರ ಸಾಲ ಪಡೆಯದೇ ಇದ್ದ ಸದಸ್ಯರು ತಮ್ಮ ಸಣ್ಣ ಉಳಿತಾಯ ಖಾತೆಯಲ್ಲಿ ಕನಿಷ್ಟ ರೂ. 500.00 ಮೊಬಲಗನ್ನು ಉಳಿಸಿ ಬಾಕಿ ಮೊಬಲಗನ್ನು ವಾಪಾಸ್ಸು ಪಡೆಯಲು ಅವಕಾಶ ಇರುತ್ತದೆ. ಆದರೆ ಕೆಲವು ಖಾತೆ ಬಾಕಿಗಳು ಈ ಪರಿವಿಧಿಯಲ್ಲಿ ಇರುವುದಿಲ್ಲ. |
| 8 | ಠೇವಣಾತಿ ಉಪ ನಿಯಮಾವಳಿ–<br>4(ಎ)(3) | ಉಳಿತಾಯ ಖಾತೆ ನಿಯಮ 4(ಎ)(3) ಪ್ರಕಾರ, ಉಳಿತಾಯ ಖಾತೆ ಪ್ರಾರಂಭಿಸಲು ಕನಿಷ್ಟ 500–00 ರೂಪಾಯಿಗಳನ್ನು ಠೇವಣಿ ಮಾಡತಕ್ಕದ್ದು. ಮತ್ತು ಈ ಖಾತೆಯನ್ನು ಚಾಲ್ತಿಯಲ್ಲಿಡಲು ಕನಿಷ್ಟ 1,000–00 ರೂಪಾಯಿ ಈ ಖಾತೆಯಲ್ಲಿ ಇರತಕ್ಕದ್ದು. ಆದರೆ ಕೆಲವು ಖಾತೆ ಬಾಕಿಗಳು ಈ ಪರಿವಿಧಿಯಲ್ಲಿ ಇರುವುದಿಲ್ಲ. |
| 9 | ವ್ಯಾಪಾರ ಉಪ ನಿಯಮ 8 | ಸಂಘದ ವ್ಯಾಪಾರ ನಿಯಮ 8 ರ ಪ್ರಕಾರ, ಸಂಘದೊಡನೆ ವ್ಯವಹಾರ ಮಾಡಲು ಅಪೇಕ್ಷಿಸುವ ವರ್ತಕರು ಸಂಘಕ್ಕೆ ಅರ್ಜಿ ಸಲ್ಲಿಸಿ ಸಂಘದಿಂದ ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ಮಿತಿಯನ್ನು ಮಂಜೂರು ಮಾಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅಂತಹ ವರ್ತಕರು ಸಂಬಂಧಿಸಿದ ಶಾಖೆಯ ಮುಖಾಂತರ ಕೇಂದ್ರ ಕಛೇರಿಗೆ ಅರ್ಜಿ ಕಳುಹಿಸಿ ವ್ಯವಹಾರದ ಬಗ್ಗೆ ಖರೀದಿ ಮಿತಿಯ ಶೇ.20ರಷ್ಟು ವ್ಯಾಪಾರ ಭದ್ರತಾ ಠೇವಣಿ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ನೀಡಿದಲ್ಲಿ ಅವರು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಶಾಖಾವಾರು ಮಿತಿಯನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಮಂಜೂರು ಮಾಡತಕ್ಕದ್ದು. ಆದರೆ ಸಂಘವು ಈ ನಿಯಮವನ್ನು ಕೆಲವು ವರ್ತಕರ ವ್ಯವಹಾರದಲ್ಲಿ ಪಾಲಿಸಿರುವುದಿಲ್ಲ. |
| 10 | ವ್ಯಾಪಾರ ಉಪನಿಯಮ 10 | ಸಂಘದ ವ್ಯಾಪಾರ ಉಪನಿಯಮ 10 ರ ಪ್ರಕಾರ, ವರ್ತಕರು ಖರೀದಿ ಮಾಡಿದ ಅಡಿಕೆ ಬಿಟ್ಟುಕೊಡುವ ದಾಸ್ತಾನನ್ನು ಆಂಶಿಕವಾಗಿ ಅಥವಾ ಪೂರ್ಣವಾಗಿ ಪೂರ್ವದಲ್ಲಿ ಸಂಘಕ್ಕೆ ಬಾಕಿ ಇರುವ ಅಸಲು ಮತ್ತು ಬಡ್ಡಿಯನ್ನು ಹಾಗೂ ಪಾವತಿಸಬೇಕಾದ ಇತರೆ ಮೊತ್ತವನ್ನು ಜಮಾ ಪಡೆದು ನಂತರವೇ ಬಿಟ್ಟು ಕೊಡತಕ್ಕದ್ದು. ಅದರೆ ಸಂಘವು ಕೆಲವು ಸಂದರ್ಭದಲ್ಲಿ ಈ ನಿಯಮವನ್ನು ಪಾಲಿಸಿರುವುದಿಲ್ಲ. |

| | | |
|---|---|---|
| 3 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ? | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಪಾಲಿಸಲಾಗುತ್ತಿದೆ. ಆದರೆ ನಿಬಂಧಕರು ಸುತ್ತೋಲೆಯನ್ವಯ ದ್ರವ ಸಂಪನ್ಮೂಲಗಳನ್ನು ನಿರ್ವಹಿಸಬೇಕು. ಆದರೆ ಸಂಘದಲ್ಲಿ ಈ ಸುತ್ತೋಲೆಗಳನ್ನು ಪಾಲಿಸಿರುವುದಿಲ್ಲ. |
| 4 | ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ | ಸಂಘವು ನಬಾರ್ಡ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ ಮಾಡುತ್ತಿದ್ದಾರೆ ಅಥವಾ ಸಂಘಕ್ಕೆ ಆರ್ ಬಿ ಐ ನಿರ್ದೇಶನಗಳು ಅನ್ವಯಿಸುವುದಿಲ್ಲ. |

**ಭಾಗ– 2**

**ಸಂಘದ ಆರ್ಥಿಕ ವ್ಯಾವಹಾರಿಕ ವಿವರಗಳು**

13 **ದಿನಾಂಕ 31–03–2026 ರಲ್ಲಿದ್ದಂತೆ ಸಂಘದ ಸದಸ್ಯತ್ವದ ವಿವರಗಳು ಈ ಕೆಳಗಿನಂತಿದೆ**

| ಸದಸ್ಯತ್ವ | ಸರಕಾರಿ ಸದಸ್ಯತ್ವ | | ಸಾಮಾನ್ಯ ಸದಸ್ಯತ್ವ | | ಸಹ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | |
|---|---|---|---|---|---|---|---|---|
| | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು |
| ವರ್ಷಾರಂಭದಲ್ಲಿ ಇದ್ದಂತೆ | ಇರುವುದಿಲ್ಲ | | 31,138 | 30,587 | 27 | 47 | 8,402 | 9,267 |
| ಹೊಸದಾಗಿ ಸದಸ್ಯತ್ವ ಪಡೆದವರು | | | 1,153 | 2,002 | 20 | 31 | 865 | 1,873 |
| ಸದಸ್ಯತ್ವದಿಂದ ವಾಪಸ್ಸು ಪಡೆದವರು | | | 1,704 | 966 | – | 3 | – | 174 |
| ಸಾಲಾಖೈರಿಗೆ ಇರುವ ಸದಸ್ಯರು | | | 30,587 | 31,623 | 47 | 75 | 9,267 | 10966 |

13 **ಎ) ಸದಸ್ಯತ್ವದ ಬಗ್ಗೆ ವಿಮರ್ಶೆ :**

1) ವರ್ಷಾರಂಭಕ್ಕೆ ಸಂಘದಲ್ಲಿ 30,587 ಸಾಮಾನ್ಯ ಸದಸ್ಯರಿದ್ದು ವರದಿ ಸಾಲಿನಲ್ಲಿ 2,002 ಸಾಮಾನ್ಯ ಸದಸ್ಯರು ಹೊಸದಾಗಿ ಸೇರ್ಪಡೆಯಾಗಿದ್ದು, 966 ಸಾಮಾನ್ಯ ಸದಸ್ಯತ್ವದಿಂದ ಕಡಿಮೆಯಾಗಿರುತ್ತಾರೆ. ವರ್ಷಾಂತ್ಯಕ್ಕೆ ಸಂಘದಲ್ಲಿ 31,623 ಸಾಮಾನ್ಯ ಸದಸ್ಯರಿರುತ್ತಾರೆ. ಹಾಗೂ ಸಂಘವು ಸಹ ಸದಸ್ಯತ್ವವನ್ನು ಹೊಂದಿದ್ದು ವರ್ಷಾರಂಭಕ್ಕೆ ಸಹಕಾರಿಯಲ್ಲಿ 47 ಜನ ಸಹ ಸದಸ್ಯರಿದ್ದು ವರದಿ ಸಾಲಿನಲ್ಲಿ ಹೊಸದಾಗ್ದಿ 31 ಸದಸ್ಯರು ಹೊಸದಾಗಿ ಸೇರ್ಪಡೆಯಾಗಿದ್ದು, 3 ಸಹ ಸದಸ್ಯತ್ವದಿಂದ ಕಡಿಮೆಯಾಗಿದ್ದು ವರ್ಷಾಂತ್ಯಕ್ಕೆ 75 ಸದಸ್ಯರಿರುತ್ತಾರೆ. ಸಂಘವು ನಾಮ ಮಾತ್ರ ಸದಸ್ಯತ್ವನ್ನು ಹೊಂದಿದ್ದು ವರ್ಷಾರಂಭದಲ್ಲಿ 9,267 ನಾಮಮಾತ್ರ ಸದಸ್ಯರಿದ್ದು ಪ್ರಸಕ್ತ ಸಾಲಿನಲ್ಲಿ 1,873 ನಾಮ ಮಾತ್ರ ಸದಸ್ಯರು ಸೇರ್ಪಡೆಯಾಗಿದ್ದು 174 ನಾಮ ಮಾತ್ರ ಸದಸ್ಯತ್ವದಿಂದ ಕಡಿಮೆಯಾಗಿದ್ದು ವರ್ಷಾಂತ್ಯಕ್ಕೆ 10,966 ನಾಮ ಮಾತ್ರ ಸದಸ್ಯರಿರುತ್ತಾರೆ.

2) ಸಂಘದ ಉಪವಿಧಿ ಭಾಗ 4, 11 ಪ್ರಕಾರ "ಎ" ತರಗತಿಯ ಸದಸ್ಯತ್ವ ಹಾಗೂ 28(1)ರ ಪ್ರಕಾರ ಸಹ ಸದಸ್ಯತ್ವ ಮತ್ತು 29 ರ ಪ್ರಕಾರ ಸಹಕಾರಿಯು ಎ ತರಗತಿಯ ಸದಸ್ಯತ್ವ, ಸಹ ಸದಸ್ಯತ್ವ ಹಾಗು ನಾಮಮಾತ್ರ ಸದಸ್ಯತ್ವವನ್ನು ಹೊಂದಿ ವ್ಯವಹರಿಸಬಹುದಾಗಿದೆ. ಇದರಂತೆ ಸಹಕಾರಿಯು ಸದಸ್ಯರನ್ನು ಹೊಂದಿರುತ್ತಾರೆ.

3) ಸಂಘವು ನಾಮ ಮಾತ್ರ ಸದಸ್ಯರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವಾಗ ಯಾವುದೆ ಆಡಳಿತ ಮಂಡಲಿಯ ಪೂರ್ವಾನುಮತಿ ಪಡೆಯದೆ ನಾಮ ಮಾತ್ರ ಸದಸ್ಯರನ್ನಾಗಿ ಮಾಡಿಕೊಂಡು ವ್ಯವಹರಿಸಿರುವುದನ್ನು ಗಮನಿಸಲಾಗಿದ್ದು, ವ್ಯವಸ್ಥಾಪಕ ನಿರ್ದೇಶಕರು ನಾಮ ಮಾತ್ರ ಸದಸ್ಯರ ಶೇರು ಅರ್ಜಿಗಳನ್ನು ಅಂಗೀಕರಸಿ ಅನುಮೋದನೆಗೆ ಸಂಘದ ಉಪವಿಧೀಯನ್ವಯ ಆಡಳಿತ ಮಂಡಲಿಯ ಗಮಕ್ಕೆ ತಂದಿರುತ್ತಾರೆ. ಮುಂದಿನ ದಿನಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಕಾಯ್ದೆಯನ್ವಯ ಉಪವಿಧಿಯಲ್ಲಿ ಸೂಕ್ತ ಬದಲಾವಣೆ ಮಾಡಿಕೊಂಡು ವ್ಯವಹರಿಸಲು ಸೂಚಿಸಿದೆ.

| | |
|---|---|
| ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದುರಷ್ಟರನ್ನು ಮೀರತಕ್ಕಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವದ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕನಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ದ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಂಘದಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು. | ಸಂಘದಲ್ಲಿರುವ ಸಹ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ ಶೇ.15 ಕ್ಕಿಂತ ಕಡಿಮೆ ಇದ್ದು, ಇದು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಕಲಂ 18(1) ರ ಮಿತಿಯಲ್ಲಿ ಇರುತ್ತದೆ. |
| 4) ಒಂದು ವೇಳೆ ಸದರಿ ಪ್ರಮಾಣ 15 ಪ್ರತಿಶತ ಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವ ಹೊಂದಲು ಅರ್ಹವಿದ್ದಲ್ಲಿ ಅಂತಹ ಸಹ ಸದಸ್ಯರನ್ನು ಕ್ರಮಬದ್ದ ಸದಸ್ಯರೆಂದು ಮಾಡಿಕೊಳ್ಳಲು ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದು ಹಾಕುವುದು ವರದಿಯಲ್ಲಿ ಸೂಚಿಸುವುದು. | ಸಂಘದಲ್ಲಿರುವ ಸಹ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ ಶೇ.15 ಕ್ಕಿಂತ ಕಡಿಮೆ ಇದ್ದು, ಇದು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಕಲಂ 18(1) ರ ಮಿತಿಯಲ್ಲಿ ಇರುತ್ತದೆ. |
| 5) ಎಲ್ಲ ಸದಸ್ಯರಿಂದ ಕೆ.ವೈ.ಸಿ. ಮಾದರಿಯ ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ಹಾಗೂ ಗುರುತಿನ ಚೀಟಿಗಳನ್ನು ನೀಡಿರುವ ಬಗ್ಗೆ ವಿಮರ್ಶಿಸುವುದು. | ಸಂಘದಲ್ಲಿ ಇತ್ತೀಚಿನ ಅವಧಿಯಲ್ಲಿ ಸದಸ್ಯತ್ವವನ್ನು ನಿಡಿದ ಸದಸ್ಯರ ಸದಸ್ಯತ್ವದ ಅರ್ಜಿಯ ಜೊತೆಗೆ ಕೆ.ವೈ.ಸಿ ದಾಖಲೆ ಪಡೆದು ವ್ಯವಹರಿಸುತ್ತಿದ್ದಾರೆ. ಆದರೆ ಕೆಲವು ಹಳೆಯ ಸದಸ್ಯರಿಂದ ಕೆವೈಸಿ ದಾಖಲೆ ಪಡೆಯದೆ ಸದಸ್ಯತ್ವ ನೀಡಿರುವುದನ್ನು ಪರೀಶಿಲಿಸಲಾಗಿದೆ. ಹಾಗೂ ಕೆಲವು ಹಳೆಯ ಸದಸ್ಯರಿಂದ ಕೆ.ವೈ.ಸಿ ದಾಖಲೆ ಪಡೆಯುವುದು ಬಾಕಿ ಇರುತ್ತದೆ. ಸಂಘದ ಉಪವಿಧಿ ಭಾಗ 4, 22 ಪ್ರಕಾರ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅವರಿಂದ ನಿರ್ದೇಶಿತರಾದವರು, ಈಗಾಗಲೇ ಸದಸ್ಯತ್ವ ಪಡೆದ ಸದಸ್ಯರಿಂದ, ಅಗತ್ಯ ಮಾಹಿತಿ ಹಾಗೂ ಅಗತ್ಯ ಸಂಖ್ಯೆಯ ಭಾವಚಿತ್ರಗಳನ್ನು ಪಡೆದು ಹಾಗೂ ಹೊಸದಾಗಿ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದವರಿಂದ, ಸದಸ್ಯತ್ವ ಅರ್ಜಿಯೊಂದಿಗೆ ಅಗತ್ಯ ಮಾಹಿತಿ, ಭಾವಚಿತ್ರ ಹಾಗೂ ಆಡಳಿತ ಮಂಡಲಿ ನಿಗದಿಪಡಿಸುವ ಗುರುತಿನ ಚೀಟಿ ಶುಲ್ಕ ಪಡೆದು, ಸದಸ್ಯನ ಹೆಸರು, ವಿಳಾಸ, ಸದಸ್ಯತ್ವದ ಷೇರು ಖಾತೆ ಸಂಖ್ಯೆ, ವಯಸ್ಸು ಮುಂತಾದ ವಿವರಗಳನ್ನೊಳಗೊಂಡ ಗುರುತಿನ ಕಾರ್ಡ್‌ನ ಮೇಲೆ, ಸದಸ್ಯನ ಸಹಿ ಇರುವ ಭಾವಚಿತ್ರವನ್ನು ಅಂಟಿಸಿ, ಕಾರ್ಡ್‌ನ ಮೇಲೆ ತನ್ನ ಸಹಿ ಮಾಡುವ ಮೂಲಕ ಅದರಲ್ಲಿನ ವಿವರಗಳನ್ನು ದೃಢೀಕರಿಸಿ, ಅಂತಹ ಕಾರ್ಡ್‌ನ್ನು ಪ್ರತಿ ಸದಸ್ಯನಿಗೂ ನೀಡತಕ್ಕದ್ದು. ಆದರೆ, ಈ ನಿಯಮ 'ಬಿ', 'ಸಿ' ಮತ್ತು 'ಡಿ' ತರಗತಿಯ ಸದಸ್ಯರಿಗೆ ಅನ್ವಯಿಸುವುದಿಲ್ಲ. ಆದರೆ ಸಹಕಾರಿಯು ಈ ನಿಯಮವನ್ನು ಸಂಪೂರ್ಣವಾಗಿ ಪಾಲಿಸಿರುವುದಿಲ್ಲ. ಕೆಲವು ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡುವುದು ಬಾಕಿ ಇರುತ್ತದೆ. ಮುಂದಿನ ದಿನಗಳಲ್ಲಿ ಗುರುತಿನ ಚೀಟಿಯನ್ನು ನೀಡಿವ್ಯವಹರಿಸಲು ಸೂಚಿಸಿದೆ. |

| | | | |
|---|---|---|---|
| | 6) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 122 ರನ್ವಯ ಸದಸ್ಯರ ರಿಜಿಸ್ಟರ ಪೂರ್ಣ ವಿವರಗಳೊಂದಿಗೆ ಬರೆದಿಡಲಾಗಿದೆಯೇ? ಇಲ್ಲದಿದ್ದಲ್ಲಿ ವಿಮರ್ಶಿಸಿ. | | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 122 ರನ್ವಯ ಸದಸ್ಯರ ರಿಜಿಸ್ಟರ ನಿರ್ವಹಿಸಿರುವುದನ್ನು ಗಮನಿಸಲಾಗಿದೆ. ಆದರೆ ಸದಸ್ಯರ ರಿಜಿಸ್ಟರ್ನಲ್ಲಿ ಸದಸ್ಯರ ಭಾವಚಿತ್ರವನ್ನು ಅಂಟಿಸಲಾಗಿರುವುದಿಲ್ಲ. ಸದಸ್ಯರ ರಿಜಿಸ್ಟರ್‌ನಲ್ಲಿ ಎಲ್ಲಾ ಅಂಶಗಳನ್ನು ಸಂಪೂರ್ಣವಾಗಿ ದಾಖಲಿಸಿ, ವಾರಸುದಾರರ ಹೆಸರಿನೊಂದಿಗೆ ಹಾಗೂ ಶೇರುದಾರರ ಸಂಬಂಧದೊಂದಿಗೆ ನಮೂದಿಸಿ ಶೇರುದಾರರ ಮಾದರಿ ಸಹಿ ಪಡೆಯತಕ್ಕದ್ದು ಹಾಗೂ ಶೇರುದಾರರ ಭಾವಚಿತ್ರವನ್ನು ಅಂಟಿಸತಕ್ಕದ್ದು. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ವಿಡಲು ಸೂಚಿಸಲಾಗಿದೆ. |
| **13** | **ಬಿ) ಸಂಘವು ಸದಸ್ಯರೊಡನೆ ಕೈಗೊಂಡ ವ್ಯವಹಾರಗಳಲ್ಲಿ ಇರುವ ನ್ಯೂನತೆಗಳ ಬಗ್ಗೆ ವಿಮರ್ಶೆ :** | | |
| | 1 | ನಿಯತ ಸದಸ್ಯರು ಸಂಘದ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಬಗ್ಗೆ ಟಿಪ್ಪಣಿ | ಸಂಘದಲ್ಲಿ ವರ್ಷಾಂತ್ಯಕ್ಕೆ 31,623 ಸಾಮಾನ್ಯ ಸದಸ್ಯರು ಇರುತ್ತಾರೆ. ಹಾಗೂ 75 ಸಹ ಸದಸ್ಯರು ಇರುತ್ತಾರೆ. ಮತ್ತು 10,966 ನಾಮ ಮಾತ್ರ ಸದಸ್ಯರು ಇರುತ್ತಾರೆ. ಒಟ್ಟಾರೆಯಾಗಿ ದಿನಾಂಕ 31-03-2026 ಕ್ಕೆ ಇದ್ದಂತೆ ಒಟ್ಟು 42,664 ಸದಸ್ಯರನ್ನು ಹೊಂದಿದ್ದು ಅವರಲ್ಲಿ ಕೆಲವು ಸದಸ್ಯರು ಸಂಘದ ಸಂಪೂರ್ಣ ವ್ಯವಹಾರದಲ್ಲಿ ಪಾಲ್ಗೊಂಡಿರುತ್ತಾರೆ. ಕೆಲವು ಸದಸ್ಯರು ಸಂಪೂರ್ಣವಾಗಿ ಸಂಘದಲ್ಲಿ ವ್ಯವಹಾರ ನಡೆಸುತ್ತಿಲ್ಲ. ಅವರನ್ನು ಸಂಘದ ವ್ಯವಹಾರದಲ್ಲಿ ಪಾಲ್ಗೊಳ್ಳುವಂತೆ ಮಾಡಿ ಸಂಘದ ವ್ಯವಹಾರ ವೃದ್ಧಿಸುವಂತೆ ಆಡಳಿತ ಮಂಡಲಿಗೆ ಸೂಚಿಸಲಾಗಿದೆ. |
| | 2 | ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಸಂಘವು ಠೇವಣಿ ಸಂಗ್ರಹಣೆಯಲ್ಲಿ ಹಾಗು ಸಾಲ ನೀಡುವಾಗ ಮತ್ತು ರೈತರ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವಾಗ ಕೇವಲ ಸದಸ್ಯರೊಂದಿಗೆ ವ್ಯವಹರಿಸಿರುವುದನ್ನು ಗಮನಿಸಲಾಗಿದೆ. |
| | 3 | ಸಂಘದ ಕಾರ್ಯಕ್ಷೇತ್ರ ಮೀರಿ ಮಾಡಿಕೊಂಡಿರುವ ಸದಸ್ಯರ ಸಂಖ್ಯೆ ಮತ್ತು ನಡೆಸಿದ ವ್ಯವಹಾರಗಳ ವಿವರ | ಸಂಘದ ಉಪವಿದಿಯ ಪ್ರಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು (ಸಹಕಾರ ಸಂಘದ ಕಾರ್ಯವ್ಯಾಪ್ತಿಯು, ಕರ್ನಾಟಕ ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ. ಅಡಿಕೆ, ಕಾಳು ಮೆಣಸು ಮತ್ತಿತರ ತೋಟದ ಬೆಳೆಗಳ ಖರೀದಿ, ವಿಕ್ರಿ, ಸಂಸ್ಕರಣೆ ಇವುಗಳ ವ್ಯವಹಾರಕ್ಕೆ ಕಾರ್ಯ ವ್ಯಾಪ್ತಿಯ ನಿರ್ಬಂಧ ಇರುವುದಿಲ್ಲ. ಆದರೆ ಸಂಘವು ಈ ನಿಯಮವನ್ನು ಮೀರಿ ನಾಮಮಾತ್ರ ಸದಸ್ಯರನ್ನು ಕಾರ್ಯವ್ಯಾಪ್ತಿ ಮೀರಿ ಸೇರ್ಪಡಿಸಿಕೊಂಡಿರುತ್ತಾರೆ. ಸಹಕಾರಿಯು ಸಾಮಾನ್ಯ ಸದಸ್ಯತ್ವ ಮತ್ತು ಸಹಸದಸ್ಯತ್ವವನ್ನು ಕಾರ್ಯಕ್ಷೇತ್ರ ಮೀರಿ ಮಾಡಿಕೊಂಡಿರುವುದಿಲ್ಲ. ಆದರೆ ಸಂಘವು ನಾಮ ಮಾತ್ರ ಸದಸ್ಯರನ್ನು ಕಾರ್ಯವ್ಯಾಪ್ತಿ ಮೀರಿ ಮಾಡಿಕೊಂಡಿರುತ್ತದೆ. ಇದನ್ನು ಆಕ್ಷೇಪಿಸಲಾಗಿದೆ. |

14 **ಷೇರು ಬಂಡವಾಳದ ಬಗ್ಗೆ ವಿಮರ್ಷೆ**

ಸಂಘದ ಉಪವಿಧಿಯಲ್ಲಿ ಅಧಿಕೃತ ಷೇರು ಭಂಡವಾಳದ ಮಿತಿಯಬಗ್ಗೆ ಯಾವುದೆ ಉಲ್ಲೇಖ ವಿರುವುದಿಲ್ಲ. ವರದಿ ಸಾಲಿನ ಅಂತ್ಯಕ್ಕೆ ಒಟ್ಟೂ ಸಂಘದ ಸಾಮಾನ್ಯ ಸದಸ್ಯರಿಂದ ಹಾಗೂ ಸಹ ಸದಸ್ಯರಿಂದ ಒಟ್ಟೂ ಷೇರು ಬಂಡವಾಳ ರೂ. 9,31,48,600.00 ಇರುತ್ತದೆ.

**ದಿನಾಂಕ 31-03-2026 ಕ್ಕೆ ಸಹಕಾರಿಗೆ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಗಿನಂತೆ ಇರುತ್ತದೆ**

| ಷೇರು ಬಂಡವಾಳ | ಸರಕಾರಿ ಷೇರು | ಸಾಮಾನ್ಯ ಸದಸ್ಯರ ಷೇರು | ಸಹ ಸದಸ್ಯ ಷೇರು |
|---|---|---|---|
| ವರ್ಷಾರಂಭದಲ್ಲಿದ್ದಂತೆ | ಇರುವುದಿಲ್ಲ | 9,02,63,800.00 | 4,700.00 |
| ಪ್ರಸಕ್ತ ಸಾಲಿನಲ್ಲಿ ಜಮಾ | | 63,69,500.00 | 3,100.00 |
| ಪ್ರಸಕ್ತ ಸಾಲಿನಲ್ಲಿ ಖರ್ಚು | | 34,92,200.00 | 300.00 |
| ಸಾಲಾಖೈರಿಗೆ ಇದ್ದಂತೆ | | 9,31,41,100.00 | 7,500.00 |

ಪ್ರಸಕ್ತ ಸಾಲಿನಲ್ಲಿ ಸಂಘದ ಸದಸ್ಯರಿಂದ ಪಾವತಿಯಾದ ಷೇರು ಬಂಡವಾಳದ ವಿವರ ಪರಿಶೀಲಿಸಲಾಗಿ, ಪ್ರಸಕ್ತ ಸಾಲಿನ ಆರಂಭದಲ್ಲಿ ಸಾಮಾನ್ಯ ಸದಸ್ಯರಿಂದ ರೂ. 9,02,63,800 ಇರುತ್ತಿದ್ದು, ವರದಿ ಸಾಲಿನಲ್ಲಿ ರೂ. 63,69,500 ಷೇರು ಸದಸ್ಯರಿಂದ ಪಾವತಿಯಾಗಿ, ರೂ. 34,92,200 ಗಳನ್ನು ಹಿಂದಿರುಗಿಸಲಾಗಿ ವರದಿ ಸಾಲಿನಂತ್ಯಕ್ಕೆ ರೂ. 9,31,41,100.00 ಇರುತ್ತದೆ. ಹಾಗೂ ಪ್ರಸಕ್ತ ಸಾಲಿನ ಆರಂಭದಲ್ಲಿ ಸಹ ಸದಸ್ಯರಿಂದ ರೂ. 4,700 ಇರುತ್ತಿದ್ದು, ವರದಿ ಸಾಲಿನಲ್ಲಿ ರೂ. 3,100 ಷೇರು ಸದಸ್ಯರಿಂದ ಪಾವತಿಯಾಗಿ, ರೂ. 300 ಗಳನ್ನು ಹಿಂದಿರುಗಿಸಲಾಗಿ ವರದಿ ಸಾಲಿನಂತ್ಯಕ್ಕೆ ರೂ. 7,500.00 ಇರುತ್ತದೆ. ಸಂಘವು ಯಾವುದೆ ಸರ್ಕಾರದ ಶೇರುಗಳನ್ನು ಹೊಂದಿರುವುದಿಲ್ಲ. ಸಂಘದ ಕಾರ್ಯವ್ಯಾಪ್ತಿಯಲ್ಲಿರುವ ಅರ್ಹ ವ್ಯಕ್ತಿಗಳನ್ನು ಸಾಮಾನ್ಯ ಸದಸ್ಯರನ್ನಾಗಿ ಮಾಡಿಕೊಂಡು ಷೇರು ಬಂಡವಾಳವನ್ನು ಹೆಚ್ಚಿಸಿಕೊಂಡು ವ್ಯವಹರಿಸಲು ಸೂಚಿಸಲಾಗಿದೆ.

| | |
|---|---|
| 1) ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಶೆ : ಸರ್ಕಾರದಿಂದ ಪಡೆದಿರುವ ಷೇರುಧನ ಪಡೆದಿದ್ದಲ್ಲಿ ಮಂಜೂರಾತಿ ಆದೇಶ ಸಂಖ್ಯೆ, ಷರತ್ತುಗಳು ಮತ್ತು ಮರುಪಾವತಿಯ ಅವಧಿ, ವಿಧಾನ, ಬಡ್ಡಿದರ, ದಂಡ ಮುಂತಾದವುಗಳ ಬಗ್ಗೆ ವಿವರ ನೀಡುವುದು ಮತ್ತು ಅವುಗಳ ಪಾಲನೆ ಆಗಿರುವ ಬಗ್ಗೆ ವಿಮರ್ಶಿಸುವುದು. | ಸಂಘದಲ್ಲಿ ಸರಕಾರದ ಶೇರನ್ನು ಹೊಂದಿರದ ಕಾರಣ ಈ ಖಂಡಿಕೆಯು ಅನ್ವಯಿಸುವುದಿಲ್ಲ. |
| **2) ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಶೆ :** | |
| 2.1) ಸದಸ್ಯರಿಂದ ವಸೂಲಿಸಿದ ಷೇರಿನ ಮೊತ್ತವು ಸಂಘದ ಉಪ ನಿಯಮ ದನ್ವಯ ಷೇರಿನ ಮುಖ ಬೆಲೆಗೆ ಅನುಗುಣವಾಗಿ ಇದೆಯೇ? | ಸಂಘದ ಉಪವಿಧಿ ಅಧ್ಯಾಯ 4(5)(8) ಪ್ರಕಾರ ಅಧಿಕೃತ ಷೇರು ಭಂಡವಾಳದ ಮಿತಿಯು ಬಗ್ಗೆ ಸಂಘದ ಉಪವಿಧಿಯಲ್ಲಿ ಯಾವುದೆ ಉಲ್ಲೇಖವಿರುವುದಿಲ್ಲ. ವರದಿ ಸಾಲಿನ ಅಂತ್ಯಕ್ಕೆ ಒಟ್ಟೂ ಸಂಘದ ಸಾಮಾನ್ಯ ಸದಸ್ಯರಿಂದ ಹಾಗೂ ಸಹ ಸದಸ್ಯರಿಂದ ಒಟ್ಟೂ ಷೇರು ಬಂಡವಾಳ ರೂ. 9,31,48,600 ಇರುತ್ತದೆ. ಸದಸ್ಯರಿಂದ ವಸೂಲಿಸಿದ ಷೇರಿನ ಮೊತ್ತವು ಸಂಘದ ಉಪ ನಿಯಮ ದನ್ವಯ ಷೇರಿನ ಮುಖ ಬೆಲೆಗೆ ಅನುಗುಣವಾಗಿರುತ್ತದೆ. ಸಂಘದ ಉಪವಿಧಿಯ ಭಾಗ -3 ಸಂಖ್ಯೆ 7(ಎ)ರ ಪ್ರಕಾರ ಸಂಘದ ಪ್ರತಿ ಷೇರಿನ ಮೌಲ್ಯವು ರೂ.100/- ಗಳಿದ್ದು ಕನಿಷ್ಠ 5 ಷೇರುಗಳನ್ನು ಸದಸ್ಯರಿಗೆ ನೀಡಲಾಗುತ್ತಿದೆ ಹಾಗೂ 'ಎ' ತರಗತಿಯ ಸದಸ್ಯರಿಗೆ ಗರಿಷ್ಟ ರೂ.20,000/- ಷೇರು ಬಂಡವಾಳ ಮಿತಿಯನ್ನು ನಿಗದಿಪಡಿಸಲಾಗಿದೆ. ದಿನಾಂಕ:19/09/2018 ರ ಸಾಮಾನ್ಯ ಸಭೆಯಲ್ಲಿ ವಿಷಯ ಸಂಖ್ಯೆ 31 ರಂತೆ ಸಂಘದ ಅಧಿಕೃತ ಷೇರು ಬಂಡವಾಳದ ಮಿತಿಯನ್ನು ರೂ.15.00 ಕೋಟಿಗಳವರೆಗೆ ನಿಗದಿಪಡಿಸಲಾಗಿದೆ. |

| | |
|---|---|
| 2.2) ಎಷ್ಟು ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಲಾಗಿದೆ? | ಸಂಘದ ಉಪವಿಧಿ ಭಾಗ 4, 23ರ ಪ್ರಕಾರ ಸಂಘದ ಪ್ರತಿಯೊಬ್ಬ ಸದಸ್ಯನಿಗೆ, ಅವನು ಸಂಘದಲ್ಲಿ ಹೊಂದಿದ ಒಟ್ಟು ಷೇರುಗಳು ಹಾಗೂ ಷೇರು ಮೊಬಲಗನ್ನು ನಮೂದಿಸಿ, ಸಂಘದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರ ಸಹಿಗಳು ಮತ್ತು ಸಂಘದ ಮುದ್ರೆಯೊಂದಿಗೆ ಕ್ರಮಾಗತ ಸಂಖ್ಯೆಯುಳ್ಳ ಷೇರು ದೃಢೀಕರಣ ಪತ್ರ/ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು. ಹೆಚ್ಚುವರಿ ಷೇರು ಪಡೆದಾಗ ಈ ಬಗ್ಗೆ ಪ್ರತ್ಯೇಕವಾಗಿ ದೃಢೀಕರಣ/ ಪ್ರಮಾಣ ಪತ್ರ ನೀಡತಕ್ಕದ್ದು ಮತ್ತು ನಿಗದಿತ ಷೇರು ಶುಲ್ಕ ಪಡೆಯತಕ್ಕದ್ದು. ಆದರೆ ಸಹಕಾರಿಯು ಕೆಲವು ಸದಸ್ಯರಿಗೆ ಷೇರು ಪ್ರಮಾಣ ಪತ್ರವನ್ನು ನೀಡಲು ಬಾಕಿ ಇರುತ್ತದೆ. ಕೂಡಲೆ ಸದಸ್ಯರಿಗೆ ವಿತರಿಸಿ ವ್ಯವಹರಿಸಲು ಸೂಚಿಸಿದೆ. |
| 2.3)ನಾಮ ಮಾತ್ರ ಸದಸ್ಯರಿಂದ ಕಲಂ 18(1) ಹಾಗೂ ಸಂಘದ ಉಪನಿಯಮದಂತೆ ವಸೂಲಿಸಿದ ನಾಮ ಮಾತ್ರ ಸದಸ್ಯರ ಶುಲ್ಕವನ್ನು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಇರಿಸಿದ್ದರೆ ಸಂಘದ ಲಾಭ ಹಾನಿ ಖಾತೆಗೆ ವರ್ಗಾಯಿಸಲು ಕ್ರಮವಿರಿಸುವುದು | ನಾಮ ಮಾತ್ರ ಸದಸ್ಯರಿಂದ ಕಲಂ 18(1) ಹಾಗೂ ಸಂಘದ ಉಪನಿಯಮದಂತೆ ವಸೂಲಿಸಿದ ನಾಮ ಮಾತ್ರ ಸದಸ್ಯರ ಶುಲ್ಕವನ್ನು ಸಂಘದ ಲಾಭ ಹಾನಿ ಖಾತೆಗೆ ವರ್ಗಾಯಿಸಲಾಗಿರುತ್ತದೆ. ವರದಿ ಸಾಲಿನಲ್ಲಿ 1,873 ಜನ ನಾಮ ಮಾತ್ರ ಸದಸ್ಯರಿಂದ ವಸೂಲಿಸಿದ ರೂ. 1,87,200.00 ಶುಲ್ಕ ಸಂಘದ ಲಾಭ ಹಾನಿ ಖಾತೆಗೆ ವರ್ಗಾಯಿಸಲಾಗಿದೆ. |
| 2.4) ಪ್ರತಿಯೊಂದು ಷೇರು ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳವಾರು ಪಟ್ಟಿಯ ಮೊತ್ತ ಅಡಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು. | ದಿನಾಂಕ : 31–03–2026 ಕ್ಕೆ ಇದ್ದಂತೆ ಸದಸ್ಯರ ಷೇರು ಖಾತೆಗಳಲ್ಲಿ ಸಾಮಾನ್ಯ ಸದಸ್ಯರ ಷೇರು ಖಾತೆಗಳಿಗೆ ಮತ್ತು ಸಹಸದಸ್ಯರ ಶೇರು ಖಾತೆಗಳಿಗೆ ಕುಳವಾರು ಲಭ್ಯವಿರುತ್ತದೆ. ಸಾಮಾನ್ಯ ತರಗತಿಯ ಸದಸ್ಯರ ಷೇರುಗಳಿಗೆ ಕುಳವಾರು ತಃಖ್ತೆಯನ್ನು ತಯಾರಿಸಿರುತ್ತಾರೆ. ಷೇರು ಕುಳವಾರು ತಃಖ್ತೆ ಮೊತ್ತವು ಆಸ್ತಿ ಜವಾಬ್ದಾರಿಯಲ್ಲಿ ತೋರಿಸಲಾದ ಮೊತ್ತಕ್ಕೆ ತಾಳೆ ಇರುತ್ತದೆ. |

ಕುಳವಾರು ವ್ಯತ್ಯಾಸದ ವಿವರ

| **ಷೇರುಗಳ ವಿವರ** | **ಸಾಮಾನ್ಯ ಖಾತೆ** | **ಕುಳವಾರು** | **ಅಂತರ** |
|---|---|---|---|
| ಸಾಮಾನ್ಯ ಸದಸ್ಯರ ಶೇರು | 9,31,41,100 | 9,31,41,100 | – |
| ಸಹ ಸದಸ್ಯರ ಶೇರು | 7,500 | 7,500 | – |
| **ಒಟ್ಟೂ** | **9,31,48,600** | **9,31,48,600** | |

| | |
|---|---|
| 2.5)ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಮೊತ್ತ | ಷೇರು ಕುಳವಾರು ತಃಖ್ತೆ ಮೊತ್ತವು ಆಸ್ತಿ ಜವಾಬ್ದಾರಿಯಲ್ಲಿ ತೋರಿಸಲಾದ ಮೊತ್ತಕ್ಕೆ ತಾಳೆ ಇರುತ್ತದೆ. |
| 2.6) ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ.<br>(ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲ ನಮೂದುಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ, ಮತ್ತು ದುರುಪಯೋಗ ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಇಡುವುದು..) | ಲೆಕ್ಕಪರಿಶೋಧನಾ ಅವಧಿಯಲ್ಲಿ ಕುಳವಾರು ವ್ಯತ್ಯಾಸ ಕಂಡುಬಂದಿರುವುದಿಲ್ಲವಾದ್ದರಿಂದ ಅನ್ವಯಿಸುವುದಿಲ್ಲ |

2.7) ವರ್ಷಾಂತ್ಯದ ಷೇರು ಖಾತೆ ಬಾಕಿ ರಿಜಿಸ್ಟರ್ ಅನ್ನು ಪರಿಶೀಲಿಸಿ, ದೃಢೀಕರಿಸಿ ಅದರ ಸಂಕ್ಷಿಪ್ತವನ್ನು ಈ ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು.

| ವಿವರ | ಸಾಮಾನ್ಯ ಸದಸ್ಯತ್ವ | | ಸಹ ಸದಸ್ಯ ಷೇರು | |
|---|---|---|---|---|
| | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು |
| ಖಾತೆಗಳ ಸಂಖ್ಯೆ | 30,587 | 31,623 | 47 | 75 |
| ಅಥಾವೆ ಮೊತ್ತ | 9,02,63,800 | 9,31,41,100 | 4,700.00 | 7,500.00 |
| ಕುಳುವಾರು ಮೊತ್ತ | 9,02,63,800 | 9,31,41,100 | 4,700.00 | 7,500.00 |

| | |
|---|---|
| ಸಂಘದಲ್ಲಿ ಗಣಕೀಕೃತ ವ್ಯವಸ್ಥೆ ಇದ್ದಲ್ಲಿ ವರ್ಷಾಂತ್ಯದ ಷೇರು ಬಾಕಿ ಯಾದಿಯ ಒಂದು ಪ್ರತಿಯನ್ನು ಮುದ್ರಿತಗೊಳಿಸಿ, ಪರಿಶೀಲಿಸಿ ಅದನ್ನು ದೃಢೀಕರಿಸಿ ಸಂಘಕ್ಕೆ ನೀಡುವುದು. | ಸಂಘದಲ್ಲಿ ಗಣಕೀಕೃತ ವ್ಯವಸ್ಥೆಯಲ್ಲಿ ಷೇರುಯಾದಿಯನ್ನು ನಿರ್ವಹಿಸುತ್ತಿದ್ದು ವರ್ಷಾಂತ್ಯದ ಷೇರು ಬಾಕಿ ಯಾದಿಯ ಒಂದು ಪ್ರತಿಯನ್ನು ಮುದ್ರಿತಗೊಳಿಸಿ, ಪರಿಶೀಲಿಸಿ ಅದನ್ನು ದೃಢೀಕರಿಸಿ ಸಂಘಕ್ಕೆ ನೀಡಲಾಗಿದೆ. |

**15 ಮೀಸಲು ನಿಧಿ ಮತ್ತು ಇತರೆ ನಿಧಿಗಳು :**

| | | |
|---|---|---|
| 1 | ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ. | ಸಂಘದಲ್ಲಿ ವರ್ಷಾಂತ್ಯಕ್ಕೆ ಸಾಮಾನ್ಯ ಮೀಸಲು ನಿಧಿಯನ್ನು ರೂ. 29,94,88,669 ಹೊಂದಿದ್ದು ಇದನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಮೀಸಲು ನಿಧಿಯಲ್ಲಿ ರೂ. 30,77,80,000 ಸಂಪೂರ್ಣವಾಗಿ ಗುಂತಾಯಿಸಿರುತ್ತಾರೆ. ಕಾಯ್ದೆಯಂತೆ ಸಂಪೂರ್ಣವಾಗಿ ಗುಂತಾಯಿಸಲಾಗಿದೆ. ವರದಿಯ ವರ್ಷಾಂತ್ಯಕ್ಕೆ ಮೀಸಲು ನಿಧಿಯ ಬಡ್ಡಿ ರೂ. 2,06,20,587 ಜಮಾ ಬಂದಿರುತ್ತದೆ. ಸಂಘವು ಮೀಸಲು ನಿಧಿಯನ್ನು ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ, ಸ್ಟೇಟ್ ಬ್ಯಾಂಕ ಅಫ್ ಇಂಡಿಯಾ, ಎಕ್ಸಿಸ್ ಬ್ಯಾಂಕ ಇವರಲ್ಲಿ ಹೂಡಿಕೆ ಮಾಡಲಾಗಿದೆ ಇದರ ವಿವರ ಕೆಳಗಿನಂತಿದೆ. ನಿಯಮ 23 ರ ಪ್ರಕಾರ ಮೀಸಲು ನಿಧಿಯ ಮೊತ್ತವನ್ನು ಜಿಲ್ಲಾಮಧ್ಯವರ್ತಿ ಸಹಕಾರಿ ಬ್ಯಾಂಕಿನಲ್ಲಿ ಸಂಪೂರ್ಣವಾಗಿ ಹೂಡಿಕೆ ಮಾಡದೆ ರಿಸರ್ವ ಬ್ಯಾಂಕಿನ ನಿಯಂತ್ರಣದಲ್ಲಿ ಇರುವ ಷೆಡ್ಯೂಲ್ಡ ಬ್ಯಾಂಕಿನಲ್ಲಿ ಹೂಡಿಕೆ ಮಾಡಲಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನಿಕಾಯ ದ ಅನುಮೋದನೆಯನ್ನು ಪಡೆಯದೆ ಹಾಗೂ ರಿಜಿಸ್ಟ್ರಾರ್‌ರಿಂದ ಪೂರ್ವಾನುಮತಿ ಪಡೆಯದೆ ಹೂಡಿಕೆ ಮಾಡಲಾಗಿರುತ್ತದೆ. ಇದನ್ನು ಆಕ್ಷೇಪಿಸಲಾಗಿದ್ದು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದೆ. |

| ವಿವರ | ದಿನಾಂಕ 31–03–2026 ಕ್ಕೆ ಇದ್ದಂತೆ |
|---|---|
| ಜಿಲ್ಲಾ ಮಧ್ಯವರ್ತಿ ಸಹಕಾರ ಬ್ಯಾಂಕ ಶಿವಮೊಗ್ಗ ಕೇಂದ್ರ ಕಛೇರಿ | 2,77,80,000.00 |
| ಸ್ಟೇಟ್ ಬ್ಯಾಂಕ ಅಫ್ ಇಂಡಿಯಾ, ಎ.ಪಿ.ಪಿ.ಎಂ.ಸಿ ಶಾಕೆ | 18,00,00,000.00 |
| ಸ್ಟೇಟ್ ಬ್ಯಾಂಕ ಅಫ್ ಇಂಡಿಯಾ, ಎಸ್.ಎಂ.ಇ ಶಾಖೆ | 5,00,00,000.00 |
| ಎಕ್ಸಿಸ್ ಬ್ಯಾಂಕ, ರಾಜೇಂದ್ರ ನಗರ | 5,00,00,000.00 |

| | | |
|---|---|---|
| | ಲೆಕ್ಕ ಪರಿಶೋಧಕರ ಸಲಹೆ ಹಾಗೂ ಸೂಚನೆಗಳು: ಪರಿಶೀಲನೆಯಲ್ಲಿ ಸಂಘದ ಮೀಸಲು ನಿಧಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಹಾಗೂ ಆಕ್ಸಿಸ್ ಬ್ಯಾಂಕ್ (Axis Bank) ಗಳಲ್ಲಿ ಠೇವಣಿಯಾಗಿ ಹೂಡಿಕೆ ಮಾಡಿರುವುದು ಕಂಡುಬಂದಿದೆ. ಆದರೆ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 23 ರಂತೆ ಮೀಸಲು ನಿಧಿಯನ್ನು ಕಾಯ್ದೆ ಕಲಂ 58 ರನ್ವಯ ಸಂಘದ ಹೆಸರಿನಲ್ಲಿಯೇ ಪ್ರತ್ಯೇಕವಾಗಿ ಹೂಡಿಕೆ ಮಾಡುವುದು ಸೂಕ್ತವಾಗಿರುತ್ತದೆ. ಮೀಸಲು ನಿಧಿಯು ಸಂಘದ ಶಾಶ್ವತ ಭದ್ರತಾ ನಿಧಿಯಾಗಿರುವುದರಿಂದ, ಅದನ್ನು ಸಾಮಾನ್ಯ ಕಾರ್ಯನಿರ್ವಹಣೆ, ಸಾಲ ವಿತರಣೆ ಅಥವಾ ತಾತ್ಕಾಲಿಕ ಹಣಕಾಸಿನ ಅವಶ್ಯಕತೆಗಳಿಗೆ ಬಳಸಬಾರದು. ರಾಷ್ಟ್ರೀಕೃತ ಅಥವಾ ಖಾಸಗಿ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವ ಸಂದರ್ಭದಲ್ಲಿ, ಅಗತ್ಯವಿದ್ದಾಗ ಯಾವುದೇ ಸಮಯದಲ್ಲಿ ಠೇವಣಿಯನ್ನು ಹಿಂಪಡೆಯುವ ಅಥವಾ ಅದರ ಆಧಾರದ ಮೇಲೆ ಸಾಲವನ್ನು ಪಡೆಯುವ ಅವಕಾಶ ಇರುವುದರಿಂದ, ಮೀಸಲು ನಿಧಿಯ ಮೂಲ ಉದ್ದೇಶಕ್ಕೆ ಧಕ್ಕೆಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಪ್ರಸ್ತುತ SBI & Axis Bank ಗಳಲ್ಲಿ ಇರಿಸಿರುವ ಮೀಸಲು ನಿಧಿಯ ಠೇವಣಿಗಳ ಅವಧಿ ಪೂರ್ಣಗೊಂಡ ತಕ್ಷಣ, ಅವುಗಳನ್ನು ನವೀಕರಿಸದೆ ಪ್ರತ್ಯೇಕವಾಗಿ ಹೂಡಿಕೆ ಮಾಡುವಂತೆ ಆಡಳಿತ ಮಂಡಲಿಗೆ ಸೂಚಿಸಲಾಗಿದೆ. ಇದರಿಂದ ಮೀಸಲು ನಿಧಿಯ ದುರುಪಯೋಗಕ್ಕೆ ಅವಕಾಶವಿರುವುದಿಲ್ಲ, ಯಾವುದೇ ಸಮಯದಲ್ಲಿ ಅನಧಿಕೃತವಾಗಿ ಹಣವನ್ನು ಹಿಂಪಡೆಯುವುದು ಅಥವಾ ಆ ಠೇವಣಿಯ ಮೇಲೆ ಸಾಲ ಪಡೆಯುವುದನ್ನು ತಡೆಯಬಹುದಾಗಿದೆ. | |
| 2 | ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ? | ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿರುವುದಿಲ್ಲ. ಸಂಘವು 58 ರ ಅಂಶಗಳನ್ನು ಮೀರಿ ಎಕ್ಸಿಸ್ ಬ್ಯಾಂಕ, ಸ್ಟೇಟ್ ಬ್ಯಾಂಕ ಅಫ್ ಇಂಡಿಯ ಇದರಲ್ಲಿ ಮೀಸಲು ನಿಧಿಯನ್ನು ಹೂಡಿಕೆ ಮಾಡಿರುವುದನ್ನು ಆಕ್ಷೇಪಿಸಲಾಗಿದೆ. |
| 3 | ಸಂಘವು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಪಾಲನೆಯ ಕುರಿತು ವಿಮರ್ಷಿಸುವುದು. | ವರದಿ ಸಾಲಿನಲ್ಲಿ ಸಂಘವು ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ಸ್ವಂತ ವ್ಯಾಪಾರಕ್ಕಾಗಿ ವಿನಿಯೋಗಿಸಿರುವುದಿಲ್ಲ. |
| 4 | ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು. | ಅನ್ವಯಿಸುವುದಿಲ್ಲ. |
| 5 | ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4) (ಬಿ)ಯ ಉಲ್ಲಂಘನೆಯಾಗಿದೆಯೇ? | ದಿನಾಂಕ 10-10-2025 ರಂದು ಯುನಿಯನ್ ಬ್ಯಾಂಕ ಚೆಕ್ ಮುಖಾಂತರ ಶಿಕ್ಷಣ ನಿಧಿ ಪಾವತಿಸಲಾಗಿದೆ. (ರೂ 8,28,936.08 (ಯುನಿಯನ್ ಬ್ಯಾಂಕ್ ಚೆಕ್ ನಂ 001656 ). ಸಂಘವು ದಿನಾಂಕ 14-10-2025 ರಂದು ಸದಸ್ಯರಿಗೆ ಲಾಭಾಂಷವನ್ನು ಸದಸ್ಯರ ಉಳಿತಾಯ ಖಾತೆಗೆ ಜಮಾ ಪಡಿಸಲಾಗಿರುತ್ತದೆ. ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿಕೆ ಮಾಡಿರುವುದಿಲ್ಲ. |

| 16 | **ಹೂಡಿಕೆಗಳು :** | | |
|---|---|---|---|
| | **ದಿನಾಂಕ 31–03–2026ಕ್ಕೆ ಇದ್ದಂತೆ ಸಂಘವು ರೂ. 31,38,00,095.00 ಹೂಡಿಕೆಗಳನ್ನು ಹೊಂದಿರುತ್ತದೆ** | | |
| 1 | ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ? | ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುವ ಬಗ್ಗೆ ವಿವರಗಳು ಕೆಳಗಿನಂತಿದೆ. | |

| | **ವಿವರ** | **ಮೊತ್ತ** | **ದೃಢೀಕರಣ ಪತ್ರದ ಲಭ್ಯತೆ** |
|---|---|---|---|
| 1 | ಎಸ್‌ಬಿಐ ರಿಜರ್ವ್ ಫಂಡ್ ಠೇವಣಿ ಎ.ಪಿ.ಎಂ.ಸಿ | 18,00,00,000.00 | ದೃಢೀಕರಣ ಪತ್ರ ಲಭ್ಯವಿದೆ |
| 2 | ಎಸ್‌ಬಿಐ ರಿಜರ್ವ್ ಫಂಡ್ ಠೇವಣಿ ಎಸ್.ಎಂ.ಇ | 5,00,00,000.00 | |
| 3 | ಎಸ್.ಡಿ.ಸಿ.ಸಿ. ಬ್ಯಾಂಕ್ ರಿಜರ್ವ್ ಫಂಡ್ | 2,77,80,000.00 | |
| 4 | ಆಕ್ಸಿಸ್ ಬ್ಯಾಂಕ್ ರಿಜರ್ವ್ ಫಂಡ್ ಠೇವಣಿ | 5,00,00,000.00 | |
| 5 | ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ | 45,000.00 | |
| 6 | ಇಫ್ಕೋ, ನವದೆಹಲಿ | 10,000.00 | |
| 7 | ಕ್ಯಾಂಪ್ಕೋ. ಮಂಗಳೂರು | 25,00,000.00 | |
| 8 | ಹಾಪ್ಸ್‌ಕೋಸ್. ನಿ ಹಾಸನ | 1,000.00 | |
| 9 | ಕೇಂದ್ರ ಉಗ್ರಾಣ ಸಂಸ್ಥೆ | 5,000.00 | |
| 10 | ಜಿಲ್ಲಾ ಸಹಕಾರ ಬ್ಯಾಂಕ್ | 1,05,000.00 | |
| 11 | ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ., | 25,000.00 | ದೃಢೀಕರಣ ಪತ್ರ ಲಭ್ಯವಿರುವುದಿಲ್ಲ. |
| 12 | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ | 1,00,000.00 | ದೃಢೀಕರಣ ಪತ್ರ ಲಭ್ಯವಿದೆ |
| 13 | ಕೋಮಾರ್ಕ ಹಾಸನ | 25,000.00 | |
| 14 | ಬೆಳಗಾಂ ಕ್ರೀಡಾ ಪ್ರೋತ್ಸಾಹ & ಅಭಿವೃದ್ದಿ ಸಹಕಾರ ನಿ., | 50,000.00 | |
| 15 | ಜಿಲ್ಲಾ ಸಹಕಾರ ಮಾರಾಟ ಮಂಡಲಿ | 25,000.00 | |
| 16 | ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ | 25,00,000.00 | |
| 17 | ಎಸ್.ಡಿ.ಸಿ.ಸಿ. ಬ್ಯಾಂಕ್ ಹೊಸನಗರ | 5,000.00 | ದೃಢೀಕರಣ ಪತ್ರ ಲಭ್ಯವಿದೆ |
| 18 | ಎಸ್.ಡಿ.ಸಿ.ಸಿ. ಬ್ಯಾಂಕ್ ಹೊಸನಗರ | 5,000.00 | |
| 19 | ಎಸ್.ಡಿ.ಸಿ.ಸಿ. ಬ್ಯಾಂಕ್ ಸಾಗರ | 5,861.00 | |
| 20 | ಎಸ್.ಡಿ.ಸಿ.ಸಿ. ಬ್ಯಾಂಕ್ ಸಾಗರ | 500 | |
| 21 | ಸಿ.ಡಿ.ಸಿ.ಸಿ ಬ್ಯಾಂಕ್ ತರೀಕೆರೆ | 11,735.00 | |
| 22 | ಎಸ್.ಡಿ.ಸಿ.ಸಿ. ಬ್ಯಾಂಕ್ ಶಿವಮೊಗ್ಗ | 10,000.00 | |
| 23 | ಎಸ್.ಡಿ.ಸಿ.ಸಿ. ಬ್ಯಾಂಕ್ ಶಿವಮೊಗ್ಗ | 9,122.00 | |
| 24 | ಎಸ್.ಡಿ.ಸಿ.ಸಿ. ಬ್ಯಾಂಕ್ ತೀರ್ಥಹಳ್ಳಿ | 6,877.00 | |
| 25 | ಎಸ್.ಡಿ.ಸಿ.ಸಿ. ಬ್ಯಾಂಕ್ ಸೊರಬ | 14,132.00 | |
| 26 | ಎಸ್.ಡಿ.ಸಿ.ಸಿ. ಬ್ಯಾಂಕ್ ಶಿಕಾರಿಪುರ | 11,686.00 | |
| 27 | ಡಿ.ಡಿ.ಸಿ.ಸಿ. ಬ್ಯಾಂಕ್ ಚನ್ನಗಿರಿ | 5,000.00 | |
| 28 | ಕರ್ನಾಟಕ ಬ್ಯಾಂಕ್ ಶೃಂಗೇರಿ | 8,182.00 | |
| 29 | ಸಿ.ಡಿ.ಸಿ.ಸಿ ಬ್ಯಾಂಕ್ ಕೊಪ್ಪ | 5,000.00 | |
| 30 | ಸಿ.ಡಿ.ಸಿ.ಸಿ ಬ್ಯಾಂಕ್ ಜಯಪುರ | 5,000.00 | |
| 31 | ಯುನಿಯನ್ ಬ್ಯಾಂಕ್ ಶಿವಮೊಗ್ಗ | 5,00,000.00 | |
| 32 | ಯುನಿಯನ್ ಬ್ಯಾಂಕ್ ಶಿವಮೊಗ್ಗ | 1,000.00 | |
| 33 | ಕರ್ನಾಟಕ ಬ್ಯಾಂಕ್, ಬಿದರಗೊಡು | 10,000.00 | |
| 34 | ಎಸ್‌ಬಿಐ ಶಿಕಾರಿಪುರ–44997356794 | 5,000.00 | |
| 35 | ಎಸ್‌ಬಿಐ ಶಿವಮೊಗ್ಗ–45002322320 | 10,000.00 | |

<table>
<tr><td>2</td><td>ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ?</td><td>ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿರುವುದಿಲ್ಲ.</td></tr>
<tr><td>3</td><td>ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೇ?</td><td>ಸಂಘವು ಮೀಸಲು ನಿಧಿಯನ್ನು ಹೂಡಿಕೆ ಮಾಡಿರುತ್ತದೆ. ಆದರೆ ಹೂಡಿಕೆ ಮಾಡುವ ಮುನ್ನ ಕಾಯ್ದೆ ಕಲಂ 58ರ ಅಂಶಗಳನ್ನು ಪಾಲಿಸಲಾಗಿರುವುದಿಲ್ಲ.</td></tr>
<tr><td>4</td><td>ಸದರಿ ಹೂಡಿಕೆಗಳ ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ?</td><td>ಸದರಿ ಹೂಡಿಕೆಗಳ ಮೇಲೆ ವರ್ಷಾಂತ್ಯಕ್ಕೆ ಒಟ್ಟು ರೂ 5,38,26,572.31 ಬಡ್ಡಿ ಹಾಗೂ ಲಾಭಾಂಶವು ಸಂಘದ ಖಾತೆಗಳಿಗೆ ಜಮಾ ಆಗಿರುವುದನ್ನು ಗಮನಿಸಲಾಗಿದೆ. ಆದರೆ ಕೆಲವು ಹೂಡಿಕೆಗಳ ಮೇಲೆ ಸಂಘಕ್ಕೆ ಯಾವುದೆ ಲಾಭಾಂಷವು ಬಂದಿರುವುದಿಲ್ಲ. ಇದರ ವಿವರ ಕೆಳಕಂಡಂತಿದೆ. ನಾವು ಸಂಘಕ್ಕೆ ಸಲಹೆ ನೀಡುವುದೇನೆಂದರೆ 3 ವರ್ಷಗಳಿಗೂ ಮೀರಿ ಆದಾಯ ಬಾರದೆ ಇರುವ ಹೂಡಿಕೆಗಳಿಗೆ ಅವಕಾಶವನ್ನು ಕಲ್ಪಿಸಿ ವ್ಯವಹರಿಸಲು ಸೂಚಿಸಿದೆ.
<table>
<tr><th>ವಿವರ</th><th>ಮೊತ್ತ</th></tr>
<tr><td>ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ</td><td>25,000.00</td></tr>
<tr><td>ಕೋಮಾರ್ಕ ಹಾಸನ</td><td>25,000.00</td></tr>
<tr><td>ಬೆಳಗಾಂ ಕ್ರೀಡಾ ಪ್ರೋತ್ಸಾಹ & ಅಭಿವೃದ್ಧಿ</td><td>50,000.00</td></tr>
<tr><td>ಜಿಲ್ಲಾ ಸಹಕಾರ ಮಾರಾಟ ಮಂಡಲಿ</td><td>25,000.00</td></tr>
</table></td></tr>
<tr><td>5</td><td>ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ</td><td>ಸಂಘದ ಹೂಡಿಕೆಗಳ ನಿರ್ವಹಣೆಯು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ನಿರ್ದೇಶನಗಳಿಗೆ ಅನುಗುಣವಾಗಿ ಕಟ್ಟುನಿಟ್ಟಾಗಿ ನಡೆಯಬೇಕು. ಸಂಘದ ನಿಧಿಗಳನ್ನು ಕಾನೂನುಬದ್ಧವಾಗಿ ಅನುಮತಿಸಲಾದ ಸಂಸ್ಥೆಗಳು ಹಾಗೂ ಸಾಧನಗಳಲ್ಲಿಯೇ ಹೂಡಿಕೆ ಮಾಡುವುದನ್ನು ಆಡಳಿತ ಮಂಡಲಿಯು ಖಚಿತಪಡಿಸಿಕೊಳ್ಳಬೇಕು.<br>ಸಂಘವು ವಿವಿಧ ಬ್ಯಾಂಕ್‌ಗಳು, ಸಹಕಾರ ಸಂಘಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಇಟ್ಟಿರುವ ಠೇವಣಿಗಳು ಮತ್ತು ಹೊಂದಿರುವ ಷೇರು ಹೂಡಿಕೆಗಳಿಗೆ ಸಂಬಂಧಿಸಿದಂತೆ ಕನಿಷ್ಟ ಪ್ರತಿ ಹಣಕಾಸು ವರ್ಷದ ಅಂತ್ಯದಲ್ಲಿ ಹಾಗೂ ಅಗತ್ಯವಿದ್ದಲ್ಲಿ ಮಧ್ಯಂತರ ಅವಧಿಯಲ್ಲಿಯೂ ಆಯಾ ಸಂಸ್ಥೆಗಳಿಂದ ಬಾಕಿ ದೃಢೀಕರಣ ಪತ್ರಗಳನ್ನು (Balance Confirmation Certificates) ಕಡ್ಡಾಯವಾಗಿ ಪಡೆದು, ಅವುಗಳನ್ನು ಸಂಘದ ಲೆಕ್ಕಪತ್ರಗಳೊಂದಿಗೆ ಹೊಂದಾಣಿಕೆ (Reconciliation) ಮಾಡಬೇಕು. ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ತಕ್ಷಣವೇ ಪರಿಶೀಲಿಸಿ ಅಗತ್ಯ ತಿದ್ದುಪಡಿಗಳನ್ನು ಕೈಗೊಳ್ಳಬೇಕು.</td></tr>
</table>

<table>
<tr>
<td></td>
<td></td>
<td>ಸಂಘವು ಮಾಡಿರುವ ಯಾವುದೇ ಠೇವಣಿಗಳ ಮೇಲೆ ಸತತ ಮೂರು ವರ್ಷಗಳ ಅವಧಿಯವರೆಗೆ ಬಡ್ಡಿ ಅಥವಾ ಯಾವುದೇ ಆದಾಯವನ್ನು ಸ್ವೀಕರಿಸದಿದ್ದಲ್ಲಿ, ಅಂತಹ ಹೂಡಿಕೆಗಳ ವಸೂಲಾತಿ ಸಾಧ್ಯತೆಯನ್ನು ಆಡಳಿತ ಮಂಡಲಿಯು ಸಮಗ್ರವಾಗಿ ಪರಿಶೀಲಿಸಿ, ಲೆಕ್ಕಪತ್ರಗಳ ನೈಜತೆ ಮತ್ತು ಸಂಯಮ (Prudence) ತತ್ವವನ್ನು ಪಾಲಿಸುವ ಉದ್ದೇಶದಿಂದ ಅನ್ವಯಿಸುವ ಲೆಕ್ಕಪತ್ರ ಮಾನದಂಡಗಳು ಹಾಗೂ ಸಹಕಾರ ಇಲಾಖೆಯ ನಿರ್ದೇಶನಗಳಿಗೆ ಅನುಗುಣವಾಗಿ ಅಗತ್ಯ ನಷ್ಟದ ಮೀಸಲು (Provision for Doubtful Investments / Impairment Provision) ಅನ್ನು ಕಡ್ಡಾಯವಾಗಿ ಸೃಷ್ಟಿಸಬೇಕು.<br>ಸಂಘವು ಹೂಡಿಕೆ ಮಾಡುವ ವಿಧಾನಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಲಿಯು ಸಮಗ್ರ ಹೂಡಿಕೆ ನೀತಿ (Investment Policy) ಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಸದರಿ ನೀತಿಯಲ್ಲಿ ಹೂಡಿಕೆಗಳ ಸುರಕ್ಷತೆ (Safety), ದ್ರವ್ಯತೆ (Liquidity), ಆದಾಯದ ಸಾಧ್ಯತೆ (Return), ಹೂಡಿಕೆ ಮಿತಿಗಳು, ಅಪಾಯ ನಿರ್ವಹಣೆ (Risk Management), ವೈವಿಧ್ಯೀಕರಣ (Diversification), ನಿಯತಕಾಲಿಕ ಪರಿಶೀಲನೆ ಹಾಗೂ ಕಾನೂನು ಪಾಲನೆಗೆ ಸಂಬಂಧಿಸಿದ ಸ್ಪಷ್ಟ ಮಾರ್ಗಸೂಚಿಗಳನ್ನು ಒಳಗೊಂಡಿರಬೇಕು. ಸಂಘದ ದೈನಂದಿನ ಕಾರ್ಯಾಚರಣೆ, ಠೇವಣಿದಾರರ ಹಣ ಮರುಪಾವತಿ ಹಾಗೂ ಇತರೆ ಹಣಕಾಸಿನ ಅಗತ್ಯತೆಗಳಿಗೆ ಯಾವುದೇ ಅಡಚಣೆ ಉಂಟಾಗದಂತೆ ಸಾಕಷ್ಟು ದ್ರವ್ಯತೆಯನ್ನು ಕಾಪಾಡಿಕೊಳ್ಳುವ ರೀತಿಯಲ್ಲಿ ಹೂಡಿಕೆಗಳನ್ನು ನಿರ್ವಹಿಸುವುದು ಅತ್ಯಗತ್ಯ.<br>ಮೇಲ್ಕಂಡ ನಿಯಂತ್ರಣ ಕ್ರಮಗಳನ್ನು ಅನುಸರಿಸದಿದ್ದಲ್ಲಿ ಸಂಘದ ಹೂಡಿಕೆಗಳ ಸುರಕ್ಷತೆ, ವಸೂಲಾತಿ ಹಾಗೂ ಹಣಕಾಸಿನ ಸ್ಥಿರತೆಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ, ಆಡಳಿತ ಮಂಡಲಿಯು ಈ ವಿಷಯವನ್ನು ಅತ್ಯಂತ ಆದ್ಯತೆಯೊಂದಿಗೆ ಪರಿಗಣಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ.</td>
</tr>
<tr>
<td>6</td>
<td>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ (ಶೇರು ಮತ್ತು ಭದ್ರತಾ ಪತ್ರಗಳಲ್ಲಿ ಹೊರತುಪಡಿಸಿ) ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆಯೆ? ಹೊಂದಿದಲ್ಲಿ ಆಕ್ಷೇಪಿಸಿ, ಮುಕ್ತಾಯಗೊಳಿಸಲು ಸೂಚಿಸುವುದು.</td>
<td>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆ. ಇದನ್ನು ಆಕ್ಷೇಪಿಸಲಾಗಿದ್ದು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಕ್ರಮ ವಹಿಸಲು ಸೂಚಿಸಲಾಗಿದೆ. ಇದರ ವಿವರ ಕೆಳಗಿನಂತಿದೆ.
<table>
<tr><th>ವಿವರ</th><th>31–03–2026 ಕ್ಕೆ ಇದ್ದಂತೆ ಮೊತ್ತ</th></tr>
<tr><td>ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ</td><td>59,47,737.61</td></tr>
</table>
</td>
</tr>
</table>

| | | |
|---|---|---|
| 7 | ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ | ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ ಕೆಳಗಿನಂತಿವೆ |

| ವಿವರ | ಮೊತ್ತ |
|---|---|
| ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ | 25,000.00 |
| ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ | 1,00,000.00 |
| ಕೋಮಾರ್ಕ ಹಾಸನ | 25,000.00 |
| ಬೆಳಗಾಂ ಕ್ರೀಡಾ ಪ್ರೋತ್ಸಾಹ & ಅಭಿವೃದ್ಧಿ ಸಹಕಾರ ನಿ., | 50,000.00 |
| ಜಿಲ್ಲಾ ಸಹಕಾರ ಮಾರಾಟ ಮಂಡಲಿ | 25,000.00 |

| | | |
|---|---|---|
| 8 | ಕೋರಿಕೆಯ ಮೇರೆಗೆ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಬಗ್ಗೆ ವರ್ಷಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಕೋರಿಕೆಯ ಮೇರೆಗೆ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಠೇವಣಿಗಳು ಮೇಲ್ನೋಟಕ್ಕೆ ನಮ್ಮ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಕಂಡುಬಂದಿರುವುದಿಲ್ಲ. |
| 9 | ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯ ಇದೆಯೇ? ಲೆಕ್ಕಪರಿಶೋಧನಾ ಕಾಲಕ್ಕೆ ಪರಿಶೀಲಿಸಿ ಪ್ರತಿಯೊಂದು ವಿನಿಯೋಗಗಳ ವರ್ಷಾಂತ್ಯದ ದೃಢೀಕರಣವನ್ನು ವರದಿಗೆ ಲಗತ್ತಿಸುವುದು. | ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯವಿರುತ್ತದೆ. ಲೆಕ್ಕಪರಿಶೋಧನಾ ಕಾಲಕ್ಕೆ ಪರಿಶೀಲಿಸಿ ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ., ಹೊರತು ಪಡಿಸಿ ಸಂಘವು ಹೊಂದಿರುವ ವಿನಿಯೋಗಗಳ ವರ್ಷಾಂತ್ಯದ ದೃಢೀಕರಣವನ್ನು ವರದಿಗೆ ಲಗತ್ತಿಸಲಾಗಿದೆ. ಮುಂದಿನ ದಿನಗಳಲ್ಲಿ ಹೊಂದಿರುವ ಎಲ್ಲ ಹೂಡಿಕೆಗಳ ದೃಢೀಕರಣ ಪ್ರತಿ ಪಡೆಯಲು ಸೂಚಿಸಲಾಗಿದೆ. |

**17 ಹೊರಗಿನಿಂದ ಪಡೆದ ಸಾಲಗಳು, ಮುಂಗಡಗಳು ಮತ್ತು ಸರಕಾರದ ಸಾಲಗಳು**

ಸಂಘವು ಹೊರಗಿನಿಂದ ಪಡೆದ ಸಾಲಗಳು/ಮುಂಗಡಗಳು ಉಪನಿಯಮದ ಮಿತಿಯಲ್ಲಿ ಇರುವುದರ ಬಗ್ಗೆ ಅಥವಾ ಮಿತಿಮೀರಿ ಇರುವ ಬಗ್ಗೆ ಅಂಕಿ–ಅಂಶಗಳಂತೆ ವಿಮರ್ಶಿಸುವುದು.

| ಉಪವಿಧಿ ಸಂಖ್ಯೆ | ಸಾಲ ಪಡೆಯಬಹುದಾದ ಮಿತಿ ರೂ. | ಪಡೆಯಲಾದ ಮೊತ್ತ ವಾಸ್ತವಿಕ |
|---|---|---|
| ಭಾಗ–3, 9 | ಉಪವಿಧಿಯಲ್ಲಿ ನಿರ್ಧರಿಸಿರುವುದಿಲ್ಲ. | 3,06,44,04,679 |

ಸಂಘದ ಉಪವಿಧಿ ಭಾಗ–3 ಸಂಖ್ಯೆ 9ರ ಪ್ರಕಾರ ಸಂಘದ ಸಾಮಾನ್ಯ ನಿಕಾಯ ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು, ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲಗಳ ಒಟ್ಟು ಮೊತ್ತ, ಸಂಘದ ಪಾವತಿಯಾದ ಷೇರುಧನ, ಸಂಚಿತ ಕಾಯ್ದಿರಿಸಿದ ನಿಧಿ ಮತ್ತು ಕಟ್ಟಡ ನಿಧಿಯ ಒಟ್ಟು ಮೊತ್ತದಲ್ಲಿ, ಕೂಡಿ ಬಿದ್ದ ನಷ್ಟವಿದ್ದಲ್ಲಿ ಅದನ್ನು ಕಳೆದು ಉಳಿಯುವ ಮೊಬಲಗಿನ ಮೂವತ್ತು ಪಟ್ಟಿಗಿಂತ ಜಾಸ್ತಿ ಇರತಕ್ಕದ್ದಲ್ಲ. ಆದರೆ, ಮೇಲ್ಕಂಡ ಮಿತಿ ಏನೇ ಆಗಿದ್ದರೂ, ಸಂಘದ ಸಾಮಾನ್ಯ ನಿಕಾಯವು, ಸಾಮಾನ್ಯ ಸಭೆಯಲ್ಲಿ ಗೊತ್ತುಪಡಿಸಬಹುದಾದಂಥ ಷರತ್ತು ಗಳಿಗೆ ಒಳಪಟ್ಟು ಪತ್ತಿನ ಏಜೆನ್ಸಿಯಿಂದ ಸಾಲ ತೆಗೆದು ಕೊಳ್ಳಲು ಅನುಮತಿ ನೀಡುವ ಅಧಿಕಾರ ಹೊಂದಿರುತ್ತದೆ.

ದಿನಾಂಕ ರ ಸಾಮಾನ್ಯ ಸಭೆ 20–09–2025 ವಿಷಯ ಸಂಖ್ಯೆ 26 ರ ಅನ್ವಯ 2025–26 ನೇ ಸಾಲಿಗೆ ಠೇವಣಿಗಳ ಮೊತ್ತವನ್ನು ರೂ.300 ಕೋಟಿ ಹಾಗು ಸಾಲದ ಮೊತ್ತ ರೂ. 1,000 ಕೋಟಿವರೆಗೆ ಪಡೆಯುವ ಅನುಮತಿಯನ್ನು ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ದಿನಾಂಕ 31–03–2026 ಕ್ಕೆ ಇದ್ದಂತೆ ರೂ 1,84,43,89,061.30 ಸಂಘದಲ್ಲಿ ಪಡೆದ ಸಾಲವು ಬಾಕಿಯಾಗಿದ್ದು, ದಿನಾಂಕ 31–03–2026 ಕ್ಕೆ ಇದ್ದಂತೆ ಭದ್ರತಾ ಠೇವಣಿ ಹಾಗೂ ಸದಸ್ಯರ ಠೇವಣಿಯ ಮೊತ್ತ ರೂ 3,06,44,04,679.41 ಇರುತ್ತದೆ. ಸಂಘವು ಠೇವಣಿ ಸಂಗ್ರಹಣೆಯಲ್ಲಿ ಸಾಮಾನ್ಯ ಸಭೆಯು ನಿರ್ಧರಿಸಿದ ಮಿತಿಯನ್ನು ಮೀರಿ ವ್ಯವಹರಿಸಿರುವುದನ್ನು ಗಮನಿಸಲಾಗಿದೆ.

**ಎ) ಹಣಕಾಸು ಬ್ಯಾಂಕಿನಿಂದ ಹಾಗೂ ಸಂಘ ಸಂಸ್ಥೆಗಳಿಂದ ಪಡೆದಿರುವ ಸಾಲಗಳು :**

ಸಾಲ ಪಡೆದಿರುವ ಬ್ಯಾಂಕಿನ/ಸಂಸ್ಥೆಯ ಹೆಸರು ಮತ್ತು ಶಾಖೆಯ ಸಂಪೂರ್ಣ ವಿವರ ನೀಡಿ.

ಹೊರಗಿನಿಂದ ಪಡೆದ ವಿವಿಧ ಸಾಲಗಳ ವಿವರ ಕೆಳಗಿನಂತಿದೆ.

| ಕ್ರ.ಸಂ | ವಿವರ | ಆರಂಭದ ಬಾಕಿ | ಸಾಲ ತಂದಿದ್ದು | ಸಾಲ ಮರುಪಾವತಿ | ವರ್ಷಾಂತ್ಯದ ಬಾಕಿ |
|---|---|---|---|---|---|
| 1 | ಯೂನಿಯನ್ ಬ್ಯಾಂಕ್ ನಗದು ಸಾಲದ ಖಾತೆ | 94,89,42,003 | 2,96,55,99,973 | 3,91,45,41,976 | – |
| 2 | ನಿರಖು ಠೇವಣಿ ಮೇಲೆ ಸಾಲ ಪಡೆದದ್ದು ಭಾರತೀಯ ಸ್ಟೇಟ್ ಬ್ಯಾಂಕ್ ಅಪ್ ಇಂಡಿಯಾ | – | 16,34,04,000 | 16,34,04,000 | – |
| 3 | ಭಾರತೀಯ ಸ್ಟೇಟ್ ಬ್ಯಾಂಕ್ ನಗದು ಸಾಲದ ಖಾತೆ 1541 | – | 9,69,69,11,471 | 8,71,65,83,413 | 98,03,28,057 |
| 4 | ಭಾರತೀಯ ಸ್ಟೇಟ್ ಬ್ಯಾಂಕ್ ನಗದು ಸಾಲದ ಖಾತೆ 9244 | – | 1,56,63,18,615 | 1,06,85,00,000 | 49,78,18,615 |
| 5 | ಭಾರತೀಯ ಸ್ಟೇಟ್ ಬ್ಯಾಂಕ್ ನಗದು ಸಾಲದ ಖಾತೆ 5410 | – | 24,50,00,000 | 24,50,00,000 | – |
| 6 | ಭಾರತೀಯ ಸ್ಟೇಟ್ ಬ್ಯಾಂಕ್ ನಗದು ಸಾಲದ ಖಾತೆ 5812 | – | 20,12,32,989 | 20,10,000 | 19,92,22,989 |
| 7 | ಎಚ್‌ಡಿಎಫ್‌ಸಿ ಗೋದಾಮು ಆಧಾರ ಸಾಲ | – | 10,00,00,000 | – | 10,00,00,000 |
| 8 | ಆಕ್ಸಿಸ್ ಬ್ಯಾಂಕ್ ಬಿಲ್ ಡಿಸ್ಕೌಂಟಿಂಗ್ ಖಾತೆ | – | 15,13,60,650 | 8,43,41,250 | 6,70,19,400 |
| 9 | ಆಕ್ಸಿಸ್ ಬ್ಯಾಂಕ್ ಡಬ್ಲ್ಯುಸಿಡಿಎಲ್ ಖಾತೆ | 12,50,00,000 | 9,00,00,000 | 21,50,00,000 | – |
| | ಒಟ್ಟು ಮೊತ್ತ | 1,07,39,42,003 | 15,17,98,27,698 | 14,40,93,80,639 | 1,84,43,89,061 |

| | |
|---|---|
| 1) ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.3.2026 ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು. | ಸಾಲಗಳ ಮೇಲೆ ಪಾವತಿಸಿರುವ ಬಡ್ಡಿಯ ತಗಾದೆಯನ್ನು ಪರಿಶೀಲಿಸಿದಾಗ ಪಾವತಿ ಮಾಡಿರುವ ಬಡ್ಡಿ ಸಮಂಜಸವಾಗಿರುವುದನ್ನು ಗಮನಿಸಲಾಗಿದೆ. |
| 2) ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ: [ಸಾಲಾಂತ್ಯ ದಿ: 31.3.2026 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು] | ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳು ದಿನಾಂಕ 31.3.2026 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುತ್ತದೆ. |
| 3) ನಿಯಮ 22ರಂತೆ ಸಾಲಾಂತ್ಯ ದಿ: 31–03–2026 ಕ್ಕೆ ಹಣಕಾಸು ಬ್ಯಾಂಕಿಗೆ ಪಾವತಿಗೆ ಬಾಕಿ ಇರುವ ಬಡ್ಡಿಯ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಬಡ್ಡಿಯನ್ನು ಕಾಲ ಕಾಲಕ್ಕೆ ಪಾವತಿಸಲಾಗಿದೆ. ಎಚ್.ಡಿ.ಎಫ್.ಸಿ ಬ್ಯಾಂಕ ಇವರಲ್ಲಿ ಮಾಡಲಾದ ಆಧಾರ ಸಾಲದ ಮೇಲೆ ಒಟ್ಟು ರೂ 2,58,082 ಗಳನ್ನು ದಿನಾಂಕ 31–03–2026 ಕ್ಕೆ ಇದ್ದಂತೆ ಬಡ್ಡಿಯನ್ನು ಕಾಯ್ದಿರಿಸಲಾಗಿದ್ದು ಇದನ್ನು ಇತರೆ ಪಾವತಿಸತಕ್ಕ ಖಾತೆಯಲ್ಲಿ ಲೆಕ್ಕ ನಮೂದು ಮಾಡಲಾಗಿದೆ. |
| 4) ಪಡೆದ ಸಾಲಗಳಲ್ಲಿ ಇರುವ ಸುಸ್ತಿ ಸಾಲಗಳ ವಿವರ | ಸಾಲದ ವಿವರ / ಕೊಡತಕ್ಕ / ಸುಸ್ತಿ ಬಾಕಿ<br>ಸಂಘವು ಪಡೆದ ಸಾಲಗಳು ಸುಸ್ತಿ ಸಾಲಗಳಾಗಿರುವುದಿಲ್ಲ. |
| ಸರ್ಕಾರದ ಸಾಲಗಳು:<br>[ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.3.2026 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಡೀಕರಣ ಪತ್ರದೊಂದಗೆ ತಾಳೆ ಇರುವ ಬಗ್ಗೆ ವಿಮರ್ಷೆ] | ಸಂಘವು ಸರ್ಕಾರದಿಂದ ಯಾವುದೆ ಸಾಲವನ್ನು ಪಡೆದಿರುವುದಿಲ್ಲ. |

| | | |
|---|---|---|
| | 5) ಲೆಕ್ಕಪರಿಶೋಧನಾ ಕಾಲಕ್ಕೆ ಇವುಗಳ ಖಾತೆ ವಿವರ (Extract) ಹಾಗೂ ವರ್ಷಾಂತ್ಯಕ್ಕೆ ಪಾವತಿಸಲು ಬಾಕಿ ಇರುವ ಸಾಲಗಳ ಬಾಬ್ತು ಸಂಬಂಧಿಸಿದ ಸಂಸ್ಥೆಗಳಿಂದ ಪಡೆದ ದೃಢೀಕರಣ ಪತ್ರಕ್ಕೆ ತಾಳೆ ಇರುವ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಮರ್ಶಿಸುವುದು. | ಬಡ್ಡಿಯನ್ನು ಕಾಲ ಕಾಲಕ್ಕೆ ಪಾವತಿಸಲಾಗಿದೆ. ಎಚ್.ಡಿ.ಎಫ್.ಸಿ ಬ್ಯಾಂಕ ಇವರಲ್ಲಿ ಮಾಡಲಾದ ಆಧಾರ ಸಾಲದ ಮೇಲೆ ಒಟ್ಟು ರೂ 2,58,082 ಗಳನ್ನು ದಿನಾಂಕ 31–03–2026 ಕ್ಕೆ ಇದ್ದಂತೆ ಬಡ್ಡಿಯನ್ನು ಕಾಯ್ದಿರಿಸಲಾಗಿದ್ದು ಇದನ್ನು ಇತರೆ ಪಾವತಿಸತಕ್ಕ ಖಾತೆಯಲ್ಲಿ ಲೆಕ್ಕ ನಮೂದು ಮಾಡಲಾಗಿದೆ. |
| **18** | **ಠೇವಣಿಗಳು:** | |
| | ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪವಿಧಿಗಳಲ್ಲಿ ಇರುವ ಅವಕಾಶಗಳ ಬಗ್ಗೆ ಹಾಗೂ ಸಂಘವು ಸಂಗ್ರಹಿಸಿರುವ ಠೇವಣಿ ಸದರಿ ಮಿತಿಯೊಳಗೆ ಇರುವ ಬಗ್ಗೆ ವರದಿಯಲ್ಲಿ ವಿವರಿಸುವುದು. ವರದಿ ಸಾಲಿನಲ್ಲಿ ಠೇವಣಿ ಮಾಡಿರುವ ಎಲ್ಲಾ ಠೇವಣಿದಾರರು ಸಂಘದ ಸದಸ್ಯತ್ವ ಪಡೆದಿರುವರೇ? ಹಾಗೂ ಕೆ.ವೈ.ಸಿ. ಮಾದರಿಯಲ್ಲಿ ಸದಸ್ಯರ ವಿವರಗಳನ್ನು ಪಡೆಯಲಾಗಿದೆಯೇ? ಹಿಂದಿನ ವರದಿಯಲ್ಲಿನ ಕುಳುವಾರಿನಂತೆ ಎಲ್ಲಾ ಸದಸ್ಯರಿಂದ ಈ ಮಾಹಿತಿಗಳನ್ನು, ದಾಖಲೆಗಳನ್ನು ಪಡೆಯಲಾಗಿದೆಯೇ ಎಂಬುದನ್ನು ಕಾರ್ಯದರ್ಶಿಯಿಂದ ದೃಢೀಕರಿಸಿಕೊಳ್ಳುವುದು. | ಸಂಘದ ಉಪವಿಧಿ ಭಾಗ–3, 8 ರ ಪ್ರಕಾರ ಸದಸ್ಯರಿಂದ ವಿವಿಧ ಠೇವಣಿಗಳನ್ನು ಸ್ವೀಕರಿಸ ಬಹುದು. ಠೇವಣಿ ವಿಧಗಳು : ಸಂಘದ ಸಾಮಾನ್ಯ ನಿಕಾಯವು ನಿಗದಿಪಡಿಸಿದ ಮಿತಿಯಲ್ಲಿ, ಸಂಘದ ಆಡಳಿತ ಮಂಡಲಿ ರಚಿಸುವ ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಒಳ ನಿಯಮಗಳಿಗೊಳಪಟ್ಟು ಈ ಕೆಳಕಂಡ ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸಬಹುದು.<br><br>1) ನಿಗದಿತ ಠೇವಣಿ/ ಖಾಯಂ ಠೇವಣಿ/ ಅವಧಿ ಠೇವಣಿ,<br>2) ಚಾಲ್ತಿ ಖಾತೆ ಠೇವಣಿ,<br>3) ಉಳಿತಾಯ ಖಾತೆ ಠೇವಣಿ,<br>4) ಕರೆ ಠೇವಣಿ (ಕಾಲ್ ಡಿಪಾಜಿಟ್),<br>5) ಸಿಬ್ಬಂದಿ ಭದ್ರತಾ ಠೇವಣಿ ಮತ್ತು<br>6) ಸಂಘದ ಆಡಳಿತ ಮಂಡಲಿ ನಿರ್ಧರಿಸಬಹುದಾದ ಇತರೆ ರೀತಿಯ ಠೇವಣಿಗಳು. ಇದರ ಪ್ರಕಾರ ಸಹಕಾರಿಯು ವಿವಿಧ ಠೇವಣಿಗಳನ್ನು ಹೊಂದಿದ್ದು ಬಡ್ಡಿದರವನ್ನು ಆಡಳಿತ ಮಂಡಲಿಯು ನಿರ್ಧರಿಸಿರುತ್ತದೆ. |

ಈ ಮೇಲ್ಕಂಡ ಠೇವುಗಳ ಬಡ್ಡಿದರ ಮತ್ತು ಇತರ ವಿಷಯಗಳನ್ನು ಆಡಳಿತ ಮಂಡಲಿಯವರು ನಿರ್ಧರಿಸಿ ಯಾವ ಕಾಲದಲ್ಲಿಯೇ ಆಗಲಿ ಠೇವಣಿಗಳನ್ನು ಸ್ವೀಕರಿಸಲು ಅಥವಾ ನಿರಾಕರಿಸಲು ಅಲ್ಲದೇ ಸ್ವೀಕರಿಸಿದ ಠೇವಣಿಗಳನ್ನು ಸೂಕ್ತ ಕಂಡಲ್ಲಿ ಠೇವಣಿದಾರನ ಒಪ್ಪಿಗೆ ಮೇರೆಗೆ ಪರತ್ ಮಾಡಬಹುದು ಠೇವಣಿ ಸ್ವೀಕರಿಸಿದ ಬಾಬ್ತು ಸಂಘವು ವಿವಿಧ ರೀತಿಯ ಸರ್ಟಿಫೀಕೇಟ್‌ಗಳನ್ನು ನೀಡಬಹುದಾಗಿದೆ.

**ಸಂಘವು ಸಂಗ್ರಹಿಸಿರುವ ವಿವಿಧ ಠೇವಣಿಗಳ ವಿವರಗಳು**

ಸಂಘದಲ್ಲಿ ಸಂಗ್ರಹಿಸಿರುವ ಠೇವಣಾತಿಗಳು ಈ ಕೆಳಗಿನಂತಿರುತ್ತದೆ.

| ಠೇವಣಿ ವಿವರಗಳು | ವರ್ಷಾಂತ್ಯದ ಬಾಕಿ ಮೊತ್ತ | ಕುಳುವಾರಿನಂತೆ ಬಾಕಿ ಮೊತ್ತ | ವ್ಯತ್ಯಾಸದ ಮೊತ್ತ |
|---|---|---|---|
| ಸದಸ್ಯರ ಉಳಿತಾಯ ಖಾತೆ | 96,50,05,034.61 | 96,50,05,034.61 | – |
| ಸದಸ್ಯರ ನಿರಖು ಠೇವಣಿ | 1,04,65,42,575.00 | 1,04,65,42,575.00 | – |
| ಸದಸ್ಯರ ಕರೆ ಠೇವಣಿ ಖಾತೆ | 77,29,41,733.00 | 77,29,41,733.00 | – |
| ಸದಸ್ಯರ ಸಣ್ಣ ಉಳಿತಾಯ ಖಾತೆ | 12,95,191.80 | 12,95,191.80 | – |
| ವರ್ತಕರ ಭದ್ರತಾ ಠೇವಣಿ | 22,69,02,035.00 | 22,69,02,035.00 | – |
| ಸಿಬ್ಬಂದಿ ಭದ್ರತಾ ಠೇವಣಿ | 33,33,110.00 | 33,33,110.00 | – |
| ಏಜೆನ್ಸಿ ಭದ್ರತಾ ಠೇವಣಿ | 4,79,40,000.00 | 4,79,40,000.00 | – |
| ಕಾವಲುಗಾರರ ಭದ್ರತಾ ಠೇವಣಿ | 4,45,000.00 | 4,45,000.00 | – |
| **ಒಟ್ಟು ಮೊತ್ತ** | **3,06,44,04,679.41** | **3,06,44,04,679.41** | – |

| | | |
|---|---|---|
| 1 | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ. |
| 2 | ಠೇವಣಿ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಲಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ಸಂಘವು ನಿಗದಿತ ಠೇವಣಿಯ ಮೇಲೆ ಬಡ್ಡಿದರವನ್ನು ದಿನಾಂಕ 06–08–2024 ರಂದು ನಡೆದ ಆಡಳಿತ ಮಂಡಲಿ ಸಭೆಯ ಠರಾವು ಸಂಖ್ಯೆ –04 ರನ್ವಯ ನಿರ್ಧರಿಸಲಾಗಿರುತ್ತದೆ. ಮತ್ತು ಕರೆ ಠೇವಣಿಯ ಬಡ್ಡಿದರವನ್ನು ದಿನಾಂಕ 19-02–2026 ರಂದು ನಡೆದ ಆಡಳಿತ ಮಂಡಲಿ ಸಭೆಯ ಠರಾವು ಸಂಖ್ಯೆ 02 ರನ್ವಯ ನಿರ್ಧರಿಸಲಾಗಿರುತ್ತದೆ. ಹಾಗೂ ಸದಸ್ಯರ ಸಣ್ಣ ಉಳಿತಾಯ ಖಾತೆಗೆ ಆಡಳಿತ ಮಂಡಲಿ ಸಭೆ ದಿನಾಂಕ 24–03–2023 ಠರಾವು ಸಂಖ್ಯೆ 04 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹಾಗೂ ಸದಸ್ಯರ ಉಳಿತಾಯ ಖಾತೆಗೆ ಆಡಳಿತ ಮಂಡಲಿ ಸಭೆ ದಿನಾಂಕ 31–01–2011 ಠರಾವು ಸಂಖ್ಯೆ 07 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹಾಗೂ ವರ್ತಕರ ಖಾತೆಗೆ ಆಡಳಿತ ಮಂಡಲಿ ಸಭೆ ದಿನಾಂಕ 16–12–2020 ಠರಾವು ಸಂಖ್ಯೆ 04 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹಾಗೂ ಸಿಬ್ಬಂದಿ ಭದ್ರತಾ ಠೇವಣಿಗಳಿಗೆ ಆಡಳಿತ ಮಂಡಲಿ ಸಭೆ ದಿನಾಂಕ 30–11–2006 ಠರಾವು ಸಂಖ್ಯೆ 04 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಮತ್ತು ಏಜೆನ್ಸಿ ಭದ್ರತಾ ಠೇವಣಿಗಳಿಗೆ ಆಡಳಿತ ಮಂಡಲಿ ಸಭೆ ದಿನಾಂಕ 06–05–2010 ಠರಾವು ಸಂಖ್ಯೆ 12(4) ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 15,81,64,553.96 ಪಾವತಿಸಿದ್ದು ದಿನಾಂಕ 31–03–2026 ಕ್ಕೆ ಇದ್ದಂತೆ ಕೊಡತಕ್ಕ ಠೇವಣಿಯ ಮೇಲೆ ಒಟ್ಟು ರೂ 2,97,92,066.00 ಕಾಯ್ದಿರಿಸಲಾಗಿದೆ. ನಾವು ಸಂಘಕ್ಕೆ ಸಲಹೆ ನೀಡುವುದೇನೆಂದರೆ ಸಂಘವು ಹೊಂದಿರುವ ಠೇವಣಿಗಳ ಮೇಲೆ ಬಡ್ಡಿಯನ್ನು ನಿಗದಿತ ಸಮಯಕ್ಕೆ ಬಡ್ಡಿ ಪರಿಷ್ಕರಿಸಲು ಸಲಹೆ ನೀಡಲಾಗಿದೆ. |
| 3 | ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ ? | ನಮ್ಮ ಲೆಕ್ಕಪರಿಶೋಧನಾ ಅವಧಿಯಲ್ಲಿ ಗಮನಿಸಿದಂತೆ ಠೇವಣಿಗಳಿಗೆ ಪಾಸ್ ಪುಸ್ತಕವನ್ನು, ನಿಗದಿತ ಠೇವಣಿಗಳಿಗೆ ಸರ್ಟಿಫಿಕೇಟ್‌ಗಳನ್ನು ನೀಡಿದ್ದು, ಅವುಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ನೀಡಿರುತ್ತಾರೆ. |

| | | |
|---|---|---|
| 4 | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಶಿಸಿ | ಸಂಘವು ಪಡೆದಿರುವ ಠೇವಣಿಗಳ ಮೇಲೆ ಆಡಳಿತ ಮಂಡಲಿಯು ನಿರ್ಧರಿಸಿದಂತೆ ಬಡ್ಡಿಯನ್ನು ನೀಡುತ್ತಿದ್ದು ಕಾವಲುಗಾರರ ಭದ್ರತಾ ಠೇವಣಿಗೆ ಯಾವುದೆ ಬಡ್ಡಿಯನ್ನು ನೀಡುತ್ತಿಲ್ಲ. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 15,81,64,553.96 ಪಾವತಿಸಿದ್ದು ದಿನಾಂಕ 31-03-2026 ಕ್ಕೆ ಇದ್ದಂತೆ ಕೊಡತಕ್ಕ ಠೇವಣಿಯ ಮೇಲೆ ಒಟ್ಟು ರೂ 2,97,92,066.00 ಕಾಯ್ದಿರಿಸಲಾಗಿದೆ. ಸಂಘವು ಹೊಂದಿರುವ ತಂತ್ರಾಂಶದಲ್ಲಿ ಕೊಡತಕ್ಕ ಠೇವಣಿಗಳ ಮೇಲಿನ ಬಡ್ಡಿಯು ಸದಸ್ಯರ ಖಾತಾವಾರು ಲೆಕ್ಕಚಾರದ ಮಾಹಿತಿಯು ಲಭ್ಯವಿದ್ದು ಇದರ ಅನ್ವಯ ದಿನಾಂಕ 31-03-2026 ಕ್ಕೆ ಇದ್ದಂತೆ ಕೊಡತಕ್ಕ ಬಡ್ಡಿಗೆ ಪ್ರಾವಧಾನವನ್ನು ಹೊಂದಲಾಗಿದೆ. |
| 5 | ಸಂಘವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಕಲಂ 22 ರಂತೆ ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಸದಸ್ಯರಿಂದ ಅವರ ಹೆಸರಿನಲ್ಲಿರುವ ಚೆಕ್,ಡಿ.ಡಿ, ಬಿಲ್ಸ್ ಮುಂತಾದವುಗಳನ್ನು ಸ್ವೀಕರಿಸಿ ತಾವು ಹೊಂದಿರುವ ಬ್ಯಾಂಕಿನ ಮುಖಾಂತರ ಅವುಗಳನ್ನು ನಗದೀಕರಿಸಿ ಸದಸ್ಯರಿಗೆ ನಗದೀಕರಣ ಒದಗಿಸಿ ಕೊಟ್ಟಿದೆಯೇ ಎಂಬ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ವರ್ಷದಲ್ಲಿ ಜರುಗಿರುವ ಇಂತಹ ವ್ಯವಹಾರಗಳ ಸಂಪೂರ್ಣ ವಿವರವಾದ ಪಟ್ಟಿಯನ್ನು ದೃಢೀಕರಿಸಿ ವರದಿಗೆ ಲಗತ್ತಿಸುವುದು. | ಸಂಘವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಕಲಂ 22 ರಂತೆ ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಸದಸ್ಯರಿಂದ ಅವರ ಹೆಸರಿನಲ್ಲಿರುವ ಚೆಕ್, ಡಿ.ಡಿ, ಬಿಲ್ಸ್ ಮುಂತಾದವುಗಳನ್ನು ಸ್ವೀಕರಿಸಿ ತಾವು ಹೊಂದಿರುವ ಬ್ಯಾಂಕಿನ ಮುಖಾಂತರ ಅವುಗಳನ್ನು ನಗದೀಕರಿಸಿದ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| 6 | ಇಂತಹ ಪ್ರಕರಣಗಳು(ಕ್ರ.ಸಂ-5 ರಂತೆ) ಇದ್ದಲ್ಲಿ ಸದರಿ ಅನಧಿಕೃತ ವ್ಯವಹಾರವನ್ನು ಗುರ್ತಿಸಿ ಪ್ರತ್ಯೇಕವಾಗಿ ಇಂಡೀಕರಿಸಿ,ಸಂಬಂಧಿತ ಶೀರ್ಷಿಕೆಯಿಂದ ಕಡಿತಗೊಳಿಸಿ ಜಮಾ ಖರ್ಚು ತಃಖ್ತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯ ಎರಡೂ ಬದಿಯ ಆಕ್ಷೇಪಣೆಯಲ್ಲಿ ಕಾಣಿಸಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ. |

**19 ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿಮೆಯ ಬಗ್ಗೆ ವಿಮರ್ಶೆ :**

| ವಿವರಗಳು | 2023-24 | 2024-25 | 2025-26 | ಏರಿಕೆ (ಇಳಿಕೆ) | ಶೇಕಡಾವಾರು |
|---|---|---|---|---|---|
| ಒಟ್ಟೂ ಠೇವಣಿಗಳು | 2073702286.56 | 2374825422.98 | 3,06,44,04,679 | 68,95,79,256 | 29.04% |

ಸಂಘದ ಈ ಮೇಲಿನ ಕೊಷ್ಟಕದಲ್ಲಿ ವಿವರಿಸಿದಂತೆ 2024-25 ನೇ ಸಾಲಿನಲ್ಲಿ ಕೊಡತಕ್ಕ ಠೇವು ಬಾಕಿ ರೂ. 2,37,48,25,423 ಇದ್ದು, 2025-26 ರಂತ್ಯಕ್ಕೆ ಕೊಡತಕ್ಕ ಠೇವು ರೂ. 3,06,44,04,679 ಇದ್ದು, ಇದು ಕಳೆದ ಸಾಲಿಗೆ ಹೊಲಿಸಿದರೆ ರೂ. 68,95,79,256 ಹೆಚ್ಚಳವಾಗಿದ್ದು, ಶೇಕಡ 29.04 ರಷ್ಟು ಪ್ರಗತಿಯಲ್ಲಿರುತ್ತದೆ. ಹಿಂದಿನ ವರದಿ ಸಾಲಿನಲ್ಲಿ ಶೇಕಡ 14.52 ರಷ್ಟು ಇದ್ದು ಪ್ರಸಕ್ತ ಸಾಲಿನಲ್ಲಿ ಶೇಕಡಾ 29.04 ಇದ್ದು ಹಿಂದಿನ ಪ್ರಗತಿಗೆ ಹೋಲಿಸಿದಾಗ ಶೇಕಡಾವಾರು ಪ್ರಗತಿ ಹೆಚ್ಚಿಗೆಯಾಗಿರುತ್ತದೆ.

| | | ಠೇವಣಿ | ಸಂಖ್ಯೆ | ಮೊತ್ತ |
|---|---|---|---|---|
| 1 | ಕಲಂ16(1), ಕಲಂ18(1) ಮತ್ತು ಕಲಂ 98-ಡಿ ಉಲ್ಲಂಘಿಸಿ ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆಯೇ? (ಕಲಂ 61 ರನ್ವಯ) ಎಂಬ ಬಗ್ಗೆ ವಿಮರ್ಶಿಸುವುದು. | ಸದಸ್ಯರಿಂದ | 36,434 | 3064404679.41 |
| | | ಸದಸ್ಯರಲ್ಲದ ವರಿಂದ | - | - |
| | | **ಒಟ್ಟು ರೂ.** | | **3064404679.41** |

| | | |
|---|---|---|
| 2 | ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ನಿರ್ಧರಿಸಿರುವ ಆಡಳಿತ ಮಂಡಲಿ ಸಭೆ ದಿನಾಂಕ ಹಾಗೂ ಠರಾವು ಕ್ರಮಾಂಕ ನಮೂದಿಸಿ ವಿಮರ್ಶಿಸುವುದು. | ಸಂಘವು ನಿಗದಿತ ಠೇವಣಿಯ ಮೇಲೆ ಬಡ್ಡಿದರವನ್ನು ದಿನಾಂಕ 06–08–2024 ರಂದು ನಡೆದ ಆಡಳಿತ ಮಂಡಲಿ ಸಭೆಯ ಠರಾವು ಸಂಖ್ಯೆ –04 ರನ್ವಯ ನಿರ್ಧರಿಸಲಾಗಿರುತ್ತದೆ. ಮತ್ತು ಕರೆ ಠೇವಣಿಯ ಬಡ್ಡಿದರವನ್ನು ದಿನಾಂಕ 19–02–2026 ರಂದು ನಡೆದ ಆಡಳಿತ ಮಂಡಲಿ ಸಭೆಯ ಠರಾವು ಸಂಖ್ಯೆ 02 ರನ್ವಯ ನಿರ್ಧರಿಸಲಾಗಿರುತ್ತದೆ. ಹಾಗೂ ಸದಸ್ಯರ ಸಣ್ಣ ಉಳಿತಾಯ ಖಾತೆಗೆ ಆಡಳಿತ ಮಂಡಲಿ ಸಭೆ ದಿನಾಂಕ 24–03–2023 ಠರಾವು ಸಂಖ್ಯೆ 04 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹಾಗೂ ಸದಸ್ಯರ ಉಳಿತಾಯ ಖಾತೆಗೆ ಆಡಳಿತ ಮಂಡಲಿ ಸಭೆ ದಿನಾಂಕ 31-01–2011 ಠರಾವು ಸಂಖ್ಯೆ 07 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹಾಗೂ ವರ್ತಕರ ಖಾತೆಗೆ ಆಡಳಿತ ಮಂಡಲಿ ಸಭೆ ದಿನಾಂಕ 16–12–2020 ಠರಾವು ಸಂಖ್ಯೆ 04 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹಾಗೂ ಸಿಬ್ಬಂದಿ ಭದ್ರತಾ ಠೇವಣಿಗಳಿಗೆ ಆಡಳಿತ ಮಂಡಲಿ ಸಭೆ ದಿನಾಂಕ 30–11–2006 ಠರಾವು ಸಂಖ್ಯೆ 04 ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಮತ್ತು ಏಜೆನ್ಸಿ ಭದ್ರತಾ ಠೇವಣಿಗಳಿಗೆ ಆಡಳಿತ ಮಂಡಲಿ ಸಭೆ ದಿನಾಂಕ 06–05–2010 ಠರಾವು ಸಂಖ್ಯೆ 12(4) ರನ್ವಯ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ |

| | ಠೇವುಗಳ ವಿವರ | ಬಡ್ಡಿದರ |
|---|---|---|
| 1 | ಸದಸ್ಯರ ಉಳಿತಾಯ ಖಾತೆ | 4.00% |
| 2 | ಸದಸ್ಯರ ನಿರಖು ಠೇವಣಿ | |
| | 1 ವರ್ಷಕ್ಕೆ | 7.00% |
| | 2 ವರ್ಷಕ್ಕೆ | 7.25% |
| | 3 ವರ್ಷಕ್ಕೆ | 7.50% |
| | ಹಿರಿಯ ನಾಗರಿಕರಿಗೆ | 0.25% |
| 3 | ಸದಸ್ಯರ ಕರೆ ಠೇವಣಿ ಖಾತೆ | |
| | 90 ದಿನಗಳಿಗೆ | 8.25% |
| | 181 ದಿನಗಳಿಗೆ | 8.75% |
| | ಹಿರಿಯ ನಾಗರಿಕರಿಗೆ | 0.5% ಅಧಿಕ |
| 4 | ಸದಸ್ಯರ ಸಣ್ಣ ಉಳಿತಾಯ ಖಾತೆ | 5.00% |
| 5 | ವರ್ತಕರ ಭದ್ರತಾ ಠೇವಣಿ | 5% & 8.5% |
| 6 | ಸಿಬ್ಬಂದಿ ಭದ್ರತಾ ಠೇವಣಿ | 10.00% |
| 7 | ಏಜೆನ್ಸಿ ಭದ್ರತಾ ಠೇವಣಿ | 8.50% |
| 8 | ಕಾವಲುಗಾರರ ಭದ್ರತಾ ಠೇವಣಿ | 0.00% |
| | ಲೆಕ್ಕಪರಿಶೋಧಕರ ಸಲಹೆ : 1) ಆಡಳಿತ ಮಂಡಲಿಯು ಠೇವುಗಳ ಮೇಲೆ ಬಡ್ಡಿ ನಿರ್ಧರಿಸುವಾಗ ಆಡಳಿತ ವೆಚ್ಚ, ಸಿಬ್ಬಂದಿ ವೆಚ್ಚ ಹಾಗೂ ಸಂಘದ ಕನಿಷ್ಠ ಮಾರ್ಜಿನ್ ಇವುಗಳನ್ನು ಗಣನೆಗೆ ತೆಗುದುಕೊಳ್ಳುವುದಲ್ಲದೇ ಹೂಡಿಕೆ ಮಾಡುವಾಗ ಬರುವ ಬಡ್ಡಿ ದರವನ್ನೂ ಸಹ ಗಣನೆಗೆ ತೆಗೆದುಕೊಂಡು ಗುಣಾತ್ಮಕವಾಗಿ, ತುಲನಾತ್ಮಕವಾಗಿ ಹಾಗೂ ಆರ್ಥಿಕವಾಗಿ ಸಂಘಕ್ಕೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಬಡ್ಡಿದರವನ್ನು ನಿರ್ಧರಿಸಬೇಕು. | |

| | | |
|---|---|---|
| | 2) ಸಂಘದ ದ್ರವ್ಯಾಸ್ತಿ ಠೇವು ಮತ್ತು ಇತರ ಠೇವುಗಳನ್ನು ಜಿಲ್ಲಾ ಮದ್ಯವರ್ತಿ ಮತ್ತು ಇತರೆ ಬ್ಯಾಂಕಿನಲ್ಲಿ ಗುಂತಾಯಿಸಿದಾಗ ಮುದ್ದತು ಠೇವು ಬಡ್ಡಿ ದರವನ್ನು ರಿಜರ್ವ ಬ್ಯಾಂಕ ಗಣನೀಯವಾಗಿ ಇಳಿಸಿದ ಪ್ರಕಾರ ಬ್ಯಾಂಕುಗಳು ಕಡಿಮೆ ಬಡ್ಡಿದರವನ್ನು ನೀಡುತ್ತಿದ್ದು, ಸಂಘವು ಸದಸ್ಯರ ಠೇವುಗಳಿಗೆ ಅನುಗುಣವಾಗಿ ಕಾಸ್ಟ ಆಫ್ ಫಂಡ ಹಾಗು ಮಾರ್ಜಿನನ್ನು ಲೆಕ್ಕಾಚಾರ ಮಾಡಿ ಈಗೀರುವ ಬಡ್ಡಿ ದರವನ್ನು ಪರಿಷ್ಕರಿಸಲು ಸಲಹೆ ನೀಡಿದೆ | |
| 3 | ವರದಿ ಸಾಲಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ಹಾಗೂ ದ್ವಿಗುಣ ಠೇವುಗಳ ಮೇಲೆ ಪಾವತಿಸಿರುವ ಬಡ್ಡಿಯನ್ನು ಸಂಬಂಧಿಸಿದ ಠೇವು ಖಾತೆಗೆ ಜಮೆ ತೆಗೆದುಕೊಳ್ಳಲಾಗಿರುವ ಬಗ್ಗೆ ವರದಿಯಲ್ಲಿ | ವರದಿ ಸಾಲಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ಹಾಗೂ ದ್ವಿಗುಣ ಠೇವುಗಳು ಇರುವುದಿಲ್ಲ. |
| 4 | ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್ ಬಗ್ಗೆ ವರದಿಯಲ್ಲಿ ವಿವರಿಸುವುದು. | ಸಂಘವು ಪಿಗ್ಮಿ ಠೇವಣಿಯನ್ನು ಹೊಂದಿರುವುದಿಲ್ಲ. |
| 5 | ಪಿಗ್ಮಿ ಕಮಿಷನ್ ಹಾಗೂ ಇತರೆ ವೆಚ್ಚಗಳ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳಂತೆ ಕ್ರಮ ಇಡಲಾಗಿದೆಯೇ? | ಅನ್ವಯಿಸುವುದಿಲ್ಲ. |
| 6 | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 28 ರಂತೆ ನಗದು ಮೀಸಲು (ಸಂಘದಲ್ಲಿರುವ ಒಟ್ಟು ಠೇವಣಿಗಳ ಶೇಕಡಾ 3 ರಷ್ಟು )ಮತ್ತು ಪ್ರವಾಹಿ ಧನ ((ಸಂಘದಲ್ಲಿರುವ ಒಟ್ಟು ಠೇವಣಿಗಳ ಶೇಕಡಾ 10 ರಷ್ಟು) ಮಿತಿ ಕಾಯ್ದುಕೊಳ್ಳಲಾಗಿದೆಯೇ? | ನಗದು ಮೀಸಲು ಮತ್ತು ಪ್ರವಾಹಿಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿರುವುದಿಲ್ಲ. ಸಂಘವು ದಿನಾಂಕ : 31–03–2026 ರ ವರೆಗೆ ಸಂಗ್ರಹಿಸಿರುವ ಠೇವಣಿಗಳು ರೂ. 3,06,44,04,679.41 ಇರುತ್ತದೆ. ಇದರ ಪ್ರಕಾರ ವರ್ಷಾಂತ್ಯಕ್ಕೆ ಸಂಘವು ಹೊಂದಿರಬೇಕಾದ , ಹೊಂದಿರುವ ನಗದು ಮೀಸಲು ಹಾಗೂ ಪ್ರವಾಹಿಧನದ ವಿವರ ಈ ಕೆಳಗಿನಂತಿದೆ. |
| | ಈ ಕುರಿತು ಸಂಘದಲ್ಲಿ ಮಾಸಿಕ, ತ್ರೈಮಾಸಿಕ ಪರೀಕ್ಷಾರ್ಥವಾಗಿ ಪರಿಶೀಲಿಸಿ ವಿಮರ್ಶಿಸುವುದು ಹಾಗೂ ಈ ಕುರಿತು ಸಂಘದಲ್ಲಿ ರಿಜಿಸ್ಟರ್ ಬರೆದು ನಿರ್ವಹಿಸಲಾಗಿದೆಯೇ ಎಂಬ ಬಗ್ಗೆ ವಿಮರ್ಶಿಸುವುದು. (ಪ್ರವಾಹಿ ಧನ ಲೆಕ್ಕಾಚಾರ ಮಾಡುವಾಗ ಕಲಂ 58 ಕ್ಕೆ ವಿರುದ್ಧವಾಗಿ ಮಾಡಿರುವ ಹೂಡಿಕೆಗಳನ್ನು ಪರಿಗಣಿಸಬಾರದು) | ನಗದು ಮೀಸಲು ಮತ್ತು ಪ್ರವಾಹಿಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿರುವುದಿಲ್ಲ. ಸಂಘವು ದಿನಾಂಕ : 31–03–2026 ರ ವರೆಗೆ ಸಂಗ್ರಹಿಸಿರುವ ಠೇವಣಿಗಳು ರೂ. 3,06,44,04,679.41 ಇರುತ್ತದೆ. ಇದರ ಪ್ರಕಾರ ವರ್ಷಾಂತ್ಯಕ್ಕೆ ಸಂಘವು ಹೊಂದಿರಬೇಕಾದ , ಹೊಂದಿರುವ ನಗದು ಮೀಸಲು ಹಾಗೂ ಪ್ರವಾಹಿಧನದ ವಿವರ ಈ ಕೆಳಗಿನಂತಿದೆ. |

| ಕ್ರ.ಸ | ವಿವರ | ಇರಬೇಕಾದದ್ದು | ಹೊಂದಿರುವುದು | ಹೆಚ್ಚು | ಕಡಿಮೆ |
|---|---|---|---|---|---|
| 1 | ನಗದು ಮೀಸಲು | 9,19,32,140 | 5,02,71,835 | | 4,16,60,305 |
| 2 | ಪ್ರವಾಹಿಧನ | 30,64,40,468 | – | – | |

ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲಾ ಹೂಡಿಕೆಗಳನ್ನು ಪರಿಗಣಿಸಿದಾಗ ನಗದು ಮೀಸಲು ನಿಯಮ 28 ರಲ್ಲಿ ಸೂಚಿಸಲಾದ ಮಿತಿಗಿಂತ ಕಡಿಮೆಯಾಗಿರುತ್ತದೆ. ಹಾಗೂ ಪ್ರವಾಹಿಧನ ಮಿತಿಗಿಂತ ಕಡಿಮೆ ಇರುತ್ತದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 28 ರಂತೆ ನಗದು ಮೀಸಲು ಮತ್ತು ಪ್ರವಾಹಿ ಧನ ಮಿತಿ ಕಾಯ್ದುಕೊಂಡು ವ್ಯವಹರಿಸಲು ಹಾಗೂ ರಿಜಿಸ್ಟರ್ ನಿರ್ವಹಿಸಲು ಸೂಚಿಸಲಾಗಿದೆ. ಹಾಗು ನಗದು ಮೀಸಲು ಮತ್ತು ಪ್ರವಾಹಿಧನ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 28 ರಂತೆ ಸಂಪೂರ್ಣವಾಗಿ ಹೂಡಿಕೆ ಮಾಡಲು ಸೂಚಿಸಲಾಗಿದೆ.

| | | |
|---|---|---|
| 7 | ಪ್ರತಿಯೊಂದು ಠೇವು ಮತ್ತು ಬಡ್ಡಿ ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳುವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು. | ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 15,81,64,553.96 ಪಾವತಿಸಿದ್ದು ದಿನಾಂಕ 31–03–2026 ಕ್ಕೆ ಇದ್ದಂತೆ ಕೊಡತಕ್ಕ ಠೇವಣಿಯ ಮೇಲೆ ಒಟ್ಟು ರೂ 2,97,92,066.00 ಕಾಯ್ದಿರಿಸಲಾಗಿದೆ. ಸಂಘವು ಹೊಂದಿರುವ ತಂತ್ರಾಂಶದಲ್ಲಿ ಕೊಡತಕ್ಕ ಠೇವಣಿಗಳ ಮೇಲಿನ ಬಡ್ಡಿಯು ಸದಸ್ಯರ ಖಾತಾವಾರು ಲೆಕ್ಕಾಚಾರದ ಮಾಹಿತಿಯು ಲಭ್ಯವಿದ್ದು ಇದರ ಅನ್ವಯ ದಿನಾಂಕ 31–03–2026 ಕ್ಕೆ ಇದ್ದಂತೆ ಕೊಡತಕ್ಕ ಬಡ್ಡಿಗೆ ಪ್ರಾವಧಾನವನ್ನು ಹೊಂದಲಾಗಿದೆ. |
| 8 | ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಬಗ್ಗೆ ಪರಿಶೀಲಿಸಿ ವಿವೇಚನಾಯುಕ್ತವಾಗಿ ವಿಮರ್ಶಿಸುವುದು. | ಕುಳವಾರು ವ್ಯತ್ಯಾಸವಿರದ ಕಾರಣ ಅನ್ವಯಿಸುವುದಿಲ್ಲ. |
| 9 | ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ. (ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲ ನಮೂದುಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ ಮತ್ತು ಹಣದುರುಪಯೋಗ ಕಂಡುಬಂದಲ್ಲಿ ಕ್ರಮ ಇಡುವುದು.) | ಕುಳವಾರು ವ್ಯತ್ಯಾಸವಿರದ ಕಾರಣ ಅನ್ವಯಿಸುವುದಿಲ್ಲ. |
| 10 | ವರ್ಷಾಂತ್ಯದ ಠೇವು ಮತ್ತು ಬಡ್ಡಿಖಾತೆ ಬಾಕಿ ರಿಜಿಸ್ಟರ್ ಅನ್ನು ಪರಿಶೀಲಿಸಿ, ಅದರ ಸಂಕ್ಷಿಪ್ತವನ್ನು ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು. | |

| ವಿವರ | ಹಿಂದಿನ ಸಾಲಿನ | | ಪ್ರಸಕ್ತ ಸಾಲಿನ | |
|---|---|---|---|---|
| | ಠೇವು | ಬಡ್ಡಿ | ಠೇವು | ಬಡ್ಡಿ |
| ಖಾತೆಗಳ ಸಂಖ್ಯೆ | | | 36,433 | 36,433 |
| ಆಸ್ತಿ–ಜವಾಬ್ದಾರಿ ತಃಖ್ತೆಯ ಮೊತ್ತ | 2,37,48,25,423 | 12,73,05,525 | 3,06,44,04,679 | 15,81,64,554 |
| ಕುಳುವಾರು ಮೊತ್ತ | 2,37,48,25,423 | 12,73,05,525 | 3,06,44,04,679 | 15,81,64,554 |

ಪ್ರಸಕ್ತ ಸಾಲಿನ ಠೇವುಗಳ/ಬಡ್ಡಿಗಳ ಕಳೆದ 02 ವರ್ಷಗಳ ಅಂಕಿಗಳ ತುಲನಾತ್ಮಕ ವಿವರ ಹಾಗೂ ಠೇವಣಿಗೆ ಹೋಲಿಸಲಾಗಿ ಪಾವತಿಸಿರುವ ಬಡ್ಡಿಯ ಪ್ರತಿಶತ ಪ್ರಮಾಣದ ವಿವರ:

| **ವಿವರ** | **2024–25** | **2025–26** |
|---|---|---|
| ಒಟ್ಟು ಠೇವಣಿ | 2,37,48,25,422.98 | 3,06,44,04,679.41 |
| ಒಟ್ಟು ಬಡ್ಡಿ ಪಾವತಿ | 12,73,05,524.87 | 15,81,64,553.96 |
| ಪ್ರತಿಶತ ಪ್ರಮಾಣ | 5.36 | 5.16 |

**20 ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–** [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಶಿಸುವುದು]

1) ಸಂಘದಲ್ಲಿ ಹಲವಾರು ಸದಸ್ಯರ ಉಳಿತಾಯ ಖಾತೆಗಳಲ್ಲಿ ಯಾವುದೇ ವ್ಯವಹಾರ ನಡೆಸದೆ ಸ್ಥಗಿತಗೊಂಡಿರುತ್ತದೆ. ಅಂತಹ ಖಾತೆಗಳನ್ನು ಗುರುತಿಸಿ ಆ ಸದಸ್ಯರನ್ನು ಸಂಪರ್ಕಿಸಿ ಖಾತೆಯಲ್ಲಿ ವ್ಯವಹಾರ ನಡೆಯುವಂತೆ ಮಾಡಲು ಸಿಬ್ಬಂದಿಗಳು ಹಾಗೂ ಆಡಳಿತ ಮಂಡಲಿಯವರು ಕ್ರಮ ವಹಿಸಲು ಸೂಚಿಸಲಾಗಿದೆ.

2) ಸಂಘದಲ್ಲಿ ಹಲವಾರು ಉಳಿತಯ ಖಾತೆಗಳು ಸ್ಥಗಿತಗೊಂಡಿವೆ.ಅಂತಹ ಖಾತೆಗಳನ್ನು ಗುರುತಿಸಿ ಆ ಸದಸ್ಯರನ್ನು ಸಂಪರ್ಕಿಸಿ ಖಾತೆಯಲ್ಲಿ ವ್ಯವಹಾರ ನಡೆಯುಂತೆ ಮಾಡಲು ಸಿಬ್ಬಂದಿಗಳು ಹಾಗೂ ಆಡಳಿತ ಮಂಡಲಿಯವರು ಕ್ರಮ ವಹಿಸಲು ಸೂಚಿಸಲಾಗಿದೆ.

3) ಸಹಕಾರಿಯು ಠೇವಣಿಯನ್ನು ಸ್ವೀಕರಿಸುವಾಗ ಆದಾಯ ತೆರಿಗೆ ಕಾಯ್ದೆ 1961 ಕಲಂ 269SS, 269ST ನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಠೇವಣಿಗಳನ್ನು ಮರುಪಾವತಿ ಮಾಡುವಾಗ ಆದಾಯ ತೆರಿಗೆ ಕಾಯ್ದೆ 1961 ಕಲಂ 269T ನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಮೇಲಿನ ಸದ್ರಿ ವಿಚಾರಕ್ಕೆ ಸಂಬಂಧಪಟ್ಟು ಸಹಕಾರಿಯು ಕಾಯ್ದೆ ತಜ್ಞ ಹಾಗೂ ಪರಿಣಿತರಿಂದ ಸಲಹೆಯನ್ನು ಪಡೆದು ವ್ಯವಹರಿಸಲು ಸೂಚಿಸಲಾಗಿದೆ. ಹಾಗೂ ಸಹಕಾರಿಗೆ ಅನ್ವಯವಾಗುವಂತಹ ಆದಾಯ ತೆರಿಗೆ ಕಾಯ್ದೆ ನಿಯಮ ಅಡಿಯಲ್ಲಿ ಹೊರಡಿಸುವಂತಹ ಸುತ್ತೋಲೆಗಳನ್ನು ಯಾವತ್ತೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

4) ಸದಸ್ಯರ ಸಣ್ಣ ಉಳಿತಾಯ ಖಾತೆಯ ನಿಯಮ 7 ರ ಪ್ರಕಾರ ಸಾಲ ಪಡೆಯದೇ ಇದ್ದ ಸದಸ್ಯರು ತಮ್ಮ ಸಣ್ಣ ಉಳಿತಾಯ ಖಾತೆಯಲ್ಲಿ ಕನಿಷ್ಟ ರೂ. 500.00 ಮೊಬಲಗನ್ನು ಉಳಿಸಿ ಬಾಕಿ ಮೊಬಲಗನ್ನು ವಾಪಾಸ್ಸು ಪಡೆಯಲು ಅವಕಾಶ ಇರುತ್ತದೆ. ನಮ್ಮ ಲೆಕ್ಕಪರಿಶೋಧನಾ ಸಮಯದಲ್ಲಿ ಸದಸ್ಯರ ಸಣ್ಣ ಉಳಿತಾಯ ಖಾತೆಯನ್ನು ಪರಿಶೀಲಿಸಿದಾಗ ಒಟ್ಟು 294 ಸದಸ್ಯರ ಖಾತೆಗಳಲ್ಲಿ ರೂ. 500/– ಕ್ಕಿಂತ ಮೊತ್ತದ ಕಡಿಮೆ ಶಿಲ್ಕು ಬಾಕಿ ಇರುವುದನ್ನು ಗಮನಿಸಲಾಗಿದೆ. ಇದು ಸಂಘದ ಉಪನಿಯಮಗಳ ಉಲ್ಲಂಘನೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಸದಸ್ಯರನ್ನು ಸಂಪರ್ಕಿಸಿ ಉಪನಿಯಮದಂತೆ ಕನಿಷ್ಟ ಖಾತೆ ಬಾಕಿಯನ್ನು ನಿರ್ವಹಿಸಲು ಕ್ರಮವಿಡಲು ಸೂಚಿಸಲಾಗಿದೆ.

5) ಉಳಿತಾಯ ಖಾತೆ ನಿಯಮ 4(ಎ)(3) ಪ್ರಕಾರ, ಉಳಿತಾಯ ಖಾತೆ ಪ್ರಾರಂಭಿಸಲು ಕನಿಷ್ಟ 500–00 ರೂಪಾಯಿಗಳನ್ನು ಠೇವಣಿ ಮಾಡತಕ್ಕದ್ದು. ಮತ್ತು ಈ ಖಾತೆಯನ್ನು ಚಾಲ್ತಿಯಲ್ಲಿಡಲು ಕನಿಷ್ಟ 1,000–00 ರೂಪಾಯಿ ಈ ಖಾತೆಯಲ್ಲಿ ಇರತಕ್ಕದ್ದು. ಈ ಖಾತೆಯಲ್ಲಿ ಇರಬೇಕಾದ ಕನಿಷ್ಟ ಮೊಬಲಗಿಗಿಂತ ಕಡಿಮೆ ಇದ್ದಲ್ಲಿ ಅದನ್ನು ಹಾಗೆ ಕಡಿಮೆಯಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಭರ್ತಿ ಮಾಡತಕ್ಕದ್ದು. ಭರ್ತಿ ಮಾಡದಿದ್ದಲ್ಲಿ ಸಂಬಂಧಪಟ್ಟ ಸದಸ್ಯರಿಗೆ ತಿಳಿವಳಿಕೆಯನ್ನು ನೀಡಿ ಖಾತೆಯನ್ನು ಸ್ಥಗಿತಗೊಳಿಸತಕ್ಕದ್ದು. ಆದರೆ ನಮ್ಮ ಲೆಕ್ಕಪರಿಶೋಧನಾ ಸಮಯದಲ್ಲಿ ರೂ. 1,000/– ಕ್ಕಿಂತ ಕಡಿಮೆ ಶಿಲ್ಕನ್ನು ಹೊಂದಿರುವ ಒಟ್ಟು 15,521 ಸದಸ್ಯರ ಉಳಿತಾಯ ಖಾತೆಗಳಲ್ಲಿ ರೂ. 1,000 ಕ್ಕಿಂತ ಕಡಿಮೆ ಮೊತ್ತದ ಶಿಲ್ಕು ಇರುವುದು ಕಂಡುಬಂದಿರುತ್ತದೆ. ಮುಂದುವರೆದು, ಒಟ್ಟು 37 ಸದಸ್ಯರ ಖಾತೆಗಳಲ್ಲಿ ರೂ. 1/– ಕ್ಕಿಂತ ಕಡಿಮೆ ಮೊತ್ತದ ಶಿಲ್ಕು ಇರುತ್ತದೆ. ಈ ಬಗ್ಗೆ ನಾವು ನೀಡುವ ಸಲಹೆಯೇನೆಂದರೆ, ಸದಸ್ಯರಿಗೆ ಕನಿಷ್ಟ ಠೇವಣಿ ಮೊತ್ತದ ಬಗ್ಗೆ ತಿಳುವಳಿಕೆ ನೀಡಿ ಕನಿಷ್ಟ ಖಾತೆ ಬಾಕಿಯನ್ನು ನಿರ್ವಹಿಸಲು ಕ್ರಮವಿಡಬೇಕು ಮತ್ತು ಇಂತಹ ಖಾತೆಗಳನ್ನು ಗುರುತಿಸಿ ಉಪನಿಯಮದಂತೆ ನಿಷ್ಕ್ರಿಯ ಖಾತೆಗಳೆಂದು ವರ್ಗೀಕರಿಸಬೇಕು.

6) ಸಂಸ್ಥೆಯ ಲೆಕ್ಕಪತ್ರಗಳ ಪರಿಶೀಲನೆಯ ಸಂದರ್ಭದಲ್ಲಿ, ನಿವೃತ್ತ ನೌಕರರಿಗೆ ಸಂಬಂಧಿಸಿದ ಭದ್ರತಾ ಠೇವಣಿ (Retired Employee Security Deposit) ಮೊತ್ತವನ್ನು ಸಾಮಾನ್ಯ "ಭದ್ರತಾ ಠೇವಣಿ" ಖಾತೆ ಶೀರ್ಷಿಕೆಯಡಿ ವರ್ಗೀಕರಿಸಿರುವುದು ಕಂಡುಬಂದಿದೆ. ಇದಲ್ಲದೆ, ಸದರಿ ಠೇವಣಿಗಳ ಮೇಲೆ ವಾರ್ಷಿಕ 10% ಬಡ್ಡಿದರದಲ್ಲಿ ಬಡ್ಡಿಯನ್ನು ಪಾವತಿಸಲಾಗುತ್ತಿದೆ. ನಿವೃತ್ತ ನೌಕರರ ಭದ್ರತಾ ಠೇವಣಿಯು ಸಾಮಾನ್ಯ ಭದ್ರತಾ ಠೇವಣಿಗಳ ಸ್ವರೂಪಕ್ಕಿಂತ ಭಿನ್ನವಾಗಿರುವುದರಿಂದ, ಅದನ್ನು ಪ್ರತ್ಯೇಕ ಖಾತೆ ಶೀರ್ಷಿಕೆಯಡಿ ವರ್ಗೀಕರಿಸಿ ಲೆಕ್ಕಪತ್ರಗಳಲ್ಲಿ ಪ್ರತ್ಯೇಕವಾಗಿ ಪ್ರದರ್ಶಿಸುವುದು ಸೂಕ್ತವಾಗಿದೆ. ಅಲ್ಲದೆ, ಸದರಿ ಠೇವಣಿಗಳ ಮೇಲಿನ ಬಡ್ಡಿ ಪಾವತಿಯನ್ನು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಠೇವಣಿ ಯೋಜನೆಗಳಿಗೆ ಅನ್ವಯವಾಗುವ ಬಡ್ಡಿದರಕ್ಕೆ ಮಾತ್ರ ಸೀಮಿತಗೊಳಿಸಿ, ಅದಕ್ಕಿಂತ ಹೆಚ್ಚಿನ ದರದಲ್ಲಿ ಬಡ್ಡಿ ಪಾವತಿಸದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಇದರ ವಿವರ ಕೆಳಗಿನಂತಿದೆ.

| * | ನಿವೃತ್ತ ಸಿಬ್ಬಂದಿಯ ಹೆಸರು | ಭದ್ರತಾ ಠೇವಣಿ |
|---|---|---|
| 1 | ಅನಿಲ ಕುಮಾರ ಕೆ. | 39,433 |
| 2 | ದಿವ್ಯಾ | 10,512 |
| 3 | ರಂಜನಾ | 10,290 |
| 4 | ಕಲ್ಪನಾ ವಿ. ಹೆಗಡೆ | 11,512 |

**21 ಇತರೆ ಜವಾಬ್ದಾರಿಗಳು :** [ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಶಿಸುವುದು]

ಸಂಘದಲ್ಲಿ ದಿನಾಂಕ : 31–03–2026 ಕ್ಕೆ ಈ ಕೆಳಗಿನಂತೆ ಇತರೆ ಜವಾಬ್ದಾರಿಗಳನ್ನು ಹೊಂದಿರುತ್ತದೆ. ಅವುಗಳನ್ನು ಪರಿಶೀಲಿಸಲಾಗಿದೆ.

| # | ವಿವರ | ಮೊತ್ತ |
|---|---|---|
| 1 | ಸದಸ್ಯರ ಷೇರು ಮೇಲಿನ ಲಾಭಾಂಶ | 1,02,58,157 |
| 2 | ಸಿಬ್ಬಂದಿ ಮರಣ ಪರಿಹಾರ ನಿಧಿ | 3,15,340 |
| 3 | ಸದಸ್ಯರ ಮರಣೋತ್ತರ ನಿಧಿ (ಸದಸ್ಯರಿಂದ ಸ್ವೀಕರಿಸಿದ್ದು) | 1,20,82,500 |
| 4 | ಸಿಬ್ಬಂದಿ ಅನುಗ್ರಹ ಪೂರ್ವಕ ಕೊಡುಗೆ ಪಾವತಿಗೆ ಬಾಕಿ | 1,15,392 |
| 5 | ಅಡಿಕೆ ಮಾರಾಟದ ಹಣ | 21,60,003 |
| 6 | ಇ. ಎಂ. ಡಿ. | 35,67,750 |
| 7 | ಅಮಾನತ್ತು ಜವಾಬ್ದಾರಿ | 44,07,248 |
| 8 | ಏಜೆನ್ಸಿ ಕಮಿಷನ್ ಪಾವತಿಸಬೇಕಾದ್ದು | 6,81,716 |
| 9 | ಜಿಎಸ್‌ಟಿ ಪಾವತಿಸಬೇಕಾದ್ದು | 3,37,44,107 |
| 10 | ಇತರೆ ಪಾವತಿ ಬಾಕಿ ಖಾತೆ | 14,16,62,718 |
| 11 | ಎ.ಪಿ.ಎಂ.ಸಿ. ತೂಕದ ಚಾರ್ಜ್ | 45,754 |
| 12 | ಗುತ್ತಿಗೆದಾರರ ಭದ್ರತಾ ಠೇವಣಿ | 2,62,072 |
| 13 | ಸದಸ್ಯರ ಗುಂಪು ವಿಮೆ ಕ್ಲೈಮ್ | 8,97,848 |
| 14 | ಸಿಬ್ಬಂದಿ ಇ ಎಸ್ ಐ ಷೇರು | 175 |
| 15 | ಆದಾಯ ಮೂಲ ತೆರಿಗೆ ಪಾವತಿಸಬೇಕಾದದ್ದು (ಟಿಡಿಎಸ್) | 63,25,105 |
| 16 | ಕ್ರೆಡಿಟಾರ್ಸ್ ಫಾರ್ ಎಕ್ಸ್‌ಪೆನ್ಸ್ | 46,35,114 |
| 17 | ಕ್ರೆಡಿಟಾರ್ಸ್ ಫಾರ್ ಕೆಮಿಕಲ್ಸ್ | 51,79,347 |
| 18 | ಕ್ರೆಡಿಟಾರ್ಸ್ ಫಾರ್ ಪ್ಯಾಕಿಂಗ್ ಮೆಟೀರಿಯಲ್ಸ್ | 1,53,395 |
| 19 | ಟ್ರೇಡ್ ಕ್ರೆಡಿಟಾರ್ಸ್ | 23,30,071 |
| 20 | ಬಾಡಿಗೆ ಮುಂಗಡ ಸ್ವೀಕೃತಿ | 28,60,000 |
| 21 | ಸಿಬ್ಬಂದಿ ಅನುಗ್ರಹ ಪೂರ್ವಕ ಕೊಡುಗೆ ಪಾವತಿಗೆ ಕಾಯ್ದಿರಿಸಿದ್ದು | 1,45,64,991 |
| 22 | ಸಿಬ್ಬಂದಿ ರಜಾ ನಗದೀಕರಣ ಪಾವತಿಗೆ ಕಾಯ್ದಿರಿಸಿದ್ದು | 3,88,94,195 |
| 23 | ಆದಾಯ ತೆರಿಗೆ ಕಾಯ್ದಿರಿಸಿದ್ದು | 1,81,69,740 |
| 24 | ನಿರಖು ಠೇವಣಿ ಮೇಲೆ ಬಡ್ಡಿ ಪಾವತಿಗೆ ಕಾಯ್ದಿರಿಸಿದ್ದು | 1,07,79,932 |
| 25 | ಕರೆ ಠೇವಣಿ ಮೇಲೆ ಬಡ್ಡಿ ಪಾವತಿಗೆ ಕಾಯ್ದಿರಿಸಿದ್ದು | 12,91,999 |
| 26 | ಸದಸ್ಯರ ಮರಣೋತ್ತರ ನಿಧಿ ಮೇಲೆ ಬಡ್ಡಿ ಕಾಯ್ದಿರಿಸಿದ್ದು | 1,77,20,135 |
| | **ಒಟ್ಟು** | **33,31,04,803** |

**ವಿವರಣೆ**

1) ಸದಸ್ಯರ ಷೇರು ಮೇಲಿನ ಲಾಭಾಂಶ : ವರದಿಯ ವರ್ಷಾಂತ್ಯಕ್ಕೆ ಸದಸ್ಯರಿಗೆ ಕೊಡಬೇಕಾದ ಷೇರು ಡಿವಿಡೆಂಡ್ ರೂ 1,02,58,157.00 ಇದನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕನಮೂದು ಮಾಡಲಾಗಿದೆ.

2) ಸಿಬ್ಬಂದಿ ಮರಣ ಪರಿಹಾರ ನಿಧಿ : ಸಂಘವು ಸಿಬ್ಬಂದಿಗಳಿಂದ ಪ್ರತಿ ಮಾಹೆಗೆ ರೂ 40 ಸಂಗ್ರಹಿಸುತ್ತಿದ್ದು, ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಮರಣ ಹೊಂದಿದರೆ ರೂ 10,000 ನೀಡಲಾಗುತ್ತದೆ. ಇಲ್ಲವಾದ್ದಲ್ಲಿ ನಿವೃತ್ತಿ ಸಮಯದಲ್ಲಿ ಈ ಮೊತ್ತವನ್ನು ಸಿಬ್ಬಂದಿಗಳಿಗೆ ವಾಪಸಾತಿ ಮಾಡಲಾಗುತ್ತದೆ. ಇದರ ಮೊತ್ತ ರೂ 3,15,340 ಇದ್ದು ಇದನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ.

3) ಸದಸ್ಯರ ಮರಣೋತ್ತರ ನಿಧಿ (ಸದಸ್ಯರಿಂದ ಸ್ವೀಕರಿಸಿದ್ದು) : ಸಂಘದಲ್ಲಿ ಸದಸ್ಯರು ಮರಣ ಹೊಂದಿದಾಗ ಸದಸ್ಯರ ಕುಟುಂಬಕ್ಕೆ ಸಂಘದ ವಂತಿಗೆಯನ್ನು ಸೇರಿಸಿ ಹಾಗು ಸದಸ್ಯರು ಹೂಡಿಕೆ ಮಾಡಿರುವ ಠೇವಣಿಯ ಮೇಲೆ ಬಡ್ಡಿಯನ್ನು ಸೇರಿಸಿ ನೀಡಲಾಗುತ್ತಿದ್ದು ಸದಸ್ಯರ ವಂತಿಗೆಯನ್ನು ಸಂಘವು ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತದೆ. ಇದರ ಮೊತ್ತ ರೂ. 1,20,82,500 ಆಗಿರುತ್ತದೆ. ಹಾಗು ಸಂಘವು ಇದಕ್ಕೆ ಸಂಬಂಧಿಸಿದಂತೆ ಕುಳುವಾರು ತಃಖ್ತೆಯನ್ನು ಹೊಂದಿರುತ್ತದೆ.

| |
|---|
| 4) ಸಿಬ್ಬಂದಿ ಅನುಗ್ರಹ ಪೂರ್ವಕ ಕೊಡುಗೆ ಪಾವತಿಗೆ ಬಾಕಿ : ಸಂಘವು ಸಿಬ್ಬಂದಿಗೆ ಪಾವತಿಸಬೇಕಾದ ಬೋನಸ್ಸ ಮೊತ್ತ ರೂ. 1,15,392 ಆಗಿದ್ದು. ಇದು ಸಂಘದ ನಿವೃತ್ತ ಸಿಬ್ಬಂದಿಯಾದ ಶ್ರೀ ಅನಿಲಕುಮಾರ ಇವರಿಗೆ ಕೊಡಬೇಕಾದ ಬೋನಸ್ ಮೊತ್ತವಾಗಿರುತ್ತದೆ. ಇದರ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದೆ. |
| 5) ಅಡಿಕೆ ಮಾರಾಟದ ಹಣ : ಸಂಘವು ಸದಸ್ಯರ ಅಡಿಕೆ ಮಾರಾಟದ ಹಣವನ್ನು ಸದಸ್ಯರಿಗೆ ವರ್ಗಾಯಿಸಲು ಬಾಕಿ ಇರುತ್ತದೆ. ಇದರ ಮೊತ್ತ ರೂ. 21,60,003 ಆಗಿರುತ್ತದೆ. ಸಂಘವು ಇದರ ಬಗ್ಗೆ ಸೂಕ್ತ ಕುಳುವಾರು ಯಾದಿಯನ್ನು ಹೊಂದಿರುತ್ತದೆ. ಆದರೆ ಸಂಘವು ಇದನ್ನು ವಿಲೇವಾರಿ ಮಾಡಿರುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. |
| 6) ಇ. ಎಂ. ಡಿ. : ಸಂಘವು ಸುಣ್ಣ, ರಾಳ, ಮೈಲು ತುತ್ತ ಮತ್ತಿತರೆ ವ್ಯವಹಾರಗಳನ್ನು ನಡೆಸುತ್ತಿದ್ದು ಮತ್ತು ಸಂಘಕ್ಕೆ ವಿವಿಧ ಸೇವಾ ಪುರೈಕೆದಾರರಿದ್ದು ಇದಕ್ಕೆ ಸಂಬಂಧಿಸಿದಂತೆ ಸಂಘವು ಭದ್ರತೆಗೋಸ್ಕರ ಠೇವಣಿಯನ್ನು ಇರಿಸಿಕೊಂಡಿದ್ದು ಇದರ ಮೊತ್ತ ರೂ. 35,67,750 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 7) ಅಮಾನತ್ತು ಜವಾಬ್ದಾರಿ : ಸಂಘವು 10 ವರ್ಷಗಳಿಂದ ವ್ಯವಹಾರ ಮಾಡದೆ ಇರುವ ಸದಸ್ಯರ ಶೇರು ಮೊತ್ತ ಮತ್ತು ಠೇವಣಿ ಮೊತ್ತವನ್ನು ಈ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಇದರ ಮೊತ್ತ ರೂ. 44,07,248 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದರಿಂದಾಗಿ ಶೇರುಗಳ ಮೇಲೆ ಲಾಭಾಂಷ ಮತ್ತು ಠೇವಣಿ ಮೇಲೆ ಯಾವುದೆ ಬಡ್ಡಿಯನ್ನು ನೀಡಿದಂತಾಗಿರುವುದಿಲ್ಲ. ಇದನ್ನು ಆಕ್ಷೇಪಿಸಲಾಗಿದೆ. ಉಪವಿದಿಯಲ್ಲಿ ಇದರ ಬಗ್ಗೆ ಯಾವುದೆ ಅವಕಾಶಗಳಾಗಲಿ ಅಥವಾ ಉಲ್ಲೆಖವಾಗಲಿ ಇರುವುದಿಲ್ಲ. ಮುಂದುವರೆದು ಆಡಳಿತ ಮಂಡಲಿಯ ಸಭೆಯ ಠರಾವಿನಲ್ಲಿ ಈ ಖಾತೆಯಲ್ಲಿ ಹಾಗೆಯೆ 3 ವರ್ಷ ಮುಂದುವರೆದರೆ ಇದನ್ನು ಮೀಸಲು ನಿಧಿಗೆ ವರ್ಗಾಯಿಸುವಂತೆ ಠರಾಯಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಾಯ್ದೆಯಲ್ಲಿ ಯಾವುದೆ ನಿಯಮಗಳಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಕಾನೂನು ಅಭಿಪ್ರಾಯ ಪಡೆದು ವ್ಯವಹರಿಸಲು ಸೂಚಿಸಿದೆ. |
| 8) ಏಜೆನ್ಸಿ ಕಮಿಷನ್ ಪಾವತಿಸಬೇಕಾದ್ದು : ಸಂಘವು ನೇರ ಖರೀದಿಗೆ ಹಾಗೂ ಸುಣ್ಣ, ತುತ್ತ, ರಾಳ, ಇವುಗಳನ್ನು ಮಾರಲು ಎಜೆಂನ್ಸಿಗಳನ್ನು ಹೊಂದಿದ್ದು ಇವರಿಗೆ ಪಾವತಿಸಬೇಕಾದ ಕಮಿಷನ್ ಮೊತ್ತ ಬಾಕಿ ಇರುತ್ತದೆ. ಇದರ ಮೊತ್ತ ರೂ. 6,81,716 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 9) ಜಿಎಸ್‌ಟಿ ಪಾವತಿಸಬೇಕಾದ್ದು : ಸಂಘವು ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯನ್ನು ಹೊಂದಿದ್ದು ಮಾರ್ಚ ಮಾಹೆಯಲ್ಲಿ ಕೊಡಬೇಕಾದ ಜಿ.ಎಸ್.ಟಿ ಮೊತ್ತ ರೂ. 3,37,44,107 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಎಪ್ರಿಲ್ ಮಾಹೆಯಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ. |
| 10) ಇತರೆ ಪಾವತಿ ಬಾಕಿ ಖಾತೆ : ಸಂಘವು ಅಭಿನವ ಎಂಟ್ರಪ್ರೈಸ್ ಇವರಿಂದ ರೂ 11,50,00,000 ಮೊತ್ತವನ್ನು ಅಡಿಕೆ ಮಾರಾಟದ ವ್ಯವಹಾರಕ್ಕೆ ಸಂಬಂಧಿಸಿದಂತೆ ಮುಂಗಡವಾಗಿ ಪಡೆದುಕೊಂಡಿರುತ್ತದೆ. ದಿನಾಂಕ 31–03–2026 ಕ್ಕೆ ಇದ್ದಂತೆ ಸದರಿ ಖಾತೆಯವರ ಹೆರಿನಲ್ಲಿಯೆ ಸಂಡ್ರಿ ಡೆಟರ್ಸ್ ಖಾತೆಯಲ್ಲಿ ರೂ 9,01,30,188 ಬರತಕ್ಕ ಖಾತೆಗಳು ಎನ್ನುವುದಾಗಿ ಲೆಕ್ಕ ನಮೂದು ಮಾಡಲಾಗಿದೆ. ಈ ಖಾತೆಗಳನ್ನು ಹೊಂದಾಣಿಕೆ ಮಾಡಿ ವ್ಯವಹರಿಸದೆ ಇರುವುದನ್ನು ಆಕ್ಷೇಪಿಸಲಾಗಿದೆ. ಇದರಿಂದ ದಿನಾಂಕ 31–03–2026 ಕ್ಕೆ ಇದ್ದಂತೆ ಸಂಘದ ಸಾಲ ಜಿಂದಗಿ ತಃಖ್ತೆಯ ಒಟ್ಟು ಮೊತ್ತಕ್ಕೆ ನೇರವಾಗಿ ಇದು ಪರಿಣಾಮ ಬೀರಿದ್ದು ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. ಸಂಘವು ಸ್ಟೇಟ್ ಬ್ಯಾಂಕ ಇವರಲ್ಲಿ ಸಾಲವನ್ನು ಪಡೆದಿದ್ದು ಈ ಸಾಲದ ಮೇಲೆ ರೂ 84,75,000 ಮುದ್ರಾಂಕ ಶುಲ್ಕವನ್ನು ಪಾವತಿಸಲು ಬಾಕಿ ಇದ್ದು ಇದನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. ಹಾಗೂ ಅಡಿಕೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಮುಂಗಡವಾಗಿ ರೂ 1,28,08,812 ಸ್ವೀಕರಿಸಲಾಗಿದೆ. ಇನ್ನುಳಿದಂತೆ ಸಂಘವು ವರ್ತಕರು ಕಡಿತ ಮಾಡಿದ ಮೂಲದಲ್ಲಿ ತೆರಿಗೆ ಕಡಿತವನ್ನು ವರ್ತಕರ ಖಾತೆಗೆ ವರ್ಗಾಯಿಸದೆ ಇತರೆ ಖಾತೆ ಪಾವತಿ ಬಾಕಿಯಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಆಕ್ಷೇಪಿಸಲಾಗಿದ್ದು ಮುಂದಿನ ದಿನಗಳಲ್ಲಿ ವರ್ತಕರ ಖಾತೆಗೆ ನೇರವಾಗಿ ಮೂಲದಲ್ಲಿ ತೆರಿಗೆ ಕಡಿತದ ಮೊತ್ತವನ್ನು ವರ್ಗಾಯಿಸಿ ವ್ಯವಹರಿಸಲು ಸೂಚಿಸಲಾಗಿದೆ. ಒಟ್ಟಾರೆಯಾಗಿ ದಿನಾಂಕ 31–03–2026 ಕ್ಕೆ ಇದ್ದಂತೆ ಈ ಖಾತೆಯಲ್ಲಿ ರೂ. 14,16,62,718 ಇದ್ದು ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 11) ಎ.ಪಿ.ಎಂ.ಸಿ. ತೂಕದ ಚಾರ್ಜ್ : ಸಂಘವು ನಡೆಸಿದ ಅಡಿಕೆ ಮಾರಾಟದ ವ್ಯವಹಾರದ ಮೇಲೆ ಎ.ಪಿ.ಎಂ.ಸಿ ಇವರಿಗೆ ತೂಕದ ಚಾರ್ಜ ಕೋಡಬೇಕಾಗಿದ್ದು ಸಂಘದ ಶಾಖೆಯಾದ ಚನ್ನಗಿರಿ ಇವರಲ್ಲಿ ದಿನಾಂಕ 01–10–2025 ರಿಂದ 31–03–2026 ವರೆಗಿನ ತೂಕದ ಚಾರ್ಜ ಪಾವತಿಯಾಗಿರುವುದಿಲ್ಲ. ಇದರ ಮೊತ್ತ ರೂ. 45,754 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಕೂಡಲೆ ಪಾವತಿಸಲು ಸೂಚಿಸಲಾಗಿದೆ. |

| |
|---|
| 12) ಗುತ್ತಿಗೆದಾರರ ಭದ್ರತಾ ಠೇವಣಿ : ಸಂಘವು ಗುತ್ತಿಗೆದಾರರಿಂದ ಭದ್ರತೆಗೋಸ್ಕರ ಠೇವಣಿಯನ್ನು ಇರಿಸಿಕೊಂಡಿದ್ದು ಇದಕ್ಕೆ ಯಾವುದೆ ಬಡ್ಡಿಯನ್ನು ನಿಡುತ್ತಿಲ್ಲ ಇದರ ಮೊತ್ತ ರೂ. 2,62,072 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದಕ್ಕೆ ಸಂಘದಲ್ಲಿ ಸೂಕ್ತ ಕುಳುವಾರು ಯಾದಿ ಲಭ್ಯವಿರುತ್ತದೆ. |
| 13) ಸದಸ್ಯರ ಗುಂಪು ವಿಮೆ ಕ್ಲೈಮ್ : ಸಂಘವು ಸದಸ್ಯರಿಗೆ ಸಂಬಂಧಿಸಿದಂತೆ ವಿಮೆಯನ್ನು ವಿಮಾ ಕಂಪನಿಯ ಜೊತೆಗೆ ಒಡಂಬಡಿಕೆಯನ್ನು ಹೊಂದಿ ಸದಸ್ಯರ ಅನುಕೂಲಕ್ಕಾಗಿ ವಿಮಾ ಭದ್ರತೆಯನ್ನು ಹೊಂದಿರುತ್ತದೆ. ಸದಸ್ಯರಿಗೆ ಸಂಬಂಧಿಸಿದಂತೆ ವಿಮೆಯ ಮೊತ್ತವು ನೇರವಾಗಿ ಸಂಘಕ್ಕೆ ಜಮೆ ಬಂದಿರುತ್ತದೆ. ಇದನ್ನು ಸಂಘವು ಸದಸ್ಯರಿಗೆ ವರ್ಗಾಯಿಸಿರುವುದಿಲ್ಲ. ಇದರ ಮೊತ್ತ ರೂ. 8,97,848 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಸದಸ್ಯರಿಗೆ ವರ್ಗಾಯಿಸಲು ಸೂಚಿಸಲಾಗಿದೆ. |
| 14) ಸಿಬ್ಬಂದಿ ಇ ಎಸ್ ಐ ಷೇರು : ಸಂಘವು ಸಿಬ್ಬಂದಿಗಳ ಮೇಲೆ ವಿಮೆಯನ್ನು ಹೊಂದಿದ್ದು ಸಿಬ್ಬಂದಿಯ ಸಂಬಳದಲ್ಲಿ ದಿನಾಂಕ 31-12-2024 ರಂದು ಕಡಿತಗೊಳಿಸಿದ ಮೊತ್ತವನ್ನು ಇಲಾಖೆಗೆ ಭರಣ ಮಾಡಿರುವುದಿಲ್ಲ ಇದರ ಮೊತ್ತ ರೂ. 175 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಕೂಡಲೆ ಭರಣ ಮಾಡಲು ಸೂಚಿಸಿದೆ. |
| 15) ಆದಾಯ ಮೂಲ ತೆರಿಗೆ ಪಾವತಿಸಬೇಕಾದದ್ದು (ಟಿಡಿಎಸ್) : ಸಂಘವು ಸದಸ್ಯರ ಠೇವಣಿಗಳ ಮೇಲೆ, ಸಿಬ್ಬಂದಿ ವೇತನಗಳ ಮೇಲೆ, ಗುತ್ತಿಗೆದಾರರಿಗೆ ಪಾವತಿಸಿದ ಮೊತ್ತದ ಮೇಲೆ ಆದಾಯ ತೆರಿಗೆ ಕಾಯ್ದೆಯನ್ವಯ ಮೂಲದಲ್ಲಿ ತೆರಿಗೆ ಕಟಾಯಿಸಿದ್ದು ಇದರ ಮೊತ್ತ ರೂ. 63,25,105 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಎಪ್ರಿಲ ಮಾಹೆಯಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ. |
| 16) ಕ್ರೆಡಿಟಾರ್ಸ್ ಫಾರ್ ಎಕ್ಸ್‌ಪೆನ್ಸ್ : ಸಂಘವು ದಿನಾಂಕ 31-03-2026 ಕ್ಕೆ ಇದ್ದಂತೆ ಕೊಡತಕ್ಕ ಬಾಡಿಗೆ, ಸೆಕ್ಯುರಿಟಿ ಏಜೆನ್ಸಿ, ಹಮಾಲಿ ಮತ್ತಿತರೆ ಖರ್ಚುಗಳಿಗೆ ಸಂಬಂಧಿಸಿದಂತೆ ಅವಕಾಶಗಳನ್ನು ಕಲ್ಪಿಸಿರುತ್ತಾರೆ. ಇದರ ಮೊತ್ತ ರೂ. 46,35,114 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಎಪ್ರಿಲ್ ಮಾಹೆಯಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ. |
| 17) ಕ್ರೆಡಿಟಾರ್ಸ್ ಫಾರ್ ಕೆಮಿಕಲ್ಸ್ : ಸಂಘವು ಸದಸ್ಯರ ಅನುಕೂಲಕ್ಕಾಗಿ ರೈತರ ಬೆಳೆಗಳಿಗೆ ಬೇಕಾಗುವ ಕೊಳೆ ಔಷಧಗಳನ್ನು ವಿತರಕರಿಂದ ಖರೀದಿಸಿರುತ್ತಾರೆ. ದಿನಾಂಕ 31-03-2026 ಕ್ಕೆ ಇದ್ದಂತೆ ವಿತಕರಿಗೆ ಕೊಡತಕ್ಕ ಬಾಕಿ ರೂ. 51,79,347 ಇದ್ದು, ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 18) ಕ್ರೆಡಿಟಾರ್ಸ್ ಫಾರ್ ಪ್ಯಾಕಿಂಗ್ ಮೆಟೀರಿಯಲ್ಸ್ : ಸಂಘವು ಅಡಿಕೆ ಸಂಗ್ರಹಣೆಗೋಸ್ಕರ ಪ್ಯಾಕಿಂಗ್ ವಸ್ತುಗಳನ್ನು ಖರೀದಿಸಿದ್ದು, ದಿನಾಂಕ 31-03-2026 ಕ್ಕೆ ಇದ್ದಂತೆ ವಿತಕರಿಗೆ ಕೊಡತಕ್ಕ ಬಾಕಿ ರೂ. 1,53,395 ಇದ್ದು, ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 19) ಟ್ರೇಡ್ ಕ್ರೆಡಿಟಾರ್ಸ್ : ಸಂಘವು ಅಡಿಕೆ ಖರೀದಿ ವ್ಯವಹಾರದಲ್ಲಿ ತೊಡಗಿದ್ದು ದಿನಾಂಕ 31-03-2026 ಕ್ಕೆ ಇದ್ದಂತೆ ವಿತಕರಿಗೆ ಕೊಡತಕ್ಕ ಬಾಕಿ ರೂ. 23,30,071 ಇದ್ದು, ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 20) ಬಾಡಿಗೆ ಮುಂಗಡ ಸ್ವೀಕೃತಿ : ಸಂಘವು ತನ್ನ ಸ್ವಂತ ಕಟ್ಟಡವನ್ನು ಬಾಡಿಗೆ ನೀಡಿದ್ದು, ಒಟ್ಟು 12 ಬಾಡಿಗೆದಾರರಿಂದ ಭದ್ರತಾ ಠೇವಣಿಯನ್ನು ಸ್ವೀಕರಿಸಿದ್ದು ಇದರ ಮೊತ್ತ ರೂ 28,60,000 ಇದ್ದು, ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 21) ಸಿಬ್ಬಂದಿ ಅನುಗ್ರಹ ಪೂರ್ವಕ ಕೊಡುಗೆ ಪಾವತಿಗೆ ಕಾಯ್ದಿರಿಸಿದ್ದು : ಸಂಘವು ತನ್ನ ಸಿಬ್ಬಂದಿಗಳಿಗೆ ಬೋನಸ್ ನೀಡುತ್ತಿದ್ದು, ಲಾಭ ಹಾನಿ ಖಾತೆಯಿಂದ ನೇರವಾಗಿ ಖರ್ಚುಹಾಕಿ ನೀಡಲಾಗುತ್ತಿದೆ. ದಿನಾಂಕ 31-03-2026 ಕ್ಕೆ ಇದ್ದಂತೆ ಈ ಮೊತ್ತವನ್ನು ಪ್ರಾವಧಾನ ಮಾಡಿ ಇರಿಸಲಾಗಿದ್ದು ಇದರ ಮೊತ್ತ ರೂ 1,45,64,991 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |
| 22) ಸಿಬ್ಬಂದಿ ರಜಾ ನಗದೀಕರಣ ಪಾವತಿಗೆ ಕಾಯ್ದಿರಿಸಿದ್ದು : ಸಂಘವು ತನ್ನ ಸಿಬ್ಬಂದಿಗಳಿಗೆ ರಜಾ ನಗದೀಕರಣ ಪಾವತಿ ಮಾಡಲು ಬಾಕಿ ಇರುವ ಮೊತ್ತಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಲೆಕ್ಕಾಚಾರ ಮಾಡಿ ತೆಗೆದಿರಿಸಲಾಗಿದೆ. ಇದರ ಮೊತ್ತ ರೂ 3,88,94,195 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. |

| | | |
|---|---|---|
| 23) ಆದಾಯ ತೆರಿಗೆ ಕಾಯ್ದಿರಿಸಿದ್ದು : ಸಂಘವು ಆದಾಯ ತೆರಿಗೆಗೆ ಸಂಬಂಧಿಸಿದಂತೆ ಮೌಲ್ಯ ಮಾಪನಾ ವರ್ಷಕ್ಕೆ 2014–15, 2017–18 2018–19, 2020–21, 2022–23 ಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯಿಂದ ಡಿಮ್ಯಾಂಡ್ ನೋಟಿಸ್ ಬಂದಿದ್ದು ಸಂಘವು ಇದಕ್ಕೆ ಸಂಬಂಧಿಸಿದಂತೆ ವ್ಯಾಜ್ಯವನ್ನು ನಡೆಸುತ್ತಿದೆ. ಇದರಿಂದ ಸಂಘಕ್ಕೆ ಪ್ರತಿಕೂಲ ಪರಿಣಾಮಗಳು ಉಂಟಾದಲ್ಲಿ ನಷ್ಟ ಭರಿಸುವುದಕ್ಕೋಸ್ಕರ ಕಾಯ್ದಿರಿಸಲಾಗಿದೆ. ಇದರ ಮೊತ್ತ ರೂ 1,81,69,740 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. | | |
| 24) ನಿರಖು ಠೇವಣಿ ಮೇಲೆ ಬಡ್ಡಿ ಪಾವತಿಗೆ ಕಾಯ್ದಿರಿಸಿದ್ದು : ಸಂಘವು ಸದಸ್ಯರ ಖಾಯಂ ಠೇವಣಿಗಳ ಮೇಲೆ ಕೊಡತಕ್ಕ ಬಡ್ಡಿಗೆ ಸೂಕ್ತ ಪ್ರಾವಧಾನವನ್ನು ಹೊಂದಿದ್ದು ಇದರ ಮೊತ್ತ ರೂ 1,07,79,932 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. | | |
| 25) ಕರೆ ಠೇವಣಿ ಮೇಲೆ ಬಡ್ಡಿ ಪಾವತಿಗೆ ಕಾಯ್ದಿರಿಸಿದ್ದು : ಸಂಘವು ಸದಸ್ಯರ ಕರೆ ಠೇವಣಿಗಳ ಮೇಲೆ ಕೊಡತಕ್ಕ ಬಡ್ಡಿಗೆ ಸೂಕ್ತ ಪ್ರಾವಧಾನವನ್ನು ಹೊಂದಿದ್ದು ಇದರ ಮೊತ್ತ ರೂ 12,91,999 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. | | |
| 26) ಸದಸ್ಯರ ಮರಣೋತ್ತರ ನಿಧಿ ಮೇಲೆ ಬಡ್ಡಿ ಕಾಯ್ದಿರಿಸಿದ್ದು : ಸಂಘವು ಸದಸ್ಯರ ಮರಣೋತ್ತರ ಠೇವಣಿಗಳ ಮೇಲೆ ಕೊಡತಕ್ಕ ಬಡ್ಡಿಗೆ ಸೂಕ್ತ ಪ್ರಾವಧಾನವನ್ನು ಹೊಂದಿದ್ದು ಇದರ ಮೊತ್ತ ರೂ 1,77,20,135 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. | | |
| 1 | ಇತರೆ ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಹಿಂದಿನ ಅಂತರ ಇದ್ದಲ್ಲಿ, ಅದನ್ನು ಸರಿ ಪಡಿಸಿಕೊಂಡು ಸಲ್ಲಿಸುವಂತೆ ಸಂಘದ ಮುಖ್ಯಕಾರ್ಯನಿರ್ವಾಹಕರಿಗೆ ತಿಳಿಸಲಾಗಿದೆಯೇ? | ಇತರೆ ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಅಂತರ ಇಲ್ಲದ ಕಾರಣ ಅನ್ವಯಿಸುವುದಿಲ್ಲ. |
| 2 | ಪ್ರಸಕ್ತ ವರ್ಷದಲ್ಲಿ ಬಂದಿರುವ ಅಂತರವನ್ನು ಸಂಘದ ಪ್ರಸಕ್ತ ಸಾಲಿನ ಲೆಕ್ಕಪುಸ್ತಕ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ ಸರಿಪಡಿಸಲಾಗಿದೆಯೇ? | ಇತರೆ ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಅಂತರ ಇಲ್ಲದ ಕಾರಣ ಅನ್ವಯಿಸುವುದಿಲ್ಲ. |
| 3 | ಅನಾಮಧೇಯ ಕೊಡತಕ್ಕದವುಗಳು ಇದ್ದಲ್ಲಿ ಅಥವಾ ಜವಾಬ್ದಾರಿ ತಃಖ್ತೆಗಿಂತ ಹೆಚ್ಚಿಗೆ ಕೊಡತಕ್ಕ ಬಾಬ್ತುಗಳು ಇದ್ದಲ್ಲಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ ಆಡಿಟ್ ಆಕ್ಷೇಪಣೆ ವಸೂಲಾತಿಗಿರಿಸುವುದು. ಇವೆಯೇ? | ಸಂಘವು ಹೊಂದಿರುವ ಎಲ್ಲಾ ಕೊಡತಕ್ಕವುಗಳಿಗೆ ಸಂಘದಲ್ಲಿ ವಿವರಣೆ ಲಭ್ಯವಿರುತ್ತದೆ. ಯಾವುದೆ ಅನಾಮಧೇಯ ಕೊಡತಕ್ಕವುಗಳು ಇರುವುದಿಲ್ಲ. |
| 4 | ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ದಾಯಿತ್ವಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇವೆಯೇ? ಇದ್ದಲ್ಲಿ ವಿಮರ್ಶಿಸಿ ಆಡಿಟ್ ಆಕ್ಷೇಪಣೆ/ವಸೂಲಾತಿಗಿರಿಸುವುದು. | ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ದಾಯಿತ್ವಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇರುವುದಿಲ್ಲ. |

**22 ಡಿವಿಡೆಂಡ್ ವಿತರಣೆ ಕುರಿತು :**

| | |
|---|---|
| 1) ವರದಿ ವರ್ಷದಲ್ಲಿ ಲಾಭ ವಿಂಗಡಣೆಯಿಂದ ಎಷ್ಟು ಲಾಭಾಂಶ ಘೋಷಿಸಲಾಗಿದೆ. | ವರದಿ ಸಾಲಿನಲ್ಲಿ ಮಹಾಸಭೆ ಒಪ್ಪಿಗೆ ಪಡೆದು ಪ್ರತಿಶತ 10 ರಂತೆ ಲಾಭಾಂಷವನ್ನು ಸದಸ್ಯರಿಗೆ ಘೋಷಿಸಲಾಗಿದ್ದು ಇದರ ಮೊತ್ತ ರೂ. 88,94,153.00 ಆಗಿರುತ್ತದೆ. |
| 2) ವರದಿ ವರ್ಷದಲ್ಲಿ ಪಾವತಿಯಾದ ಲಾಭಾಂಶ ಎಷ್ಟು? ಪಾವತಿಯಾಗದೇ ಉಳಿದ ಲಾಭಾಂಶ ಮೊತ್ತ? | ಸನ್ 2024–25 ನೇ ಸಾಲಿನಲ್ಲಿ ಸಹಕಾರಿಯು ರೂ. 88,94,153.00 ಸದಸ್ಯರಿಗೆ ಲಾಭಾಂಷವನ್ನು ಘೋಷಿಸಿ ಹಿಂದಿನ ಸಾಲು ಹಾಗೂ ಪ್ರಸಕ್ತ ಸಾಲಿನಲ್ಲಿ ಘೋಷಿಸಿದ ಲಾಭಾಂಷವನ್ನು ಸೇರಿಸಿ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 59,74,969.00 ಪಾವತಿ ಮಾಡಲಾಗಿದೆ. ಹಾಗೂ 3 ವರ್ಷಕ್ಕೂ ಮೀರಿದ ಲಾಭ ರೂ 25,67,123 ನ್ನು ನಿಯಮಾನುಸಾರ ಮೀಸಲು ನಿಧಿಗೆ ವರ್ಗಾಯಿಸಲಾಗಿದೆ. |

| | | |
|---|---|---|
| | 3) ಲಾಭಾಂಶವನ್ನು ಘೋಷಿಸಿ ವಾಸ್ತವವಾಗಿ ವಿತರಿಸದೇ ಬೇರೆ ಉದ್ದೇಶಕ್ಕಾಗಿ ಸಂಘ ಪಡೆದುಕೊಂಡಿದ್ದಲ್ಲಿ ಈ ಬಗ್ಗೆ ವಿವರ ನೀಡಿ ಆಕ್ಷೇಪಿಸುವುದು. | ಲಾಭಾಂಶವನ್ನು ಘೋಷಿಸಿ ವಾಸ್ತವವಾಗಿ ವಿತರಿಸದೇ ಬೇರೆ ಉದ್ದೇಶಕ್ಕಾಗಿ ಸಂಘ ಪಡೆದುಕೊಂಡಿರದ ಕಾರಣ ಅನ್ವಯಿಸುವುದಿಲ್ಲ. |
| | 4) ವರ್ಷಾಂತ್ಯದ ವಿತರಣೆಯಾಗದ ಲಾಭಾಂಶದ ವರ್ಷಾವಾರು ಯಾದಿ ತೆಗೆದು ಮೂರು ವರ್ಷ ಮೀರಿದ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮ ಕೈಗೊಳ್ಳಲಾಗಿದೆಯೇ?. | 3 ವರ್ಷಕ್ಕೂ ಮೀರಿದ ಲಾಭ ರೂ 25,67,123 ನ್ನು ನಿಯಮಾನುಸಾರ ಮೀಸಲು ನಿಧಿಗೆ ವರ್ಗಾಯಿಸಲಾಗಿದೆ. |
| **23** | **ನಗದು ಶಿಲ್ಕು ಪರಿಶೀಲನೆ:** | |
| | 1) ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು | ವರದಿ ಸಾಲಿನಂತ್ಯಕ್ಕೆ ಸಂಘದಲ್ಲಿ ರೂ. 21,94,785.35 ಗಳ ನಗದು ಶಿಲ್ಕು ಇರುತ್ತದೆ. |
| | 2) ನಗದು ಪುಸ್ತಕ ನಿರ್ವಹಿಸಿದವರ ಹೆಸರು ಮತ್ತು ಹುದ್ದೆ. | ನಗದು ಪುಸ್ತಕ ನಿರ್ವಹಿಸಿದವರ ಹೆಸರು ಮತ್ತು ಹುದ್ದೆಗಳ ವಿವರ ಕೆಳಗಿನಂತಿವೆ. |

| **ಶಾಖೆ** | **ನಗದು ಪುಸ್ತಕ ನಿರ್ವಹಿಸಿದವರ ಹೆಸರು** | **ಹುದ್ದೆ** |
|---|---|---|
| ಕೇಂದ್ರ ಕಛೇರಿ | ಶ್ರೀ ರಮಾನಂದ ವಿ.ಎಸ್. | ಉಪಪ್ರಧಾನ ವ್ಯವಸ್ಥಾಪಕರು |
| ಸಾಗರ | ಶ್ರೀ ಪ್ರಕಾಶ್ ಎಂ.ಎನ್. | ಉಪಪ್ರಧಾನ ವ್ಯವಸ್ಥಾಪಕರು |
| ಸೊರಬ | ಶ್ರೀ ಶ್ರೀನಿವಾಸ ಹೆಚ್ | ಹಿರಿಯ ವ್ಯವಸ್ಥಾಪಕರು |
| 1 | ಸಂಘವು ಹೊಂದಿರುವ ಚರಾಸ್ತಿ ವಿವರಗಳ ಬಗ್ಗೆ ಪ್ರತ್ಯೇಕ ಯಾದಿ ಲಗತ್ತಿಸಲಾಗಿದೆಯೇ? | ಸಂಘವು ಹೊಂದಿರುವ ಚರಾಸ್ತಿ ವಿವರಗಳ ಬಗ್ಗೆ ಪ್ರತ್ಯೇಕ ಯಾದಿಯನ್ನು ವರದಿಗೆ ಲಗತ್ತಿಸಲಾಗಿದೆ. |
| 2 | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ನಿರ್ವಹಿಸಲಾಗಿದೆ. |

**ಲೆಕ್ಕ ಪರಿಶೋಧಕರ ಸಲಹೆ ಹಾಗೂ ಸೂಚನೆಗಳು:** ಸಂಘದಲ್ಲಿ ನಿರ್ವಹಿಸಲಾಗುತ್ತಿರುವ ಸ್ಥಿರ ಆಸ್ತಿ ನೋಂದಣಿ (Fixed Asset Register)ಯನ್ನು ಪರಿಶೀಲಿಸಿದಾಗ, ನೋಂದಣಿಯನ್ನು ಇನ್ನಷ್ಟು ಸಮಗ್ರ, ಪಾರದರ್ಶಕ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವ ಅಗತ್ಯವಿದೆ ಎಂದು ಕಂಡುಬಂದಿದೆ. ಸಂಘದ ಪ್ರತಿಯೊಂದು ಸ್ಥಿರ ಆಸ್ತಿಗೂ ಪ್ರತ್ಯೇಕವಾಗಿ ವಿಶಿಷ್ಟ ಗುರುತು ಸಂಖ್ಯೆ (Asset Identification Number/Asset Code) ನೀಡಬೇಕು ಹಾಗೂ ಆ ಸಂಖ್ಯೆಯನ್ನು ಆಸ್ತಿಯ ಮೇಲೆಯೂ ಶಾಶ್ವತವಾಗಿ ಅಳವಡಿಸಬೇಕು. ಇದರಿಂದ ಆಸ್ತಿಯ ಗುರುತಿಸುವಿಕೆ, ಮೇಲ್ವಿಚಾರಣೆ ಹಾಗೂ ಪರಿಶೀಲನೆ ಸುಲಭವಾಗುವುದಲ್ಲದೆ, ಆಸ್ತಿಯ ದುರುಪಯೋಗ, ಕಳವು ಅಥವಾ ಅನಧಿಕೃತ ಸ್ಥಳಾಂತರವನ್ನು ತಡೆಯಲು ಸಹಕಾರಿಯಾಗುತ್ತದೆ. ಸ್ಥಿರ ಆಸ್ತಿ ನೋಂದಣಿಯಲ್ಲಿ ಕೇವಲ ಆಸ್ತಿಯ ಹೆಸರು ಮತ್ತು ಮೌಲ್ಯವನ್ನು ಮಾತ್ರ ದಾಖಲಿಸುವುದರಿಂದ ಸಾಲದು. ಪ್ರತಿ ಆಸ್ತಿಯ ನಿಖರವಾದ ಸ್ಥಳ (Location), ಯಾವ ಶಾಖೆ/ಕಚೇರಿಯಲ್ಲಿ ಇದೆ, ಯಾವ ವಿಭಾಗದ ಬಳಕೆಯಲ್ಲಿದೆ, ಯಾವ ಅಧಿಕಾರಿಯ ವಶದಲ್ಲಿದೆ, ಖರೀದಿ ದಿನಾಂಕ, ಖರೀದಿ ಬಿಲ್ ಸಂಖ್ಯೆ, ಪೂರೈಕೆದಾರರ ವಿವರ, ಮೂಲ ವೆಚ್ಚ, ಮೌಲ್ಯಹ್ರಾಸ (Depreciation), ಪ್ರಸ್ತುತ ಪುಸ್ತಕ ಮೌಲ್ಯ (Written Down Value), ಆಸ್ತಿಯ ಸ್ಥಿತಿ (ಉತ್ತಮ/ದುರಸ್ತಿ ಅಗತ್ಯ/ಬಳಕೆಯಲ್ಲಿಲ್ಲ) ಮುಂತಾದ ಎಲ್ಲಾ ವಿವರಗಳನ್ನು ನೋಂದಣಿಯಲ್ಲಿ ದಾಖಲಿಸಿ ಕಾಲಕಾಲಕ್ಕೆ ನವೀಕರಿಸಬೇಕು.

ಇದರ ಜೊತೆಗೆ, ಸಂಘವು ಪ್ರತಿ ಹಣಕಾಸು ವರ್ಷದ ಅಂತ್ಯದಲ್ಲಿ ಕಡ್ಡಾಯವಾಗಿ ಎಲ್ಲಾ ಸ್ಥಿರ ಆಸ್ತಿಗಳ ಭೌತಿಕ ಪರಿಶೀಲನೆ (Physical Verification) ನಡೆಸಬೇಕು. ಈ ಪರಿಶೀಲನೆಯನ್ನು ಆಡಳಿತ ಮಂಡಲಿಯಿಂದ ನೇಮಿಸಲಾದ ಅಧಿಕಾರಿಗಳು ಅಥವಾ ಸಮಿತಿಯ ಮೂಲಕ ನಡೆಸಿ, ಅದರ ವರದಿಯನ್ನು ಆಡಳಿತ ಮಂಡಲಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. ಭೌತಿಕ ಪರಿಶೀಲನೆಯ ಫಲಿತಾಂಶವನ್ನು ಸ್ಥಿರ ಆಸ್ತಿ ನೋಂದಣಿಯೊಂದಿಗೆ ಹೋಲಿಕೆ ಮಾಡಿ, ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅದರ ಕಾರಣವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಭೌತಿಕ ಪರಿಶೀಲನೆಯ ಸಂದರ್ಭದಲ್ಲಿ ಯಾವುದೇ ಆಸ್ತಿ ಕೊರತೆ (Shortage), ನಷ್ಟ ಕಳವು, ಹಾನಿ, ಬಳಕೆಗೆ ಯೋಗ್ಯವಲ್ಲದ ಆಸ್ತಿ ಅಥವಾ ಹೆಚ್ಚುವರಿ ಆಸ್ತಿ (Excess)ಕಂಡುಬಂದಲ್ಲಿ, ಅದರ ಕುರಿತು ಆಡಳಿತ ಮಂಡಲಿಯ ಅನುಮೋದನೆ ಪಡೆದು, ಸಂಬಂಧಪಟ್ಟ ಅಧಿಕಾರಿಗಳ ಹೊಣೆಗಾರಿಕೆಯನ್ನು ನಿಗದಿಪಡಿಸಿ, ಅಗತ್ಯವಿದ್ದಲ್ಲಿ ವಸೂಲಾತಿ ಕ್ರಮ ಕೈಗೊಂಡು, ಅಂತಹ ವ್ಯತ್ಯಾಸಗಳನ್ನು ಲೆಕ್ಕ ಪುಸ್ತಕಗಳಲ್ಲಿ (Books of Accounts) ಚಾಲ್ತಿಯಲ್ಲಿರುವ ಲೆಕ್ಕಪದ್ಧತಿ ಮತ್ತು ಅನ್ವಯಿಸುವ ಲೆಕ್ಕಪರಿಶೋಧನಾ ಮಾನದಂಡಗಳ ಪ್ರಕಾರ ಸರಿಯಾಗಿ ಹೊಂದಾಣಿಕೆ (Adjustment) ಮಾಡಬೇಕು. ಯಾವುದೇ ವ್ಯತ್ಯಾಸವನ್ನು ಲೆಕ್ಕ ಪುಸ್ತಕಗಳಲ್ಲಿ ದಾಖಲಿಸದೆ ಬಾಕಿ ಉಳಿಸುವುದು ಸರಿಯಾದ ಲೆಕ್ಕಪದ್ಧತಿಗೆ ವಿರುದ್ಧವಾಗಿರುತ್ತದೆ.

| | | |
|---|---|---|
| | ಆದ್ದರಿಂದ, ಸಂಘವು ಸ್ಥಿರ ಆಸ್ತಿ ನೋಂದಣಿಯನ್ನು ಸಂಪೂರ್ಣ ಮಾಹಿತಿಯೊಂದಿಗೆ ನವೀಕರಿಸಿ, ಪ್ರತಿಯೊಂದು ಆಸ್ತಿಗೆ ಸಂಖ್ಯೆಯನ್ನು ನಿಗದಿಪಡಿಸಿ, ಅದರ ನಿಖರ ಸ್ಥಳವನ್ನು ದಾಖಲಿಸಿ, ವಾರ್ಷಿಕ ಭೌತಿಕ ಪರಿಶೀಲನೆಯನ್ನು ಕಡ್ಡಾಯವಾಗಿ ನಡೆಸಿ, ಪರಿಶೀಲನೆಯಲ್ಲಿ ಕಂಡುಬರುವ ಎಲ್ಲಾ ವ್ಯತ್ಯಾಸಗಳನ್ನು ಸಮಯೋಚಿತವಾಗಿ ಲೆಕ್ಕ ಪುಸ್ತಕಗಳಲ್ಲಿ ಸರಿಹೊಂದಿಸುವ ಮೂಲಕ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವುದು ಅತ್ಯಂತ ಅವಶ್ಯಕವಾಗಿದೆ. | |
| 3 | ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು |
| 4 | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿರುತ್ತದೆ. |
| 5 | ಚರಾಸ್ತಿಗಳ ಮೇಲೆ ನಿಯಮಾನುಸಾರ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ ವಿವರ ನೀಡುವುದು. | ಸಂಘವು ಆದಾಯ ತೆರಿಗೆ ಕಾನೂನಿನ್ವಯ ಸವಕಳಿಯನ್ನು ತೆಗೆಯಲಾಗಿರುತ್ತದೆ. ಚರಾಸ್ತಿಯ ಮೇಲೆ ಸವಕಳಿಯನ್ನು ಅವಕಾಶ ಮಾಡಿ ಸವಕಳಿ ನಿಧಿಗೆ ಜಮಾ ಪಡಿಸಿರುತ್ತಾರೆ. |
| 6 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ಚರಾಸ್ತಿಗಳ ಕುರಿತು ವಿಮರ್ಶೆ ನೀಡಿ, ಚರಾಸ್ತಿ ಮಾರಾಟದಿಂದ ಆಗಿರುವ ಬಂಡವಾಳ ಲಾಭವನ್ನು ಆದಾಯಕ್ಕೆ ಪರಿಗಣಿಸದೇ, ಬಂಡವಾಳ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿರುವ ಬಗ್ಗೆ ವಿಮರ್ಶಿಸುವುದು. | ವರದಿ ಸಾಲಿನಲ್ಲಿ ಸಂಘವು ದಿನಾಂಕ: 24–03–2026 ರಂದು ಯು.ಪಿ.ಎಸ್. (UPS) ಬ್ಯಾಟರಿಯನ್ನು ವಿಲೇವಾರಿ ಮಾಡಿರುವುದು ಪರಿಶೀಲನೆಯ ವೇಳೆ ಕಂಡುಬಂದಿದೆ. ಆದರೆ, ವಿಲೇವಾರಿ ಮಾಡಲಾದ ಆಸ್ತಿಯ ಕುರಿತು ಸಮರ್ಪಕ ಲೆಕ್ಕಪತ್ರ ದಾಖಲೆಗಳು ಲಭ್ಯವಿರುವುದಿಲ್ಲ. ವಿಲೇವಾರಿ ದಿನಾಂಕದಂದು ಲೆಕ್ಕ ಪುಸ್ತಕಗಳ ಪ್ರಕಾರ ಆಸ್ತಿಯ ಮೂಲ ಮೌಲ್ಯ (Original Cost), ಪುಸ್ತಕ ಮೌಲ್ಯ (Written Down Value) ಹಾಗೂ ವಿಲೇವಾರಿ ದಿನಾಂಕದವರೆಗೆ ಸಂಗ್ರಹಿತ ಸವಕಳಿ ನಿಧಿ (Accumulated Depreciation) ಎಷ್ಟಿತ್ತು ಎಂಬುದಕ್ಕೆ ಸಂಬಂಧಿಸಿದ ದಾಖಲೆಗಳು ಮತ್ತು ಮಾಹಿತಿಯನ್ನು ಸಂಘವು ನಿರ್ವಹಿಸಿರುವುದು ಕಂಡುಬಂದಿಲ್ಲ.<br>ಇದಲ್ಲದೆ, ಸಂಘವು ಚರಾಸ್ತಿಗಳ ಪ್ರತ್ಯೇಕ ಆಸ್ತಿ–ವಾರು (Individual Asset-wise) ದಾಖಲಾತಿಯನ್ನು ನಿರ್ವಹಿಸಿರುವುದಿಲ್ಲ. ಪ್ರತಿಯೊಂದು ಚರಾಸ್ತಿಗೆ ಪ್ರತ್ಯೇಕ ಗುರುತು ಸಂಖ್ಯೆ (Asset Code), ಖರೀದಿ ದಿನಾಂಕ, ಮೂಲ ವೆಚ್ಚ, ಸವಕಳಿ, ಪುಸ್ತಕ ಮೌಲ್ಯ, ಸ್ಥಳ (Location), ಪ್ರಸ್ತುತ ಸ್ಥಿತಿ ಹಾಗೂ ವಿಲೇವಾರಿ ವಿವರಗಳನ್ನು ಒಳಗೊಂಡ ಪ್ರತ್ಯೇಕ ಆಸ್ತಿ ದಾಖಲೆಗಳನ್ನು ನಿರ್ವಹಿಸದ ಕಾರಣ, ಯಾವ ಆಸ್ತಿಯನ್ನು ಯಾವ ಮೌಲ್ಯದಲ್ಲಿ ವಿಲೇವಾರಿ ಮಾಡಲಾಗಿದೆ ಎಂಬುದನ್ನು ಪರಿಶೀಲಿಸುವುದು ಹಾಗೂ ದೃಢೀಕರಿಸುವುದು ಸಾಧ್ಯವಾಗುತ್ತಿಲ್ಲ.<br>ಈ ರೀತಿಯ ದಾಖಲೆಗಳ ಕೊರತೆಯಿಂದ ವಿಲೇವಾರಿಯಿಂದ ಉಂಟಾದ ಲಾಭ ಅಥವಾ ನಷ್ಟವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಲೆಕ್ಕಪತ್ರಗಳ ವಿಶ್ವಾಸಾರ್ಹತೆ ಕುಂಠಿತವಾಗುವುದರ ಜೊತೆಗೆ, ಸ್ಥಿರ/ಚರಾಸ್ತಿಗಳ ಮೇಲಿನ ಆಂತರಿಕ ನಿಯಂತ್ರಣ ವ್ಯವಸ್ಥೆಯೂ ದುರ್ಬಲವಾಗಿರುವುದು ಕಂಡುಬರುತ್ತದೆ. |

| | | |
|---|---|---|
| | | ಪ್ರಸಕ್ತ ಸಾಲಿನಲ್ಲಿ ಸಂಘವು ಮಾರಾಟ ಮಾಡಿದ ಚರಾಸ್ತಿ ಮೊತ್ತವಾದ ರೂ 41,355 ರೂ ಗಳನ್ನು ಸಂಘವು ನೇರವಾಗಿ ಲಾಭ ಹಾನಿ ಖಾತೆಗೆ ವರ್ಗಾಯಿಸಿರುತ್ತಾರೆ. ಇದನ್ನು ಆಕ್ಷೇಪಿಸಲಾಗಿದೆ. ಸಂಸ್ಥೆಯು ಬ್ಯಾಟರಿಯ ಮಾರಾಟದಿಂದ ಬಂದಿರುವ ಸಂಪೂರ್ಣ ಮೊತ್ತವನ್ನು ಸಂಬಂಧಿತ ಚರಾಸ್ತಿ ಖಾತೆಗೆ ಜಮಾ ಮಾಡದೆ, ನೇರವಾಗಿ ಲಾಭ–ನಷ್ಟಖಾತೆಗೆ ಜಮಾ ಮಾಡಿರುವುದು ಪರಿಶೀಲನೆಯಲ್ಲಿ ಕಂಡುಬಂದಿದೆ.<br>ಲೆಕ್ಕಪತ್ರಗಳ ಮಾನ್ಯ ಪದ್ಧತಿಯ ಪ್ರಕಾರ, ಮಾರಾಟದಿಂದ ಬಂದ ಮೊತ್ತವನ್ನು ಮೊದಲು ಸಂಬಂಧಿತ ಆಸ್ತಿ ಖಾತೆಗೆ ಜಮಾ ಮಾಡಿ, ಆಸ್ತಿಯ ಪುಸ್ತಕ ಮೌಲ್ಯ ಮತ್ತು ಮಾರಾಟ ಮೌಲ್ಯದ ನಡುವಿನ ವ್ಯತ್ಯಾಸದಿಂದ ಉಂಟಾಗುವ ಲಾಭ ಅಥವಾ ನಷ್ಟವನ್ನು ಮೀಸಲು ನಿಧಿ ಖಾತೆಗೆ ವರ್ಗಾಯಿಸಬೇಕಾಗುತ್ತದೆ. ಆದರೆ, ಸಂಸ್ಥೆಯು ಈ ಕ್ರಮವನ್ನು ಅನುಸರಿಸದೇ, ಮಾರಾಟದಿಂದ ಬಂದಿರುವ ಸಂಪೂರ್ಣ ಮೊತ್ತವನ್ನು ಲಾಭ–ನಷ್ಟ ಖಾತೆಯಲ್ಲಿ ದಾಖಲಿಸಿರುವುದನ್ನು ಆಕ್ಷೇಪಿಸಲಾಗಿದೆ. |
| | ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಶೆ. | ಪರಿಶೀಲನೆಯ ಸಂದರ್ಭದಲ್ಲಿ ಸಂಘದಲ್ಲಿ ಅನುಪಯುಕ್ತ ಚರಾಸ್ತಿಗಳ (Unserviceable/Obsolete Movable Assets) ಪಟ್ಟಿಯನ್ನು ಸಿದ್ಧಪಡಿಸಿರುವುದು ಕಂಡುಬಂದಿದೆ. ಆದರೆ, ಈ ಪಟ್ಟಿಯಲ್ಲಿರುವ ಚರಾಸ್ತಿಗಳನ್ನು ವಿಲೇವಾರಿ (Disposal) ಮಾಡುವ ಅಥವಾ ಸಾರ್ವಜನಿಕ ಹರಾಜು/ಟೆಂಡರ್ ಮೂಲಕ ಮಾರಾಟ ಮಾಡುವ ಸಂಬಂಧ ಇದುವರೆಗೆ ಯಾವುದೇ ಪರಿಣಾಮಕಾರಿ ಕ್ರಮವನ್ನು ಸಂಘವು ಕೈಗೊಂಡಿರುವುದು ಕಂಡುಬಂದಿಲ್ಲ. ಪರಿಣಾಮವಾಗಿ, ಬಳಕೆಗೆ ಯೋಗ್ಯವಲ್ಲದ ಚರಾಸ್ತಿಗಳು ಸಂಘದ ವಶದಲ್ಲೇ ಉಳಿದುಕೊಂಡಿದ್ದು, ಆಸ್ತಿಗಳ ನೈಜ ಸ್ಥಿತಿ ಮತ್ತು ಲೆಕ್ಕಪತ್ರಗಳಲ್ಲಿನ ಮಾಹಿತಿಯ ನಡುವೆ ವ್ಯತ್ಯಾಸ ಉಂಟಾಗುವ ಸಾಧ್ಯತೆ ಇದೆ. ಅಲ್ಲದೆ, ಇಂತಹ ಆಸ್ತಿಗಳ ನಿರ್ವಹಣೆ ಹಾಗೂ ಸಂರಕ್ಷಣೆಗೆ ಅನಗತ್ಯ ವೆಚ್ಚ ಉಂಟಾಗುವ ಸಾಧ್ಯತೆಯೂ ಇದೆ. ಇದರ ಬಗ್ಗೆ ಕ್ರಮವಹಿಸಲು ಸೂಚಿಸಿದೆ. |
| 7 | ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಶೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ? | ಸಂಘವು ವಾಹನ ಹೊಂದಿದ್ದು ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ್ದ ವಿವರ ಕೆಳಗಿನಂತಿದೆ. ಹಾಗೂ ಸಂಘವು ಲಾಗ್ ಪುಸ್ತಕವನ್ನು ನಿರ್ವಹಿಸಲಾಗಿರುತ್ತದೆ. |

| ವಿವರ | ಇನ್ನೋವಾ | ಇನ್ನೋವಾ | ಎರ್ಟಿಗಾ | ಎರ್ಟಿಗಾ |
|---|---|---|---|---|
| | KA14MB8737 | KA14MB2624 | KA14Z3851 | KA14Z3852 |
| ಚಲಿಸಿದ ದೂರ | 45,654.00 | 50,548.20 | 27,561.00 | 38,211.00 |
| ಇಂಧನ ಬಳಕೆ(ಲೀ.) | 4,459.40 | 4,788.16 | 2,023.06 | 2,960.87 |
| ಓಡಿದ ಸರಾಸರಿ ದೂರ | 10.00 | 11.00 | 14.00 | 13.00 |
| ರಿಪೇರಿ ವೆಚ್ಚ/ವಿಮೆ (ರೂ.) | 1,36,710.07 | 4,16,729.46 | 48,799.85 | 65,897.00 |
| ಇಂಧನ ವೆಚ್ಚ(ರೂ.) | 4,10,507.05 | 5,07,607.97 | 1,86,236.41 | 2,72,489.67 |

| ವಿವರ | ಐಶರ್ ಬಿ | ಹೊಂಡಾ ಡೆಸ್ಟಿನಿ | ಟಿವಿಎಸ್ ಜುಪಿಟರ್ |
|---|---|---|---|
| | KA14B3560 | KA14HC8633 | KA14HC9331 |
| ಚಲಿಸಿದ ದೂರ | 37,240.00 | 5,373.00 | 1,819.50 |
| ಇಂಧನ ಬಳಕೆ(ಲೀ.) | 7,494.97 | 121.45 | 42.92 |
| ಓಡಿದ ಸರಾಸರಿ ದೂರ | 5.00 | 44.00 | 42.00 |
| ರಿಪೇರಿ ವೆಚ್ಚ/ವಿಮೆ (ರೂ.) | 1,49,815.00 | 989.00 | 500.00 |
| ಇಂಧನ ವೆಚ್ಚ(ರೂ.) | 6,89,510.40 | 13,150.00 | 3,415.00 |

| | | |
|---|---|---|
| 8 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ವಾಹನದ ಕುರಿತು ವಿಮರ್ಶೆ ನೀಡಿ, ವಾಹನ ಮಾರಾಟದಿಂದ ಗಳಿಸಿದ ಬಂಡವಾಳ ಲಾಭವನ್ನು ಆದಾಯಕ್ಕೆ ತೆದೆಗುಕೊಳ್ಳದೆ ಕಡ್ಡಾಯವಾಗಿ ಬಂಡವಾಳ ಮೀಸಲು ನಿಧಿ ಖಾತೆಗೆ ಜಮೆ ಕೊಡಬೇಕು. ಅದರಂತೆ ಒಂದು ವೇಳೆ ವಾಹನ ಮಾರಾಟದಿಂದ ನಷ್ಟ ಸಂಭವಿಸಿದಲ್ಲಿ ನಷ್ಟದ ಮೊತ್ತದಿಂದ ಸಂಬಂಧಿಸಿದ ವಾಹನಕ್ಕೆ ಕಾಯ್ದಿರಿಸಿದ ಸವಕಳಿ ಮೊತ್ತವನ್ನು ಕಡಿತಗೊಳಿಸುವುದು. ನಂತರ ಬಾಕಿ ಉಳಿದ ಹಾನಿಯನ್ನು ಬಂಡವಾಳ ಕಾಯ್ದಿಟ್ಟ ನಿಧಿಯಿಂದ ಕಳೆಯಬೇಕು. | ಸಂಘವು ವರದಿಸಾಲಿನಲ್ಲಿ ಯಾವುದೆ ವಾಹನವನ್ನು ವಿಲೇವರಿ ಮಾಡಿರುವುದಿಲ್ಲ. |
| | ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮೇಲೆ ಸವಕಳಿಯ ಸಂಕ್ಷಿಪ್ತ ವಿವರ | ಸವಕಳಿ ವಿವರವನ್ನು ಅನುಬಂಧ-4 ರಲ್ಲಿ ವಿವರವಾಗಿ ನೀಡಲಾಗಿದೆ. |

**29 ಅಖೈರು ದಾಸ್ತಾನು**

| | |
|---|---|
| ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲ್ಪಟ್ಟಿದೆಯೇ? ಸದರಿ ದಾಸ್ತಾನು ಬೆಲೆಗೆ ಅಥವಾ ಮಾರಾಟ ಬೆಲೆ ಇವುಗಳಲ್ಲಿ ಯಾವುದು ಕಡಿಮೆ ಅದರಂತೆ ದಾಸ್ತಾನು ಮೌಲ್ಯ ನಿರ್ಧರಿಸಿದ್ದಾರೆಯೇ? | ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲಾಗಿದೆ. ತುತ್ತ, ಸುಣ್ಣ, ರಾಳ, ಪ್ಯಾಕಿಂಗ್ ಮೆಟೀರಯಲ್ಸ್, ಇನ್ನಿತರೆ ವಸ್ತುಗಳಿಗೆ ಸಂಬಂಧಿಸಿದಂತೆ ಸಂಘವು ಅಂತಿಮ ದಾಸ್ತಾನುಗಳನ್ನು, ದಾಸ್ತಾನುಗಳನ್ನು ಖರೀದಿಸಿದ ವೆಚ್ಚಕ್ಕೆ ಮೌಲ್ಯಮಾಪನೆ ಮಾಡಲಾಗಿರುತ್ತದೆ. ಇದು ಮೇಲ್ನೋಟಕ್ಕೆ ಮಾರಾಟ ಬೆಲೆಗಿಂತ ಕಡಿಮೆಯಾಗಿರುತ್ತದೆ. ಆದರೆ ಅಡಿಕೆಯ ಅಂತಿಮ ದಾಸ್ತಾನುಗಳ ಮೌಲ್ಯವನ್ನು ನಿರ್ಧರಿಸುವಾಗ ಈ ಪದ್ದತಿಯನ್ನು ಸಂಘವು ಅನುಸರಿಸಿರುವುದಿಲ್ಲ. ಅಡಿಕೆ ಅಂತಿಮ ದಾಸ್ತಾನು ಮೌಲ್ಯವನ್ನು ನಿರ್ಧರಿಸುವಾಗ ಸಂಘವು ಖರೀದಿ ಬೆಲೆಯ ಸರಾಸರಿ ಮೌಲ್ಯದ (Weighted Average) ಪದ್ದತಿಯಲ್ಲಿ ನಿರ್ಧರಿಸಲಾಗಿದೆ. |

ಲೆಕ್ಕ ಪರಿಶೋಧಕರ ವಿಮರ್ಷೆ: ಸಂಘದ ಮುಕ್ತಾಯ ದಾಸ್ತಾನು (Closing Stock) ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾದ ಹಾಗೂ ಲಿಖಿತ ಲೆಕ್ಕಪತ್ರ ನೀತಿಯನ್ನು (Accounting Policy) ರೂಪಿಸಿ, ಅದನ್ನು ಆಡಳಿತ ಮಂಡಲಿಯಿಂದ ಅನುಮೋದಿಸಿ ನಿರಂತರವಾಗಿ (Consistently) ಅನುಸರಿಸುವುದು ಅತ್ಯಗತ್ಯವಾಗಿದೆ. ದಾಸ್ತಾನು ಮೌಲ್ಯಮಾಪನವು ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳು ಹಾಗೂ ಸಹಕಾರ ಸಂಘಗಳ ನಿಯಮಗಳಿಗೆ ಅನುಗುಣವಾಗಿ ನಡೆಯಬೇಕು. ದಾಸ್ತಾನುಗಳ ಮೌಲ್ಯಮಾಪನಕ್ಕೆ ಅಳವಡಿಸಿಕೊಳ್ಳುವ ವಿಧಾನ (ಉದಾಹರಣೆಗೆ Cost or Net Realisable Value whichever is lower, ಅಥವಾ ಸಂಘವು ಅನುಸರಿಸುವ ವಿಧಾನ ಎಲ್ಲಾ ದಾಸ್ತಾನು ವಸ್ತುಗಳಿಗೆ ಏಕರೂಪವಾಗಿ (Uniformly) ಅನ್ವಯಿಸಬೇಕು. ಯಾವುದೇ ನಿರ್ದಿಷ್ಟ ವಸ್ತುವಿಗೆ ಒಂದು ವಿಧಾನ ಹಾಗೂ ಇನ್ನೊಂದು ವಸ್ತುವಿಗೆ ಬೇರೆ ವಿಧಾನವನ್ನು ಅನುಸರಿಸುವುದು ಹಣಕಾಸು ವಿವರಗಳ ವಿಶ್ವಾಸಾರ್ಹತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ.

| | | |
|---|---|---|
| | ಆದ್ದರಿಂದ, ಸಂಘವು ಒಂದು ಬಾರಿ ಅಳವಡಿಸಿಕೊಂಡ ಲೆಕ್ಕಪತ್ರ ನೀತಿಯನ್ನು ವರ್ಷದಿಂದ ವರ್ಷಕ್ಕೆ ನಿರಂತರವಾಗಿ (Consistency Principle) ಅನುಸರಿಸಬೇಕು. ಯಾವುದೇ ಬದಲಾವಣೆ ಅನಿವಾರ್ಯವಾದಲ್ಲಿ ಅದರ ಕಾರಣ, ಪರಿಣಾಮ ಹಾಗೂ ಹಣಕಾಸು ವರದಿಯ ಮೇಲಿನ ಪರಿಣಾಮವನ್ನು ಟಿಪ್ಪಣಿಗಳಲ್ಲಿ (Notes to Accounts) ಸ್ಪಷ್ಟವಾಗಿ ಬಹಿರಂಗಪಡಿಸಬೇಕು. ಇದರಿಂದ ಸಂಘದ ಹಣಕಾಸು ವಿವರಗಳು ನೈಜ ಹಾಗೂ ನ್ಯಾಯಸಮ್ಮತ (True and Fair View) ಚಿತ್ರಣವನ್ನು ನೀಡಲು ಸಹಕಾರಿಯಾಗುತ್ತದೆ. ಆದ್ದರಿಂದ, ಸಂಘವು ಒಂದು ಬಾರಿ ಅಳವಡಿಸಿಕೊಂಡ ಲೆಕ್ಕಪತ್ರ ನೀತಿಯನ್ನು ವರ್ಷದಿಂದ ವರ್ಷಕ್ಕೆ ನಿರಂತರವಾಗಿ (Consistency Principle) ಅನುಸರಿಸಬೇಕು. ಯಾವುದೇ ಬದಲಾವಣೆ ಅನಿವಾರ್ಯವಾದಲ್ಲಿ ಅದರ ಕಾರಣ, ಪರಿಣಾಮ ಹಾಗೂ ಹಣಕಾಸು ವರದಿಯ ಮೇಲಿನ ಪರಿಣಾಮವನ್ನು ಟಿಪ್ಪಣಿಗಳಲ್ಲಿ (Notes to Accounts) ಸ್ಪಷ್ಟವಾಗಿ ಬಹಿರಂಗಪಡಿಸಬೇಕು. ಇದರಿಂದ ಸಂಘದ ಹಣಕಾಸು ವಿವರಗಳು ನೈಜ ಹಾಗೂ ನ್ಯಾಯಸಮ್ಮತ (True and Fair View) ಚಿತ್ರಣವನ್ನು ನೀಡಲು ಸಹಕಾರಿಯಾಗುತ್ತದೆ. | |
| | ದಾಸ್ತಾನು ಆಗಿಂದಾಗ್ಗೆ ಇಲಾಖಾ ಅಧಿಕಾರಿಗಳು / ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿದೆಯೆ? | ಸಂಘದ ದಾಸ್ತಾನುಗಳನ್ನು ಆಡಳಿತ ಮಂಡಲಿಯ ಸದಸ್ಯರು ವರ್ಷಕ್ಕೆ 2 ಬಾರಿ ಪರಿಶೀಲಿಸಿರುತ್ತಾರೆ. |
| | ದಾಸ್ತಾನು ರಿಜಿಸ್ಟರ್ ನಿಗದಿ ಪಡಿಸಿದ ನಮೂನೆಯಲ್ಲಿ ನಿರ್ವಹಿಸಲ್ಪಟ್ಟಿದೆಯೇ? | ಸಂಘವು ದಾಸ್ತಾನು ರಿಜಿಸ್ಟರ್‌ನ್ನು ತಂತ್ರಾಂಶದಲ್ಲಿ ಅಳವಡಿಸಿರುತ್ತಾರೆ. ಇದು ನಿಗದಿತ ನಮೂನೆಯಲ್ಲಿ ಇರುವುದನ್ನು ಪರಿಶೀಲಿಸಲಾಗಿರುತ್ತದೆ. ಆದರೆ ಅಡಿಕೆ ಖರೀದಿ ಶಾಖೆಗೆ ಸಂಬಂಧಿಸಿದಂತೆ ದಾಸ್ತಾನು ರಿಜಿಸ್ಟರ್ ನಿಗದಿತ ನಮೂನೆಯಲ್ಲಿ ನಿರ್ವಹಿಸಲಾಗಿಲ್ಲ ಮತ್ತು ಈ ದಾಸ್ತಾನುಗಳಿಗೆ ಸಂಬಂಧಿಸಿದಂತೆ ತಂತ್ರಾಶದಲ್ಲಿ ವರದಿ ಸಿಗುತ್ತಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. |
| | ಸಾಲಾಂತ್ಯಕ್ಕೆ ಜಡ್ತಿಯಾದ ದಾಸ್ತಾನು ವಿವರವುಳ್ಳ ಪಟ್ಟಿ / ಸಂಕ್ಷಿಪ್ತ ಪಟ್ಟಿ ವರದಿಗೆ ಲಗತ್ತಿಸಿದೆಯೇ? | ಯಾವುದು ಇರುವುದಿಲ್ಲ. |
| 30 | **ಇತರೆ ಬರತಕ್ಕವುಗಳು** | |
| | ದಿನಾಂಕ : 2025–26ಇತರೆ ಬರತಕ್ಕ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ. (ಇತರೆ ಬರತಕ್ಕವುಗಳ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಶಿಸುವುದು.) | |

| ಕ್ರ.ಸ | ವಿವರ | ಮೊತ್ತ |
|---|---|---|
| 1 | ಇತರೆ ಮುಂಗಡಗಳು | 53,47,302 |
| 2 | ಬಾಡಿಗೆ ಮುಂಗಡ ಪಾವತಿಸಿದ್ದು | 53,07,810 |
| 3 | ಸಿಬ್ಬಂದಿ ಹಬ್ಬದ ಮುಂಗಡ | 7,50,000 |
| 4 | ಇತರೆ ಭದ್ರತಾ ಠೇವಣಿ | 1,00,739 |
| 5 | ವ್ಯಾಪಾರ ಭದ್ರತಾ ಠೇವಣಿ | 5,68,14,836 |
| 6 | ವರ್ತಕರ ಖಾತೆ ಬಾಕಿ | 24,98,99,431 |
| 7 | ಟ್ರೇಡ್ ಡೆಟಾರ್ಸ್ | 84,37,88,045 |
| 8 | ಬರಬೇಕಾದ ಬಾಕಿಗಳು | 65,59,413 |
| 9 | ಆದಾಯ ಮೂಲ ತೆರಿಗೆ | 11,21,49,902 |
| 10 | ಆದಾಯ ತೆರಿಗೆ ಮುಂಗಡ ಪಾವತಿ 2017–18 | 50,11,400 |
| 11 | ಸಿಜಿಎಸ್‌ಟಿ ಇನ್‌ಪುಟ್ | 4,23,367 |
| 12 | ಎಸ್‌ಜಿಎಸ್‌ಟಿ ಇನ್‌ಪುಟ್ | 4,23,367 |
| | **ಒಟ್ಟು ಮೊತ್ತ** | **1,28,65,75,612** |

| ವಿವರಣೆ |
|---|
| 1)ಇತರೆ ಮುಂಗಡಗಳು : ಸಹಕಾರಿಯು ನಗದು, ಕಟ್ಟಡ, ದಾಸ್ತಾನು ಮತ್ತಿತರ ವಸ್ತುಗಳಿಗೆ ವಿಮಾ ಭದ್ರತೆಯನ್ನು ಕಲ್ಪಿಸಿದ್ದು ವಿಮೆಯ ವಾಯ್ದೆ ದಿನಾಂಕ 31–03–2026 ಕ್ಕೆ ಮುಗಿದಿದ್ದು 2026–27 ಕ್ಕೆ ಸಂಬಂಧಿಸಿದಂತೆ ವಿಮಾ ಭದ್ರತೆಯನ್ನು ಹೊಂದಲು ವಿಮಾ ಕಂತನ್ನು ದಿನಾಂಕ 31–03–2026 ಕ್ಕೆ ಪಾವತಿಸಲಾಗಿರುತ್ತದೆ. ಇದನ್ನು ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿರುತ್ತದೆ. 2026–27 ನೇ ಸಾಲಿನಲ್ಲಿ ಲಾಭ ಹಾನಿ ಖಾತೆಗೆ ವರ್ಗಾಯಿಸಿರುವುದನ್ನು ಗಮನಿಸಲಾಗಿರುತ್ತದೆ. ಇದರ ಮೊತ್ತ 50,29,916 ಮತ್ತು ರೂ 54,000 ದೇಶರಾಜ, ನ್ಯಾಯವಾದಿಗಳು ಇವರು ಸಂಘಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಸಂಘದ ಪರವಾಗಿ ವಕಾಲತ್ ವಹಿಸಿದ್ದು ಅವರಿಗೆ ಮುಂಗಡವಾಗಿ ಪಾವತಿಸಲಾಗಿರುತ್ತದೆ. ಮತ್ತು ಸುಧಾಕರ ಟಿ.ಎಸ್ ಇವರಿಗೆ ಸಂಘದ ಶೃಗೇರಿ ಶಾಖೆಗೆ ವಿದ್ಯುತ್ ಉಪಕರಣಗಳನ್ನು ಅಳವಡಿಸು ಮುಂಗಡ ಪಾವತಿಸಲಾಗಿರುತ್ತದೆ. ಇನ್ನುಳಿದಂತೆ ರೂ 1,98,386 ಸಿಬ್ಬಂದಿ ವಿಮೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮಧ್ಯಂತರ ತೀರ್ಪಿನನ್ವಯ ಮುಂಗಡ ಪಾವತಿಸಲಾಗಿರುತ್ತದೆ. ಈ ಎಲ್ಲ ಖಾತೆಗಳಿಂದ ಒಟ್ಟು ರೂ.53,47,302.00 ಆಗಿದ್ದು ಇದನ್ನು ಇತರೆ ಬರತಕ್ಕುವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. |
| 2)ಬಾಡಿಗೆ ಮುಂಗಡ ಪಾವತಿಸಿದ್ದು : ಸಂಘವು ಹೆಚ್ಚುವರಿ ಗೋದಾಮುಗಳನ್ನು ಬಾಡಿಗೆಗೆ ಪಡೆಯುವ ಸಂದರ್ಭದಲ್ಲಿ ಗೋದಾಮು ಮಾಲಿಕರಿಗೆ ಭದ್ರತಾ ಠೇವಣಿಯನ್ನು ಪಾವತಿಸಿದ್ದು ಇದನ್ನು ಬಾಡಿಗೆ ಮುಂಗಡ ಪಾವತಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲೆಕ್ಕ ನಮೂದು ಮಾಡಲಾಗಿರುತ್ತದೆ. ಇದರ ಮೊತ್ತ ರೂ.53,07,810.00 ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸಂಘದಲ್ಲಿ ಕುಳುವಾರು ಲಭ್ಯವಿರುತ್ತದೆ. |
| 3)ಸಿಬ್ಬಂದಿ ಹಬ್ಬದ ಮುಂಗಡ : ಸಂಘವು ಸಿಬ್ಬಂದಿಗಳಿಗೆ ಹಬ್ಬದ ಮುಂಗಡವಾಗಿ ಸಿಬ್ಬಂದಿ ಸೇವಾ ನಿಯಮ 28(5) ರ ಪ್ರಕಾರ ಸಿಬ್ಬಂದಿಗಳಿಗೆ ಹಬ್ಬದ ಮುಂಗಡವಾಗಿ ರೂ.7,50,000.00 ಪಾವತಿಸಿದ್ದು, ಇದನ್ನು ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. ಇದಕ್ಕೆ ಸಂಘದಲ್ಲಿ ಪ್ರತ್ಯೇಕ ಕುಳುವಾರು ಯಾದಿ ಲಭ್ಯವಿರುತ್ತದೆ. |
| 4)ಇತರೆ ಭದ್ರತಾ ಠೇವಣಿ : ಸಂಘದ ಶಾಖೆಗಳಾದ ಶೃಂಗೇರಿ ಮತ್ತು ಸಾಗರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮುಂಗಡ ಠೇವಣಿಯಾಗಿ ರೂ.1,00,739.00 ಕೆ.ಇ.ಬಿ ಇವರಿಗೆ ಪಾವತಿಸಲಾಗಿರುತ್ತದೆ. ಇದನ್ನು ಇತರೆ ಬರತಕ್ಕುವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಂಘದಲ್ಲಿ ಯಾವುದೆ ದೃಢೀಕರಣ ಪ್ರತಿ ಸಂಘದಲ್ಲಿ ಲಭ್ಯವಿರುವುದಿಲ್ಲ. ಮುಂದಿನ ದಿನಗಳಲ್ಲಿ ದೃಢೀಕರಣ ಪ್ರತಿ ಪಡೆದು ವ್ಯವಹರಿಸಲು ಸೂಚಿಸಿದೆ. |
| 5)ವ್ಯಾಪಾರ ಭದ್ರತಾ ಠೇವಣಿ : ಸಂಘವು ವ್ಯಾಪಾರ ಭದ್ರತಾ ಠೇವಣಿಯಾಗಿ ತೋಟ ಉತ್ಪನ್ನ ಸಹಕಾರ ಸಂಘ ಚನ್ನಗಿರಿ ಇವರಲ್ಲಿ 2,68,12,336 ಹೊಂದಿದ್ದು ಇದಕ್ಕೆ ಸಂಬಂಧಿಸಿದಂತೆ ಸಂಘವು ದೃಢೀಕರಣ ಪ್ರತಿಯನ್ನು ಹೊಂದಿರುತ್ತದೆ. ಮತ್ತು ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ಸಂಘ ಹೊಸನಗರ ಇವರಲ್ಲಿ ರೂ 3,00,00,000 ಹೊಂದಿದ್ದು ಇದಕ್ಕೆ ಸಂಬಂಧಿಸಿದಂತೆ ಯಾವುದೇ ದೃಢೀಕರಣ ಪ್ರತಿ ಸಂಘದಲ್ಲಿ ಲಭ್ಯವಿರುವುದಿಲ್ಲ. ಮುಂದಿನ ದಿನಗಳಲ್ಲಿ ದೃಢೀಕರಣ ಪ್ರತಿ ಪಡೆದು ವ್ಯವಹರಿಸಲು ಸೂಚಿಸಲಾಗಿದೆ. ವ್ಯಾಪಾರ ಭದ್ರತೆಗಾಗಿ ಒಟ್ಟು ರೂ.5,68,14,836.00 ಆಗಿದ್ದು ಇದನ್ನು ಇತರೆ ಬರತಕ್ಕುವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. |
| 6)ವರ್ತಕರ ಖಾತೆ ಬಾಕಿ : ಸಂಘವು ದಲ್ಲಾಳಿ ವ್ಯವಹಾರವನ್ನು ನಡೆಸುತ್ತಿದ್ದು, ವರ್ತಕರಿಂದ ದಿನಾಂಕ 31–03–2026 ಕ್ಕೆ ಇದ್ದಂತೆ ಸಂಘಕ್ಕೆ ಒಟ್ಟು ರೂ.24,98,99,431.01 ಬರತಕ್ಕದ್ದಿದ್ದು ಇದನ್ನು ಇತರೆ ಬರತಕ್ಕುವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಂಘವು ಕೆಲವು ವರ್ತಕರಿಂದ ದೃಢೀಕರಣ ಪ್ರತಿಯನ್ನು ಪಡೆದಿದೆ. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ವರ್ತಕರಿಂದ ದೃಢೀಕರಣ ಪ್ರತಿ ಪಡೆದು ವ್ಯವಹರಿಸಲು ಸೂಚಿಸಲಾಗಿದೆ. ಮತ್ತು ಇದಕ್ಕೆ ಸಂಬಂಧಿಸಿದಂತೆ ಸವಿವರವಾದ ಲೆಕ್ಕ ಪರಿಶೋಧನಾ ಟಿಪ್ಪಣಿಯನ್ನು ನೀಡಲಾಗಿದೆ. |
| 7)ಟ್ರೇಡ್ ಡೆಟಾರ್ಸ್ : ಸಂಘವು ತನ್ನ ಕಟ್ಟಡವನ್ನು ಬಾಡಿಗೆಗೆ ನೀಡಿದ್ದು ಬಾಡಿಗೆ ದಾರರಿಂದ ದಿನಾಂಕ 31–03–2026 ಕ್ಕೆ ಇದ್ದಂತೆ ರೂ 6,50,895 ಬರತಕ್ಕದ್ದಿದ್ದು ಇದನ್ನು ಟ್ರೇಡ್ ಡೆಟರ್ಸ ಖಾತೆಯಲ್ಲಿ ಲೆಕ್ಕ ನಮೂದು ಮಾಡಲಾಗಿದೆ. ಇನ್ನುಳಿದಂತೆ ಸಂಘವು ಅಡಿಕೆ ವ್ಯಾಪಾರದ ವ್ಯವಹಾರದಲ್ಲಿ ತೊಡಗಿದ್ದು, ಗ್ರಾಹಕರ ಉದ್ರಿ ಬಾಕಿ ದಿನಾಂಕ 31–03–2026 ಕ್ಕೆ ಇದ್ದಂತೆ ಒಟ್ಟು ರೂ. 84,31,37,150 ಇದ್ದು ಇದನ್ನು ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಂಘವು ದೃಢೀಕರಣ ಪ್ರತಿಯನ್ನು ಪಡೆದಿರುವುದಿಲ್ಲ. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ಗ್ರಾಹಕರಿಂದ ದೃಢೀಕರಣ ಪ್ರತಿ ಪಡೆದು ವ್ಯವಹರಿಸಲು ಸೂಚಿಸಲಾಗಿದೆ. ಮತ್ತು ಇದಕ್ಕೆ ಸಂಬಂಧಿಸಿದಂತೆ ಸವಿವರವಾದ ಲೆಕ್ಕ ಪರಿಶೋಧನಾ ಟಿಪ್ಪಣಿಯನ್ನು ನೀಡಲಾಗಿದೆ. |

8)ಬರಬೇಕಾದ ಬಾಕಿಗಳು : ಸಂಘವು ಮೀಸಲು ನಿಧಿಯನ್ನು ಸ್ಟೇಟ್ ಬ್ಯಾಂಕ ಆಫ್ ಇಂಡಿಯ ಇವರಲ್ಲಿ ಹೂಡಿಕೆ ಮಾಡಿದ್ದು ದಿನಾಂಕ 31–03–2026 ಕ್ಕೆ ಇದ್ದಂತೆ ಹೂಡಿಕೆ ಮೇಲೆ ಬರತಕ್ಕ ಬಡ್ಡಿ ರೂ 46,86,732 ಇರುತ್ತದೆ. ಸಂಘವು ಬ್ಯಾಂಕಿನಿಂದ ಪಡೆದ ದೃಢೀಕರಣದ ಪ್ರತಿಯ ಪ್ರಕಾರ ಲೆಕ್ಕ ನಮೂದು ಮಾಡಲಾಗಿದೆ. ಹಾಗೂ  ಸಂಘವು ಮೀಸಲು ನಿಧಿಯನ್ನು ಎಕ್ಸಿಸ್ ಇವರಲ್ಲಿ ಹೂಡಿಕೆ ಮಾಡಿದ್ದು ದಿನಾಂಕ 31–03–2026 ಕ್ಕೆ ಇದ್ದಂತೆ ಹೂಡಿಕೆ ಮೇಲೆ ಬರತಕ್ಕ ಬಡ್ಡಿ ರೂ 74,000 ಇರುತ್ತದೆ. ಬ್ಯಾಂಕಿನಿಂದ ಪಡೆದ ದೃಢೀಕರಣದ ಪ್ರತಿಯ ಪ್ರಕಾರ ಲೆಕ್ಕ ನಮೂದು ಮಾಡಲಾಗಿದೆ.  ಮತ್ತು  ಸಂಘದ ಸಿಬ್ಬಂದಿಗಳ ಕುಟುಂಬ ಸದಸ್ಯರ ಮೇಲೆ ವಿಮಾ ಭದ್ರತೆಯ ಸಂಬಂಧಿಸಿದಂತೆ ಸಂಘವು ವಿಮಾ ಮೊತ್ತವನ್ನು ಸಿಬ್ಬಂದಿಗಳ ಪರವಾಗಿ ಪಾವತಿಸಿರುತ್ತದೆ. ಇದನ್ನು ಸಿಬ್ಬಂದಿಗಳಿಂದ ಸಂಘಕ್ಕೆ ಪಡೆಯಲು ಬಾಕಿ ಇದ್ದು ಇದನ್ನು ಸಿಬ್ಬಂದಿಗಳ ವೇತನದಲ್ಲಿ ಕಡಿತ ಗೊಳಿಸುತ್ತಿರುವುದನ್ನು ಗಮನಿಸಲಾಗಿದೆ. ಇದರ ಮೊತ್ತ ರೂ 6,84,401 ಆಗಿರುತ್ತದೆ. ಮತ್ತು ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಂಘದಿಂದ ರೂ 5,69,118 ಬಡ್ಡಿ ಬರತಕ್ಕ ಬಾಬ್ತು ಎಂದು 2018–19 ರಲ್ಲಿ ಲೆಕ್ಕ ನಮೂದು ಮಾಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೆ ಬಡ್ಡಿ ವಸೂಲಾದ ಬಗ್ಗೆ ಸಂಘದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. ಮತ್ತು ಆರ್.ಟಿ.ಜಿ ಅರೆಕಾನಟ್ಸ ರೂ 2,38,038 ಬಡ್ಡಿ ಬರತಕ್ಕ ಬಾಬ್ತು ಎಂದು 2018–19 ರಲ್ಲಿ ಲೆಕ್ಕ ನಮೂದು ಮಾಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೆ ಬಡ್ಡಿ ವಸೂಲಾದ ಬಗ್ಗೆ ಸಂಘದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. ಮತ್ತು ಮಣಿಕಂಠ ಬೆಟಲನಟ್ಸ ರೂ 55,708 ಬಡ್ಡಿ ಬರತಕ್ಕ ಬಾಬ್ತು ಎಂದು 2018–19 ರಲ್ಲಿ ಲೆಕ್ಕ ನಮೂದು ಮಾಡಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೆ ಬಡ್ಡಿ ವಸೂಲಾದ ಬಗ್ಗೆ ಸಂಘದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.  ಇದನ್ನು ಹೊರತು ಪಡಿಸಿ ಸಂಘದ ವರ್ತಕರು ಮೂಲದಲ್ಲಿ ತೆರಿಗೆ ಕಟಾಯಿಸಿ ಸಂಘದ ಖಾತೆಗೆ ವರ್ಗಾಯಿಸದೇ ಇರುವ ಬಾಕಿ ಮೊತ್ತವನ್ನು ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲೆಕ್ಕ ನಮೂದು ಮಾಡಲಾಗಿರುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

9) ಆದಾಯ ಮೂಲ ತೆರಿಗೆ : ಸಂಘವು ಆದಾಯ ತೆರಿಗೆಗೆ ಸಂಬಂಧಿಸಿದಂತೆ ವ್ಯಾಜ್ಯ ಪ್ರಕರಣಗಳನ್ನು ಹೋಂದಿದ್ದು, ಸಂಘಕ್ಕೆ ಬರತಕ್ಕ ಮೂಲದಲ್ಲಿ ತೆರಿಗೆ ಕಡಿತದ ಮೊತ್ತ ಸಂಘದ ಬ್ಯಾಂಕ ಖಾತೆಗೆ ಜಮಾ ಆಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸೂಕ್ತ ಕ್ರಮ ವಹಿಸಿ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಳ್ಳಲು ಸೂಚಿಸಲಾಗಿದೆ. ದಿನಾಂಕ 31–03–2026 ಕ್ಕೆ ಇದ್ದಂತೆ ರೂ 11,21,49,902.48 ಇರುತ್ತದೆ. ಇದನ್ನು ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ.

10) ಆದಾಯ ತೆರಿಗೆ ಮುಂಗಡ ಪಾವತಿ 2017–18 : ಸಂಘವು ಆದಾಯ ತೆರಿಗೆಗೆ ಸಂಬಂಧಿಸಿದಂತೆ ವ್ಯಾಜ್ಯ ಪ್ರಕರಣಗಳನ್ನು ಹೋಂದಿದ್ದು, ಇದಕ್ಕೆ ಸಂಬಂಧಿಸಿದಂತೆ ಮುಂಗಡ ತೆರಿಗೆ ಠೇವಣಿಯಾಗಿ ಪಾವತಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸೂಕ್ತ ಕ್ರಮ ವಹಿಸಿ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಳ್ಳಲು ಸೂಚಿಸಲಾಗಿದೆ. ದಿನಾಂಕ 31–03–2026 ಕ್ಕೆ ಇದ್ದಂತೆ ರೂ 50,11,400.00 ಇರುತ್ತದೆ. ಇದನ್ನು ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ.

11)ಸಿಜಿಎಸ್‌ಟಿ ಇನ್‌ಪುಟ್ : ಸಂಘವು ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯನ್ನು ಹೊಂದಿದ್ದು ಮಾರ್ಚ ಮಾಹೆಯ ಅಂತ್ಯಕ್ಕೆ ಸಂಘವು ಜಿ.ಎಸ್.ಟಿ ಪುರುವಟೆದಾರ ಜೊತೆ ನಡೆಸಿದ ವ್ಯವಹಾರಗಳ ಮೇಲೆ ಜಿ.ಎಸ್.ಟಿ ಇನ್‌ಪುಟ್ ಸಂಘದ ಜಿ.ಎಸ್.ಟಿ ಖಾತೆಗೆ ವರ್ಗಾಯಿಸಲು ಬಾಕಿ ಇದ್ದು ಪುರವಟೆದಾರರು ಇದನ್ನು ಸರಿಯಾದ ಸಮಯದಲ್ಲಿ ಸಂಘಕ್ಕೆ ವರ್ಗಾಯಿಸಿರುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮವಹಿಸಿ ಸಮಯೋಚಿತವಾಗಿ ಸೂಕ್ತ ವರದಿಯನ್ನು ಸಲ್ಲಿಸುವಲ್ಲಿ ಕ್ರಮವಿಡಲು ಸೂಚಿಸಲಾಗಿದೆ. ಇದರ ಮೊತ್ತ ರೂ.4,23,366.76 ಆಗಿದ್ದು ಇದನ್ನು  ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ.

12)ಎಸ್‌ಜಿಎಸ್‌ಟಿ ಇನ್‌ಪುಟ್ : ಸಂಘವು ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯನ್ನು ಹೊಂದಿದ್ದು ಮಾರ್ಚ ಮಾಹೆಯ ಅಂತ್ಯಕ್ಕೆ ಸಂಘವು ಜಿ.ಎಸ್.ಟಿ ಪುರುವಟೆದಾರ ಜೊತೆ ನಡೆಸಿದ ವ್ಯವಹಾರಗಳ ಮೇಲೆ ಜಿ.ಎಸ್.ಟಿ ಇನ್‌ಪುಟ್ ಸಂಘದ ಜಿ.ಎಸ್.ಟಿ ಖಾತೆಗೆ ವರ್ಗಾಯಿಸಲು ಬಾಕಿ ಇದ್ದು ಪುರವಟೆದಾರರು ಇದನ್ನು ಸರಿಯಾದ ಸಮಯದಲ್ಲಿ ಸಂಘಕ್ಕೆ ವರ್ಗಾಯಿಸಿರುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮವಹಿಸಿ ಸಮಯೋಚಿತವಾಗಿ ಸೂಕ್ತ ವರದಿಯನ್ನು ಸಲ್ಲಿಸುವಲ್ಲಿ ಕ್ರಮವಿಡಲು ಸೂಚಿಸಲಾಗಿದೆ. ಇದರ ಮೊತ್ತ ರೂ.4,23,366.76 ಆಗಿದ್ದು ಇದನ್ನು  ಇತರೆ ಬರತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಲಾಗಿದೆ.

| | |
|---|---|
| 1) ಇತರೆ ಬರತಕ್ಕ ಬಾಬ್ತುಗಳ ಸಂಬಂಧಿಸಿದಂತೆ ಹಿಂದಿನ ಅಂತರ ಇದ್ದಲ್ಲಿ, ಅದನ್ನು ಸರಿ ಪಡಿಸಿಕೊಂಡು ಸಲ್ಲಿಸುವಂತೆ ಸಂಘದ ಮುಖ್ಯಕಾರ್ಯನಿರ್ವಾಹಣಾಧಿಕಾರಿಗೆ ತಿಳಿವಳಿಕೆ ಪತ್ರ ನೀಡಲಾಗಿದೆಯೇ? | ಇತರೆ ಬರತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಅಂತರ ಇಲ್ಲದ ಕಾರಣ ಅನ್ವಯಿಸುವುದಿಲ್ಲ. |

| | |
|---|---|
| 2) ಪ್ರಸಕ್ತ ವರ್ಷದಲ್ಲಿ ಬಂದಿರುವ ಅಂತರವನ್ನು ಸಂಘದ ಪ್ರಸಕ್ತ ಸಾಲಿನ ಲೆಕ್ಕಪುಸ್ತಕ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ ಸರಿಪಡಿಸಲಾಗಿದೆಯೇ? | ಪ್ರಸಕ್ತ ವರ್ಷದಲ್ಲಿ ಇತರೆ ಬರತಕ್ಕ ಬಾಬ್ತುಗಳಲ್ಲಿ ಅಂತರವಿರದ ಕಾರಣ ಅನ್ವಯಿಸುವುದಿಲ್ಲ. |
| 3) ಅನಾಮಧೇಯ ಬರತಕ್ಕವುಗಳು ಇವೆಯೇ? ಇದ್ದಲ್ಲಿ ಅವುಗಳನ್ನು ಆಡಿಟ್ ಆಕ್ಷೇಪಣೆಯಲ್ಲಿಟ್ಟು ವಸೂಲಿಗೆ ಸೂಚಿಸುವುದು. | ಅನಾಮಧೇಯ ಬರತಕ್ಕವುಗಳು ಇರುವುದಿಲ್ಲ. |
| 4) ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ಬರತಕ್ಕವುಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇವೆಯೇ? ಇದ್ದಲ್ಲಿ ವಿಮರ್ಶಿಸಿ ಆಡಿಟ್ ಆಕ್ಷೇಪಣೆಯಲ್ಲಿಡುವುದು. | ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ಬರತಕ್ಕವುಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇರುವುದಿಲ್ಲ. |

5) ಎರಡು ವರ್ಷಕ್ಕೂ ಮೇಲ್ಪಟ್ಟು ಇತ್ಯರ್ಥವಾಗದೇ ಮುಂದುವರೆದ ಬರತಕ್ಕವುಗಳ ವಿವರ.

| ಕ್ರ.ಸಂ | ವಿವರ | ಯಾವ ವರ್ಷದಿಂದ ಪರಿಗಣಿಸಲಾಗಿರುತ್ತದೆ | ಆಡಳಿತ ಮಂಡಲಿ ತೆಗೆದುಕೊಂಡ ಕ್ರಮ |
|---|---|---|---|
| 1 | ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಸಂಘ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 5,69,118 | 2018–19 | ಕ್ರಮ ಕೈಗೊಂಡಿರುವುದಿಲ್ಲ. |
| 2 | ಆರ್. ಟಿ.ಜಿ ಅರೆಕಾನಟ್ ಟ್ರೇಡರ್ಸ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 2,38,038 | 2017–18 | ಕ್ರಮ ಕೈಗೊಂಡಿರುವುದಿಲ್ಲ. |
| 3 | ಮಣಿಕಂಟ ಬೆಟಲ್ನಟ್ ಕಂ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 55,708 | 2017–18 | ಕ್ರಮ ಕೈಗೊಂಡಿರುವುದಿಲ್ಲ. |
| 4 | ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಸಂಘ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 2,19,57,363 | 2017–18 | ಕ್ರಮ ಕೈಗೊಂಡಿರುವುದಿಲ್ಲ. |
| 5 | ಅಶ್ವಿನಿ ಕುಮಾರ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 2,82,062 | 2005–06 | ಉಚ್ಚ ನ್ಯಾಯಲಯದ ತೀರ್ಮಾನದಂತೆ ಇತ್ಯರ್ಥ ಮಾಡಿಕೊಳ್ಳಲಾಗಿದೆ. |
| 6 | ಶ್ರೀ ರಾಮ ಟ್ರೇಡರ್ಸ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 40,83,232 | 2005–06 | ಉಚ್ಚ ನ್ಯಾಯಲಯದ ತೀರ್ಮಾನದಂತೆ ಇತ್ಯರ್ಥ ಮಾಡಿಕೊಳ್ಳಲಾಗಿದೆ. |
| 7 | ಶ್ರೀ ಸಿದ್ದಲಿಂಗೇಶ್ವರ ಅಡಿಕೆ ಸ್ಟೋರ್ಸ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 2,87,981 | 2005–06 | ಕಾನೂನು ವ್ಯಾಜ್ಯವನ್ನು ಹೂಡಲಾಗಿದೆ. |
| 8 | ಶ್ರೀಧರ ಅಡಿಕೆ ಸ್ಟೋರ್ಸ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 11,55,888 | 1998–99 | ಕಾನೂನು ವ್ಯಾಜ್ಯವನ್ನು ಹೂಡಲಾಗಿದೆ. |
| 9 | ಆರ್. ಟಿ.ಜಿ ಅರೆಕಾನಟ್ ಟ್ರೇಡರ್ಸ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 6,80,235 | 2017–18 | ವಸೂಲಾತಿಗೆ ಸಂಘದಿಂದ ನೋಟೀಸ ನೀಡಲಾಗಿದೆ |
| 10 | ಮಣಿಕಂಠ ಬೆಟಲ್ನಟ್ ಕಂ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 4,49,597 | 2017–18 | ವಸೂಲಾತಿಗೆ ಸಂಘದಿಂದ ನೋಟೀಸ ನೀಡಲಾಗಿದೆ |
| 11 | ಎ. ವೈ ಟ್ರೇಡಿಂಗ ಕಂ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 1,26,40,335 | 2022–23 | ವಿಮಾ ಕಂಪನಿಯ ವಿರುದ್ದ ಕಾನೂನು ವ್ಯಾಜ್ಯವನ್ನು ಹೂಡಲಾಗಿದೆ. |
| 12 | ಜೈನ್ ಆಗ್ರೋ ಟ್ರೇಡಿಂಗ ಕಂ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 1,36,66,685 | 2024–25 | ಕಾನೂನು ವ್ಯಾಜ್ಯವನ್ನು ಹೂಡಲಾಗಿದೆ. |

| | | | | |
|---|---|---|---|---|
| | 13 | ಆದಾಯ ಮೂಲ ತೆರಿಗೆ<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 11,21,49,902 | | ವ್ಯಾಜ್ಯದಲ್ಲಿ ಇರುತ್ತದೆ. |
| | 14 | ಆದಾಯ ತೆರಿಗೆ ಮುಂಗಡ ಪಾವತಿ 2017–18<br>ದಿನಾಂಕ 31–03–2026 ಕ್ಕೆ ಇದ್ದಂತೆ ರೂ 50,11,400 | 2017–18 | ವ್ಯಾಜ್ಯದಲ್ಲಿ ಇರುತ್ತದೆ. |
| **31** | **ಮೋಸ, ವಂಚನೆ, ಹಣ ದುರುಪಯೋಗದ ವರದಿ** | | | |
| | 1) ನಗದು/ದಾಸ್ತಾನು ದುರುಪಯೋಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕಪರಿಶೋಧನಾ ಇಲಾಖಾ ಮೇಲಧಿಕಾರಿಗಳಿಗೆ ಮಧ್ಯಂತರ ವರದಿ ಸಲ್ಲಿಸಲಾಗಿದೆಯೇ? | ವರದಿ ಸಾಲಿನಲ್ಲಿ ಅಂತಹ ಯಾವುದೇ ಪ್ರಕರಣಗಳು ನಡೆದಿರುವುದಿಲ್ಲ | | |
| | 2) ಸಂಘದಲ್ಲಿ ಜರುಗಿರುವ ಹಣ/ದಾಸ್ತಾನು ದುರುಪಯೋಗದ ಪ್ರತಿಯೊಂದು ಅಂಶದ ಸ್ವರೂಪವನ್ನು ದಿನಾಂಕವಾರು, ಹಣದುರುಪಯೋಗ ಮಾಡಿದ ರೀತಿ, ಉದ್ದೇಶ, ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ. | | |
| | 3) ಸದರಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಮತ್ತು ಹಣದುರುಪಯೋಗ ಸಾಬೀತಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸಿ, ಫೌಜದಾರಿ ಮತ್ತು ದಿವಾಣಿ ( Criminal & Civil ) ಕ್ರಮಕ್ಕೆ ಏಕೆ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ಆಪಾದಿತರಿಗೆ ವಿವರಣೆ ನೀಡುವಂತೆ ಸೂಚಿಸಿ ನೋಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ/ನೋಟೀಸ್/ಸಮನ್ಸ್‌ಗಳನ್ನು ನೀಡಲಾಗಿದೆಯೇ? | ಅನ್ವಯಿಸುವುದಿಲ್ಲ. | | |
| | 4) ಸದರಿ ನೋಟೀಸುಗಳಿಗೆ ಆಪಾದಿತರು ನೀಡಲಾದ ಸಮಜಾಯಿಷಿ/ವಿವರಣೆಯನ್ನು ಪರಿಗಣಿಸಿರುವ ಬಗ್ಗೆ ಅಂದರೆ ಲೆಕ್ಕಪರಿಶೋಧಕರು ಒಪ್ಪದೇ ಇರುವ ಬಗ್ಗೆ/ಒಪ್ಪಿರುವ ಬಗ್ಗೆ ಸ್ಪಷ್ಟವಾಗಿ ಮತ್ತು ವಿವರವಾಗಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ. | | |
| | 5) ಹಣದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ | | |
| | 6) ಹಣದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತಃಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ರಕ್ಕಮು ಗಳಿಗೆ ಸೂಕ್ತ ಅವಕಾಶ ಕಲ್ಪಿಸಿರುವ ಬಗ್ಗೆ ಹಾಗೂ ಹಣದುರುಪಯೋಗದ ರಕ್ಕಮನ್ನು ವಸೂಲಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ | | |
| | 7) ಹಣದುರುಪಯೋಗದ ರಕ್ಕಮನ್ನು ವಸೂಲಿಸಲು ಸಂಘದು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಶಿಸುವುದು. | ಅನ್ವಯಿಸುವುದಿಲ್ಲ | | |

| | | |
|---|---|---|
| | 8) ಮಾನ್ಯ ನಿರ್ದೇಶಕರು ಸುತ್ತೋಲೆ ಸಂಖ್ಯೆ.ಲೆಪಶಾ–1/ಇತರೆ/ಲೆಪನೆ/16/ 2016–17 ದಿನಾಂಕ 23.02.2017ರ ಹಾಗೂ ನಿರ್ದೇಶನಗಳಂತೆ ಹಣದುರುಪಯೋಗವುಳ್ಳ ವರದಿಗಳನ್ನು ಲೆಕ್ಕ ಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಗೊಂಡು, ಅವರು ಸೂಚಿಸಿರುವ ಎಲ್ಲ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ |
| 32 | **ನಿಬಂಧಕರ ಆದೇಶಗಳ ಅನುಪಾಲನೆ** | |
| | ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ? | ಯಾವುದು ಇರುವುದಿಲ್ಲ. |
| | ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ? | ಯಾವುದು ಇರುವುದಿಲ್ಲ. |
| | ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ನಿವಾರಿಸಲು ನಿಬಂಧಕರಿಂದ ಕಲಂ 68 ರ ಅಡಿ ಆದೇಶ ಜಾರಿಯಾಗಿದೆಯೇ? | ಅನ್ವಯಿಸುವುದಿಲ್ಲ |
| | ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂಧಕರ ಕಲಂ 68 ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ? | ಅನ್ವಯಿಸುವುದಿಲ್ಲ |
| 33 | **ಆಡಳಿತ ಮಂಡಲಿ ಮತ್ತು ಸಿಬ್ಬಂದಿಗಳ ವಿವರಗಳು:** | |
| | (ಶೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ) | |
| | ಸಂಘದ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ | ಸಂಘದ ಉಪವಿಧಿ ಭಾಗ–6, 44(1) ರ ಪ್ರಕಾರ ಸಂಘದ ಆಡಳಿತ ಮಂಡಲಿಯು ನಾಮ ನಿರ್ದೇಶಿತರಾದ ವ್ಯಕ್ತಿಗಳು ಅಂದರೆ, ಸಹಮತದಿಂದ ಸೇರಿಸಿಕೊಂಡ ವೃತ್ತಿಪರ ವ್ಯಕ್ತಿಗಳು ಮತ್ತು ಸಂಘದ ವ್ಯವಸ್ಥಾಪಕ ನಿರ್ದೇಶಕರನ್ನು ಹೊರತುಪಡಿಸಿ, ಹತ್ತೊಂಬತ್ತು ಚುನಾಯಿತ ನಿರ್ದೇಶಕರುಗಳನ್ನು ಒಳಗೊಂಡಿರತಕ್ಕದ್ದು. ಈ ಹತ್ತೊಂಬತ್ತು ನಿರ್ದೇಶಕ ಸ್ಥಾನಗಳಲ್ಲಿ, ಒಂದು ಸ್ಥಾನವನ್ನು ಸಂಘದ ಪರಿಶಿಷ್ಟ ಜಾತಿಯ ಸದಸ್ಯರಿಗೂ, ಒಂದು ಸ್ಥಾನವನ್ನು ಪರಿಶಿಷ್ಟ ಪಂಗಡದ ಸದಸ್ಯರಿಗೂ, ಎರಡು ಸ್ಥಾನಗಳನ್ನು ಮಹಿಳಾ ಸದಸ್ಯರಿಗೂ ಮತ್ತು ಎರಡು ಸ್ಥಾನಗಳನ್ನು ಹಿಂದುಳಿದ ವರ್ಗದ ಸದಸ್ಯರಿಗೂ ಮೀಸಲಿರಿಸತಕ್ಕದ್ದು. ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಎರಡು ಸ್ಥಾನಗಳನ್ನು ಕೆಳಕಂಡ ವಿಧಾನದಂತೆ ಭರ್ತಿ ಮಾಡತಕ್ಕದ್ದು. ಇದರಂತೆ ಸಂಘದ ಆಡಳಿತ ಮಂಡಲಿಯ ರಚನೆ ಇದರಂತೆ ಇರುತ್ತದೆ.<br>ಚುನಾಯಿತ ಪ್ರತಿನಿಧಿಗಳು: 19<br>ಪದ ನಿಮಿತ್ತ ಅಧ್ಯಕ್ಷರು: 1<br>ವೃತ್ತಿಪರ ನಿರ್ದೇಶಕರು: 2<br>ಒಟ್ಟು: 22 |

| | |
|---|---|
| ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ | ಸಂಘದ ಉಪವಿದಿಯ ಭಾಗ– 6, 44(3)(ಎ) ಪರಿಶಿಷ್ಟ ಜಾತಿಯ–1, ಪರಿಶಿಷ್ಟ ವರ್ಗದ–1, ಮಹಿಳಾ ಸದಸ್ಯರ–2 ಹಾಗೂ ಹಿಂದುಳಿದ ವರ್ಗದ–2 ಸ್ಥಾನಗಳು ಮೀಸಲು ಸ್ಥಾನಗಳಾಗಿದ್ದು, ಇವರಿಗೆ ಎಲ್ಲಾ 'ಎ' ವರ್ಗದ ಅರ್ಹ ಸದಸ್ಯರು ಮತ ನೀಡತಕ್ಕದ್ದು.<br>(ಬಿ) ಉಳಿದ 13 ಸ್ಥಾನಗಳು ಸಾಮಾನ್ಯ ವರ್ಗಕ್ಕೆ ಸೇರಿದ್ದು, ಇದರಂತೆ ಸಂಘವು ಇವರಿಗೆ ಎಲ್ಲಾ 'ಎ' ವರ್ಗದ ಅರ್ಹ ಸದಸ್ಯರು ಮತ ನೀಡತಕ್ಕದ್ದು. ಇದರಂತೆ ಸಂಘವು ತನ್ನ ಆಡಳಿತ ಮಂಡಲಿಯ ಸದಸ್ಯರನ್ನು ಹೊಂದಿರುತ್ತದೆ. |
| ಪ್ರಸಕ್ತ ಮಂಡಲಿಯು ಅಧಿಕಾರ ವಹಿಸಿಕೊಂಡ ದಿನಾಂಕ | 27–02–2025 |
| ಮಂಡಲಿಯ ಅವಧಿ | ಮುಂದಿನ 5 ವರ್ಷ |
| ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ | ಆಡಳಿತ ಮಂಡಲಿಯ ಹುದ್ದೆ ಯಾವುದು ಖಾಲಿ ಇರುವುದಿಲ್ಲ. |
| ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಲಿಯ ಸಭೆಗಳ ಸಂಖ್ಯೆ | ಅಡಳಿತ ಮಂಡಲಿ ಸಭೆ – 13<br>ಕಾರ್ಯನಿರ್ವಾಹಕ ಸಮಿತಿ ಸಭೆ – 13<br>ಲೆಕ್ಕಪರಿಶೋದನೆ ಮತ್ತು ಹಣಕಾಸು ಸಮಿತಿ – 9<br>ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ – 12<br>ಅಡಿಕೆ ಖರೀದಿ ವ್ಯವಹಾರ ಸಮಿತಿ – 11 |
| ಮಂಡಲಿಯ ಸಭೆಗಳಿಗಾಗಿ ಆದ ವೆಚ್ಚ | ಪ್ರಸಕ್ತ ಸಾಲಿನಲ್ಲಿ ಆಡಳಿತ ಮಂಡಲಿಯ ಸಭೆಗೆ ಹಾಗೂ ನಿರ್ದೇಶಕರ ವೆಚ್ಚಗಳು ಕೆಳಕಂಡಂತಿದೆ.<br>**ವಿವರಗಳು** – **ಮೊತ್ತ**<br>ಸಭಾ ಖರ್ಚು – 4,35,187.00<br>ನಿರ್ದೇಶಕರ ಸಭಾಭತ್ಯೆ – 28,97,400.00 |
| ನಿರ್ದೇಶಕರ ತರಬೇತಿ / ಅಧ್ಯಯನ ಪ್ರವಾಸ ಕಾರ್ಯಕ್ರಮಗಳ ವಿವರ:– | ನಿರ್ದೇಶಕರ ತರಬೇತಿ / ಅಧ್ಯಯನ ಪ್ರವಾಸ ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಂಡಿದ್ದು, ವರದಿ ಸಾಲಿನಲ್ಲಿ ರೆಜಿಸ್ಟ್ರಾರನ ಪೂರ್ವಾನುಮತಿ ಮೇರೆಗೆ (ಆದೇಶ ಸಂಖ್ಯೆ: ಆರ್.ಸಿ.ಎಸ್/ಪಿ.ಆರ್.ಎಸ್/90/2025–26/ಇ–94345, ದಿನಾಂಕ 07–02–2026) ದಿನಾಂಕ 21–02–2026 ರಂದು ದೆಹಲಿ, ಮಥುರಾ, ಕಾನಪುರಾ, ಪ್ರಯಾಗರಾಜ, ವಾರಣಾಸಿ, ಅಯೋಧ್ಯೆ, ಬೋದಗಯಾ, ಬನಾರಸ್ ವಿಷ್ವವಿದ್ಯಾಲಯ, ಕೃಷಿ ವಿಜ್ಞಾನ ಸಂಸ್ಥೆ ಬನಾರಸ್‌ಗಳಿಗೆ ಬೇಟಿ ನಿಡಲಾಗಿರುತ್ತದೆ. ಹಾಗೂ ಇದಕ್ಕೆ ಸಂಬಂಧಿಸಿದಂತೆ ರೆಜಿಸ್ಟ್ರಾರನ ಷರತ್ತುಗಳ ಪ್ರಕಾರ ಒಟ್ಟು ಖರ್ಚು 15,70,800 ಮೀರತಕ್ಕದ್ದಲ್ಲ ಮತ್ತು ಪ್ರವಾಸದ ಅವಧಿ 10 ದಿನ ಮೀರತಕ್ಕದ್ದಲ್ಲ, ಹಾಗೂ ಈ ಮೊತ್ತವನ್ನು ಅಧ್ಯಯನ ಪ್ರವಾಸ ನಿಧಿಯಿಂದ ಬಳಸತಕ್ಕದ್ದು. ಮತ್ತು ಪ್ರವಾಸ ಮುಗಿಸಿ ಬಂದ 15 ದಿನಗಳ ಒಳಗಾಗಿ ವರದಿಯನ್ನು ರೆಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು. ಇದಕ್ಕೆ ಸಂಬಂಧಿಸಿದಂತೆ ಸಂಘದಲ್ಲಿ ಯಾವುದೆ ಅಧ್ಯಯನ ಪ್ರವಾಸದ ನಿಧಿಗಳು ಇರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಅಧ್ಯಯನ ಪ್ರವಾಸದ ಖರ್ಚುಗಳನ್ನು ನೆರವಾಗಿ ಲಾಭ ಹಾನಿ ಖಾತೆಗೆ ವರ್ಗಾಯಿಸಿರುವುದನ್ನು ಆಕ್ಷೇಪಿಸಲಾಗಿರುತ್ತದೆ. |

| | |
|---|---|
| ನಿರ್ದೇಶಕರ ತರಬೇತಿ / ಅಧ್ಯಯನ ಕಾರ್ಯಕ್ರಮಗಳಿಗೆ ಆದ ವೆಚ್ಚ | ಅಧ್ಯಯನ ಕಾರ್ಯಕ್ರಮಗಳಿಗೆ ಆದ ವೆಚ್ಚ ರೂ 13,78,930.00 ಆಗಿರುತ್ತದೆ. |
| ವರದಿ ಸಾಲಿನಲ್ಲಿ ಆಡಳಿತ ಮಂಡಲಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ. | ಸಂಘದಲ್ಲಿ ಆಡಳಿತವನ್ನು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಪರಿಶೀಲನಾ ಅವಧಿಯಲ್ಲಿ ಕೆಳಕಂಡಂತೆ ಸಭೆಗಳನ್ನು ನಡೆಸಲಾಗಿದೆ: ಇದರ ವಿವರ ಕೆಳಗಿನಂತಿದೆ<br>ಆಡಳಿತ ಮಂಡಲಿ ಸಭೆಗಳು – 13<br>ಕಾರ್ಯನಿರ್ವಾಹಕ ಸಮಿತಿ ಸಭೆಗಳು – 13<br>ಲೆಕ್ಕಪರಿಶೋಧನೆ ಮತ್ತು ಹಣಕಾಸು ಸಮಿತಿ ಸಭೆಗಳು – 9<br>ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆಗಳು – 12<br>ಅಡಿಕೆ ಖರೀದಿ ವ್ಯವಹಾರ ಸಮಿತಿ ಸಭೆಗಳು – 11<br>ಶಾಸನಬದ್ಧ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಮೇಲ್ಕಂಡ ಎಲ್ಲಾ ಸಭೆಗಳ ಸಭಾ ನೋಟಿಸ್‌ಗಳು, ಕಾರ್ಯಸೂಚಿಗಳು (Agenda), ಸಭಾ ನಡಾವಳಿ ಪುಸ್ತಕ (Minutes Book) ಹಾಗೂ ಆಡಳಿತ ಮಂಡಲಿಯ ನಿರ್ಣಯಗಳನ್ನು (Board Resolutions) ಪರಿಶೀಲಿಸಲಾಗಿದೆ. ಪರಿಶೀಲನೆಯ ಆಧಾರದ ಮೇಲೆ, ಸಭೆಗಳನ್ನು ಸಂಘದ ಉಪನಿಯಮಗಳು ಹಾಗೂ ಅನ್ವಯವಾಗುವ ಕಾನೂನುಗಳ ಪ್ರಕಾರ ನಿಯಮಿತವಾಗಿ ನಡೆಸಿರುವುದು ಕಂಡುಬಂದಿದೆ.<br>ಸಭೆಗಳಲ್ಲಿ ಸಂಘದ ಆಡಳಿತ, ಹಣಕಾಸು ನಿರ್ವಹಣೆ, ಸಾಲ ವಸೂಲಾತಿ, ಹೂಡಿಕೆ, ಕಟ್ಟಡ ನಿರ್ಮಾಣ, ಅಡಿಕೆ ಖರೀದಿ ವ್ಯವಹಾರ, ಆಡಳಿತಾತ್ಮಕ ನಿರ್ಧಾರಗಳು ಹಾಗೂ ಸಂಘದ ಕಾರ್ಯಕ್ಷಮತೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಸಮಗ್ರವಾಗಿ ಚರ್ಚಿಸಿ ಅಗತ್ಯ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಪರಿಶೀಲಿಸಿದ ನಿರ್ಣಯಗಳ ಪ್ರಕಾರ, ಆಡಳಿತ ಮಂಡಲಿ ಹಾಗೂ ವಿವಿಧ ಸಮಿತಿಗಳು ಕೈಗೊಂಡಿರುವ ತೀರ್ಮಾನಗಳು ಸಂಘದ ಹಿತಾಸಕ್ತಿ, ಸದಸ್ಯರ ಹಿತಾಸಕ್ತಿ ಹಾಗೂ ಸಂಸ್ಥೆಯ ಆರ್ಥಿಕ ಸುರಕ್ಷತೆಯನ್ನು ಕಾಪಾಡುವ ಉದ್ದೇಶದಿಂದ ತೆಗೆದುಕೊಳ್ಳಲಾಗಿದೆ ಎಂದು ಕಂಡುಬಂದಿದೆ.<br>ಆದ್ದರಿಂದ, ಲಭ್ಯ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ, ಸಂಘದ ಆಡಳಿತ ಮಂಡಲಿ ಹಾಗೂ ವಿವಿಧ ಸಮಿತಿಗಳು ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಸಂಘದ ಹಿತಾಸಕ್ತಿಯನ್ನು ರಕ್ಷಿಸುವ ದೃಷ್ಟಿಯಿಂದ ಅಗತ್ಯ ನಿರ್ಧಾರಗಳನ್ನು ಕೈಗೊಂಡಿರುವುದು ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುತ್ತದೆ. |

| 34 | ಸಂಘದ ಆಡಳಿತ ಮಂಡಳಿಯ ವಿವರ | | |
|---|---|---|---|
| | ನಿರ್ದೇಶಕರ ಸಭಾ ಹಾಜರಾತಿ | | |
| | ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳ ಸಂಖ್ಯೆ |
| | ಶ್ರೀ ಗುರುದತ್ತ ಹೆಗಡೆ. ಐ.ಎ.ಎಸ್. | ಅಧ್ಯಕ್ಷರು<br>ದಿನಾಂಕ 02–01–2026 ರ ವರೆಗೆ | 6 |
| | ಶ್ರೀ ಪ್ರಭುಲಿಂಗ ಕವಳೀಕಟ್ಟಿ ಐ.ಎ.ಎಸ್ | ಅಧ್ಯಕ್ಷರು<br>ದಿನಾಂಕ 02–01–2026 ರಿಂದ | 4 |
| | ಶ್ರೀ ಮಹೇಶ ಹೆಚ್. ಎಸ್. | ಉಪಾಧ್ಯಕ್ಷರು | 66 |
| | ಶ್ರೀ ಕೀರ್ತಿರಾಜ್ ಕೆ | ನಿರ್ದೇಶಕರು | 34 |
| | ಶ್ರೀ ನಂದನ್ ಹೆಚ್ ಸಿ | ನಿರ್ದೇಶಕರು | 34 |
| | ಶ್ರೀ ನರೇಂದ್ರ ಬಿ.ಸಿ. | ನಿರ್ದೇಶಕರು | 29 |
| | ಶ್ರೀ ಕುಬೇಂದ್ರಪ್ಪ ಎಂ. | ನಿರ್ದೇಶಕರು | 24 |
| | ಶ್ರೀ ಶ್ರೀನಿವಾಸ ಕೆ.ಎಂ. | ನಿರ್ದೇಶಕರು | 23 |
| | ಶ್ರೀ ಕೃಷ್ಣಮೂರ್ತಿ ಕೆ.ವಿ. | ನಿರ್ದೇಶಕರು | 32 |
| | ಶ್ರೀ ಧರ್ಮೇಂದ್ರ ಹೆಚ್ | ನಿರ್ದೇಶಕರು | 26 |
| | ಶ್ರೀ ರತ್ನಾಕರ ಕೆ. | ನಿರ್ದೇಶಕರು | 25 |
| | ಶ್ರೀ ಪ್ರಸನ್ನ ಜಿ.ಎಸ್. | ನಿರ್ದೇಶಕರು | 22 |
| | ಶ್ರೀ ತಿಮ್ಮಪ್ಪ ಎಸ್.ಎಮ್. | ನಿರ್ದೇಶಕರು | 36 |
| | ಶ್ರೀ ವಿರೂಪಾಕ್ಷಪ್ಪ ಜಿ.ಈ. | ನಿರ್ದೇಶಕರು | 24 |
| | ಶ್ರೀ ಸುರೇಶಚಂದ್ರ ಎ. | ನಿರ್ದೇಶಕರು | 29 |
| | ಶ್ರೀ ಧರ್ಮಪ್ಪ | ನಿರ್ದೇಶಕರು | 22 |
| | ಶ್ರೀ ಸತೀಶ ಎನ್. | ನಿರ್ದೇಶಕರು | 25 |
| | ಶ್ರೀ ರಮೇಶ ಟಿ.ಎಲ್. | ನಿರ್ದೇಶಕರು | 21 |
| | ಶ್ರೀ ವೀರೇಶ್ ಯು.ವಿ. | ನಿರ್ದೇಶಕರು | 21 |
| | ಶ್ರೀಮತಿ ಜಯಶ್ರೀ ಕೆ.ಕೆ. | ನಿರ್ದೇಶಕರು | 22 |
| | ಶ್ರೀಮತಿ ಸಹನಾ ಸುಭಾಶ್ | ನಿರ್ದೇಶಕರು | 25 |
| | ಶ್ರೀ ಸುಬ್ರಹ್ಮಣ್ಯ ವೈ.ಎಸ್. | ವೃತ್ತಿಪರ ನಿರ್ದೇಶಕರು | 12 |
| | ಶ್ರೀ ಚನ್ನವೀರಪ್ಪ ಎಮ್.ಬಿ. | ವೃತ್ತಿಪರ ನಿರ್ದೇಶಕರು | 9 |

| ಮಂಡಲಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ | |
|---|---|
| ಮಂಡಲಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆಯೇ? | ಮಂಡಲಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸಲಾಗಿರುತ್ತದೆ. |
| ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ? | ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆ, ನಾವು ಸಂಘಕ್ಕೆ ಸಲಹೆ ನೀಡುವುದೇನೆಂದರೆ ಇತ್ತೀಚಿನ ಕಾಯ್ದೆ ತಿದ್ದುಪಡಿಯನ್ವಯ ಉಪವಿಧಿಗಳನ್ನು ತಿದ್ದುಪಡಿಮಾಡಿಕೊಳ್ಳಲು ಸೂಚಿಸಲಾಗಿದೆ. |
| ಮಂಡಲಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವರದಿ ಸಾಲಿನಲ್ಲಿ ಜರುಗಿದ ಸಭೆಗಳ ನಡವಳಿ ಮತ್ತು ನಿರ್ಣಯಗಳನ್ನು ಯಥಾವತ್ತಾಗಿ ವಿಷಯ ಸೂಚಿಯಂತೆ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಸಭೆಯ ನಡವಳಿಗಳ ವಿವರ ಕೆಳಗಿನಂತಿದೆ. |

| |
|---|
| ದಿನಾಂಕ: 07–05–2025 ಠರಾವು ಸಂಖ್ಯೆ 12– 2018ರ 6ನೇ ವೇತನ ಪರಿಷ್ಕರಣೆಯ ವ್ಯತ್ಯಾಸದ ಮೊಬಲಗನ್ನು ಪಾವತಿಸುವಂತೆ ಕೋರಿ ಸಂಘದ ಸಿಬ್ಬಂದಿಗಳಾದ ಶ್ರೀ ಪ್ರಕಾಶ ಎಂ ಎಸ್, ಉಪಪ್ರಧಾನ ವ್ಯವಸ್ಥಾಪಕರು ಮತ್ತು ವ್ಯವಸ್ಥಾಪಕರಾದ ಶ್ರೀ ಸುರೇಶ ಎಸ್, ಶ್ರೀ ಪರುಶುರಾಮ ಸಿ.ಆರ್., ಶ್ರೀ ಗಣಪತಿ ಎಸ್ ಕೆ, ಶ್ರೀ ಪ್ರದೀಪಕುಮಾರ ಎಲ್ ಎಸ್ ಇವರು ಕೋರಿರುವ ಕುರಿತು.<br>ಸಂಘದ ಸಿಬ್ಬಂದಿಗಳಾದ ಶ್ರೀ ಪ್ರಕಾಶ ಎಂ ಎನ್, ಉಪಪ್ರಧಾನ ವ್ಯವಸ್ಥಾಪಕರು ಮತ್ತು ವ್ಯವಸ್ಥಾಪಕರಾದ ಶ್ರೀ ಸುರೇಶ ಎಸ್, ಶ್ರೀ ಪರುಶುರಾಮ ಸಿ.ಆರ್., ಶ್ರೀ ಗಣಪತಿ ಎಸ್ ಕೆ, ಶ್ರೀ ಪ್ರದೀಪಕುಮಾರ ಎಲ್ ಎಸ್ ಇವರುಗಳಿಗೆ 6ನೇ ವೇತನ ಪರಿಷ್ಕರಣೆಯ ಫಿಟ್‌ಮೆಂಟ್‌ನಲ್ಲಿ ಆಗಿರುವ ವ್ಯತ್ಯಾಸದ ಮೊಬಲಗನ್ನು ಲೆಕ್ಕಾಚಾರ ಮಾಡಿ ಪಾವತಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. |
| ದಿನಾಂಕ: 07–05–2025 ಠರಾವು ಸಂಖ್ಯೆ 22(4)– ಸಂಘದಲ್ಲಿನ ಠೇವಣಿ ನಿಯಮವನ್ನು ತಿದ್ದುಪಡಿ ಮಾಡುವ ಕುರಿತು– ಸಂಘದಲ್ಲಿನ ನಿಗದಿತ ಠೇವಣಿ ಮತ್ತು ಕರೆ ಠೇವಣಿ ನಿಯಮದಲ್ಲಿ ಪರಿಷ್ಕರಿಸಿ ದಿನಾಂಕ: 15–05–2025 ರಿಂದ ಜಾರಿಗೆ ಅನುಷ್ಠಾನಕ್ಕೆ ತರಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಲಾಗಿದೆ. |
| ದಿನಾಂಕ: 11–06–2025 ಠರಾವು ಸಂಖ್ಯೆ 22– ಸಂಘದ ಆಡಳಿತ ಮಂಡಲಿ ನಿರ್ದೇಶಕರು ಅಧ್ಯಯನ ಪ್ರವಾಸ ಕೈಗೊಳ್ಳುವ ಕುರಿತು.–ಸಹಕಾರ ಸಂಘದ ಕಾರ್ಯಚಟುವಟಿಕೆ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯಲು ಹೊರ ರಾಜ್ಯಕ್ಕೆ ಅಧ್ಯಯನ ಪ್ರವಾಸ ಕೈಗೊಳ್ಳಲು ನಿರ್ಣಯಿಸಿರುವ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯ ಕೈಗೊಳ್ಳಲಾಗಿದೆ. |
| ದಿನಾಂಕ: 18–09–2025 ಠರಾವು ಸಂಖ್ಯೆ 13(5)– ಕರ್ನಾಟಕ ಘನ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ ಅಗತ್ಯ ತಿದ್ದುಪಡಿ ಮಾಡಿರುವ ಕುರಿತು–ಇತ್ತೀಚೆಗೆ ಕರ್ನಾಟಕ ಸಹಕಾರ ಸಂಘಗಳ(ತಿದ್ದುಪಡಿ) ಅಧಿನಿಯಮ 2025ಕ್ಕೆ ಅನುಗುಣವಾಗಿ ಇನ್ನೂ ಹಲವು ಪ್ರಾವಧಾನಗಳಿಗೆ ಸರ್ಕಾರದಿಂದ ನಿಯಮ ರಚನೆಯಾಗದೆ ಇರುವುದರಿಂದ ನಿಯಮ ರಚನೆಯ ನಂತರ ಸಂಘದ ಉಪವಿಧಿಗೆ ಅಗತ್ಯವಾಗಿರುವ ತಿದ್ದುಪಡಿಗಳನ್ನು ಮಾಡಲು ಕ್ರಮವಿಡಲು ನಿರ್ಣಯಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಲಾಗಿದೆ. |
| ದಿನಾಂಕ: 28–10–2025 ಠರಾವು ಸಂಖ್ಯೆ 15(2)– ಅಡಿಕೆ ಆಧಾರ ಸಾಲದ ಮೊತ್ತವನ್ನು ಪರಿಷ್ಕರಿಸುವ ಕುರಿತು–ಸಂಘದ ಸದಸ್ಯರಿಗೆ ನೀಡುತ್ತಿರುವ ಅಡಿಕೆ ಮುಂಗಡ ದರವನ್ನು ಪರಿಷ್ಕರಿಸುವ ಕುರಿತು ಪರಿಶೀಲಿಸಿದ ನಂತರ ಪ್ರಸ್ತುತ ಮಾರುಕಟ್ಟೆ ದರದ ಶೇ 60 ರಷ್ಟು ಅಥವಾ ನಿಗದಿಪಡಿಸಿ ನಮೂದಿಸಿರುವ ದರ ಇವುಗಳಲ್ಲಿ ಯಾವುದು ಕಡಿಮೆಯೋ ಆ ದರದಲ್ಲಿ ಅಡಿಕೆಯ ಮೇಲೆ ಮುಂಗಡವನ್ನು ಪಾವತಿಸಲು ಮತ್ತು ವಿಶೇಷ ಸಂದರ್ಭಗಳಲ್ಲಿ ಮಾತ್ರ ಶಾಖಾ ವ್ಯವಸ್ಥಾಪಕರ ವಿವೇಚನೆಗೆ ಒಳಪಟ್ಟು ಮಾರುಕಟ್ಟೆ ದರದ ಶೇ 75ರ ವರೆಗೆ ಅಥವಾ ನಿಗದಿಪಡಿಸಿ ನಮೂದಿಸಿರುವ ದರ ಇವುಗಳಲ್ಲಿ ಯಾವುದು ಕಡಿಮೆಯೋ ಆ ದರದಲ್ಲಿ ದಿನಾಂಕ: 28–10–2025 ರಿಂದಲೇ ಅನ್ವಯವಾಗುವಂತೆ ಪರಿಷ್ಕೃತ ಮುಂಗಡವನ್ನು ಪಾವತಿಸಲು ಸರ್ವಾನುಮತದಿಂದ ನಿರ್ಣಯಿಸಲಾಗಿದೆ. |
| ದಿನಾಂಕ: 27–11–2025 ಠರಾವು ಸಂಖ್ಯೆ 10– ಸಂಘಕ್ಕೆ ಅವಶ್ಯವಿರುವ ಹಮಾಲರ ಹುದ್ದೆಯನ್ನು ಭರ್ತಿ ಮಾಡುವ ಕುರಿತು.– ಸಂಘಕ್ಕೆ ಅವಶ್ಯವಿರುವ 05 ಹಮಾಲರ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 19589 ನಿಯಮ ಸಂಖ್ಯೆ 17(2)(ಎ) ಮತ್ತು ಸಂಘದ ಸಿಬ್ಬಂದಿ ಸೇವಾ ನಿಯಮ ಭಾಗ–4 ಸಂಖ್ಯೆ 8(11) ರನ್ವಯ ನೇಮಕಾತಿ ಸಮಿತಿಯನ್ನು ರಚಿಸಿ ಸರ್ವಾನುಮತದಿಂದ ಠರಾಯಿಸಲಾಗಿದೆ. |
| ದಿನಾಂಕ: 27–11–2025 ಠರಾವು ಸಂಖ್ಯೆ 13– ಸಂಘದ ಸಿಬ್ಬಂದಿಗಳ ತುಟ್ಟಿಭತ್ಯೆಯನ್ನು ಪರಿಷ್ಕರಿಸುವ ಕುರಿತು.– ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ ಆಇ18 ಎಸ್‌ಆರ್‌ಪಿ 2025 ಬೆಂಗಳೂರು . ದಿನಾಂಕ 15– ಅಕ್ಟೋಬರ 2025 ರಂತೆ 2024 ಪರಿಷ್ಕೃತ ವೇತನ ಶ್ರೇಣಿಗಳಲ್ಲಿ (ಶೇ.12.25% ರಿಂದ ಶೇ. 14.25%) ಹೆಚ್ಚಿಸಿರುವ ಶೇ 2.0 ರಷ್ಟು ತುಟ್ಟಿಭತ್ಯೆಯನ್ನು 2025ರ ಜುಲೈ ಮಾಹೆಯಿಂದ ಅನ್ವಯವಾಗುವಂತೆ ಸಂಘದ ಸಿಬ್ಬಂದಿಗಳಿಗೆ ನೀಡಲು ಸರ್ವಾನುಮತದಿಂದ ಠರಾಯಿಸಲಾಗಿದೆ. |
| ದಿನಾಂಕ: 30–12–2025 ಠರಾವು ಸಂಖ್ಯೆ 22– ಸಂಘದ ಆಡಳಿತ ಮಂಡಲಿ ನಿರ್ದೇಶಕರು ಅಧ್ಯಯನ ಪ್ರವಾಸ ಕೈಗೊಳ್ಳುವ ಕುರಿತು.– ಆಡಳಿತ ಮಂಡಳಿ ನಿರ್ದೇಶಕರು ಉತ್ತರ ಪ್ರದೇಶ, ದೆಹಲಿ ರಾಜ್ಯಗಳಿಗೆ ಹಾಗೂ ಸುತ್ತಮುತ್ತಲಿನ ಸಹಕಾರ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲು ತೀರ್ಮಾನಿಸಿ ಈ ಬಗೆಗೆ ವಿವಿಧ ಟ್ರಾವೆಲ್ಸ್ ಏಜೆನ್ಸಿಗಳಿಂದ ದರಪಟ್ಟಿಯನ್ನು ಆಹ್ವಾನಿಸಲು ಹಾಗೂ ದರಪಟ್ಟಿಯನ್ನು ಪರಿಶೀಲಿಸಿ ಕಡಿಮೆ ದರ ನಮೂದಿಸಿದ ಟ್ರಾವೆಲ್ ಏಜೆನ್ಸಿಯಿಂದ ಅಧ್ಯಯನ ಪ್ರವಾಸವನ್ನು ಆಯೋಜಿಸಲು ಮಾನ್ಯ ಉಪಾಧ್ಯಕ್ಷರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ಠರಾಯಿಸಲಾಗಿದೆ. |

| |
|---|
| ದಿನಾಂಕ: 28–01–2026 ಠರಾವು ಸಂಖ್ಯೆ 9– ಸಂಘದ ಸದಸ್ಯರ ಕ್ಷೇಮಾಭಿವೃದ್ದಿ ನಿಧಿಯ ನಿಯಮಗಳನ್ನು ತಿದ್ದುಪಡಿ ಮಾಡುವ ಕುರಿತು–ಸಂಘದಲ್ಲಿರುವ ಸದಸ್ಯರ ಕ್ಷೇಮಾಭಿವೃದ್ದಿ ನಿಧಿಯ ನಿಯಮಗಳನ್ನು ತಿದ್ದುಪಡಿ ಮಾಡಿ ದಿನಾಂಕ: 28–01–2026 ರಿಂದ ಅನ್ವಯವಾಗುವಂತೆ ಅನುಷ್ಠಾನಗೊಳಿಸಲು ಸರ್ವಾನುಮತದಿಂದ ಠರಾಯಿಸಲಾಗಿದೆ. |
| ದಿನಾಂಕ: 28–01–2026 ಠರಾವು ಸಂಖ್ಯೆ 11– ಸಂಘದಲ್ಲಿ ಸ್ವೀಕರಿಸುತ್ತಿರುವ ಕರೆ ಠೇವಣಿಯ ಬಡ್ಡಿದರವನ್ನು ಪರಿಷ್ಕರಿಸುವ ಹಾಗೂ ಅವಧಿ ನಿಗಧಿಪಡಿಸುವ ಕುರಿತು– ದಿನಾಂಕ: 02–02–2026 ರಿಂದ ಅನ್ವಯವಾಗುವಂತೆ ಸಂಘದ ಸದಸ್ಯರಿಂದ ಮೂರು ಮತ್ತು ಆರು ತಿಂಗಳ ಹಾಗೂ ಒಂದು ವರ್ಷದ ಅವಧಿಗೆ ಕರೆ ಠೇವಣಿಯನ್ನು ಸ್ವೀಕರಿಸಲು ಮತ್ತು ಕ್ರಮವಾಗಿ ಶೇ 7.50, ಶೇ 7.75, ಶೇ 8 ರಂತೆ ಹಾಗೂ ಹಿರಿಯ ನಾಗರಿಕ ಸದಸ್ಯರಿಗೆ ಶೇ 7.75, ಶೇ 8 ಹಾಗೂ ಶೇ 8.25 ರಂತೆ ಬಡ್ಡಿ ಪರಿಷ್ಕರಿಸಿ ನಿಗದಿಪಡಿಸಿ ಮತ್ತು ರೂ 20 ರಿಂದ 50 ಕೋಟಿ ಸಂಗ್ರಹವಾಗುವವರಿಗೆ ಸಂಗ್ರಹಿಸಿ ನಂತರ ಕರೆ ಠೇವಣಿಯನ್ನು ನಿಲ್ಲಿಸಲು ನಿರ್ಣಯಿಸಲಾಗಿದೆ. |
| ದಿನಾಂಕ: 28–01–2026 ಠರಾವು ಸಂಖ್ಯೆ 14(2)– ಸಂಘದಲ್ಲಿನ ಅಡಿಕೆ ಸಂಶೋಧನಾ ನಿಧಿಯ ಪೂರಕ ನಿಯಮಗಳನ್ನು ತಿದ್ದುಪಡಿ ಮಾಡುವ ಕುರಿತು–ಸಂಘದಲ್ಲಿನ ಅಡಿಕೆ ಸಂಶೋಧನಾ ನಿಧಿಯ ಪೂರಕ ನಿಯಮಗಳನ್ನು ತಿದ್ದುಪಡಿ ಮಾಡಿ ದಿನಾಂಕ: 02–02–2026ರಿಂದ ಅನ್ವಯವಾಗುವಂತೆ ಅನುಷ್ಠಾನಗೊಳಿಸಲು ಸರ್ವಾನುಮತದಿಂದ ಠರಾಯಿಸಲಾಗಿದೆ. |

| **ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ** | | |
|---|---|---|
| ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೆ? | ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನುಗುಣವಾಗಿರುತ್ತದೆ. | |
| ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೆ? | ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರವನ್ನು ನಡೆಸಿರುತ್ತಾರೆ. | |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ | ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದ ಸಾಲದ ವಿವರ ಕೆಳಕಂಡಂತಿದೆ. | |
| | ನಿರ್ದೇಶಕರ ಹೆಸರು | 31–03–2026 ಕ್ಕೆ ಬರತಕ್ಕ ಬಾಕಿ |
| | ಶ್ರೀ ನರೇಂದ್ರ ಬಿ.ಸಿ. | 4,00,000.00 |
| | ಶ್ರೀ ರತ್ನಾಕರ ಕೆ. | 2,00,000.00 |
| | ಶ್ರೀ ಸುರೇಶಚಂದ್ರ ಎ. | 68,821.00 |
| | ಶ್ರೀ ಧರ್ಮಪ್ಪ | 1,92,000.00 |
| | ಶ್ರೀ ವೀರೇಶ್ ಯು.ವಿ. | 1,40,000.00 |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ | ನಿರ್ದೇಶಕರು ಅಥವಾ ಅವರ ಕುಟುಂಬದವರು ಬೇರೆ ಸಾಲಗಳಿಗೆ ಜಾಮೀನುದಾರರಾಗಿರುವುದಿಲ್ಲ. | |
| ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ. | ಸಂಘದ ನಿರ್ದೇಶಕರ ಮತ್ತು ಕುಟುಂಬ ವರ್ಗದವರ ಸಾಲಗಳು ಯಾವುದು ಮುದ್ದತ್ತು ಮೀರಿರುವ ಸಾಲಗಳಾಗಿರುವುದಿಲ್ಲ. | |

| 35 | ವಾರ್ಷಿಕ ಸಾಮಾನ್ಯ ಸಭೆ | |
|---|---|---|
| | 1. ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ | 20–09–2025 |
| | 2. ಸಂಘದ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ | ಸಂಘದ ಉಪವಿಧಿ ಭಾಗ–5, 37 ಪ್ರಕಾರ ಸಾಮಾನ್ಯ ಸಭೆಗೆ ಕೋರಂ : ಸಾಮಾನ್ಯ ಸಭೆಯಲ್ಲಿನ ಕೋರಂ ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ ಕಲಂ 27(4)ರಲ್ಲಿ ಸೂಚಿಸಿದಂತೆ ಇರತಕ್ಕದ್ದು. ಕಾಯಿದೆ ಕಲಂ 27(4) ಪ್ರಕಾರ ಸಾಮಾನ್ಯ ಸಭೆಯ ಒಳ–ಕಾನೂನುಗಳ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಇರಬೇಕು, ಆದರೆ ಮತ ಚಲಾಯಿಸಲು ಒಂದು ಸಾವಿರಕ್ಕಿಂತ ಕಡಿಮೆಯಿಲ್ಲದ ಅಥವಾ ಮತದಾನ ಮಾಡುವ ಸದಸ್ಯರು ಶೇಕಡಾ ಹತ್ತರಷ್ಟು, ಇದರಲ್ಲಿ ಯಾವುದು ಕಡಿಮೆ ಇದೆಯೋ ಅವರು ಅರ್ಹರಾಗಿರತಕ್ಕದ್ದು. ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಅವಶ್ಯವಿರುವ ಕೋರಂನ್ನು ಖಚಿತ ಪಡಿಸಿ ಕೊಳ್ಳಲಾಗಿರುತ್ತದೆ. ವ್ಯವಸ್ಥಾಪಕ ನಿರ್ದೇಶಕರು ಈ ಸರ್ವ ಸದಸ್ಯರ ಸಭೆಗೆ ಅವಶ್ಯಕ ಕೋರಂ 1000 ಅಥವಾ ಅರ್ಹ ಸದಸ್ಯರ ಶೇ.10 ಪ್ರತಿಶತ ಆಗಿದ್ದು, ಪ್ರಸ್ತುತ 1000ಕ್ಕೂ ಹೆಚ್ಚು ಅರ್ಹ ಸದಸ್ಯರು ಹಾಜರಿರುವುದರಿಂದ ಸಭೆಯನ್ನು ಪ್ರಾರಂಭಿಸಬಹುದು ಎಂದು ಸಭೆಗೆ ತಿಳಿಸಿದರು. ನಂತರ ಸಭೆಗೆ ಅವಶ್ಯಕ ಕೋರಂ ಇರುವುದನ್ನು ಸಭೆಯು ಅವಗಾಹನೆಗೆ ತರಲಾಗಿದೆ. |
| | 3. ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ | 7216 ಸದಸ್ಯರು ಹಾಜರಿರುತ್ತಾರೆ. |
| | 4. ಸಭೆಯ ವಿಷಯ ಪಟ್ಟಿಯನ್ನು ಕಾಯ್ದೆ ಕಲಂ 27 ಹಾಗೂ ನಿಯಮ 14–ಎಜೆ ರಲ್ಲಿ ನಿಗದಿಪಡಿಸಿದಂತೆ ವಾರ್ಷಿಕ ಮಹಾಸಭೆಯಲ್ಲಿ ಅವಶ್ಯವಿರುವ ವಿಷಯಗಳನ್ನು ಒಳಗೊಂಡಿರುವುದೆ? ವಿವರಿಸುವುದು. | ಸಂಘದ ವಾರ್ಷಿಕ ಸಭೆಯಲ್ಲಿ ಕಾಯ್ದೆ ಕಲಂ 27 ಹಾಗೂ ನಿಯಮ 14–ಎಜೆಯಲ್ಲಿ ನಿಗದಿಪಡಿಸಿದಂತೆ ಅಗತ್ಯವಿರುವ ವಿಷಯಗಳನ್ನೊಳಗೊಂಡಂತೆ ಒಟ್ಟು 30 ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿರುವುದನ್ನು ಗಮನಿಸಲಾಗಿದೆ. |
| | 5. ಈ ಮೇಲಿನ ನಿಯಮಗಳಲ್ಲಿ ನಿಗದಿಪಡಿಸಿದ ಎಲ್ಲಾ ವಿಷಯಗಳ ಕುರಿತು ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆಯೇ? | ಸಂಘದ ವಾರ್ಷಿಕ ಸಭೆಯಲ್ಲಿ ಮಂಡನೆ ಮಾಡಿರುವ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಯಥಾವತ್ತಾಗಿ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆ. |
| | 6. ಅವಶ್ಯವಿರುವ ವಿಷಯಗಳ ಪೈಕಿ ಕೈಬಿಟ್ಟು ಹೋದ ವಿಷಯಗಳ ಕುರಿತು ವಿಮರ್ಶಿಸುವುದು. | ಯಾವುದು ಇರುವುದಿಲ್ಲ. |
| | 7. ಕಾಯ್ದೆ ಕಲಂ 28ರಂತೆ ಸಂಘದಲ್ಲಿ ವರದಿ ಸಾಲಿನಲ್ಲಿ ವಿಶೇಷ ಮಹಾಸಭೆ ಜರುಗಿದ್ದಲ್ಲಿ | ಕಾಯ್ದೆ ಕಲಂ 28ರಂತೆ ಸಂಘದಲ್ಲಿ ವರದಿ ಸಾಲಿನಲ್ಲಿ ಯಾವುದೆ ವಿಶೇಷ ಮಹಾಸಭೆ ಜರುಗಿರುವುದಿಲ್ಲ. |
| | 8. ವಾರ್ಷಿಕ ಮಹಾಸಭೆಯ/ವಿಶೇಷ ಮಹಾ ಸಭೆಯ ನಡವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವಾರ್ಷಿಕ ಮಹಾಸಭೆ ನಿಯಮಾನುಸಾರ ನಡೆದಿದ್ದು, ಅಗತ್ಯವಿರುವ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆದಿರುತ್ತದೆ. ಮತ್ತು ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕವಾಗಿ ಸಮಜಾಯಿಷಿ ನೀಡಿರುವುದನ್ನು ಮತ್ತು ಅಗತ್ಯವಿರುವ ಹಾಗೂ ಪ್ರಾಮುಖ್ಯವಿರುವ ವಿಷಯಗಳ ಕುರಿತು ನಿರ್ಧಾರಗಳನ್ನು ತೆಗೆದುಕೊಂಡಿರುವುದನ್ನು ಗಮನಿಸಲಾಗಿದೆ. ಕೆಲವು ವಿಷಯಗಳನ್ನು ಚರ್ಚಿಸಿ ದಾಖಲಾತಿ ಮಾಡಿರುವುದನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ. |

| | | |
|---|---|---|
| | ವಿಷಯ ಸಂಖ್ಯೆ: 04: 2024–25 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವ ಕುರಿತು | |
| | ವಿಷಯ ಸಂಖ್ಯೆ: 05: 2024–25 ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಆಡಳಿತ ಮಂಡಲಿಯ ಸಮಜಾಯಿಷಿಯೊಂದಿಗೆ ಪರಿಶೀಲಿಸಿ ಅಂಗೀಕರಿಸುವ ಕುರಿತು. | |
| | ವಿಷಯ ಸಂಖ್ಯೆ: 06: 2024–25 ನೇ ಸಾಲಿನಲ್ಲಿ ಸಂಘವುಗಳಿಸಿದ ಲಾಭ ಹಂಚಿಕೆಯ ಕುರಿತು. | |
| | ವಿಷಯ ಸಂಖ್ಯೆ: 07: 2024–25 ನೇ ಸಾಲಿನ ಅಂದಾಜು ಆಯ–ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಪರಿಶೀಲಿಸಿ ಅಂಗೀಕರಿಸುವ ಕುರಿತು. | |
| | ವಿಷಯ ಸಂಖ್ಯೆ: 08: 2025–26 ನೇ ಸಾಲಿನ ಪರಿಷ್ಕೃತ ಮತ್ತು 2026–27 ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವ ಕುರಿತು. | |
| | ವಿಷಯ ಸಂಖ್ಯೆ: 11: 2025–26 ನೇ ಸಾಲಿನ ಸಂಘದ ಲೆಕ್ಕ ಪರಿಶೋಧನೆಗಾಗಿ ಸನ್ನದು ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವ ಕುರಿತು. | |
| | ವಿಷಯ ಸಂಖ್ಯೆ: 18: ಸಂಘದ ಉಪವಿಧಿ ತಿದ್ದುಪಡಿಯ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದಿಸುವ ಕುರಿತು | |
| **36** | **ಸಿಬ್ಬಂದಿ ವರ್ಗ** | |
| 1 | ಸಂಘದಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ. | ಸಂಘದಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ–175, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ–128 |
| 2 | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವ ಬಗ್ಗೆ. | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಲಾಗಿದೆ. |
| 3 | ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ. | ನೇಮಕಾತಿ ಆದೇಶದ ಪ್ರತಿ ಲಭ್ಯವಿರುತ್ತದೆ. |
| 4 | ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು. | ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ವರದಿಗೆ ಲಗತ್ತಿಸಲಾಗಿದೆ. |
| 5 | ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ: | ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆಯಲಾಗಿರುತ್ತದೆ. |
| 6 | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು ರೂ. 12,12,52,102.61 ಆಗಿರುತ್ತದೆ. |
| 7 | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ 1.92 ಆಗಿರುತ್ತದೆ. |
| 8 | ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು. | ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಸದರಿ ಸಾಲಿನಲ್ಲಿ ವಾಹನ ಚಾಲಕರ ಹುದ್ದೆಗೆ ಶ್ರೀ ಅಣ್ಣಪ್ಪ ಜಿ ಇವರನ್ನು ನೇಮಕಾತಿ ಇವರನ್ನು 23–01–2026 ರಂದು ಮಾಡಿಕೊಳ್ಳಲಾಗಿರುತ್ತದೆ. ಕಾಯ್ದೆ / ಸುತ್ತೋಲೆ ಉಲ್ಲಂಘನೆ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ. |
| 9 | ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು. | 2025–26 ನೇ ಸಾಲಿಗೆ ಸಂಬಂಧಿಸಿದಂತೆ ಸಿಬ್ಬಂದಿ ಬೋನಸ್ ಪಾವತಿ ಸಂಬಂಧ ಲಾಭ ನಷ್ಟ ತ:ಖ್ತೆಯಲ್ಲಿ ಅನುಗ್ರಹ ಪೂರ್ವಕ ಕೊಡಿಗೆ / ಬೋನಸ್ ಎಂದು ಖರ್ಚುಹಾಕಿ ಕಾಯ್ದಿರಿಸಲಾಗಿದೆ. ಪಾವತಿಗೆ ವಾರ್ಷಿಕ ಮಹಾ ಸಭೆಯ ಒಪ್ಪಿಗೆ ಪಡೆದು ಪಾವತಿಸ ಬಹುದಾಗಿದೆ. |

| | | |
|---|---|---|
| 10 | ಶೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ? | ತಾಳೆಯಾಗಿರುತ್ತದೆ. |
| 11 | ಸಿಬ್ಬಂದಿಗಾಗಿ ಖರ್ಚುಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ? | ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯಲ್ಲಿ ಇರುತ್ತದೆ. |
| 12 | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ಸಿಬ್ಬಂದಿ ತರಬೇತಿಗೆ ಕಾರ್ಯಕ್ರಮವನ್ನು ದಿನಾಂಕ 27–06–2025 ರಿಂದ 29–06–2025 ರ ವರೆಗೆ, 01–08–2025 ರಿಂದ 03–08–2025 ರ ವರೆಗೆ 05–09–2025 ರಿಂದ 08–09–2025 ರ ವರೆಗೆ 3 ಹಂತದಲ್ಲಿ ಸಿಬ್ಬಂದಿಗಳಿಗೆ ವಿವಿಧ ವಿಷಯದಲ್ಲಿ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳಿಂದ ನೀಡಲಾಗಿದೆ. ವ್ಯಕ್ತಿತ್ವ ವಿಕಸನ, ಸಾಲ ಮತ್ತು ವಸೂಲಾತಿ, ಸಂವಹನ ಕೌಶಲ್ಯಾಭಿವೃದ್ಧಿ, ಒತ್ತಡ ನಿರ್ವಹಣೆ, ತಂಡ ನಿರ್ವಹಣೆ, ಇತ್ಯಾದಿ ವಿಷಯಗಳ ಬಗ್ಗೆ ಸಂಘದ ಅಟೆಂಡರ್. ಕಿರಿಯ ಸಹಾಯಕರು, ಹಿರಿಯ ಸಹಾಯಕರು, ಶಾಖಾ ವ್ಯವಸ್ಥಾಪಕರು, ಹಿರಿಯ ವ್ಯವಸ್ಥಾಪಕರು, ಉಪ ಪ್ರಧಾನ ವ್ಯವಸ್ಥಾಪಕರು, ಪ್ರಧಾನ ವ್ಯವಸ್ಥಾಪಕರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳಿಗೆ ತರಬೇತಿ ನೀಡಲಾಗಿರುತ್ತದೆ. |
| 13 | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಪ್ರಸಕ್ತ ಸಾಲಿನಲ್ಲಿ ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ ರೂ 6,09,807.00 |
| 14 | ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ತರಬೇತಿ ಕಾರ್ಯಕ್ರಮ ನಡೆದಿರುವುದಿಲ್ಲ, ಸದಸ್ಯರಿಗೆ ನಿಯಮಿತವಾಗಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮ ನಡೆಸುವುದು ಸೂಕ್ತ. ಈ ಕುರಿತು ಕ್ರಮವಿಡಲು ಸೂಚಿಸಿದೆ. |
| 15 | ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಅನ್ವಯಿಸುವುದಿಲ್ಲ |

**37 ಸಂಘದ ಆರ್ಥಿಕ ಫಲಿತಾಂಶಗಳ ವಿವರಗಳು**

| ವಿವರ | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ಸಂಘದ ಒಟ್ಟು ವಹಿವಾಟು | 12,71,71,37,724.42 | 11,36,68,81,414.44 |
| ಸಂಘದ ಒಟ್ಟು ದುಡಿಯುವ ಬಂಡವಾಳ | 6,30,90,20,404.48 | 4,77,78,54,016.55 |
| ಸಂಘದ ಲಾಭ ಅಥವಾ ನಷ್ಟ | 9,53,69,655.48 | 5,52,62,459.08 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | 9,53,69,655.48 | 5,52,62,459.08 |

**38 ತಲಾ ಷೇರಿನ ಗಳಿಕೆ**

| ವಿವರ | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ನಿವ್ವಳ ಲಾಭ | 9,53,69,655.48 | 5,52,62,459.08 |
| ಒಟ್ಟು ಷೇರುಗಳು | 9,31,48,600.00 | 9,02,68,500.00 |
| ಒಟ್ಟು ಷೇರು ಬಂಡವಾಳವನ್ನು ಪ್ರಸಕ್ತ ಸಾಲಿನ ಷೇರಿನ ಮುಖಬೆಲೆ ರೂ.100/– ರಿಂದ ಭಾಗಿಸಲಾಗಿದೆ. | | |
| ತಲಾ ಷೇರು | 9,31,486 | 9,02,685 |
| ತಲಾ ಷೇರಿನ ಗಳಿಕೆ | 102.38 | 61.22 |

| 39 | ಆರ್ಥಿಕ ತ:ಖ್ತೆಗಳ ಬಗ್ಗೆ ವಿಮರ್ಶೆ | |
|---|---|---|
| | ರೂಪಾಂತರ / ಸಂಸ್ಕರಣ ಘಟಕ ಹಾಗೂ ಯಂತ್ರೋಪಕರಣಗಳು: | |
| 1 | ಸಂಘವು ರೂಪಾಂತರ / ಸಂಸ್ಕರಣ ಘಟಕಗಳನ್ನು ಹೊಂದಿದೆಯೇ? ಹೊಂದಿದ್ದರೆ ವಿವರಗಳನ್ನು ಕೊಡುವುದು. (ಅಕ್ಕಿ ಗಿರಣಿ, ಜಿನ್ನಿಂಗ್, ಪ್ರೆಸ್ಸಿಂಗ್, ಶೈತ್ಯಾಗಾರ ಇತ್ಯಾದಿ) | ಸಂಘವು ರೂಪಾಂತರ / ಸಂಸ್ಕರಣ ಘಟಕಗಳನ್ನು ಹೊಂದಿರುವುದಿಲ್ಲ. |
| 2 | ಈ ಘಟಕಗಳಿಗೆ ಬಂಡವಳೀಕರಿಸಿದ ಯಂತ್ರೋಪಕರಣಗಳ ವಿವರ. | ಅನ್ವಯವಾಗುವುದಿಲ್ಲ. |
| | ಕ್ರಮ / ಘಟಕ / ಮೊತ್ತ<br>1<br>2 | ಅನ್ವಯವಾಗುವುದಿಲ್ಲ. |
| 3 | ಈ ಯಂತ್ರೋಪಕರಣಗಳ ರಿಜಿಸ್ಟರ್ ಬರೆಯಲಾಗಿದೆಯೇ? ಯಾದಿ ಲಗತ್ತಿಸಲಾಗಿದೆಯೇ? ತಾಳೆ ಇದೆಯೇ? | ಅನ್ವಯವಾಗುವುದಿಲ್ಲ. |
| 4 | ವರದಿ ವರ್ಷದಲ್ಲಿ ಹೊಸ ಯಂತ್ರೋಪಕರಣ ಗಳನ್ನು ಖರೀದಿಸಲಾಗಿದೆಯೇ? ಈ ಬಗ್ಗೆ ಅನುಸರಿಸಿದ ವಿಧಿ-ವಿಧಾನಗಳು ಸಮರ್ಪಕವಾಗಿವೆಯೇ? | ಅನ್ವಯವಾಗುವುದಿಲ್ಲ. |
| 5 | ವರ್ಷಾಂತ್ಯಕ್ಕೆ ಯಂತ್ರೋಪಕರಣಗಳ ಮೇಲೆ ನಿಗದಿತ ದರದಲ್ಲಿ ಸವಕಳಿ ತೆಗೆಯಲಾಗಿದೆಯೇ? ಸವಕಳಿ ಮೊತ್ತವೆಷ್ಟು? | ಅನ್ವಯವಾಗುವುದಿಲ್ಲ. |
| 6 | ಯಂತ್ರೋಪಕರಣಗಳ ಬಿಡಿ ಭಾಗಗಳ (ಉಪಕರಣ) ಖರೀದಿ, ಉಪಯೋಗ ಹಾಗೂ ದಾಸ್ತಾನು ಸಂಬಂಧಿಸಿದಂತೆ ಸಮರ್ಪಕ ರೀತಿಯಲ್ಲಿ ಲೆಕ್ಕಪತ್ರ ಇಡಲಾಗಿದೆಯೇ? | ಅನ್ವಯವಾಗುವುದಿಲ್ಲ. |
| 7 | ವರ್ಷಾಂತ್ಯಕ್ಕೆ ಇದ್ದ ಬಿಡಿ ಭಾಗಗಳ ಯಾದಿ ಲಗತ್ತಿಸಲಾಗಿದೆಯೇ? ತಾಳೆ ಇದೆಯೇ ? | ಅನ್ವಯವಾಗುವುದಿಲ್ಲ. |
| 8 | ಯಂತ್ರೋಪಕರಣಗಳಿಗೆ ಸಮರ್ಪಕವಾದ ವಿಮೆ ಮಾಡಿಸಲಾಗಿದೆಯೇ? ವಿಮೆ ಮೊತ್ತವೆಷ್ಟು? | ಅನ್ವಯವಾಗುವುದಿಲ್ಲ. |
| 9 | ವರದಿ ವರ್ಷದಲ್ಲಿ ಯಂತ್ರೋಪಕರಣಗಳು ಪೂರ್ತಿ ಸಾಮರ್ಥ್ಯದಷ್ಟು ಉಪಯೋಗವಾಗಿವೆಯೇ? ಇಲ್ಲದಿದ್ದಲ್ಲಿ ಉಪಯೋಗವಾದ ಪ್ರತಿಶತ ಪ್ರಮಾಣವೆಷ್ಟು? | ಅನ್ವಯವಾಗುವುದಿಲ್ಲ. |
| | **ಕಮಿಷನ್ ವ್ಯವಹಾರ** | |
| 1 | ಸಂಘವು ಕೃಷಿ ಉತ್ಪನ್ನಗಳನ್ನು ದಲ್ಲಾಳಿಗಳ ಮುಖಾಂತರ ಕಮಿಷನ್ ಆಧಾರದ ಮೇಲೆ ಮಾರಾಟ ಮಾಡುವ ವ್ಯವಹಾರ ಮಾಡಿದೆಯೇ? | ಸಂಘವು ಕೃಷಿ ಉತ್ಪನ್ನಗಳನ್ನು ದಲ್ಲಾಳಿಗಳ ಮುಖಾಂತರ ಕಮಿಷನ್ ಆಧಾರದ ಮೇಲೆ ಮಾರಾಟ ಮಾಡುವ ವ್ಯವಹಾರದಲ್ಲಿ ತೊಡಗಿ ಕೊಂಡಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಅಡಿಕೆ, ಕಾಳು ಮೆಣಸುಗಳನ್ನು ಕಮಿಷನ್ ಆಧಾರದ ಮೇಲೆ ಮಾರಾಟ ಮಾಡುವ ವ್ಯವಹಾರದಲ್ಲಿ ತೊಡಗಿರುತ್ತದೆ. |
| 2 | ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಲೆಕ್ಕ ಪುಸ್ತಕ ಹಾಗೂ ಇನ್ನಿತರ ಸಬ್‌ಸಿಡಿಯರಿ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆಯೇ? | ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಲೆಕ್ಕ ಪುಸ್ತಕ ಹಾಗೂ ಇನ್ನಿತರ ಸಬ್‌ಸಿಡಿಯರಿ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ. |

| | | |
|---|---|---|
| 3 | ಕಮೀಷನ್ ಆಧಾರದ ಮೇಲೆ ಇನ್ನಿತರ ಕೃಷಿಯೇತರ ಉತ್ಪನ್ನಗಳ ಮಾರಾಟ ವ್ಯವಹಾರ ಮಾಡಿದೆಯೇ? ಇದ್ದರೆ ವಿವರಗಳು. | ಯಾವುದೇ ರೀತಿಯ ವ್ಯವಹಾರ ಮಾಡಿರುವುದಿಲ್ಲ. |
| 4 | ಈ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಳ್ಳಲಾಗಿದೆಯೇ ? | ಈ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಳ್ಳಲಾಗಿದೆ. |
| 5 | ಕಮೀಷನ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸಂಕ್ಷಿಪ್ತ ವಿವರಗಳನ್ನು ನೀಡುವುದು. | |
| | ಪ್ರಸಕ್ತ ಸಾಲಿನಲ್ಲಿ ವರ್ತಕರಿಂದ ಬಂದ ದಲ್ಲಾಳಿ ವಿವರ ಕೆಳಕಂಡಂತಿರುತ್ತದೆ. | |

| ವಿವರ | ಟ್ರೇಡರ್ಸ್ ಮೊತ್ತ | ಪಡೆದ ದಲ್ಲಾಳಿ | ಮೂಟೆ | ತೂಕ (Quintals) | ಶೇಕಡ ವಹಿವಾಟು |
|---|---|---|---|---|---|
| ಕ್ಯಾಂಪ್ಕೋ | 1,45,48,36,422 | 1,85,59,456.00 | 38,812 | 26,026.69 | 18.01% |
| ಹಾಪ್‌ಕೋಸ್ | 32,54,88,279 | 49,00,275.00 | 8,417 | 5,720.42 | 4.03% |
| ಕ್ರಾಮ್‌ಕೋ | 1,21,76,843 | 1,94,830.00 | 273 | 189.14 | 0.15% |
| ಖಾಸಗಿ ವರ್ತಕರು | 3,10,17,51,757 | 4,86,92,298.00 | 1,31,037 | 72,787.06 | 38.40% |
| ಮಾಮ್‌ಕೋಸ್ ಖರೀದಿ | 3,18,33,40,248 | – | 86,033 | 57,224.68 | 39.41% |
| ಒಟ್ಟು | 8,07,75,93,549 | 7,23,46,859.00 | 2,64,572 | 1,61,947.98 | 100.00% |

1) ಸಂಘದ ವ್ಯಾಪಾರ ನಿಯಮ ಸಂಖ್ಯೆ 6 ರ ಪ್ರಕಾರ, ವರ್ತಕರು ಖರೀದಿಸಿದ ಅಡಿಕೆ ಮೊಬಲಗಿಗೆ ಶೇ.1.6 ರಂತೆ ಕಮಿಷನ್ ಪಡೆಯತಕ್ಕದ್ದು. ನಮ್ಮ ಲೆಕ್ಕಪರಿಶೋಧನಾ ಸಮಯದಲ್ಲಿ ವರ್ತಕರ ವ್ಯವಹಾರಗಳನ್ನು ಗಮನಿಸಿದಾಗ ಶ್ರೀ ವೀರಭದ್ರೇಶ್ವರ ಟ್ರೇಡರ್ಸ್ (T466) ಇವರು ಸಂಘದ ತೀರ್ಥಹಳ್ಳಿ ಶಾಖೆಯಲ್ಲಿ ಖರೀದಿಸಿದ ಅಡಿಕೆಗೆ ಶೇ. 1.6% ರ ಬದಲಾಗಿ ಶೇ. 1.3% ರಷ್ಟು ಕಮಿಷನ್ ಅನ್ವಯಿಸಿ ರೂ. 7,06,381 ಕಮಿಷನ್ ಸಂಗ್ರಹಿಸಲಾಗಿದೆ. ಆದರೆ ನಿಯಮಾನುಸಾರ ಶೇ. 1.6 ರಂತೆ ಬರತಕ್ಕ ಕಮಿಷನ್ ರೂ. 7,84,579 ಆಗಿದ್ದು, ರೂ. 78,198 ಆದಾಯ ಸೋರಿಕೆ ಉಂಟಾಗಿರುತ್ತದೆ. ಈ ಕುರಿತು ತಂತ್ರಾಂಶದಲ್ಲಿ ಸರಿಯಾದ ಕಮಿಷನ್ ದರಗಳು ಅನ್ವಯವಾಗುವಂತೆ ಕ್ರಮಕೈಗೊಳ್ಳತಕ್ಕದ್ದು ಮತ್ತು ಬರಬೇಕಾದ ಬಾಕಿ ಮೊತ್ತವನ್ನು ಸಂಬಂಧಪಟ್ಟ ವ್ಯಕ್ತಿಗಳಿಂದ ವಸೂಲಿಸಲು ಕ್ರಮವಿಡಲು ಸೂಚಿಸಲಾಗಿದೆ.

| MID | ವರ್ತಕರ ಹೆಸರು | ಒಟ್ಟು ವ್ಯವಹಾರ | ಪಡೆಯಬೇಕಾದ ಕಮಿಷನ್ | ಪಡೆಯಲಾದ ಕಮಿಷನ್ | ಕೊರತೆ |
|---|---|---|---|---|---|
| T466 | Shree Veerabhadreshwara Traders | 4,90,36,165 | 7,84,579 | 7,06,381 | 78,198 |

2) ಸಂಘದ ವ್ಯಾಪಾರ ನಿಯಮ 8 ರ ಪ್ರಕಾರ, ಸಂಘದೊಡನೆ ವ್ಯವಹಾರ ಮಾಡಲು ಅಪೇಕ್ಷಿಸುವ ವರ್ತಕರು ಸಂಘಕ್ಕೆ ಅರ್ಜಿ ಸಲ್ಲಿಸಿ ಸಂಘದಿಂದ ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ಮಿತಿಯನ್ನು ಮಂಜೂರು ಮಾಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅಂತಹ ವರ್ತಕರು ಸಂಬಂಧಿಸಿದ ಶಾಖೆಯ ಮುಖಾಂತರ ಕೇಂದ್ರ ಕಛೇರಿಗೆ ಅರ್ಜಿ ಕಳುಹಿಸಿ ವ್ಯವಹಾರದ ಬಗ್ಗೆ ಖರೀದಿ ಮಿತಿಯ ಶೇ.20ರಷ್ಟು ವ್ಯಾಪಾರ ಭದ್ರತಾ ಠೇವಣಿ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ನೀಡಿದಲ್ಲಿ ಅವರು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಶಾಖಾವಾರು ಮಿತಿಯನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯಲ್ಲಿ ಮಂಜೂರು ಮಾಡತಕ್ಕದ್ದು. ನಮ್ಮ ಲೆಕ್ಕಪರಿಶೋಧನಾ ಸಮಯದಲ್ಲಿ ವರ್ತಕರ ಖಾತೆಗಳನ್ನು ಪರಿಶೀಲಿಸಿದಾಗ, ಕೆಲವು ವರ್ತಕರಿಂದ ನಿಗದಿತ ಮೊತ್ತದ ಭದ್ರತಾ ಠೇವಣಿಯನ್ನು ಪಡೆಯದಿರುವುದನ್ನು ಗಮನಿಸಲಾಗಿದೆ. ಅಂತಹ ವರ್ತಕರಿಂದ ಅಗತ್ಯ ಭದ್ರತಾ ಠೇವಣಿಯನ್ನು ಪಡೆದು ವ್ಯವಹರಿಸಲು ಈ ಮೂಲಕ ಸೂಚಿಸಲಾಗಿದೆ. ಅಂತಹ ವರ್ತಕರ ಖಾತೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| T Code | ವರ್ತಕರ ಹೆಸರು | ಖರೀದಿ ಮಿತಿ | ಇರಿಸಬೇಕಾದ ಭದ್ರತಾ ಠೇವಣಿ | ಇರಿಸಲಾದ ಭದ್ರತಾ ಠೇವಣಿ | ಕೊರತೆ |
|---|---|---|---|---|---|
| T274 | Vinaya Traders | 30,00,00,000 | 6,00,00,000 | 3,00,00,000 | 3,00,00,000 |
| T33 | Sri Nandi Supari Trader | 12,00,000 | 2,40,000 | 2,00,000 | 40,000 |
| T339 | Sree Kollur Mookambika Trading | 32,00,000 | 6,40,000 | 4,00,000 | 2,40,000 |
| T428 | Shree Vijaya Traders | 8,00,00,000 | 1,60,00,000 | 1,00,00,000 | 60,00,000 |
| T450 | Shree Shiva Traders | 1,60,50,000 | 32,10,000 | 30,10,000 | 2,00,000 |
| T451 | Sri Kendaganneshwara Swamy | 9,80,00,000 | 1,96,00,000 | 1,31,35,000 | 64,65,000 |

3) ಸಂಘದ ವ್ಯಾಪಾರ ಉಪನಿಯಮ 10 ರ ಪ್ರಕಾರ, ವರ್ತಕರು ಖರೀದಿ ಮಾಡಿದ ಅಡಿಕೆ ಬಿಟ್ಟುಕೊಡುವ ದಾಸ್ತಾನನ್ನು ಆಂಶಿಕವಾಗಿ ಅಥವಾ ಪೂರ್ಣವಾಗಿ ಪೂರ್ವದಲ್ಲಿ ಸಂಘಕ್ಕೆ ಬಾಕಿ ಇರುವ ಅಸಲು ಮತ್ತು ಬಡ್ಡಿಯನ್ನು ಹಾಗೂ ಪಾವತಿಸಬೇಕಾದ ಇತರೆ ಮೊತ್ತವನ್ನು ಜಮಾ ಪಡೆದು ನಂತರವೇ ಬಿಟ್ಟು ಕೊಡತಕ್ಕದ್ದು. ನಮ್ಮ ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿದಂತೆ, ಕೆಲವು ವರ್ತಕರಿಂದ ಬರಬೇಕಾದ ಬಾಕಿ ಮೊತ್ತ ಹಾಗೆಯೇ ಇದ್ದರೂ ಕೂಡ ದಾಸ್ತಾನನ್ನು ಬಿಡುಗಡೆ ಮಾಡಿರುವುದನ್ನು ಗಮನಿಸಲಾಗಿದೆ. ಇದರಿಂದ ಸಂಘವು ಹೊಂದಿದ್ದ ಭದ್ರತೆಯನ್ನು ಕಳೆದುಕೊಂಡಂತಾಗುತ್ತದೆ. ಇದನ್ನು ಆಕ್ಷೇಪಿಸಲಾಗಿದೆ. ಹೀಗೆ ವರ್ತಕರಿಂದ ಬಾಕಿ ಮೊತ್ತ ಉಳಿದಿದ್ದಾಗ್ಯೂ ದಾಸ್ತಾನು ಬಿಟ್ಟುಕೊಟ್ಟ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| T Code | ವರ್ತಕರ ಹೆಸರು | ವರ್ಷಾಂತ್ಯಕ್ಕೆ ಇದ್ದಂತೆ ಬಾಕಿ ಮೊತ್ತ | ವರ್ಷಾಂತ್ಯಕ್ಕೆ ಇದ್ದಂತೆ ದಾಸ್ತಾನು ಮೌಲ್ಯ | ಬಿಟ್ಟುಕೊಟ್ಟ ದಾಸ್ತಾನಿನ ಮೌಲ್ಯ | ದಾಸ್ತಾನು ಬಿಟ್ಟುಕೊಟ್ಟ ದಿನಾಂಕ |
|---|---|---|---|---|---|
| | | 20(6). ಸಂಸ್ಥೆಯ ಲೆಕ್ಕಪತ್ರಗಳ ಪರಿಶೀಲನೆಯ ಸಂದರ್ಭದಲ್ಲಿ, ನಿವೃತ್ತ ನೌಕರರಿಗೆ ಸಂಬಂಧಿಸಿದ ಭದ್ರತಾ ಠೇವಣಿ (Retired Employee Security Deposit) ಮೊತ್ತವನ್ನು ಸಾಮಾನ್ಯ "ಭದ್ರತಾ ಠೇವಣಿ" ಖಾತೆ ಶೀರ್ಷಿಕೆಯಡಿ ವರ್ಗೀಕರಿಸಿರುವುದು ಕಂಡುಬಂದಿದೆ. ಇದಲ್ಲದೆ, ಸದರಿ ಠೇವಣಿಗಳ ಮೇಲೆ ವಾರ್ಷಿಕ 10% ಬಡ್ಡಿದರದಲ್ಲಿ ಬಡ್ಡಿಯನ್ನು ಪಾವತಿಸ ಲಾಗುತ್ತಿದೆ. ನಿವೃತ್ತ ನೌಕರರ ಭದ್ರತಾ ಠೇವಣಿಯು ಸಾಮಾನ್ಯ ಭದ್ರತಾ ಠೇವಣಿಗಳ ಸ್ವರೂಪಕ್ಕಿಂತ ಭಿನ್ನವಾಗಿರು ವುದರಿಂದ, ಅದನ್ನು ಪ್ರತ್ಯೇಕ ಖಾತೆ ಶೀರ್ಷಿಕೆಯಡಿ ವರ್ಗೀಕರಿಸಿ ಲೆಕ್ಕಪತ್ರ ಗಳಲ್ಲಿ ಪ್ರತ್ಯೇಕವಾಗಿ ಪ್ರದರ್ಶಿಸುವುದು ಸೂಕ್ತವಾಗಿದೆ. ಅಲ್ಲದೆ, ಸದರಿ ಠೇವಣಿಗಳ ಮೇಲಿನ ಬಡ್ಡಿ ಪಾವತಿ ಯನ್ನು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಠೇವಣಿ ಯೋಜನೆಗಳಿಗೆ ಅನ್ವಯವಾಗುವ ಬಡ್ಡಿದರಕ್ಕೆ ಮಾತ್ರ ಸೀಮಿತಗೊಳಿಸಿ, ಅದಕ್ಕಿಂತ ಹೆಚ್ಚಿನ ದರದಲ್ಲಿ ಬಡ್ಡಿ ಪಾವತಿಸದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. | ಲೆಕ್ಕಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗುವುದು. |
| 18 | 21 | **ಇತರೆ ಜವಬ್ದಾರಿಗಳ ಬಗ್ಗೆ ವಿಮರ್ಷೆ** | |
| | | 21(4) ಸಿಬ್ಬಂದಿ ಅನುಗ್ರಹ ಪೂರ್ವಕ ಕೊಡುಗೆ ಪಾವತಿಗೆ ಬಾಕಿ : ಸಂಘವು ಸಿಬ್ಬಂದಿಗೆ ಪಾವತಿಸಬೇಕಾದ ಬೋನಸ್ಸ ಮೊತ್ತ ರೂ. 1,15,392 ಆಗಿದ್ದು. ಇದು ಸಂಘದ ನಿವೃತ್ತ ಸಿಬ್ಬಂದಿಯಾದ ಶ್ರೀ ಅನಿಲಕುಮಾರ ಇವರಿಗೆ ಕೊಡ | ಪಾವತಿಗೆ ಕ್ರಮವಿಡಲಾಗಿದೆ. |

| | | | |
|---|---|---|---|
| | | ಬೇಕಾದ ಬೋನಸ್ ಮೊತ್ತವಾಗಿರುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. | |
| | | 21(5). ಅಡಿಕೆ ಮಾರಾಟದ ಹಣ: ಸಂಘವು ಸದಸ್ಯರ ಅಡಿಕೆ ಮಾರಾಟದ ಹಣವನ್ನು ಸದಸ್ಯರಿಗೆ ವರ್ಗಾಯಿಸಲು ಬಾಕಿ ಇರುತ್ತದೆ. ಇದರ ಮೊತ್ತ ರೂ. 21,60,003 ಆಗಿರುತ್ತದೆ. ಸಂಘವು ಇದರ ಬಗ್ಗೆ ಸೂಕ್ತ ಕುಳುವಾರು ಯಾದಿಯನ್ನು ಹೊಂದಿರುತ್ತದೆ. ಆದರೆ ಸಂಘವು ಇದನ್ನು ವಿಲೇವಾರಿ ಮಾಡಿರುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ. | ಸದಸ್ಯರ ವಿವಿಧ ಖಾತೆಗಳಲ್ಲಿ ಇರುವ ಮೊಬಲಗಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಸದಸ್ಯರು/ ವಾರಸುದಾರರಿಗೆ ನೋಂದಣಿ ಅಂಚೆ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿದ್ದು, ಅಗತ್ಯ ದಾಖಲೆಗಳನ್ನು ಸಲ್ಲಿಸಿ ಮರುಪಾವತಿಗೆ ಕೋರಿದಲ್ಲಿ ಪರಿಶೀಲಿಸಿ, ಆಡಳಿತ ಮಂಡಲಿಗೆ ಮಂಡಿಸಿ, ಪಾವತಿ ಮಾಡಲಾಗುವುದು. |
| | | **21(7) ಅಮಾನತ್ತು ಜವಾಬ್ದಾರಿ:** ಸಂಘವು 10 ವರ್ಷಗಳಿಂದ ವ್ಯವಹಾರ ಮಾಡದೆ ಇರುವ ಸದಸ್ಯರ ಶೇರು ಮೊತ್ತ ಮತ್ತು ಠೇವಣಿ ಮೊತ್ತವನ್ನು ಈ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಇದರ ಮೊತ್ತ ರೂ.44,07,248 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದರಿಂದಾಗಿ ಶೇರುಗಳ ಮೇಲೆ ಲಾಭಾಂಶ ಮತ್ತು ಠೇವಣಿ ಮೇಲೆ ಯಾವುದೆ ಬಡ್ಡಿಯನ್ನು ನೀಡಿದಂತಾಗಿರುವುದಿಲ್ಲ. ಇದನ್ನು ಆಕ್ಷೇಪಿಸಲಾಗಿದೆ. ಉಪವಿದಿಯಲ್ಲಿ ಇದರ ಬಗ್ಗೆ ಯಾವುದೆ ಅವಕಾಶಗಳಾಗಲಿ ಅಥವಾ ಉಲ್ಲೇಖವಾಗಲಿ ಇರುವುದಿಲ್ಲ. ಮುಂದುವರೆದು ಆಡಳಿತ ಮಂಡಲಿಯ ಸಭೆಯ ಠರಾವಿನಲ್ಲಿ ಈ ಖಾತೆಯಲ್ಲಿ ಹಾಗೆಯೆ 3 ವರ್ಷ ಮುಂದುವರೆದರೆ ಇದನ್ನು ಮೀಸಲು ನಿಧಿಗೆ ವರ್ಗಾಯಿಸುವಂತೆ ಠರಾಯಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಾಯ್ದೆಯಲ್ಲಿ ಯಾವುದೆ ನಿಯಮಗಳಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಕಾನೂನು ಅಭಿಪ್ರಾಯ ಪಡೆದು ವ್ಯವಹರಿಸಲು ಸೂಚಿಸಿದೆ. | |
| | | **21(11) ಎ.ಪಿ.ಎಂ.ಸಿ. ತೂಕದ ಚಾರ್ಜ್:** ಸಂಘವು ನಡೆಸಿದ ಅಡಿಕೆ ಮಾರಾಟದ | ಎ.ಪಿ.ಎಂ.ಸಿ ಚನ್ನಗಿರಿಯಲ್ಲಿ ತೂಕದ ಚಾರ್ಜ್‌ನ್ನು ಪಾವತಿಸಲು ಬಾಕಿಯಿದ್ದು, ದಿನಾಂಕ: 05.06.2026 ರಂದು ಪಾವತಿಸಲಾಗಿರುತ್ತದೆ. |

| | | | |
|---|---|---|---|
| | | ವ್ಯವಹಾರದ ಮೇಲೆ ಎ.ಪಿ.ಎಂ.ಸಿ ಇವರಿಗೆ ತೂಕದ ಚಾರ್ಜ ಕೊಡ ಬೇಕಾಗಿದ್ದು ಸಂಘದ ಶಾಖೆಯಾದ ಚನ್ನಗಿರಿ ಇವರಲ್ಲಿ ದಿನಾಂಕ 01-10-2025 ರಿಂದ 31-03-2026 ವರೆಗಿನ ತೂಕದ ಚಾರ್ಜ ಪಾವತಿಯಾಗಿರು ವುದಿಲ್ಲ. ಇದರ ಮೊತ್ತ ರೂ. 45,754 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಕೂಡಲೆ ಪಾವತಿಸಲು ಸೂಚಿಸಲಾಗಿದೆ. | |
| | | **21(13) ಸದಸ್ಯರ ಗುಂಪು ವಿಮೆ ಕ್ಲೈಮ್:** ಸಂಘವು ಸದಸ್ಯರಿಗೆ ಸಂಬಂಧಿಸಿದಂತೆ ವಿಮೆಯನ್ನು ವಿಮಾ ಕಂಪನಿಯ ಜೊತೆಗೆ ಒಡಂಬಡಿಕೆ ಯನ್ನು ಹೊಂದಿ ಸದಸ್ಯರ ಅನುಕೂಲ ಕ್ಕಾಗಿ ವಿಮಾ ಭದ್ರತೆಯನ್ನು ಹೊಂದಿ ರುತ್ತದೆ. ಸದಸ್ಯರಿಗೆ ಸಂಬಂಧಿಸಿದಂತೆ ವಿಮೆಯ ಮೊತ್ತವು ನೇರವಾಗಿ ಸಂಘಕ್ಕೆ ಜಮೆ ಬಂದಿರುತ್ತದೆ. ಇದನ್ನು ಸಂಘವು ಸದಸ್ಯರಿಗೆ ವರ್ಗಾಯಿಸಿರು ವುದಿಲ್ಲ. ಇದರ ಮೊತ್ತ ರೂ.8,97,848 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಸದಸ್ಯರಿಗೆ ವರ್ಗಾಯಿಸಲು ಸೂಚಿಸಲಾಗಿದೆ. | ಪಾವತಿಸಬೇಕಾದ ಗುಂಪು ವಿಮಾ ಕ್ಲೈಮ್ ಮೊತ್ತದಲ್ಲಿ ರೂ.6,00,000/- ಗಳು ಒರ್ವ ಸದಸ್ಯರ ಕೂಲಿ ಕಾರ್ಮಿಕರ ವಿಮಾ ಪರಿಹಾರ ಮೊತ್ತವಾಗಿದ್ದು, ಸದರಿ ಮೊತ್ತವನ್ನು ಪಡೆಯದೆ ಕ್ಲೈಮ್‌ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಕಾರ್ಮಿಕರು ಪ್ರಕರಣ ದಾಖಲಿಸಿದ್ದು, ನ್ಯಾಯಾಲಯದ ಆದೇಶದಂತೆ ಕ್ರಮವಿಡವಾಗುವುದು. ಇನ್ನುಳಿದ ಪ್ರಕರಣಗಳಿಗೆ ಸಂಬಂಧಿಸಿದ ವಿಮಾ ಪರಿಹಾರದ ಮೊತ್ತವನ್ನು ಪ್ರಸಕ್ತ ಸಾಲಿನಲ್ಲಿ ಪಾವತಿಸಲು ಕ್ರಮವಿಡಲಾಗುವುದು. |
| | | **21(14) ಸಿಬ್ಬಂದಿ ಇ ಎಸ್ ಐ ಷೇರು:** ಸಂಘವು ಸಿಬ್ಬಂದಿಗಳ ಮೇಲೆ ವಿಮೆಯನ್ನು ಹೊಂದಿದ್ದು ಸಿಬ್ಬಂದಿಯ ಸಂಬಳದಲ್ಲಿ ದಿನಾಂಕ 31-12-2024 ರಂದು ಕಡಿತಗೊಳಿಸಿದ ಮೊತ್ತವನ್ನು ಇಲಾಖೆಗೆ ಭರಣ ಮಾಡಿರುವುದಿಲ್ಲ ಇದರ ಮೊತ್ತ ರೂ. 175 ಆಗಿರುತ್ತದೆ. ಸಂಘವು ಈ ಮೊತ್ತವನ್ನು ಇತರೆ ಕೊಡತಕ್ಕವುಗಳಲ್ಲಿ ಲೆಕ್ಕ ನಮೂದು ಮಾಡಿರುತ್ತಾರೆ. ಇದನ್ನು ಕೂಡಲೆ ಭರಣ ಮಾಡಲು ಸೂಚಿಸಿದೆ. | ಪ್ರಸಕ್ತ ಸಾಲಿನಲ್ಲಿ ಪಾವತಿಸಲಾಗುವುದು. |
| 19 | 24 | ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು ಬಗ್ಗೆ ಲೆಕ್ಕಪರಿಶೋಧಕರ ವಿಮರ್ಶೆ | ಅಡಿಕೆ ಖರೀದಿ ವ್ಯವಹಾರದ ಉದ್ದೇಶಕ್ಕಾಗಿ ತೋಟೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿಯಲ್ಲಿ ಖಾತೆ ಹೊಂದಿದ್ದು ಲೆಕ್ಕ ಪರಿಶೋಧಕರ ಸಲಹೆಯಂತೆ ಮುಂದಿನ ದಿನಗಳಲ್ಲಿ ಅಗತ್ಯ ಕ್ರಮವಿಡಲಾಗುವುದು. |

| | | | |
|---|---|---|---|
| 20 | 26 | ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳ ವಿವರ | ಲೆಕ್ಕಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗುತ್ತದೆ. |
| 21 | 27 | ಸುಸ್ತಿ ಸಾಲದ ವಿವರ | ವರದಿ ಸಾಲಿನಲ್ಲಿ 48 ಸುಸ್ತಿ ಸದಸ್ಯರ ಮೇಲೆ ದಾವಾ ದಾಖಲಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸುಸ್ತಿ ಸಾಲಗಳ ವಸೂಲಾತಿಗೆ ಪರಿಣಾಮಕಾರಿಯಾಗಿ ಕ್ರಮವಿಡಲಾಗುವುದು. |
| 22 | 28(3) | ಸಂಘದ ಸ್ಥಿರಾಸ್ತಿಗಳ ಬಗ್ಗೆ | 28(3)(1). ಸಂಘದ ಹೊಸನಗರ ನಿವೇಶನವನ್ನು ಗುತ್ತಿಗೆ ಸಹಿತ ಮಾರಾಟ ಒಪ್ಪಂದವನ್ನು ಜಾರಿಗೊಳಿಸುವಂತೆ ಕಾರ್ಯದರ್ಶಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸನಗರ ಇವರಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಈ ಕುರಿತು ಅಗತ್ಯ ಕ್ರಮವಹಿಸದ ಹಿನ್ನೆಲೆಯಲ್ಲಿ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಿಗೆ ಮೇಲ್ಮನವಿ ಸಲ್ಲಿಸಲಾಗಿರುತ್ತದೆ. |
| | | | 28(3)(2). ಭದ್ರಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ಸಹಿತ ಮಾರಾಟ ಪತ್ರದಲ್ಲಿ ಗುತ್ತಿಗೆಯ ನಿವೇಶನದಲ್ಲಿ ಹತ್ತು ವರ್ಷದೊಳಗಾಗಿ ಕಟ್ಟಡ ನಿರ್ಮಾಣ ಮಾಡಿದಲ್ಲಿ ಮಾತ್ರವೇ ಮಾರಾಟ ಒಪ್ಪಂದವನ್ನು ಮಾಡಿಕೊಡಲಾಗುವುದು ಎಂಬುದಾಗಿ ಷರತ್ತು ವಿಧಿಸಲಾಗಿರುತ್ತದೆ. ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಾಣವಾಗದೇ ಇರುವ ಹಿನ್ನೆಲೆಯಲ್ಲಿ ಮಾರಾಟ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ. ಆದರೆ ಗುತ್ತಿಗೆ ಸಹಿತ ಮಾರಾಟ ಕರಾರನ್ನು ಊರ್ಜಿತಗೊಳಿಸುವಂತೆ ಹಾಗೂ ಕಟ್ಟಡ ನಿರ್ಮಾಣ ಮಾಡಲು ಸಮಯಾವಕಾಶ ನೀಡುವಂತೆ ಕೋರಿ ಕಾರ್ಯದರ್ಶಿಗಳು, ಎ.ಪಿ.ಎಂ.ಸಿ. ಭದ್ರಾವತಿ ಇವರಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ. |
| | | | 28(3)(3). ಸೊರಬ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ಸಹಿತ ಮಾರಾಟ ಪತ್ರದಲ್ಲಿ ಗುತ್ತಿಗೆಯ ನಿವೇಶನದಲ್ಲಿ ಹತ್ತು ವರ್ಷದೊಳಗಾಗಿ ಕಟ್ಟಡ ನಿರ್ಮಾಣ ಮಾಡಿದಲ್ಲಿ ಮಾತ್ರವೇ ಮಾರಾಟ ಒಪ್ಪಂದವನ್ನು ಮಾಡಿಕೊಡಲಾಗುವುದು ಎಂಬುದಾಗಿ ಷರತ್ತು ವಿಧಿಸಲಾಗಿರುತ್ತದೆ. ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಾಣವಾಗದೇ ಇರುವ ಹಿನ್ನೆಲೆಯಲ್ಲಿ ಮಾರಾಟ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ. ಆದರೆ ಗುತ್ತಿಗೆ ಸಹಿತ ಮಾರಾಟ ಕರಾರನ್ನು ಊರ್ಜಿತಗೊಳಿಸುವಂತೆ ಹಾಗೂ ಕಟ್ಟಡ ನಿರ್ಮಾಣ ಮಾಡಲು ಸಮಯಾವಕಾಶ ನೀಡುವಂತೆ ಕೋರಿ ಕಾರ್ಯದರ್ಶಿಗಳು, ಎ.ಪಿ.ಎಂ.ಸಿ. ಸೊರಬ ಇವರಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ. |
| | | | 28(3)(4). ಶಿಕಾರಿಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ಸಹಿತ ಮಾರಾಟ ಪತ್ರದಲ್ಲಿ ಗುತ್ತಿಗೆಯ ನಿವೇಶನದಲ್ಲಿ ಹತ್ತು ವರ್ಷದೊಳಗಾಗಿ ಕಟ್ಟಡ ನಿರ್ಮಾಣ ಮಾಡಿದಲ್ಲಿ ಮಾತ್ರವೇ ಮಾರಾಟ ಒಪ್ಪಂದವನ್ನು ಮಾಡಿಕೊಡಲಾಗುವುದು ಎಂಬುದಾಗಿ ಷರತ್ತು ವಿಧಿಸಲಾಗಿರುತ್ತದೆ. ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಾಣವಾಗದೇ ಇರುವ ಹಿನ್ನೆಲೆಯಲ್ಲಿ ಮಾರಾಟ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ. ಆದರೆ ಗುತ್ತಿಗೆ ಸಹಿತ ಮಾರಾಟ ಕರಾರನ್ನು ಊರ್ಜಿತಗೊಳಿಸುವಂತೆ ಹಾಗೂ ಕಟ್ಟಡ ನಿರ್ಮಾಣ ಮಾಡಲು ಸಮಯಾವಕಾಶ ನೀಡುವಂತೆ ಕೋರಿ |

| | | | |
|---|---|---|---|
| | | | ಕಾರ್ಯದರ್ಶಿಗಳು, ಎ.ಪಿ.ಎಂ.ಸಿ. ಶಿಕಾರಿಪುರ ಇವರಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ. |
| | | | 28(3)(5). ಸಂಘದ ಭದ್ರಾವತಿ ನಿವೇಶನವನ್ನು ಖರೀದಿಸುವ ಸಲುವಾಗಿ ಮಾರಾಟ ಒಪ್ಪಂದ ಮಾಡಿಕೊಡುವಂತೆ ಕೋರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಭದ್ರಾವತಿ ಇವರಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ. |
| 23 | 28(5) | ಸ್ಥಿರಾಸ್ತಿಗಳ ಮೇಲೆ ತೆಗೆದಿರುವ ಸವಕಳಿಯ ಬಗ್ಗೆ | ಕಟ್ಟಡಗಳ ಮೇಲೆ ಆದಾಯ ತೆರಿಗೆ ಕಾಯ್ದೆಯನ್ವಯ ಸವಕಳಿಯನ್ನು ತೆಗೆದಿರಿಸಲಾಗಿರುತ್ತದೆ. |
| 24 | 28(7) | ಸಂಘವು ನೀಡಿದ ಬಾಡಿಗೆ ಕಟ್ಟಡದ ಮೇಲೆ ವಸೂಲಾಗಬೇಕಾದ ಬಾಡಿಗೆ ಆದಾಯದ ಬಗ್ಗೆ. | ಸಂಘಕ್ಕೆ ಪಾವತಿಯಾಗಬೇಕಾದ ಬಾಡಿಗೆ ಮೊತ್ತವನ್ನು ವಸೂಲಿ ಮಾಡಲಾಗಿದೆ. |
| 25 | 28(ಬಿ)(6) | ಚರಾಸ್ತಿ ಮಾರಾಟದಿಂದ ಬಂದಿರುವ ಮೊತ್ತವನ್ನು ಲಾಭಕ್ಕೆ ಪರಿಗಣಿಸಿರುವ ಬಗ್ಗೆ. | ಲೆಕ್ಕಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗುವುದು. |
| 26 | 29 | ಅಖೈರು ದಾಸ್ತಾನುಗಳ ಬಗ್ಗೆ | ಸಂಘವು ಮಾರಾಟ ಮಾಡುವ ಮೈಲುತುತ್ತ, ಸುಣ್ಣ, ರಾಳ, ಪ್ಯಾಕಿಂಗ್ ಮಟೀರಿಯಲ್ಸ್, ಗೊಬ್ಬರ ದರವು ಮಾರುಕಟ್ಟೆಯಲ್ಲಿ ಹೆಚ್ಚು ಏರಿಳಿತವಾಗದ ಹಿನ್ನೆಲೆಯಲ್ಲಿ ಇವುಗಳ ಅಂತಿಮ ದಾಸ್ತಾನಿನ ಮೌಲ್ಯ ಮಾಪನವನ್ನು ಸಂಘವು ಖರೀದಿಸಿದ ದರದಲ್ಲಿ ಮಾಡಲಾಗುತ್ತಿದೆ. ಆದರೆ ಅಡಿಕೆಯ ದರವು ಮಾರುಕಟ್ಟೆಯಲ್ಲಿ ಏರಿಳಿತವಾಗುವ ಹಿನ್ನೆಲೆಯಲ್ಲಿ ಸಂಘವು ಖರೀದಿಸಿದ ಅಡಿಕೆಯ ಅಂತಿಮ ದಾಸ್ತಾನಿನ ಮೌಲ್ಯ ಮಾಪನವನ್ನು ಮಾಡುವಾಗ ಅಡಿಕೆ ಖರೀದಿ ಬೆಲೆಯ ಸರಾಸರಿ ಮೌಲ್ಯದ ಪದ್ಧತಿಯಲ್ಲಿ (Weighted Average) ಮಾಡಲಾಗುತ್ತಿದೆ. ಒಂದುವೇಳೆ ಅಡಿಕೆಯ ಅಂತಿಮ ದಾಸ್ತಾನಿನ ಮೌಲ್ಯಮಾಪನವನ್ನು ಖರೀದಿಸಿದ ದರದಲ್ಲಿಯೇ ಮಾಡಿದ್ದಲ್ಲಿ ಲಾಭದ ಪ್ರಮಾಣ ಹೆಚ್ಚಾಗಿ ಕೃತಕ ಲಾಭ ತೋರಿಸಿದಂತಾಗುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಹಾಗೂ ಅಡಿಕೆ ದರವು ಮಾರುಕಟ್ಟೆಯಲ್ಲಿ ಏರಿಳಿತವಾಗುವ ಕಾರಣ ಹೆಚ್ಚು ವೈಜ್ಞಾನಿಕ ಮತ್ತು ಸಂರಕ್ಷಣಾತ್ಮಕ ವಿಧಾನವಾಗಿರುವ ಸರಾಸರಿ ಮೌಲ್ಯದ ಪದ್ಧತಿಯಲ್ಲಿ (Weighted Average) ಅಡಿಕೆಯ ಅಂತಿಮ ದಾಸ್ತಾನನ್ನು ಮೌಲ್ಯಮಾಪನ ಮಾಡಲಾಗುತ್ತಿದೆ. |
| 27 | 30 | ಇತರೆ ಬರತಕ್ಕವುಗಳ ಬಗ್ಗೆ | 30(4) ಮುಂದಿನ ದಿನಗಳಲ್ಲಿ ಮೆಸ್ಕಾಂ ಸಂಸ್ಥೆಯಿಂದ ದೃಢೀಕರಣ ಪತ್ರವನ್ನು ಪಡೆಯಲಾಗುವುದು. |
| | | | 30(5) ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರ ಸಂಘ ನಿ., ಹೊಸನಗರ ಇವರಿಂದ ದೃಢೀಕರಣ ಪತ್ರವನ್ನು ಪಡೆಯಲಾಗಿರುತ್ತದೆ. |
| | | | 30(8)(1) ಎರಡು ವರ್ಷಗಳಿಗೂ ಮೇಲ್ಪಟ್ಟು ಬಾಕಿಯಿರುವ ಬರತಕ್ಕ ಮೊತ್ತಗಳನ್ನು ವಸೂಲಿ ಮಾಡಲು ಕ್ರಮವಿಡಲಾಗುವುದು. |

| | | | |
|---|---|---|---|
| | | | 30(8)(2) ಲೆಕ್ಕಪರಿಶೋಧಕರ ಸಲಹೆಯಂತೆ ವರ್ತಕರು ಮೂಲದಲ್ಲಿ ಕಟಾಯಿಸುವ ತೆರಿಗೆ ಮೊತ್ತವನ್ನು ಕಾಲಕಾಲಕ್ಕೆ ವರ್ತಕರ ಖಾತೆಗೆ ಜಮಾ ಮಾಡಲಾಗುವುದು. |
| 28 | 30(5) | ಎರಡು ವರ್ಷಕ್ಕೂ ಮೇಲ್ಪಟ್ಟು ಇತ್ಯರ್ಥವಾಗದೇ ಮುಂದುವರೆದ ಬರತಕ್ಕವುಗಳ ವಿವರ. | ಎರಡು ವರ್ಷಗಳಿಗೂ ಮೇಲ್ಪಟ್ಟು ಬಾಕಿಯಿರುವ ಪ್ರಕರಣಗಳಲ್ಲಿ ಸಂಬಂಧಿಸಿದವರಿಗೆ ನೋಟೀಸ್ ನೀಡಲಾಗಿದೆ ಹಾಗೂ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಾಕಿಯಿರುವ ಮೊತ್ತವನ್ನು ವಸೂಲಿ ಮಾಡಲು ಕ್ರಮವಿಡಲಾಗಿದೆ. |
| 29 | 39 | ಕಮಿಷನ್ ವ್ಯವಹಾರದಲ್ಲಿ ಕಂಡುಬಂದ ನ್ಯೂನ್ಯತೆಗಳು | 39(1) ನೂತನ ವರ್ತಕರ ನೋಂದಾವಣೆಯ ಸಂದರ್ಭದಲ್ಲಿ ಕೈತಪ್ಪಿನಿಂದ ಶ್ರೀ ವೀರಭದ್ರೇಶ್ವರ ಸ್ಟೋರ್ಸ್ – ಟಿ 466 ವರ್ತಕರ ಕಮಿಷನ್ ದರವು ಶೇ. 1.6 ರ ಬದಲು ಸಹಕಾರ ಸಂಸ್ಥೆಗಳ ದರ ಶೇ. 1.3 ನಿಗದಿಯಾಗಿರುತ್ತದೆ. ಕಮಿಷನ್ ವ್ಯತ್ಯಾಸದ ಈ ಮೊಬಲಗನ್ನು ಸದರಿ ವರ್ತಕರ ಗಮನಕ್ಕೆ ತಂದು ಪ್ರಸಕ್ತ ವರ್ಷದಲ್ಲಿ ಜಮಾ ಪಡೆಯಲು ಕ್ರಮವಿಡಲಾಗಿದೆ. |
| | | | 39(2)ಲೆಕ್ಕಪರಿಶೋಧಕರ ಸಲಹೆಯಂತೆ ಕೊರತೆಯಾದ ಭದ್ರತಾ ಠೇವಣಿಯನ್ನು ವರ್ತಕರಿಂದ ವಸೂಲಿ ಮಾಡಲಾಗುವುದು. |
| | | | 39(3) ಲೆಕ್ಕಪರಿಶೋಧಕರ ಸಲಹೆಯಂತೆ ವಸೂಲಿಗೆ ಕ್ರಮವಿಡಲಾಗುವುದು. |
| | | | 39(4) ಖರೀದಿ ಮಿತಿ ಮೀರಿದ ವರ್ತಕರ ಪಟ್ಟಿಯನ್ನು ಆಡಳಿತ ಮಂಡಲಿ ಸಭೆಗೆ ಕಾಲಕಾಲಕ್ಕೆ ಮಂಡಿಸುತ್ತಿದ್ದು, ಹೆಚ್ಚುವರಿಯಾಗಿ ಖರೀದಿಸಿದ ಮೊಬಲಗನ್ನು ಆಗಿಂದಾಗ್ಯೆ ಜಮಾ ಪಡೆಯಲಾಗಿರುತ್ತದೆ. |
| 30 | 40(2) | ಜಿ.ಎಸ್.ಟಿ ಕಾಯ್ದೆಯಡಿ ಬಡ್ಡಿ ಪಾವತಿಸಿರುವ ಬಗ್ಗೆ. | ಮಾರ್ಚ್–2025 ರಲ್ಲಿ EXEMPT INCOME ನ ಕುರಿತಾಗಿ ಜಿ.ಎಸ್.ಟಿ. ಪಾವತಿಸುವ ಬಗೆಗೆ ಗೊಂದಲವಿದ್ದ ಕಾರಣ ಸದರಿ ಆದಾಯದ ಮೇಲೆ ಜಿ.ಎಸ್.ಟಿ. ಪಾವತಿಸಿರುವುದಿಲ್ಲ. ಆದರೆ ಜಿ.ಎಸ್.ಟಿ.ಆರ್. ವಾರ್ಷಿಕ ವರದಿ ಸಲ್ಲಿಸುವ ಸಂದರ್ಭದಲ್ಲಿ ಲೆಕ್ಕಪರಿಶೋಧಕರು ಜಿ.ಎಸ್.ಟಿ ತೆರಿಗೆ ಪಾವತಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಈ ಬಾಬ್ತಿಗೆ ಬಡ್ಡಿ ಸೇರಿ ತೆರಿಗೆ ಬಾಬ್ತನ್ನು ಜಿ.ಎಸ್.ಟಿ ಇಲಾಖೆಗೆ ಪಾವತಿಸಲಾಗಿರುತ್ತದೆ. |
| 31 | 43 | ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳ ವಿವರ | ಲೆಕ್ಕಪರಿಶೋಧಕರು ನೀಡಿರುವ ಸಲಹೆ ಹಾಗೂ ಸೂಚನೆಗಳನ್ನು ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ಅಗತ್ಯ ಕ್ರಮವಿಡಲಾಗುವುದು. |
| 32 | 44 | ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ಇತರೆ ನ್ಯೂನತೆಗಳು ಹಾಗೂ ಲೋಪದೋಷಗಳು | ವರದಿ ಸಾಲಿನಲ್ಲಿ 48 ಸುಸ್ತಿ ಸದಸ್ಯರ ಮೇಲೆ ದಾವಾ ದಾಖಲಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸುಸ್ತಿ ಸಾಲಗಳ ವಸೂಲಾತಿಗೆ ಪರಿಣಾಮಕಾರಿಯಾಗಿ ಕ್ರಮವಿಡಲಾಗುವುದು. |

**********************

# ದಿನಾಂಕ 20 ಸೆಪ್ಟಂಬರ್ 2025ರಂದು ನಡೆದ 2024-25ನೇ ಸಾಲಿನ ಸಂಘದ 85ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯ

**ಹಾಜರಿದ್ದ ಸದಸ್ಯರು: 7216**

ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಮಾನ್ಯ ಅಧ್ಯಕ್ಷರೂ ಆದ ಶ್ರೀ ಗುರುದತ್ತ ಹೆಗಡೆ, ಐ.ಎ.ಎಸ್ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಂಘದ 85ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳು ಈ ಕೆಳಗಿನಂತಿದೆ.

**ಪ್ರಾರ್ಥನೆ, ಸಹಕಾರ ಗೀತೆ ಮತ್ತು ರೈತಗೀತೆ.**

85 ನೇ ವಾರ್ಷಿಕ ಸಾಮಾನ್ಯ ಸಭೆಯ ವಿದ್ಯುಕ್ತ ಪ್ರಾರಂಭಕ್ಕೂ ಪೂರ್ವದಲ್ಲಿ ಶ್ರೀಮತಿ ಪುಷ್ಪಲತಾ ಹೆಚ್ ಪಿ ಮತ್ತು ಶ್ರೀಮತಿ ಪಲ್ಲವಿ ಆರ್ ಇವರು ದೇವತಾ ಪ್ರಾರ್ಥನೆಯನ್ನು ಮಾಡಿದರು. ನಂತರದಲ್ಲಿ ಮಾಮ್‌ಕೋಸ್ ಸಿಬ್ಬಂದಿಗಳು ಸಹಕಾರ ಗೀತೆ ಮತ್ತು ರೈತಗೀತೆಯನ್ನು ಹಾಡಿದರು. ತದನಂತರ ಸಭೆಯ ವಿದ್ಯುಕ್ತ ಕಲಾಪಗಳು ಪ್ರಾರಂಭವಾಯಿತು.

**ಸ್ವಾಗತ.**

ಸಂಘದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಮಹೇಶ್ ಹೆಚ್ ಎಸ್ ಇವರು ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಮಾನ್ಯ ಅಧ್ಯಕ್ಷರಾದ ಶ್ರೀ ಗುರುದತ್ತ ಹೆಗಡೆ, ಐ.ಎ.ಎಸ್. ಇವರನ್ನು ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ಸಾಂಗವಾಗಿ ನೆರವೇರಿಸಿಕೊಡುವಂತೆ ಕೋರುತ್ತಾ, ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಸಂಘದ ನೂತನ ಆಡಳಿತ ಮಂಡಲಿಯ ನಿರ್ದೇಶಕರುಗಳನ್ನು ಸಭೆಗೆ ಪರಿಚಯಿಸಿಕೊಡುವುದರೊಂದಿಗೆ ಸ್ವಾಗತವನ್ನು ಕೋರಿದರು ಮತ್ತು ಸಂಘದ ವ್ಯವಸ್ಥಾಪಕ ನಿರ್ದೇಶಕರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಹಾಗೆಯೇ, ಸಭೆಯಲ್ಲಿ ಹಾಜರಿದ್ದ ಮಾಜಿ ಉಪಾಧ್ಯಕ್ಷರನ್ನು, ಮಾಜಿ ನಿರ್ದೇಶಕರನ್ನು ಮತ್ತು ಇತರ ಸಹಕಾರ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರನ್ನು ಸಭೆಗೆ ಸ್ವಾಗತಿಸಿದರು. ಹಾಗೆಯೇ ಸಂಘದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ ಇವರ ಪರವಾಗಿ ಸಭೆಯಲ್ಲಿ ಹಾಜರಿದ್ದಂತಹ ಶ್ರೀ ವೆಂಕಟರಾಮಾಚಾರಿ ಇವರನ್ನು ಮತ್ತು ಸಂಘದ ಯಶಸ್ಸಿಗಾಗಿ ದುಡಿಯುತ್ತಿರುವ ಸಿಬ್ಬಂದಿ ವರ್ಗದವರನ್ನು ಈ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ 85ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಕಾರ್ಯಸೂಚಿಯನ್ವಯ ಯಶಸ್ವಿಗೊಳಿಸಲು ಸಭೆಗೆ ಆಗ್ರಹಪೂರ್ವಕವಾಗಿ ವಿನಂತಿಸಿದರು.

**ಅಗಲಿದ ಸಂಘದ ಸದಸ್ಯರು ಮತ್ತು ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದು.**

ಸಂಘದ ನಿರ್ದೇಶಕರಾದ ಶ್ರೀ ವಿರೂಪಾಕ್ಷಪ್ಪ ಜಿ ಈ ಇವರು ಅಗಲಿದ ಸಂಘದ ಸದಸ್ಯರು ಮತ್ತು ನಾಡಿನ ಗಣ್ಯರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿಕೊಟ್ಟರು. ಸಂಘದ ಮಾಜಿ ವ್ಯವಸ್ಥಾಪಕ ನಿರ್ದೇಶಕರಾದ ಗೋವಿಂದರಾವ್ ಕುರ್ಡೇಕರ್, ಮಾಜಿ ನಿರ್ದೇಶಕರಾದ ಓಂಕಾರಿ ನಾಯ್ಕ ಎಂ ಡಿ ಮತ್ತು ಮಾರ್ತಾಂಡ, ಮಾಜಿ ವ್ಯವಸ್ಥಾಪಕರಾದ ಕುಮಾರ್ ಎಸ್ ಎಸ್, ಎಸ್ ಎಂ ಕೃಷ್ಣ-ಮಾಜಿ ವಿದೇಶಾಂಗ ಸಚಿವರು ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ಡಾ.ಮನಮೋಹನ್ ಸಿಂಗ್-ಭಾರತದ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಅರ್ಥಶಾಸ್ತ್ರಜ್ಞರು, ನಾ.ಡಿಸೋಜಾ-ಖ್ಯಾತ ಲೇಖಕರು, ಬಿ.ಸರೋಜಾದೇವಿ-

ಕನ್ನಡದ ಖ್ಯಾತ ಹಿರಿಯ ಕಲಾವಿದರು, ಬ್ಯಾಂಕ್ ಜನಾರ್ಧನ್-ಕನ್ನಡದ ಹಿರಿಯ ಹಾಸ್ಯನಟರು, ಶ್ಯಾಮ ಬೆನಗಲ್-ಖ್ಯಾತ ಚಿತ್ರ ನಿರ್ಮಾಪಕರು, ರತನ್ ಟಾಟಾ-ಉದ್ಯಮಿಗಳು, ಜಾಕಿರ್ ಹುಸೇನ್-ತಬಲ ವಾದಕರು, ನಟವರ್ ಸಿಂಗ್-ಮಾಜಿ ವಿದೇಶಾಂಗ ಸಚಿವರು ಇವರಿಗೆ ಹಾಗೂ ಪೆಹಲ್ಗಾಮ್ ದುರಂತದಲ್ಲಿ ಮೃತಪಟ್ಟ ಶಿವಮೊಗ್ಗದ ಮಂಜುನಾಥ ರಾವ್ ಸೇರಿದಂತೆ ಒಟ್ಟು 26 ಜನ ಭಾರತೀಯರು ಮತ್ತು ಸಂಘಕ್ಕೆ ತಿಳಿದು ಬಂದ ಮಾಹಿತಿಗಳ ಪ್ರಕಾರ ಕಳೆದ ವಾರ್ಷಿಕ ಸಾಮಾನ್ಯ ಸಭೆಯ ನಂತರದಿಂದ ಈ ಸಭೆಯ ದಿನಾಂಕದವರೆಗೆ ನಿಧನರಾದ ಸದಸ್ಯರ ಗೌರವಾರ್ಥ ಸಭೆಯಲ್ಲಿ ಮೌನವನ್ನು ಆಚರಿಸಿ, ಸಂತಾಪ ಸೂಚಿಸಲಾಯಿತು ಹಾಗೂ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ನಂತರ ಮಾನ್ಯ ಅಧ್ಯಕ್ಷರು ದೀಪ ಬೆಳಗುವುದರ ಮೂಲಕ 85ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ವಿಧ್ಯುಕ್ತವಾಗಿ ಸಭೆಗೆ ಚಾಲನೆಯನ್ನು ನೀಡಿದರು.

**ವಿಷಯ 01 :** **85ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವ ಕುರಿತು.**

**ತೀರ್ಮಾನ :** ಸಂಘದ ವ್ಯವಸ್ಥಾಪಕ ನಿರ್ದೇಶಕರು ಸಭಾ ಸೂಚನಾ ಪತ್ರವನ್ನು (ಮೀಟಿಂಗ್ ನೋಟಿಸ್) ಓದುವ ಮುನ್ನ

ಶ್ರೀ ತಿಮ್ಮಪ್ಪ, ಸಾಗರ ಇವರು ಮತದಾನಕ್ಕೆ ಅರ್ಹತೆ ಪಡೆಯಲು ವಾರ್ಷಿಕ ಸಾಮಾನ್ಯ ಸಭೆಯ ಹಾಜರಾತಿ ಕಡ್ಡಾಯವಾಗಿರುತ್ತದೆ. ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ ನಡೆಸುತ್ತೀರಿ, ಈ ಸಂದರ್ಭದಲ್ಲಿ ಬೇರೆ ಬೇರೆ ಸಂಘ-ಸಂಸ್ಥೆಗಳ ಸಾಮಾನ್ಯ ಸಭೆಗಳು ಇರುವುದರಿಂದ ಸಂಘದ ಸಾಮಾನ್ಯ ಸಭೆಗೆ ಹಾಜರಾಗುವುದು ಕಷ್ಟವಾಗುತ್ತದೆ. ಆದ್ದರಿಂದ ಜುಲೈ-ಆಗಸ್ಟ ತಿಂಗಳಲ್ಲಿ ಸಂಘದ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಬೇಕು ಎಂದು ತಿಳಿಸಿದರು.

ಶ್ರೀ ಕೆ ವಿ ಗೌಡರ್ ಇವರು ಪ್ರೇರಣಾ ಸಭಾಂಗಣದಲ್ಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುತ್ತಿರುವುದಕ್ಕೆ ಕಾರಣ ನೀಡುವಂತೆ ಆಗ್ರಹಿಸಿದಾಗ ಶ್ರೀ ಹೆಚ್.ಆರ್.ಬಸವರಾಜಪ್ಪ ಹಾಗೂ ಇನ್ನಿತರ ಸದಸ್ಯರು ಸಭೆಯು ವಿಧ್ಯಕ್ತವಾಗಿ ಪ್ರಾರಂಭವಾಗಲಿ ನಂತರ ಚರ್ಚೆಗಳಿಗೆ ಅವಕಾಶ ಮಾಡಿಕೊಡುವಂತೆ ತಿಳಿಸಿದರು.

ನಂತರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಈ ಸರ್ವ ಸದಸ್ಯರ ಸಭೆಗೆ ಅವಶ್ಯಕ ಕೋರಂ 1000 ಅಥವಾ ಅರ್ಹ ಸದಸ್ಯರ ಶೇ.10 ಪ್ರತಿಶತ ಆಗಿದ್ದು, ಪ್ರಸ್ತುತ 1000ಕ್ಕೂ ಹೆಚ್ಚು ಅರ್ಹ ಸದಸ್ಯರು ಹಾಜರಿರುವುದರಿಂದ ಸಭೆಯನ್ನು ಪ್ರಾರಂಭಿಸಬಹುದು ಎಂದು ಸಭೆಗೆ ತಿಳಿಸಿದರು. ನಂತರ ಸಭೆಗೆ ಅವಶ್ಯಕ ಕೋರಂ ಇರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡು 85ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸನ್ನು ದಾಖಲಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಶ್ರೀ ನಾರಾಯಣರಾವ್ ಜಿ ಎಸ್ ಇವರು ಸಭೆಯ ನೋಟೀಸ್ ಮತ್ತು ಅಜೆಂಡಾ ಎಂಬ ಪದಗಳ ಬದಲಿಗೆ ಸಭೆಯ ತಿಳುವಳಿಕೆ ಮತ್ತು ಕಾರ್ಯಸೂಚಿ ಎಂಬ ಪದಗಳನ್ನು ಬಳಸುವಂತೆ ಸೂಚಿಸಿದಾಗ ವ್ಯವಸ್ಥಾಪಕ ನಿರ್ದೇಶಕರು ಕಾಯ್ದೆ ಮತ್ತು ನಿಯಮಗಳಲ್ಲಿ ನೋಟೀಸು ಎಂಬುದಾಗಿಯೇ ಇರುವುದರಿಂದ ನೋಟೀಸ್ ಎಂಬ ಪದವನ್ನು ಬಳಸಲಾಗಿದೆ ಎಂದು ತಿಳಿಸಿದರು.

ಶ್ರೀ ಸತ್ಯನಾರಾಯಣ ಭಟ್ಟ, ಸಾಗರ ಇವರು ತಮಗೆ 81 ವರ್ಷ ವಯಸ್ಸಾಗಿದ್ದು ದೂರದಿಂದ ಬಂದು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗುವುದು ಸಾಧ್ಯವಾಗುವುದಿಲ್ಲ. ಆದರೆ ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗದೇ ಇದ್ದಲ್ಲಿ ಅನರ್ಹ ಸದಸ್ಯರಾಗುತ್ತೇವೆ. ಸಂಘದಲ್ಲಿ 50-60 ವರ್ಷಗಳಿಂದ ವ್ಯವಹಾರ ನಡೆಸಿಕೊಂಡು ಬಂದಿರುವ ತಮಗೆ ಕೊನೆಯಲ್ಲಿ ಸಂಘದ ಅನರ್ಹ ಸದಸ್ಯರಾಗುವುದು ಇಷ್ಟವಿಲ್ಲ. ಆದ್ದರಿಂದ ಸಂಘದ ಹಿರಿಯ ಸದಸ್ಯರು ಕೊನೆಯವರೆಗೂ ಸಂಘದ ಅರ್ಹ ಸದಸ್ಯರಾಗಿಯೇ ಉಳಿಯಲು ಅವಕಾಶ ಕೊಟ್ಟು ವಾರ್ಷಿಕ ಸಾಮಾನ್ಯ ಸಭೆಯ ಹಾಜರಾತಿಯ ಕೊರತೆಯಿಂದಾಗಿ ಅನರ್ಹ ಸದಸ್ಯರಾಗದಂತೆ ವಿನಾಯಿತಿ ನೀಡಲು ಕೋರಿದರು.

ಮಾನ್ಯ ಅಧ್ಯಕ್ಷರು ಅಜೆಂಡಾ ಪ್ರಕಾರ ಸಭೆಯನ್ನು ನಡೆಸೋಣ ನಂತರದಲ್ಲಿ ಸದಸ್ಯರುಗಳಿಗೆ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶ ಕಲ್ಪಿಸುತ್ತೇವೆ ಎಂದು ತಿಳಿಸಿದರು.

**ವಿಷಯ 02 :** **ದಿನಾಂಕ: 23.09.2024ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯನ್ನು ಪರಿಶೀಲಿಸಿ, ಒದಿ ದಾಖಲು ಮಾಡುವುದು ಹಾಗೂ ಆ ನಡವಳಿಯ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸುವ ಕುರಿತು.**

**ತೀರ್ಮಾನ :** ದಿನಾಂಕ: 20.09.2024ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯನ್ನು ಪರಿಶೀಲಿಸಿ, ದಾಖಲಿಸುವ ಮುನ್ನ,

ಶ್ರೀ ದಿನೇಶ್, ಕಡ್ತೂರು ಇವರು ಹಲವು ಜನ ಸಂಘದ ಸದಸ್ಯರು ಮೃತರಾಗಿದ್ದಾರೆ ಹಾಗೂ ಸಾಕಷ್ಟು ಸದಸ್ಯರು ತಮ್ಮ ತೋಟಗಳನ್ನು ಮಾರಾಟ ಮಾಡಿರುತ್ತಾರೆ, ಅಂತಹ ಸದಸ್ಯರನ್ನು ಗುರುತಿಸಿ ಸಂಘದ ಸದಸ್ಯತ್ವದಿಂದ ಅವರನ್ನು ಕೈಬಿಡುವಂತೆ ಈ ಹಿಂದೆ ತಿಳಿಸಲಾಗಿತ್ತು. ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಾಗ ಮಾನ್ಯ ಉಪಾಧ್ಯಕ್ಷರು ಮಾತನಾಡುತ್ತಾ, 2020-21ನೇ ಸಾಲಿನಿಂದ ಸತತವಾಗಿ 5 ವರ್ಷಗಳ ಕಾಲ ವ್ಯವಹಾರ ಮಾಡದೇ ಇರುವಂತಹ 5048 ಸದಸ್ಯರಿಗೆ 2025ರ ಜುಲೈ ಮಾಹೆಯಲ್ಲಿ ನೋಂದಣಿ ಅಂಚೆ ಮೂಲಕ ತಿಳುವಳಿಕೆ ನೋಟೀಸ್ ನೀಡಿರುವುದಾಗಿ ತಿಳಿಸಿದರು. ಹಾಗೆಯೇ, ಸಂಘದ ಆಡಳಿತ ಮಂಡಲಿಯ ಚುನಾವಣೆ-2025ರ ಸಂದರ್ಭದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಗಳು, 1960ರ ನಿಯಮ ಸಂಖ್ಯೆ 13ಡಿ(2-ಎ)iiರಡಿ 17724 ಅನರ್ಹ ಮತದಾರರಿಗೆ ನೋಂದಣಿ ಅಂಚೆ ಮೂಲಕ ನೋಟೀಸ್ ಕಳುಹಿಸಲಾಗಿದ್ದು, ಇದರಲ್ಲಿ **'ಸದಸ್ಯರು ಮೃತರಾಗಿರುತ್ತಾರೆ'** ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಂತಹ 500 ಸದಸ್ಯರ ಖಾತೆಗಳನ್ನು ಮುಕ್ತಾಯಗೊಳಿಸಿ ಅಮಾನತ್ತು ಖಾತೆಗೆ ವರ್ಗಾಯಿಸಲಾಗಿರುತ್ತದೆ. ಅದರಂತೆ ಈವರೆಗೆ ಅಂದಾಜು 2259 ಪ್ರಕರಣಗಳಲ್ಲಿ ಹಲವು ಖಾತೆಗಳನ್ನು ಸಂಬಂಧಪಟ್ಟ ಸದಸ್ಯರ / ವಾರಸುದಾರರ ಕೋರಿಕೆ ಮೇರೆಗೆ ಮುಕ್ತಾಯಗೊಳಿಸಲಾಗಿದ್ದು, ಉಳಿದ ಖಾತೆಗಳನ್ನು ಅಮಾನತ್ತು ಖಾತೆಗೆ ವರ್ಗಾಯಿಸಿ ಇತ್ಯರ್ಥಗೊಳಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಶ್ರೀ ಭೈರಪ್ಪ, ಹೊಸನಗರ ಇವರು ವಾರ್ಷಿಕ ಸಾಮಾನ್ಯ ಸಭೆಯನ್ನು ಆಯಾ ಶಾಖಾ ವ್ಯಾಪ್ತಿಯಲ್ಲಿ ನಡೆಸುವುದರಿಂದ ಸದಸ್ಯರಿಗೆ ಸಭೆಗೆ ಹಾಜರಾಗಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸದಸ್ಯರು ಅಜೆಂಡಾ ಪ್ರಕಾರ ಸಭೆಯನ್ನು ನಡೆಸುವಂತೆ ಮಾನ್ಯ ಅಧ್ಯಕ್ಷರಿಗೆ ಕೋರಿದರು.

ಶ್ರೀ ಮಿತ್ರ, ಕೇಳೂರು ಇವರು ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಘದ ಪ್ರಾಂಗಣದಿಂದ ಹೊರಗಡೆ ನಡೆಸುವ ಬಗ್ಗೆ ತಾವು ಸಲಹೆ ನೀಡಿದ್ದು, ಆದರೆ ಹಿಂದಿನ ವರ್ಷದ ಸಾಮಾನ್ಯ ಸಭೆಯ ನಡವಳಿಯನ್ನು ದಾಖಲಿಸುವ ಸಂದರ್ಭದಲ್ಲಿ ತಮ್ಮ ಹೆಸರು ಕೈಬಿಟ್ಟಿರುವುದಾಗಿ ತಿಳಿಸಿದಾಗ ಮಾನ್ಯ ಉಪಾಧ್ಯಕ್ಷರು ಕೈತಪ್ಪಿನಿಂದಾಗಿ ಇವರ ಹೆಸರು ಬಿಟ್ಟುಹೋಗಿರುವುದಕ್ಕೆ ವಿಷಾದ ವ್ಯಕ್ತಪಡಿಸಿ ಈ ಸಭೆಯಲ್ಲಿ ಇದನ್ನು ದಾಖಲಿಸುವುದಾಗಿ ತಿಳಿಸಿದರು.

ಶ್ರೀ ನಾರಾಯಣರಾವ್ ಜಿ ಎಸ್ ಇವರು ಒಟಿಎಸ್ ಯೋಜನೆ ಅಡಿಯಲ್ಲಿ ಎಷ್ಟು ಜನ ಸುಸ್ತಿದಾರ ಸದಸ್ಯರು ಸಾಲ ಜಮಾ ಮಾಡಿದ್ದಾರೆ ಎಂದು ಕೇಳಿದಾಗ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಒಟಿಎಸ್ ಯೋಜನೆ ಅಡಿಯಲ್ಲಿ 315 ಪ್ರಕರಣಗಳಿದ್ದು ಇದರ ಬಾಕಿ ಅಸಲು ಮೊತ್ತ ರೂ.1,78,20,123.00 ಆಗಿರುತ್ತದೆ. ಇದರಲ್ಲಿ 82 ಪ್ರಕರಣಗಳಿಂದ ಅಸಲು ಮೊತ್ತ ರೂ.43,93,957.00 ಹಾಗೂ ಬಡ್ಡಿ ಮೊತ್ತ ರೂ.29,50,369.00 ಜಮಾ ಬಂದಿರುತ್ತದೆ ಹಾಗೂ 233 ಪ್ರಕರಣಗಳ ರೂ.1,33,46,805.00 ಬಾಕಿ ಉಳಿದಿರುತ್ತದೆ ಎಂದು ತಿಳಿಸಿದರು. ಶ್ರೀ ರಂಗನಾಥ ಪಿ ಎನ್, ಸಾಗರ ಇವರು ಸಂಘದ ವಾರ್ಷಿಕ ವರದಿ ಎಲ್ಲಾ ಸದಸ್ಯರಿಗೂ ಅಂಚೆ ಮೂಲಕ ಮನೆಗೆ ತಲುಪುತ್ತದೆ. ಆದರೆ, ಲೆಕ್ಕಪರಿಶೋಧನಾ ವರದಿಯನ್ನು ಸಂಘದ ಶಾಖೆಗಳಲ್ಲಿ ಪಡೆಯುವಂತೆ ತಿಳಿಸಲಾಗುತ್ತದೆ. ಈ ವರ್ಷ ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ವಾರ್ಷಿಕ ವರದಿ ಪುಸ್ತಕದ ಬದಲು ಲೆಕ್ಕಪರಿಶೋಧನಾ ಪುಸ್ತಕದಲ್ಲಿ ಮುದ್ರಿಸಿರುತ್ತೀರಾ, ಸಂಘದ ಸದಸ್ಯರಿಗೆ ಲೆಕ್ಕಪರಿಶೋಧನಾ ವರದಿಯ ಬಗ್ಗೆ ಮಾಹಿತಿ ಇಲ್ಲದ ಕಾರಣ ಹೆಚ್ಚಿನ ಸದಸ್ಯರು ಲೆಕ್ಕಪರಿಶೋಧನಾ

ವರದಿಯನ್ನು ಪಡೆದು ಕೊಳ್ಳುವುದಿಲ್ಲ. ಇದರಿಂದಾಗಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ರಚನಾತ್ಮಕವಾದಂತಹ ಚರ್ಚೆ ನಡೆಸುವುದು ಸಾಧ್ಯವಾಗುವುದಿಲ್ಲ ಆದ್ದರಿಂದ ವಾರ್ಷಿಕ ವರದಿಗಳನ್ನು ಅಂಚೆ ಮೂಲಕ ಮನೆಗೆ ಕಳುಹಿಸುತ್ತಿರುವಂತೆಯೇ ಲೆಕ್ಕ ಪರಿಶೋಧನಾ ವರದಿಯನ್ನೂ ಎಲ್ಲಾ ಸದಸ್ಯರಿಗೂ ಅಂಚೆ ಮೂಲಕ ಮನೆಗೆ ಕಳುಹಿಸಬೇಕು ಎಂದು ಆಗ್ರಹಿಸಿದರು.

ಈ ಕುರಿತು ಮಾನ್ಯ ಉಪಾಧ್ಯಕ್ಷರು ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯ ತೀರ್ಮಾನದಂತೆ ಕಳೆದ ಬಾರಿಯ ಸಾಮಾನ್ಯ ಸಭೆಯ ನಡವಳಿಯನ್ನು ಲೆಕ್ಕಪರಿಶೋಧನಾ ಪುಸ್ತಕದಲ್ಲಿ ಮುದ್ರಿಸಲಾಗಿರುತ್ತದೆ ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಂಘದ ಎಲ್ಲಾ ಶಾಖೆಗಳಲ್ಲಿ, ನೇರ ಖರೀದಿ ಕೇಂದ್ರಗಳಲ್ಲಿ ಮತ್ತು ಏಜೆನ್ಸಿಗಳಲ್ಲಿ ಇರಿಸಲಾಗಿತ್ತು ಎಂದು ತಿಳಿಸಿದರು.

ಶ್ರೀ ತಿಮ್ಮಪ್ಪ ಎಲ್ ಟಿ, ಸಾಗರ ಇವರು ಲೆಕ್ಕಪರಿಶೋಧನಾ ವರದಿಯನ್ನು ಸದಸ್ಯರಿಗೆ ಕಳುಹಿಸುವ ಬಗ್ಗೆ ಈಗಾಗಲೇ ಕಳೆದ ಹಲವಾರು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚರ್ಚೆಯಾಗಿದ್ದು 30000 ಸದಸ್ಯರುಗಳಿಗೆ ಲೆಕ್ಕಪರಿಶೋಧನಾ ವರದಿಯನ್ನು ಕಳುಹಿಸುವುದು ಸಂಘಕ್ಕೆ ಅನಗತ್ಯ ಹೊರೆಯಾಗುತ್ತದೆ. ಆದ್ದರಿಂದ ಸಂಘದ ಶಾಖೆಗಳಲ್ಲಿ ಲೆಕ್ಕ ಪರಿಶೋಧನಾ ವರದಿಯನ್ನು ಸದಸ್ಯರು ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ತೀರ್ಮಾನಿಸಲಾಗಿದ್ದು ಅದರಂತೆ ವ್ಯವಸ್ಥೆ ಮಾಡಿರುತ್ತಾರೆ. ಆದ್ದರಿಂದ ಈ ಬಗೆಗೆ ಮತ್ತೆ ಚರ್ಚೆ ಮಾಡುವುದು ಬೇಡ ಎಂದು ತಿಳಿಸಿದರು. ಇದಕ್ಕೆ ಪೂರಕವಾಗಿ ಶ್ರೀ ಪ್ರಸನ್ನಕುಮಾರ್ ಎ ಆರ್ ಇವರು ಸಂಘದ ಮೊಬೈಲ್ಆಪ್ ಮತ್ತು ವೆಬ್‌ಸೈಟ್‌ಗಳಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಪ್ರಕಟಿಸುವ ಕುರಿತು ಕ್ರಮ ಕೈಗೊಳ್ಳಿ, ಅದರ ಹೊರತಾಗಿ ಈಗಿರುವ ಪದ್ಧತಿ ಸರಿ ಇದ್ದು ಇದನ್ನೇ ಮುಂದುವರೆಸಿ. ಪ್ರಸ್ತುತ ಪರಿಸ್ಥಿತಿಯಲ್ಲಿ ಕಾಗದ ಮುದ್ರಣವನ್ನು ಕಡಿಮೆ ಮಾಡಬೇಕಾಗಿದ್ದು, ಇದಕ್ಕಾಗಿ ಹಣ ವೆಚ್ಚ ಮಾಡಬೇಡಿ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ನಾರಾಯಣರಾವ್ ಜಿ ಎಸ್ ಇವರು ಹಿಂದಿನ ವರ್ಷದ ಸಾಮಾನ್ಯ ಸಭೆಯ ನಡವಳಿಯನ್ನು ಪರಿಶೀಲಿಸಿ, ಓದಿ ದಾಖಲು ಮಾಡುವುದು ಎಂದರೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗಿರುವುದಕ್ಕೆ ಅನುಮೋದನೆ ಮಾಡಲಾಗುತ್ತದೆ. ಅದರ ಬಗ್ಗೆ ಮತ್ತೊಮ್ಮೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಸದರಿ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನಷ್ಟೇ ಪರಿಶೀಲಿಸಬೇಕು. ಆದ್ದರಿಂದ ಅವುಗಳ ಮೇಲೆ ಮತ್ತೆ ಚರ್ಚೆ ಮಾಡುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟರು.

ಶ್ರೀ ಮಿತ್ರ ಇವರು ಆರ್ಥಿಕವಾಗಿ ಸಂಕಷ್ಟದಲ್ಲಿರುವ ರೈತರಿಗೆ ಒಟಿಎಸ್ ಯೋಜನೆಯಲ್ಲಿ ಇನ್ನಷ್ಟು ರಿಯಾಯಿತಿ ಕೊಡಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಅಂಚೆ ಮೂಲಕ ಎಲ್ಲಾ ಸದಸ್ಯರ ಮನೆಗೆ ಕಳುಹಿಸಿಕೊಡಿ ಎಂದು ತಿಳಿಸಿದಾಗ ಮಾನ್ಯ ಅಧ್ಯಕ್ಷರು ಈ ವಿಷಯದ ಕುರಿತು ಈಗಾಗಲೇ ಚರ್ಚೆಯಾಗಿದ್ದು ಹಲವು ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ. ಈಗಾಗಲೇ ಸಂಘದ ಮೊಬೈಲ್ ಆಪ್ ಮತ್ತು ವೆಬ್‌ಸೈಟ್‌ಗಳಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಪ್ರಕಟಿಸಿದ್ದು, ಈ ಬಗೆಗೆ ಮತ್ತೆ ಚರ್ಚೆ ಬೇಡ ಎಂದರು. ಇದಕ್ಕೆ ಪೂರಕವಾಗಿ ಶ್ರೀ ಬಸವರಾಜಪ್ಪ ಇವರು 30000 ಸದಸ್ಯರಿಗೆ ಲೆಕ್ಕ ಪರಿಶೋಧನಾ ವರದಿಯನ್ನು ಅಂಚೆ ಮೂಲಕ ಕಳುಹಿಸುವುದು ಸಂಸ್ಥೆಗೆ ಆರ್ಥಿಕವಾಗಿ ಹೊರೆಯಾಗುತ್ತದೆ. ವಾರ್ಷಿಕ ವರದಿಯನ್ನು ಎಲ್ಲಾ ಸದಸ್ಯರಿಗೂ ಕಳುಹಿಸುವುದು ಅನಿವಾರ್ಯವಾಗಿರುತ್ತದೆ. ಆದರೆ ಸಂಸ್ಥೆಯ ಷೇರುದಾರ ಸದಸ್ಯರಲ್ಲಿ ಸಂಘಕ್ಕೆ ಅಡಿಕೆ ಹಾಕಿ ವ್ಯವಹಾರ ಮಾಡದೇ ಇರುವಂತಹ ಸಾಕಷ್ಟು ಸದಸ್ಯರು ಇದ್ದು ಇವರಿಗೂ ಕೂಡಾ ಲೆಕ್ಕಪರಿಶೋಧನಾ ವರದಿಯನ್ನು ಕಳುಹಿಸಿಕೊಡಬೇಕೆಂಬುದು ಸಂಘಕ್ಕೆ ಆರ್ಥಿಕವಾಗಿ ನಷ್ಟವಾಗುತ್ತದೆ. ಆದ್ದರಿಂದ ಈಗಿರುವ ವ್ಯವಸ್ಥೆಯಂತೆಯೇ ಸಂಘದ ಶಾಖೆಗಳಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಲಭ್ಯವಿರಿಸಿದರೆ ಆಸಕ್ತರು ಪಡೆದುಕೊಳ್ಳುತ್ತಾರೆ ಈ ಬಗ್ಗೆ ಮತ್ತೆ ಮತ್ತೆ ಚರ್ಚೆ ಮಾಡುವುದು ಬೇಡ ಎಂದು ತಿಳಿಸಿದರು.

ಈ ಬಗ್ಗೆ ಮಾನ್ಯ ಉಪಾಧ್ಯಕ್ಷರು ಪುಸ್ತಕವನ್ನು ಫ್ರ್ಯಾಂಕ್ ಮಾಡಲು ಕಷ್ಟವಾಗುತ್ತದೆ ಎಂದು ಅಂಚೆ ಇಲಾಖೆಯವರು ಹೇಳುತ್ತಾರೆ. ಹಾಗೂ ಸ್ಥಳೀಯ ಅಂಚೆ ಇಲಾಖೆಗಳಲ್ಲೂ ವರದಿ ಪುಸ್ತಕವನ್ನು ನೀಡುವಂತೆ ತಿಳಿಸಲಾಗಿರುತ್ತದೆ. ಆದರೂ ಸಹ ನೀಡುವುದಿಲ್ಲ ಎಂದು ತಿಳಿಸಿದರು.

ಶ್ರೀ ಮನೋಹರ ಬಿ ಆರ್, ಷೇರು ಸಂಖ್ಯೆ-33304 ಇವರು ಹಿಂದಿನ ಸಭೆಯ ನಡವಳಿಯಲ್ಲಿ ಮಾಮ್‌ಕೋಸ್ ಸಂಸ್ಥೆಯು ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ತಿಳಿಸಿರುತ್ತೀರಿ. ಆದರೆ ಸಂಘಕ್ಕೆ ಅಡಿಕೆಯನ್ನು ತಂದಂತಹ ಹಲವಾರು ಸದಸ್ಯರು ಉತ್ತಮ ಧಾರಣೆ ಸಿಗದೇ ಅಡಿಕೆಯನ್ನು ವಾಪಸ್ಸು ತೆಗೆದುಕೊಂಡು ಹೋಗಿರುತ್ತಾರೆ ಇದಕ್ಕೆ ಕಾರಣ ತಿಳಿಸುವಂತೆ ಕೇಳಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು ದಿನಾಂಕ 23 ಸೆಪ್ಟೆಂಬರ್ 2024ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ಅದರ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 03 :** **ಅಧ್ಯಕ್ಷರಿಂದ ಸಂಘದ ಮುಂದಿನ ವರ್ಷದ ಧ್ಯೇಯ ಧೋರಣೆಗಳ ಬಗೆಗೆ ವಿವರಣಾತ್ಮಕ ನುಡಿ.**

ಸಂಘದ ಮಾನ್ಯ ಅಧ್ಯಕ್ಷರು ಈ ದಿನದ ವಾರ್ಷಿಕ ಮಹಾಸಭೆಗೆ ಆಗಮಿಸಿದ ಎಲ್ಲರನ್ನೂ ಮತ್ತೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಅಂದಿನ ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿದ್ದ ಮಾನ್ಯ ಶ್ರೀ ಎಂ.ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಅಡಿಕೆ ಬೆಳೆಗಾರರ ಹಿತವನ್ನು ಕಾಯುವ ಉದ್ದೇಶದಿಂದ 1939ರ ನವೆಂಬರ್ 8ನೇ ತಾರೀಖಿನಂದು ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಗೊಂಡ **`ಮಾಮ್‌ಕೋಸ್'** ಸಂಸ್ಥೆಯು ಇದೀಗ 85 ವರ್ಷಗಳನ್ನು ಪೂರೈಸಿ ಯಶಸ್ವಿಯಾಗಿ ಮುನ್ನಡೆಯುತ್ತಿರುವುದಕ್ಕೆ ತಾವೆಲ್ಲರೂ ನೀಡಿರುವ ಸಹಕಾರ ಮತ್ತು ಬೆಂಬಲವೇ ಕಾರಣವಾಗಿದ್ದು, ಇದಕ್ಕಾಗಿ ವೈಯಕ್ತಿಕವಾಗಿ ಮತ್ತು ಆಡಳಿತ ಮಂಡಳಿ ಪರವಾಗಿ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಈಗಾಗಲೇ ಸದಸ್ಯರಿಗೆ ಕಳುಹಿಸಿರುವ ಸಂಘದ 2024-25ನೇ ಸಾಲಿನ ಆರ್ಥಿಕ ತಃಖ್ತೆಗಳು ಮತ್ತು ವಾರ್ಷಿಕ ವರದಿಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಪೂರ್ಣ ವಿವರಗಳನ್ನು ನೀಡಿದ್ದು, ಸಂಸ್ಥೆಯು 2024-25ರ ಆರ್ಥಿಕ ಸಾಲಿನಲ್ಲಿ ರೂ. 5.52 ಕೋಟಿ ಲಾಭವನ್ನು ಗಳಿಸಿ ಆಡಿಟ್ ವರ್ಗೀಕರಣದಲ್ಲಿ **'ಎ'** ಶ್ರೇಣಿಯಲ್ಲಿಯೇ ಮುಂದುವರೆದಿರುವುದಕ್ಕೆ ಹಾಗೂ ಕಳೆದ ಬಾರಿಗಿಂತ ರೂ.27.26 ಲಕ್ಷ ಅಧಿಕ ಲಾಭ ಗಳಿಸಿರುವುದಕ್ಕೆ ಸದಸ್ಯರೆಲ್ಲರೂ ನೀಡಿರುವ ಬೆಂಬಲ ಹಾಗೂ ಅವರ ಸಹಕಾರವೇ ಕಾರಣವಾಗಿದ್ದು, ಇದಕ್ಕಾಗಿ ಅವರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ಕಳೆದ ವಾರ್ಷಿಕ ಮಹಾಸಭೆಯಲ್ಲಿ ಚರ್ಚೆಯಾದಂತೆ ಕೈಗೊಂಡ ಕ್ರಮದ ವಿವರಗಳನ್ನು ಕೆಳಕಂಡಂತೆ ಸಭೆಯ ಗಮನಕ್ಕೆ ತಂದರು.

1. ಸಂಘದ ಸದಸ್ಯರು ಮತ್ತು ಅವರ ಕುಟುಂಬ ಹಾಗೂ ಅವರ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಕೃಷಿ ಕೂಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ **`ಗುಂಪು ವಿಮೆ'** ಯೋಜನೆಯಡಿಯಲ್ಲಿ 2024-25ನೇ ಸಾಲಿನಲ್ಲಿ 29,909 ನೋಂದಣಿಯಾಗಿರುತ್ತದೆ. ಅಲ್ಲದೆ, ಈ ಬಾರಿಯೂ ಸಹ ಸದಸ್ಯರು ಅನಿಯಮಿತ ಸಂಖ್ಯೆಯಲ್ಲಿ ಅಂದರೆ, ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ತಮ್ಮ ಹೆಸರಿಸದ ಕೂಲಿ ಕಾರ್ಮಿಕರನ್ನು ಈ **`ಗುಂಪು ವಿಮಾ'** ಯೋಜನೆ ಅಡಿಯಲ್ಲಿ ನೋಂದಾಯಿಸಲು ಅವಕಾಶ ಇರುತ್ತದೆ.
2. ಸಂಘದಿಂದ ಸದಸ್ಯರಿಗೆ ನೀಡುವ ಸಹಾಯಧನದ ಮೊಬಲಗನ್ನು ನಿರ್ದಿಷ್ಟ ಷರತ್ತುಗಳಿಗೊಳಪಟ್ಟು ಈ ಕೆಳಕಂಡಂತೆ ಹೆಚ್ಚಿಸಲಾಗಿರುತ್ತದೆ.

- ಅಸ್ತ್ರ ಒಲೆ ಮತ್ತು ಗಟಾರ್ ಸ್ಪ್ರೇಯರ್ ರೂ.1,000 ರಿಂದ 2,000ಕ್ಕೆ ಹೆಚ್ಚಿಸಲಾಗಿದೆ.
- ಡ್ರೈಯರ್ ರೂ.7,000 ರಿಂದ 10,000ಕ್ಕೆ ಹೆಚ್ಚಿಸಲಾಗಿದೆ.
- ಮುಂದುವರೆದು, ಈ ಬಾರಿಯಿಂದ ಪವರ್ ಸ್ಪ್ರೇಯರ್ ಗೂ ಸಹ ರೂ.5,000/-ವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.

3. ರೈತರ ಎಲ್ಲಾ ಬೆಳೆಗಳಿಗೆ ಶಕ್ತಿ ಮತ್ತು ಚೈತನ್ಯವನ್ನು ನೀಡುವ `**ಮಾಮ್‌ಕೋಸ್ ಸಸ್ಯ ಚೈತನ್ಯ**' ಮತ್ತು `**ವಸುಧಾ ಸಿರಿ**' ಸಾವಯವ ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಗರಿಷ್ಠ ಪ್ರಮಾಣದಲ್ಲಿ ಇದನ್ನು ಮಾರಾಟ ಮಾಡಲಾಗುತ್ತಿದೆ. ಸಂಘದಿಂದ ಅಗ್ರಿ ಲೈಮ್ ಮತ್ತು ಡೋಲೋಮೈಟ್ ಸುಣ್ಣವನ್ನು ಮಾರಾಟ ಮಾಡಲಾಗುತ್ತಿದೆ.
4. ಸಂಘದಿಂದ ಉತ್ತಮ ಗುಣಮಟ್ಟದ ಬೇವಿನ ಪುಡಿಯನ್ನು ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.
5. ಮಾಮ್‌ಕೋಸ್ ಸಂಸ್ಥೆಯಿಂದ ಕಾಳುಮೆಣಸು ಖರೀದಿಯನ್ನು ಪ್ರಾರಂಭಿಸಿದ್ದು, 2024-25ನೇ ಸಾಲಿನಲ್ಲಿ 210 ಕ್ವಿಂಟಾಲ್ ಕಾಳುಮೆಣಸನ್ನು ಖರೀದಿಸಲಾಗಿದೆ. ಪ್ರಸ್ತುತ ಎಲ್ಲಾ ಶಾಖೆ ಮತ್ತು ನೇರ ಖರೀದಿ ಕೇಂದ್ರಗಳಲ್ಲಿಯೂ ಕಾಳುಮೆಣಸು ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, 119 ಕ್ವಿಂಟಾಲ್ ಕಾಳುಮೆಣಸನ್ನು ಮಾರಾಟ ಮಾಡಲಾಗಿದೆ.
6. ಇ-ಟೆಂಡರ್ ಮೂಲಕ ದಿನಾಂಕ 31 ಮಾರ್ಚ್ 2025ರವರೆಗೆ ಸಂಘದಿಂದ ಅಂದಾಜು 72,053 ಕ್ವಿಂಟಾಲ್ ಅಡಿಕೆಯನ್ನು ಹಾಗೂ ನೇರ ಖರೀದಿ ಮೂಲಕ 22,215 ಕ್ವಿಂಟಾಲ್ ಅಡಿಕೆಯನ್ನು ಖರೀದಿಸಲಾಗಿದೆ.
7. ಬೇರೆ ಸಹಕಾರ ಸಂಘಗಳಲ್ಲಿಯೂ ಸಹ 45,237 ಕ್ವಿಂಟಾಲ್ ಅಡಿಕೆಯನ್ನು ಖರೀದಿಸಲಾಗಿದೆ. ದಿನಾಂಕ 31 ಮಾರ್ಚ್ 2025ರವರೆಗೆ 1,21,722 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡಲಾಗಿದೆ.
8. 2024-25ನೇ ಸಾಲಿನಲ್ಲಿ ಸುಮಾರು ರೂ.685 ಕೋಟಿ ಮೌಲ್ಯದಷ್ಟು ಅಡಿಕೆ ಖರೀದಿ ಮಾಡಿದ್ದು, ಇದರಿಂದ ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆಯ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಮಾಮ್‌ಕೋಸ್ ಸಂಸ್ಥೆಯು ಪ್ರಮುಖ ಪಾತ್ರ ವಹಿಸಿರುವುದನ್ನು ಸಭೆಯ ಗಮನಕ್ಕೆ ತಂದರು.
9. ಕಳೆದ 5 ವರ್ಷಗಳಿಂದ ಅಂದರೆ 2020-21ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಸಂಘದಲ್ಲಿ ವ್ಯವಹಾರ ನಡೆಸದ ಒಟ್ಟು 5048 ಜನ ಸದಸ್ಯರಿಗೆ ನೋಂದಾಯಿತ ಅಂಚೆ ಮೂಲಕ ತಿಳಿವಳಿಕೆ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.
10. ಸದಸ್ಯರ ಬಹುದಿನದ ಅಪೇಕ್ಷೆಯಂತೆ ಸಂಘದಿಂದ ಇಂದೀಕೃತಗೊಂಡ ಅಭಿವೃದ್ಧಿ ಪಡಿಸಿದ **'ಮಾಮ್‌ಕೋಸ್ ಆ್ಯಪ್'** ಚಾಲ್ತಿಯಲ್ಲಿದ್ದು, ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಲಾಗುತ್ತಿದೆ. ಸದಸ್ಯರು ಈ ಆ್ಯಪ್ ಅನ್ನು ತಮ್ಮ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಸದುಪಯೋಗಪಡಿಸಿಕೊಳ್ಳಲು ವಿನಂತಿಸಿದರು.
11. ಹಲವಾರು ವರ್ಷಗಳಿಂದ ನ್ಯಾಯಾಲಯದಲ್ಲಿದ್ದ ಕೆಲವು ಪ್ರಕರಣಗಳನ್ನು ಸೌಹರ್ದಯುತವಾಗಿ ಬಗೆಹರಿಸಲಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು.

**ಮುಂದುವರೆದು,**

- ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ದಿನಾಂಕ 27 ಜೂನ್ 2024ರ ಆದೇಶದ ಮೇರೆಗೆ ಸಂಘದಲ್ಲಿ ಜಾರಿಗೊಳಿಸಿದ್ದ ಏಕಕಾಲಿಕ ಸಾಲ ತೀರುವಳಿ ಯೋಜನೆ ಅಡಿಯಲ್ಲಿ ಒಟ್ಟು 82 ಪ್ರಕರಣಗಳು ಇತ್ಯರ್ಥಗೊಂಡಿರುತ್ತದೆ.
- ಸಂಘದ ಅಡಿಕೆ ಬೆಳೆಗಾರ ಸದಸ್ಯರ ಉತ್ತಮ ಗುಣಮಟ್ಟದ ಅಡಿಕೆಗೆ ಉತ್ತಮ ಧಾರಣೆ ದೊರಕಬೇಕೆಂಬ ಉದ್ದೇಶದಿಂದ ಸಂಘದ ಶಿವಮೊಗ್ಗ, ಕೊಪ್ಪ, ತರಿಕೆರೆ, ಚನ್ನಗಿರಿ, ಭದ್ರಾವತಿ, ಸಾಗರ, ತೀರ್ಥಹಳ್ಳಿ, ಹೊಸನಗರ ಮತ್ತು ಬೀರೂರು ಶಾಖೆಗಳಲ್ಲಿ ಅಡಿಕೆ ಸ್ವಚ್ಛಗೊಳಿಸುವ ಯಂತ್ರವನ್ನು ಅಳವಡಿಸಿದ್ದು, ಸಂಘದ ಇನ್ನುಳಿದ ಶಾಖೆಗಳಲ್ಲಿಯೂ ಅಡಿಕೆ ಸ್ವಚ್ಛಗೊಳಿಸುವ ಯಂತ್ರವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.
- ಸದಸ್ಯರಿಗೆ ಅನುಕೂಲವಾಗುವಂತೆ ಇಫ್ಕೋ ಕಂಪನಿ ಸೇರಿದಂತೆ ಇನ್ನಿತರ ಕಂಪನಿಯ ಡೀಲರ್‌ಶಿಪ್ ಪಡೆದು ರಸಗೊಬ್ಬರವನ್ನು ಹಾಗೂ ಕೃಷಿಗೆ ಅವಶ್ಯವಿರುವ ಇನ್ನಿತರ ಉತ್ಪನ್ನಗಳನ್ನು ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡುವ ಕುರಿತಾದ ಕ್ರಮವು ಪ್ರಗತಿಯಲ್ಲಿರುತ್ತದೆ.

- ಸದಸ್ಯ ಬೆಳೆಗಾರರ ಅಡಿಕೆ ದಾಸ್ತಾನಿನ ಸೌಲಭ್ಯಕ್ಕಾಗಿ ಅಗತ್ಯವಾದ ಗೋದಾಮು ನಿರ್ಮಿಸಲು ತೀರ್ಥಹಳ್ಳಿಯಲ್ಲಿ ಖಾಸಗಿ ನಿವೇಶನವನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
- ಸಂಘದಲ್ಲಿ ಖಾಲಿ ಇದ್ದ ವಿವಿಧ ದರ್ಜೆಯ ಒಟ್ಟು 19 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ನಿಯಮಾನುಸಾರ ಹಾಗೂ ಪಾರದರ್ಶಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.
- ಕೊಪ್ಪ ತಾಲ್ಲೂಕು ಜಯಪುರದಲ್ಲಿ ಸಂಘದ ಅಡಿಕೆ ಸಂಗ್ರಹಣಾ ಏಜೆನ್ಸಿಯು ಮುಕ್ತಾಯವಾದ್ದರಿಂದ ದಿನಾಂಕ 11 ನವೆಂಬರ್ 2024ರಂದು ಶಾಖೆ ಹಾಗೂ ಅಡಿಕೆ ನೇರ ಖರೀದಿ ಕೇಂದ್ರವನ್ನು ಪ್ರಾರಂಭಿಸಲಾಗಿರುತ್ತದೆ.
- ಅಡಿಕೆ ಬೆಳೆಗಾರ ಸದಸ್ಯರಿಗೆ ಉತ್ತಮ ಧಾರಣೆಯನ್ನು ನೀಡುವ ಉದ್ದೇಶದಿಂದ ಅಡಿಕೆಯ ಆಮದು ದರ ಹೆಚ್ಚಳ ಮಾಡುವ ಕುರಿತು ಹಾಗೂ ತೆರಿಗೆ ವಂಚನೆಯನ್ನು ನಿಲ್ಲಿಸುವ ಕುರಿತು ಮಾಮ್‌ಕೋಸ್ ಮತ್ತು ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳ ಹಾಗೂ ಇನ್ನಿತರ ಅಡಿಕೆ ಮಾರಾಟ ಸಹಕಾರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲಿಸಿದ್ದು, ಸಕಾರಾತ್ಮಕ ಪ್ರತಿಕ್ರಿಯೆ ಬಂದಿರುವುದನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತಂದರು.
- ಕೆಂಪಡಿಕೆಗೆ ಜಿಯೋಗ್ರಾಫಿಕಲ್ ಇಂಡಿಕೇಷನ್ ಪಡೆಯುವ (ಜಿ ಐ) ಪ್ರಕ್ರಿಯೆ ಪ್ರಗತಿಯಲ್ಲಿದೆ.
- ಮಾಮ್‌ಕೋಸ್ ಆ್ಯಪ್‌ನ್ನು ಇನ್ನಷ್ಟು ಅಭಿವೃದ್ಧಿಪಡಿಸಿದ್ದು, ಇದೀಗ ಸದಸ್ಯರು ತಮ್ಮ ಅಡಿಕೆಯನ್ನು ಈ ಆ್ಯಪ್‌ನ ಮೂಲಕವೇ ಮಾರಾಟಕ್ಕೆ ಬಿಡಬಹುದಾಗಿದೆ ಮತ್ತು ಮಾರಾಟದ ಹಣವನ್ನು ತಮ್ಮ ಬ್ಯಾಂಕ್ ಅಕೌಂಟ್‌ಗೆ ಹಾಕಿಸಲು ಇದರ ಮೂಲಕವೇ ಬೇಡಿಕೆಯನ್ನು ಕಳಿಸಬಹುದಾಗಿದೆ. ಸಂಘದ **`ವೆಬ್‌ಸೈಟ್'** ಮತ್ತು **`ಮೊಬೈಲ್‌ಆ್ಯಪ್'** ನ್ನು ಮತ್ತಷ್ಟು ಸದಸ್ಯ ಸ್ನೇಹಿಯಾಗಿಸಲು ಅಗತ್ಯ ಕ್ರಮ ಕೈಗೊಳ್ಳಲು ಯೋಜಿಸಲಾಗಿದೆ. ವರ್ತಕರಿಗೂ ಅವರ ವ್ಯವಹಾರ ಮಾಹಿತಿಯನ್ನು ತಿಳಿಯಲು ಅನುಕೂಲವಾಗಲು **'ವರ್ತಕರ ಆ್ಯಪ್'** ನ್ನು ಸಹ ಅಭಿವೃದ್ಧಿಪಡಿಸಲಾಗಿದೆ.
- ಶಿವಮೊಗ್ಗ ಮತ್ತು ತೀರ್ಥಹಳ್ಳಿಯಲ್ಲಿನ 'ಪ್ರಸಾದ್ ನೇತ್ರಾಲಯ' ಇವರೊಂದಿಗೆ ಸಂಘದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಕಣ್ಣಿನ ಚಿಕಿತ್ಸೆ ಸೌಲಭ್ಯ ನೀಡುವ ಬಗ್ಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.
- ಶಿವಮೊಗ್ಗದ 'ನಾರಾಯಣ ಹೃದಯಾಲಯ' ಆಸ್ಪತ್ರೆಯವರೊಂದಿಗೆ ರಿಯಾಯಿತಿ ದರದಲ್ಲಿ ಸಂಘದ ಸದಸ್ಯರಿಗೆ ಚಿಕಿತ್ಸೆ ಸೌಲಭ್ಯ ನೀಡುವ ಬಗ್ಗೆ ಚರ್ಚಿಸಲಾಗುತ್ತಿದೆ.
- 'ಎನ್ ಯು ಆಸ್ಪತ್ರೆ, ಶಿವಮೊಗ್ಗ' ಇವರೊಂದಿಗೆ ರಿಯಾಯಿತಿ ದರದಲ್ಲಿ ಸಂಘದ ಸದಸ್ಯರಿಗೆ ಚಿಕಿತ್ಸೆ ಸೌಲಭ್ಯ ನೀಡುವ ಬಗ್ಗೆ ಕರಾರು ಮಾಡಿಕೊಂಡಿದೆ.
- 'ಶಂಕರ ಕಣ್ಣಿನ ಆಸ್ಪತ್ರೆ, ಶಿವಮೊಗ್ಗ' ಹಾಗೂ 'ನ್ಯೂರೋ ಭಾರತ್ ಆಸ್ಪತ್ರೆ, ಶಿವಮೊಗ್ಗ' ಇವರೊಂದಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಸೌಲಭ್ಯ ನೀಡುವ ಬಗ್ಗೆ ಕರಾರು ಮಾಡಿಕೊಂಡಿದೆ.
- 'ಲಯನ್ಸ್ ಕ್ಲಬ್ ಕೊಪ್ಪ' ಇವರ ಸಹಯೋಗದೊಂದಿಗೆ 'ಆದರ್ಶ ಆಸ್ಪತ್ರೆ, ಕೊಪ್ಪ' ಇಲ್ಲಿ ಸಂಘದ ಸದಸ್ಯರಿಗೆ ಡಯಾಲಿಸಿಸ್ ಚಿಕಿತ್ಸೆಗೆ ರಿಯಾಯಿತಿ ದರದಲ್ಲಿ ಚಿಕಿತ್ಸಾ ಸೌಲಭ್ಯ ನೀಡುವ ಬಗ್ಗೆ ಕರಾರು ಮಾಡಿಕೊಂಡಿದೆ.
- 'ಆದರ್ಶ ಸೂಪರ್ ಸ್ಪೆಷಾಲಿಟಿ ಐ (ಕಣ್ಣಿನ) ಆಸ್ಪತ್ರೆ ಶಿವಮೊಗ್ಗ' ಇವರೊಂದಿಗೆ ಸಂಘದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಕಣ್ಣಿನ ಚಿಕಿತ್ಸೆಗೆ ಸೌಲಭ್ಯ ನೀಡುವ ಬಗ್ಗೆ ಚರ್ಚಿಸಲಾಗುತ್ತಿದೆ.

**ಸಂಘವು ಕೆಳಕಂಡ ಉದ್ದೇಶಗಳನ್ನು ಹೊಂದಿರುವುದನ್ನು ಈ ಸಂದರ್ಭದಲ್ಲಿ ಸಭೆಗೆ ಮಂಡಿಸಿದರು.**

1. ಸಂಘದ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರು ಹಾಗೂ ಅವರ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಕೃಷಿ ಕೂಲಿ ಕಾರ್ಮಿಕರಿಗೆ ಪ್ರಸ್ತುತ ಜಾರಿಯಲ್ಲಿರುವ `ಗುಂಪು ವಿಮೆ' ಯೋಜನೆಗೆ ಇನ್ನೂ ಹೆಚ್ಚಿನ ಸದಸ್ಯರನ್ನು ತರಲು ಉದ್ದೇಶಿಸಿದೆ.

2. ಸಂಘದ ಸದಸ್ಯರಿಗೆ ಸ್ಪರ್ಧಾತ್ಮಕ ದರದಲ್ಲಿ`ಮಾಮ್‌ಕೋಸ್ ಸಸ್ಯಚೈತನ್ಯ' ಮತ್ತು `ಮಾಮ್‌ಕೋಸ್ ವಸುಧಾ ಸಿರಿ' ಸಾವಯವ ಗೊಬ್ಬರ, ಬೇವಿನ ಪುಡಿ ಹಾಗೂ ಅಗ್ರಿಲೈಮ್ ಮತ್ತು ಡೋಲೊಮೈಟ್ ಸುಣ್ಣವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಲು ಉದ್ದೇಶಿಸಿದೆ.

3. ಈ ಸಾಲಿನಲ್ಲಿ ಇ-ಟೆಂಡರ್ ಮೂಲಕ 96000 ಕ್ವಿಂಟಾಲ್ ಅಡಿಕೆಯನ್ನು ಹಾಗೂ ನೇರಖರೀದಿ ಮೂಲಕ 24000 ಕ್ವಿಂಟಾಲ್ ಅಡಿಕೆಯನ್ನು ಖರೀದಿಸುವ ಮತ್ತು ತಿಂಗಳಿಗೆ ಸರಾಸರಿ 9500 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡುವ ಗುರಿಯನ್ನು ಹೊಂದಿದೆ. ಹಾಗೆಯೇ, ಸಂಘದಿಂದ ವಾರ್ಷಿಕವಾಗಿ 500 ಕ್ವಿಂಟಾಲ್ ಕಾಳುಮೆಣಸನ್ನು ಖರೀದಿಸುವ ಗುರಿಯನ್ನು ಹೊಂದಲಾಗಿದೆ.

4. ಆನವಟ್ಟಿಯಲ್ಲಿ ಈಗಿರುವ ಅಡಿಕೆ ನೇರಖರೀದಿ ಕೇಂದ್ರದ ಬದಲು ಶಾಖೆಯನ್ನು ತೆರೆಯಲು ಉದ್ದೇಶಿಸಲಾಗಿದೆ.

5. ಸಂಘದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ವೈದ್ಯಕೀಯ ಸೌಲಭ್ಯವನ್ನು ನೀಡುವ ದೃಷ್ಠಿಯಿಂದ ಇನ್ನೂ ಹೆಚ್ಚಿನ ಆಸ್ಪತ್ರೆಯವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಯೋಜಿಸಲಾಗಿದೆ.

6. ನೇರ ಖರೀದಿ ಘಟಕದ ಚಟುವಟಿಕೆಗಳಿಗಾಗಿ ವಿಶಾಲ ನಿವೇಶನವನ್ನು ಶಿವಮೊಗ್ಗದಲ್ಲಿ ಖರೀದಿ ಮಾಡಿ ಕಟ್ಟಡ ನಿರ್ಮಿಸುವುದು ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳವನ್ನು ಪರಿಣಾಮಕಾರಿಯಾಗಿ ವಿವಿಧ ರೀತಿಯ ಚಟುವಟಿಕೆಗೆ ಬಳಸಿಕೊಳ್ಳುವ ಕುರಿತು ಸೂಕ್ತ ಯೋಜನೆ ರೂಪಿಸಲಾಗಿದೆ.

7. ಅಕಾಲಿಕ ಮಳೆಯಿಂದಾಗಿ ಸುಲಿದ ಅಡಿಕೆಯನ್ನು ಬೇಯಿಸಿ, ಒಣಗಿಸಲು ಸಾಧ್ಯವಾಗದೇ ಇರುವುದರಿಂದ ಅದನ್ನು ನಿಗದಿತ ಅವಧಿಯವರೆಗೆ ಸಂರಕ್ಷಣೆ ಮಾಡಲು ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ತಮ ಗುಣಮಟ್ಟದ ಸೈಲೇಜ್ ಬ್ಯಾಗ್ ಗಳನ್ನು ಸಂಘದಿಂದ ಮಾರಾಟ ಮಾಡಲು ಉದ್ದೇಶಿಸಲಾಗಿದೆ.

8. ತೀರ್ಥಹಳ್ಳಿಯಲ್ಲಿ ಸಂಘದ ಕಾರ್ಯ ಚಟುವಟಿಕೆಗೆ ಅನುಕೂಲವಾಗುವಂತಹ ನಿವೇಶನವನ್ನು ಖರೀದಿಸಲು ಉದ್ದೇಶಿಸಿದೆ.

9. ಸದಸ್ಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಚಿನ್ನಾಭರಣ ಸಾಲ, ವಾಹನಸಾಲ, ಮತ್ತಿತರ ಸಾಲಗಳನ್ನು ನೀಡಲು ಉದ್ದೇಶಿಸಿದೆ.

10. ಸಂಘದಿಂದ ಗೃಹೋಪಯೋಗಿ ವಸ್ತುಗಳನ್ನು ಖರೀದಿ ಮಾಡಿ ಮಾರಾಟ ಮಾಡಲು ಅಥವಾ ಡೀಲರ್‌ಶಿಪ್ ಪಡೆದು ಮಾರಾಟ ಮಾಡಲು ಉದ್ದೇಶಿಸಿದೆ.

11. ಸಂಘದಿಂದ ಸೂಕ್ತವಾದ ಜಾಗದಲ್ಲಿ ಸಾವಯವ ಗೊಬ್ಬರದ ಉತ್ಪಾದನ ಘಟಕವನ್ನು ತೆರೆಯಲು ಉದ್ದೇಶಿಸಿದೆ

12. ಸಂಘದಿಂದ ಶುದ್ಧ/ಖನಿಜಯುಕ್ತ ನೀರಿನ ಘಟಕವನ್ನು ತೆರೆಯಲು ಅಥವಾ ಮಾಮ್‌ಕೋಸ್ ಬ್ರ್ಯಾಂಡ್‌ನಲ್ಲಿ ಶುದ್ಧ/ಖನಿಜಯುಕ್ತ ನೀರನ್ನು ಸರಬರಾಜು ಮಾಡಲು ಉದ್ದೇಶಿಲಾಗಿದೆ.

13. ಶೃಂಗೇರಿಯಲ್ಲಿರುವ ಸಂಘದ ನಿವೇಶನದಲ್ಲಿ ಗೋದಾಮು ಮತ್ತು ಶಿಕಾರಿಪುರ ಹಾಗೂ ಸೊರಬದಲ್ಲಿ ಶಾಖಾ ಕಟ್ಟಡವನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ

14. ಸಾಧಕ-ಭಾದಕಗಳನ್ನು ಮತ್ತು ಸ್ಥಳದ ಲಭ್ಯತೆಯನ್ನು ಗಮನಿಸಿ ಮುಂದಿನ ದಿನಗಳಲ್ಲಿ ಪೆಟ್ರೋಲ್ ಬಂಕ್ ತೆರೆಯಲು ಉದ್ದೇಶಿಸಿದೆ

15. ಸಂಘದ ವತಿಯಿಂದ ಸೂಕ್ತವಾದ ಸ್ಥಳದಲ್ಲಿ ಸೂಪರ್ ಮಾರ್ಕೆಟ್ ತೆರೆಯಲು ಉದ್ದೇಶಿಸಲಾಗಿದೆ.

ಈ ರೀತಿಯಾಗಿ ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಕುರಿತು ಉಪವಿಧಿ ತಿದ್ದುಪಡಿಗೆ ಮಂಡಿಸಲಾಗಿದೆ.

ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳು ಕಾಲಕಾಲಕ್ಕೆ ತಿದ್ದುಪಡಿ ಆಗುತ್ತಿದ್ದು, ಮಾನ್ಯ ಸದಸ್ಯರು ಕಾಯಿದೆ ಮತ್ತು ಸಂಘದ ಉಪವಿಧಿ ಅನ್ವಯ ಸಂಘದಲ್ಲಿ ವ್ಯವಹರಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ರೀತಿಯಿಂದಲೂ ಸಹಕರಿಸಿ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಘದ ಆಡಳಿತ ಮಂಡಲಿಯ ಉಪಾಧ್ಯಕ್ಷರಿಗೆ, ನಿರ್ದೇಶಕರುಗಳಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಸಿಬ್ಬಂದಿ ವರ್ಗದವರಿಗೆ ಹಾಗೂ ಸಂಘದ ಅಭಿವೃದ್ಧಿಗಾಗಿ ಸಲಹೆ, ಸಹಕಾರಗಳನ್ನು ನೀಡುತ್ತಿರುವ ಸಮಸ್ತರಿಗೂ ವಂದನೆಗಳನ್ನು ಸಲ್ಲಿಸುತ್ತಾ, ಬಹುಮುಖ್ಯವಾಗಿ ಸಂಘಕ್ಕೆ ಅಡಿಕೆ ಕಳುಹಿಸಿ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡುವ ಮೂಲಕ ಸಂಘದ ಬೆನ್ನೆಲುಬಾಗಿರುವ ಸದಸ್ಯರೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತಾ, ಸದಸ್ಯರೆಲ್ಲರೂ ಇದೇ ಅಭಿಮಾನದಿಂದ ಸಂಘದಲ್ಲಿ ವ್ಯವಹರಿಸಿ ಸಂಘವನ್ನು ಬೆಂಬಲಿಸಬೇಕೆಂದು ವಿನಂತಿಸಿದರು.

ಶ್ರೀ ದಿನೇಶ್ ಕೆ ಸಿ ಇವರು ಸಂಘವು ಖರೀದಿಸಿದ 96,000 ಕ್ವಿಂಟಾಲ್ ಅಡಿಕೆಯನ್ನು ಯಾರಿಗೆ ಮಾರಾಟ ಮಾಡಲಾಗಿದೆ ಹಾಗೂ ಯಾವ ದರಕ್ಕೆ ಮಾರಾಟ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡುವಂತೆ ಹಾಗೂ ತೀರ್ಥಹಳ್ಳಿಯಲ್ಲಿ ಸಂಘದ ಕಾರ್ಯಚಟುವಟಿಕೆಗಾಗಿ ನಿವೇಶನ ಖರೀದಿಸುವ ಬಗೆಗೆ ಪೇಪರ್ ನೋಟಿಫಿಕೇಶನ್ ನೀಡಿ ಅದರಂತೆ ನಿವೇಶನ ಖರೀದಿಸಿ ಎಂದು ತಿಳಿಸಿದರು. ಹಾಗೆಯೇ ಸದರಿಯವರು ಕ್ಷೇತ್ರವಾರು ಕುರಿತು ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚಿಸಲಾಗಿದೆ. ಈಗಾಗಲೇ ಷೇರುದಾರರ ಸಭೆಗೆ ಖರ್ಚು ಮಾಡಿರುವ ಸರಿಸುಮಾರು 67 ಲಕ್ಷ ರೂಪಾಯಿಗಳನ್ನು ನಿರ್ದೇಶಕರು ಭರಿಸಬೇಕು. ಈ ಬಗ್ಗೆ ಯೂ ಸಹ ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿದಾಗ ಅವರು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲು ತಿಳಿಸಿದ್ದು, ಅಧ್ಯಕ್ಷರ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ಪ್ರಸನ್ನಕುಮಾರ್ ಎ ಆರ್ ಇವರು ಈ ಸಭೆ ಸದಸ್ಯರು ಮತ್ತು ಆಡಳಿತ ಮಂಡಲಿ ಸದಸ್ಯರ ನಡುವಿನ ಸಭೆ, ರಾಜಕೀಯ ತರುವುದು ಸೂಕ್ತವಲ್ಲವೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಅರುಣ್ ಇವರು ವಿಷಯದ ಕುರಿತು ಚರ್ಚೆಯಾಗಬೇಕು. ಇದರ ಬದಲು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ. ಹಾಗೆ ಹೇಳುವುದಾದರೇ ತಾವು ನರೇಂದ್ರಮೋದಿ, ಅಮಿತ್ ಷಾ ಇವರನ್ನು ಭೇಟಿ ಮಾಡಿದ್ದೇನೆ ಎಂದು ತಿಳಿಸಿದರು.

ಶ್ರೀ ಸುದರ್ಶನಕುಮಾರ್, ಕೋಡನಕಟ್ಟೆ ಇವರು ಮಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ವೈದ್ಯಕೀಯ ಸೌಲಭ್ಯವನ್ನು ನೀಡುವ ದೃಷ್ಠಿಯಿಂದ ಇನ್ನೂ ಹೆಚ್ಚಿನ ಆಸ್ಪತ್ರೆಯವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವ ಯೋಜನೆ ಬಗ್ಗೆ ತಿಳಿಸಿರುತ್ತಾರೆ. ಈ ಯೋಜನೆ ಅಡಿಯಲ್ಲಿ ಸಾಗರ ವ್ಯಾಪ್ತಿಯ ಒಂದು ಆಸ್ಪತ್ರೆಯನ್ನು ಸೇರಿಸಿದಲ್ಲಿ ಸಾಗರ ಹಾಗೂ ಸೊರಬ ಭಾಗದ ಸದಸ್ಯರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದಾಗ ಮಾನ್ಯ ಉಪಾಧ್ಯಕ್ಷರು ಈ ಬಗೆಗೆ ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಅಶೋಕ ನಾಯಕ ಹೆಚ್ ಆರ್ ಇವರು ಶಿಕಾರಿಪುರ ಮತ್ತು ಸೊರಬದಲ್ಲಿ ಶಾಖಾ ಕಟ್ಟಡವನ್ನು ನಿರ್ಮಾಣ ಮಾಡುವ ಕುರಿತು ಹಾಗೂ ಸಂಘದ ವತಿಯಿಂದ ಪೆಟ್ರೋಲ್ ಬಂಕ್ ತೆರೆಯುವ ಯೋಜನೆಗಳ ಕುರಿತು ಮಾನ್ಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿದರು.

ಶ್ರೀ ತಿಮ್ಮಪ್ಪ ಎಲ್ ಟಿ ಇವರು ಗುಂಪು ವಿಮಾ ಯೋಜನೆಯು ಒಂದು ಅತ್ಯುತ್ತಮ ಯೋಜನೆಯಾಗಿದೆ. ಆದರೆ ಸಂಘದಲ್ಲಿರುವ ಸದಸ್ಯರ ಸಂಖ್ಯೆಯನ್ನು ಗಮನಿಸಿದರೆ ಗುಂಪುವಿಮಾ ಯೋಜನೆಯಲ್ಲಿ ತೊಡಗಿಸಿಕೊಂಡ ಸದಸ್ಯರ ಸಂಖ್ಯೆ ತುಂಬಾ ಕಡಿಮೆಯಿರುತ್ತದೆ. ಈ ಯೋಜನೆಯ ಬಗ್ಗೆ ಆಡಳಿತ ಮಂಡಲಿ ನಿರ್ದೇಶಕರುಗಳು ಹಾಗೂ ಸಂಘದ ಸಿಬ್ಬಂದಿಗಳು ಸದಸ್ಯರಿಗೆ ಹೆಚ್ಚು ಪ್ರಚಾರ ನೀಡಬೇಕು ಎಂದು ಸಲಹೆ ನೀಡಿದಾಗ ಮಾನ್ಯ ಅಧ್ಯಕ್ಷರು ಗುಂಪುವಿಮಾ ಯೋಜನೆಯ ಕುರಿತು ಕರಪತ್ರಗಳನ್ನು ತಯಾರಿಸಿ ಎಲ್ಲಾ ಶಾಖೆಗಳಲ್ಲೂ ಸದಸ್ಯರಿಗೆ ಈಗಾಗಲೇ ನೀಡಲಾಗುತ್ತಿದ್ದು, ಈ ಯೋಜನೆ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರವನ್ನು ನೀಡುವ ಕುರಿತು ಇನ್ನಿತರ ಅವಶ್ಯಕ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಪ್ರಸನ್ನಕುಮಾರ್ ಎ ಆರ್ ಇವರು ಎಲೆಚುಕ್ಕಿ ರೋಗದ ಕುರಿತು ಮಾಹಿತಿಯನ್ನು ಮಾನ್ಯ ಅಧ್ಯಕ್ಷರ ಭಾಷಣದಲ್ಲಿ ಸೇರ್ಪಡೆಗೊಳಿಸಿದ್ದರೆ ಉತ್ತಮವಾಗಿರುತ್ತಿತ್ತು ಎಂಬ ಸಲಹೆಯನ್ನು ನೀಡಿದರು.

ಶ್ರೀ ಬಸವರಾಜಪ್ಪ ಇವರು ಅಡಿಕೆ ಬೇಸಾಯದ ಬಗ್ಗೆ ಬಹಳಷ್ಟು ರೈತರಿಗೆ ವೈಜ್ಞಾನಿಕವಾದಂತಹ ಮಾಹಿತಿಯ ಕೊರತೆ ಇದೆ. ಸಾಕಷ್ಟು ರೈತರಿಗೆ ತೋಟಕ್ಕೆ ಯಾವ ರೋಗಗಳಿಗೆ ಯಾವ ಔಷಧಿಗಳನ್ನು ಬಳಸಬೇಕು ಅಥವಾ ಎಷ್ಟು ಪ್ರಮಾಣದಲ್ಲಿ ಬಳಸಬೇಕು ಹಾಗೂ ಯಾವ ಗೊಬ್ಬರವನ್ನು ತೋಟಕ್ಕೆ ಹಾಕಬೇಕು ಎಂಬ ಮಾಹಿತಿಗಳಿಲ್ಲದೇ ವೃಥಾ ಹಣ ವೆಚ್ಚ ಮಾಡುವಂತಾಗಿದೆ. ಆದ್ದರಿಂದ ಕೃಷಿ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಶಿಬಿರಗಳನ್ನು ಏರ್ಪಡಿಸಿ ರೈತರಿಗೆ ಅಡಿಕೆ ಬೆಳೆಯ ಬಗ್ಗೆ ಮಾಹಿತಿಯನ್ನು ನೀಡುವಂತಹ ಕಾರ್ಯಾಗಾರವನ್ನು ಮಾಡಬೇಕೆಂದು ಸಲಹೆ ನೀಡಿದರು ಹಾಗೂ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀ ಚನ್ನವೀರಪ್ಪ ಇವರು ಇತ್ತೀಚೆಗೆ ಕೃಷಿ ವಿಶ್ವವಿದ್ಯಾನಿಲಯ ಹಾಗೂ ಅಡಿಕೆ ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ ಕಟ್ಟಿನಕೆರೆಯಲ್ಲಿ ಅಡಿಕೆಯ ಕೊಳೆ ರೋಗಕ್ಕೆ ಸಿಂಪಡಿಸುವ ಔಷಧಿಗಳ ಬಗೆಗೆ ಪ್ರಾಯೋಗಿಕವಾದಂತಹ ಪ್ರಾತ್ಯಕ್ಷಿಕೆಯನ್ನು ನಡೆಸಿದ್ದು ಇದರಂತೆಯೇ ಸಂಘವು ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಬೇಕೆಂದು ಸಲಹೆ ನೀಡಿದರು.

ಈ ಕುರಿತು ಉತ್ತರಿಸಿದ ಮಾನ್ಯ ಉಪಾಧ್ಯಕ್ಷರು ಉತ್ತಮವಾದಂತಹ ಸಲಹೆಯಾಗಿದ್ದು ಮುಂದಿನ ದಿನಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಸದಸ್ಯರಿಗೆ ಅಡಿಕೆ ಬೆಳೆಯ ಕುರಿತಾದ ಮಾಹಿತಿ ಕಾರ್ಯಾಗಾರಗಳನ್ನು ಹಾಗೂ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವ ಕುರಿತು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ದಿನೇಶ್ ಕೆ ಸಿ ಇವರು ಎಲೆಚುಕ್ಕಿ ರೋಗದಿಂದಾಗಿ ಅಡಿಕೆ ಬೆಳೆ ನಷ್ಟ ಹಾಗೂ ತೋಟಗಳಿಗೆ ಹಾನಿಯಾಗಿ ಅಡಿಕೆ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಸರ್ಕಾರದಿಂದ ಅಡಿಕೆ ಬೆಳೆಗಾರರಿಗೆ ಪ್ಯಾಕೇಜ್ ಘೋಷಣೆ ಮಾಡಿಸುವ ಬಗೆಗೆ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ನಡೆಸುವಂತೆ ಸಭೆಯಲ್ಲಿ ಹಾಜರಿದ್ದ ಸಂಘದ ಸದಸ್ಯರೂ ಹಾಗೂ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದರು ಆದಂತಹ ಶ್ರೀ ರಾಘವೇಂದ್ರ ಬಿ ವೈ ಇವರಲ್ಲಿ ಮನವಿ ಮಾಡಿದರು.

ಶ್ರೀ ರಾಘವೇಂದ್ರ ಬಿ ವೈ ಇವರು ಮಾತನಾಡುತ್ತಾ, ತಾವು ಮಾಮ್‌ಕೋಸ್‌ನ ಸದಸ್ಯರಾಗಿ ಈ ಸಭೆಗೆ ಹಾಜರಾಗಿದ್ದು, ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟಿಕೊಂಡಂತಹ ಸಂಸ್ಥೆಯನ್ನು ಇಷ್ಟು ಎತ್ತರಕ್ಕೆ ಬೆಳೆಸಲು ಕಾರಣೀಕರ್ತರಾದಂತಹ ಎಲ್ಲಾ ಸದಸ್ಯರಿಗೆ ಅಭಿನಂದನೆಯನ್ನು ತಿಳಿಸಿದರು. ಮುಂದುವರೆದು, ಇತ್ತೀಚೆಗೆ ದೆಹಲಿಯಲ್ಲಿ ಕೇಂದ್ರ ಕೃಷಿ ಸಚಿವರಾದ ಶ್ರೀಯುತ ಶಿವರಾಜ್‌ಸಿಂಗ್ ಚೌಹಾಣ್ ಇವರ ಅಧ್ಯಕ್ಷತೆಯಲ್ಲಿ ನಡೆದಂತಹ ಸಂಸದರ ಸಭೆಯಲ್ಲಿ ಮಾಮ್‌ಕೋಸ್‌ನ ಉಪಾಧ್ಯಕ್ಷರು, ಕ್ಯಾಂಪ್ಕೋ ಮತ್ತು ತೋಟಗಾರ್ಸ್‌ನ ಅಧ್ಯಕ್ಷರೂ ಸಹ ಭಾಗವಹಿಸಿದ್ದು, ಈ ಸಭೆಯಲ್ಲಿಅಡಿಕೆ ಬೆಳೆ ಬಗೆಗಿನ ಕೆಲವು ವಿಚಾರಗಳು ಚರ್ಚೆಯಾಗಿದ್ದು ಅದರ ಕುರಿತಾಗಿ ಈ ಕೆಳಕಂಡಂತೆ ಮಾಹಿತಿಯನ್ನು ಸಭೆಗೆ ನೀಡಿದರು.

- ಅಡಿಕೆ ಕ್ಯಾನ್ಸರ್ ಕಾರಕ ಅಲ್ಲ ಎಂಬ ಬಗ್ಗೆ ಗೌ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದುಇದುವರೆಗೂ ಅಂತಿಮ ತೀರ್ಪು ಬಂದಿರುವುದಿಲ್ಲ. ಈ ಕುರಿತಾಗಿ ಇನ್ನು 3 ರಿಂದ 4 ತಿಂಗಳ ಒಳಗಾಗಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.
- ಅಡಿಕೆ ಹಾಳೆಯಿಂದ ತಯಾರಿಸಲಾಗುತ್ತಿರುವ ಹಾಳೆ ತಟ್ಟೆಗಳು ವಿದೇಶಗಳಿಗೆ ರಫ್ತಾಗುತ್ತಿದೆ. ಆದರೆ ಅಮೆರಿಕ ದೇಶ ಅಡಿಕೆ ಹಾಳೆ ತಟ್ಟೆ ಬಳಸುವುದರಿಂದ ಕ್ಯಾನ್ಸರ್ ಬರುತ್ತದೆ ಎಂಬ ತಪ್ಪು ಮಾಹಿತಿಯೊಂದಿಗೆ ತಟ್ಟೆಗಳನ್ನು ವಾಪಸ್ಸು ಕಳುಹಿಸಿದೆ. ಈ ಬಗೆಗೆ ಅಡಿಕೆ ತಟ್ಟೆ ಕ್ಯಾನ್ಸರ್ ಕಾರಕ ಅಲ್ಲ ಅದು ಬಳಕೆಯ ನಂತರದಲ್ಲಿಯೂ ಜೈವಿಕ ಗೊಬ್ಬರವಾಗಿ ಮಣ್ಣಿನಲ್ಲಿ ಕರಗುವುದರಿಂದ ಪರಿಸರಕ್ಕೂ ಕೂಡಾ ಯಾವುದೇ ಹಾನಿಯುಂಟಾಗುವುದಿಲ್ಲ ಎಂದು ಅಮೆರಿಕಾ ದೇಶಕ್ಕೆ ಮನವರಿಕೆ ಮಾಡಿಕೊಡುವ ವರದಿಯನ್ನು ಪುನಃ ಕಳುಹಿಸಿಕೊಡುವ ಕುರಿತು ಚರ್ಚಿಸಲಾಗಿದೆ.
- ಅಡಿಕೆ ಕೊನೆ ಕೊಯ್ಯುವ ದೋಟಿಗೆ ಸರ್ಕಾರದಿಂದ ಕೊಡುವ ಸಬ್ಸಿಡಿಯನ್ನು ರೂ.1,200.00 ಗಳಿಂದ ರೂ.30,000.00ಕ್ಕೆ ಹೆಚ್ಚಿಸಲು ಮನವಿಯನ್ನು ಸಲ್ಲಿಸಲಾಗಿದೆ.
- ಅಡಿಕೆ ಅಕ್ರಮ ಆಮದಿನ ಬಗೆಗೆ ಕಠಿಣವಾದಂತಹ ಕ್ರಮಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಲಾಗಿದೆ.

- ಹಳದಿ ಎಲೆಚುಕ್ಕಿ ರೋಗಕ್ಕೆ ಹಾಗೂ ಕೊಳೆ ರೋಗಕ್ಕೆ ಬಳಸುವಂತಹ ತುತ್ತದ (ಕಾಪರ್ ಸಲ್ಫೇಟ್) ಮೇಲಿನ ಜಿ.ಎಸ್.ಟಿ ದರವನ್ನು ಶೇ.40 ರಿಂದ ಶೇ.5 ಕ್ಕೆ ಇಳಿಸಲು ಮನವಿಯನ್ನು ಸಲ್ಲಿಸಲಾಗಿದೆ.
- ಅಡಿಕೆಯ ತೇವಾಂಶ ಶೇ.7 ರಷ್ಟಿರಬೇಕೆಂದು ಎಫ್‌ಎಸ್‌ಎಸ್‌ಎಐ (FSSAI) ತಿಳಿಸಿದೆ. ಆದರೆ ಅಡಿಕೆ ಬೆಳೆಯಲ್ಲಿ ಈ ಪ್ರಮಾಣದ ತೇವಾಂಶವನ್ನು ಕಾಯ್ದುಕೊಳ್ಳುವುದು ಕಷ್ಟವಾದ್ದರಿಂದ ಇದರ ಪ್ರಮಾಣವನ್ನು ಶೇ.11-12ರಷ್ಟು ಹೆಚ್ಚಿಸುವಂತೆ ಮನವಿ ಸಲ್ಲಿಸಲಾಗಿದ್ದೆ.
- ಅಡಿಕೆ ಮೇಲಿನ ಜಿ.ಎಸ್.ಟಿ ದರವನ್ನು ಕಡಿಮೆ ಮಾಡುವಂತೆಯೂ ಸಹ ಮನವಿ ಸಲ್ಲಿಸಲಾಗಿದೆ ಎಂಬ ಅಂಶಗಳನ್ನು ಸಭೆಗೆ ತಿಳಿಸಿದರು.

ಶ್ರೀ ಗೋಪಾಲಕೃಷ್ಣ ಹಸೂಡಿ ಇವರು ಷೇರುದಾರರಿಗೆ ಅಡಿಕೆ ಬೆಳೆ ಸಂರಕ್ಷಣೆ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ. ಕಳೆದೆರಡು ವರ್ಷಗಳಿಂದ ಸಭೆಯನ್ನು ನಡೆಸಿರುವುದಿಲ್ಲ ಎಂದು ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು ಮಾನ್ಯ ಅಧ್ಯಕ್ಷರ ಭಾಷಣವನ್ನು ಅನುಮೋದಿಸಿತು.

**ವಿಷಯ 04: 2024-25ನೇ ಸಾಲಿನ ವಾರ್ಷಿಕ ವರದಿಯ ಪರಿಗಣನೆ ಕುರಿತು.**

2024-25ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 05: 2024-25ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಆಡಳಿತ ಮಂಡಳಿಯ ಸಮಜಾಯಿಷಿಯೊಂದಿಗೆ ಪರಿಶೀಲಿಸಿ, ಅಂಗೀಕರಿಸುವ ಕುರಿತು.**

2024-25ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ದಾಖಲಿಸಿದ ನ್ಯೂನ್ಯತೆಗಳಿಗೆ ನೀಡಿರುವ ಅನುಪಾಲನ ವರದಿ/ಸಮಜಾಯಿಷಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 06 : 2024-25ನೇ ಸಾಲಿನಲ್ಲಿ ಸಂಘವು ಗಳಿಸಿದ ಲಾಭ ಹಂಚಿಕೆ ಕುರಿತು.**

**ನಿರ್ಣಯ :** ನಿವ್ವಳ ಲಾಭ ವಿಲೇವಾರಿಯ ಪ್ರಸ್ತಾಪವನ್ನು ಸಭೆಯು ಅಂಗೀಕರಿಸುವ ಮುನ್ನ,

ಶ್ರೀ ನಾಗರಾಜ್, ಹರತಾಳು ಇವರು ಸದಸ್ಯರಿಗೆ ನೀಡುತ್ತಿರುವ ಷೇರು ಲಾಭಾಂಶವನ್ನು ಶೇ.10 ರಿಂದ ಶೇ.12 ಕ್ಕೆ ಹೆಚ್ಚಿಸಬೇಕೆಂದು ತಿಳಿಸಿದಾಗ ಮಾನ್ಯ ಉಪಾಧ್ಯಕ್ಷರು, ಸಂಘಕ್ಕೆ ಅಡಿಕೆ ಹಾಕಿ ವ್ಯವಹಾರ ಮಾಡುತ್ತಿರುವ ಸಕ್ರಿಯ ಸದಸ್ಯರಿಗೆ ಅಡಿಕೆ ವ್ಯಾಪಾರದ ಹಣದ ಮೇಲೆ ಬೋನಸ್ ನೀಡಲಾಗುತ್ತಿದೆ. ಇದರಿಂದ ಸಂಘದ ಲಾಭಾಂಶವು ಸಮರ್ಪಕವಾಗಿ ಸಂಘದಲ್ಲಿ ವ್ಯವಹರಿಸುವ ಸದಸ್ಯರಿಗೆ ಸಲ್ಲುತ್ತದೆ. ಷೇರು ಲಾಭಾಂಶವನ್ನು ಸಂಘದ ಎಲ್ಲಾ ಷೇರುದಾರ ಸದಸ್ಯರಿಗೂ ಕೊಡಬೇಕಿರುತ್ತದೆ ಇದರಲ್ಲಿ ಅಡಿಕೆ ಹಾಕಿ ವ್ಯವಹರಿಸದ ನಿಷ್ಕ್ರಿಯ ಸದಸ್ಯರೂ ಇರುವುದರಿಂದ ಷೇರು ಲಾಭಾಂಶವನ್ನು ಶೇ.10ರ ಪ್ರತಿಶತದಲ್ಲಿ ನೀಡುವುದು ಸೂಕ್ತವಾಗಿದೆ ಎಂದು ಉತ್ತರಿಸಿದರು.

ಶ್ರೀ ಮನೋಹರ ಇವರು ಅಡಿಕೆ ಮಾರಾಟದ ಹಣದ ಮೇಲೆ ಸದಸ್ಯರಿಗೆ ಕೊಡುತ್ತಿರುವ ಬೋನಸ್‌ನ ಪ್ರಮಾಣ ಕಡಿಮೆ ಇದ್ದು ಇದನ್ನು ಹೆಚ್ಚಿಸುವಂತೆ ತಿಳಿಸಿದರು.

ಶ್ರೀ ದೇವಕುಮಾರ್ ಇವರು, ಅಡಿಕೆ ಹಾಕಿ ವ್ಯವಹಾರ ನಡೆಸದೇ ಇರುವಂತಹ ಸದಸ್ಯರಿಗೆ ದಿನಾಂಕ:31.03.2026ರೊಳಗೆ ವ್ಯವಹಾರ ಮಾಡುವಂತೆ ನೋಟೀಸ್ ನೀಡಿರುತ್ತೀರ. ಹೀಗೆ ಗಡುವು ನೀಡಿದ ದಿನಾಂಕದ ನಂತರವೂ ವ್ಯವಹಾರ ಮಾಡದೇ ಇರುವಂತಹ ಸದಸ್ಯರು ಹಾಗೂ ಮೃತ ಸದಸ್ಯರ ಖಾತೆಗಳನ್ನು ಮುಕ್ತಾಯಗೊಳಿಸುವ ಬಗ್ಗೆ ಕಡ್ಡಾಯವಾದ ಕ್ರಮವನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಶ್ರೀ ರಂಗನಾಥ ಪಿ ಎನ್, ಸಾಗರ ಇವರು ಷೇರು ಲಾಭಾಂಶವನ್ನು ಹೆಚ್ಚಿಸುವ ಬದಲು ಅಡಿಕೆ ಹಾಕಿ ವ್ಯವಹಾರ ಮಾಡುತ್ತಿರುವಂತಹ ಸದಸ್ಯರಿಗೆ ಅಡಿಕೆ ವ್ಯಾಪಾರದ ಹಣದ ಮೇಲೆ ಕೊಡುತ್ತಿರುವ ಬೋನಸ್ ಹಣವನ್ನು ಶೇ.0.5ರಷ್ಟು ಹೆಚ್ಚಿಸುವಂತೆ ಸಲಹೆ ನೀಡಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ, ಆಡಳಿತ ಮಂಡಳಿಯ ಶಿಫಾರಸನ್ನು ಪರಿಶೀಲಿಸಿ, 2024-25ನೇ ಸಾಲಿನಲ್ಲಿ ಸಂಘವು ಗಳಿಸಿದ ರೂ. 5,52,62,459.08/- ನಿವ್ವಳ ಲಾಭವನ್ನು ಉಪವಿಧಿ ಸಂಖ್ಯೆ: ಭಾಗ 14-(86)-(ಎ) ಪ್ರಕಾರ ಪರಿಶೀಲಿಸಿದ ನಂತರ, ಈ ಕೆಳಕಂಡಂತೆ ನಿವ್ವಳ ಲಾಭ ವಿಲೇವಾರಿ ಪ್ರಸ್ತಾಪವನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿತು.

**ಸಂಘದ ಬೈಲಾ ಸಂಖ್ಯೆ ಭಾಗ 14-(86)-(ಎ) ರಂತೆ ನಿವ್ವಳ ಲಾಭ ರೂ.5,52,62,459.08/-**

| ಕ್ರ. ಸಂ. | ವಿವರಗಳು | ತೆಗೆದಿರಿಸಿದ ಶೇಕಡಾವಾರು | ಮೊಬಲಗು | ಮೊಬಲಗು |
|---|---|---|---|---|
| | 2024-25ನೇ ಸಾಲಿನಲ್ಲಿ ಸಂಘವು ಗಳಿಸಿರುವ ನಿವ್ವಳ ಲಾಭ | | | **5,52,62,459.08** |
| 1 | ಒಟ್ಟು ನಿವ್ವಳ ಲಾಭದಲ್ಲಿ ಆಪದ್ಧನ ನಿಧಿಗೆ ಶೇ.25ಕ್ಕೆ ಕಡಿಮೆ ಇಲ್ಲದಂತೆ | 25.0% | 1,38,15,615.00 | |
| | ಉಳಿದ ಲಾಭಾಂಶ | | | **4,14,46,844.08** |
| 2 | ಉಳಿದ ಲಾಭಾಂಶದಲ್ಲಿ ಸಹಕಾರಿ ಶಿಕ್ಷಣ ನಿಧಿಗೆ ಶೇ.2 ರಂತೆ | 2.0% | 8,28,936.08 | |
| | ಉಳಿದ ಲಾಭಾಂಶ | | | **4,06,17,908.00** |
| | ಉಳಿದ ಲಾಭಾಂಶದಲ್ಲಿ | | | |
| 3 | ಕಟ್ಟಡ ನಿಧಿಗೆ ಶೇ. 20ಕ್ಕೆ ಮೀರದಂತೆ | 20% | 81,23,581.00 | |
| 4 | ಹೋಕು ಬಾಕಿ ಸಾಲದ ನಿಧಿಗೆ ಶೇ.10ಕ್ಕೆ ಮೀರದಂತೆ | 6% | 24,37,074.00 | |
| 5 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿಗಾಗಿ ಹಾಗೂ ಮಾರಾಟದ ಮೇಲಿನ ಬೋನಸ್‌ಗಾಗಿ ಇರುವ ನಿಧಿಗೆ ಶೇ.40ಕ್ಕೆ ಮೀರದಂತೆ | 36.78% | 1,49,38,188.00 | |
| 6 | ಲಾಭಾಂಶ ಸರಿದೂಗಿಸುವ ನಿಧಿಗಾಗಿ ಶೇ.2ಕ್ಕೆ ಮೀರದಂತೆ | 1.0% | 4,06,179.00 | |
| 7 | ನೌಕರರ ಕ್ಷೇಮಾಭಿವೃದ್ಧಿ ನಿಧಿಗಾಗಿ ಶೇ.2ಕ್ಕೆ ಮೀರದಂತೆ | 2.0% | 8,12,358.00 | |
| 8 | ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗಾಗಿ ಶೇ.10ಕ್ಕೆ ಮೀರದಂತೆ | 2.0% | 8,12,358.00 | |
| 9 | ಅಡಿಕೆ ಸಂಶೋಧನಾ ನಿಧಿಗಾಗಿ ಶೇ.3ಕ್ಕೆ ಮೀರದಂತೆ | 2.0% | 8,12,358.00 | |
| 10 | ಮಹೋತ್ಸವ ನಿಧಿಗೆ ಶೇ.2ಕ್ಕೆ ಮೀರದಂತೆ | 2.0% | 8,12,358.00 | |
| 11 | ಮರಣೋತ್ತರ ನಿಧಿ ಯೋಜನೆಗೆ ಶೇ.15ಕ್ಕೆ ಮೀರದಂತೆ | 6.0% | 24,37,074.00 | 3,15,91,528.00 |
| | ಉಳಿದ ಲಾಭಾಂಶ | | | **90,26,380.00** |
| 12 | ಮತ್ತೆ ಉಳಿದ ಲಾಭಾಂಶದಲ್ಲಿ ಪಾವತಿಯಾದ ಷೇರು ಬಂಡವಾಳಕ್ಕೆ ಶೇ.10.00ರಂತೆ | | 90,26,380.00 | |
| 13 | ಉಳಿದ ಮೊಬಲಗು ಸಹಕಾರ ಕಾಯಿದೆ ಹಾಗೂ ನಿಯಮ 21ರ ಪ್ರಕಾರ ಸಂಘದ ಆಪದ್ಧನ ನಿಧಿಗೆ | | | - |
| | **ಒಟ್ಟು ರೂ.** | | **5,52,62,459.08** | |

ಈ ಸಂದರ್ಭದಲ್ಲಿ 2024-25ನೇ ಸಾಲಿನಲ್ಲಿ ಬೋನಸ್‌ಗೆ ಅರ್ಹರಾದ ಸಂಘದ ಸಿಬ್ಬಂದಿಗಳಿಗೆ ಬೋನಸ್ ಹಣವನ್ನು ಮತ್ತು ಇತರ ಸಿಬ್ಬಂದಿಗಳಿಗೆ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಪ್ರಕಾರ ಶೇ.20ಕ್ಕೆ ಮೀರದಂತೆ ಅನುಗ್ರಹ ಪೂರ್ವಕ ಕೊಡುಗೆಯನ್ನು ಪಾವತಿಸಲು ಅವಕಾಶವಿರುವುದರಿಂದ ಸಂಘದ ಸಿಬ್ಬಂದಿಗಳಿಗೆ ಶೇ.20ರಂತೆ ಎಕ್ಸ್‌ಗ್ರೇಷಿಯಾವನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ07 :** **2024-25ನೇ ಸಾಲಿನಲ್ಲಿ ಅಂದಾಜು ಆಯ-ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಪರಿಶೀಲಿಸಿ, ಅಂಗೀಕರಿಸುವ ಕುರಿತು.**

**ನಿರ್ಣಯ :** 2024-25ನೇ ಸಾಲಿನಲ್ಲಿ ಅಂದಾಜು ಆಯ-ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚದ ವಿವರಗಳನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡು, ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**ವಿಷಯ 08 :** **2025-26ನೇ ಸಾಲಿನ ಪರಿಷ್ಕೃತ ಮತ್ತು 2026-27ನೇ ಸಾಲಿನ ಅಂದಾಜು ಆಯ-ವ್ಯಯವನ್ನು ಮಂಜೂರು ಮಾಡುವ ಕುರಿತು.**

**ನಿರ್ಣಯ :** ಈ ಕೆಳಕಂಡಂತೆ ಆಯ-ವ್ಯಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಬಜೆಟ್ (ಆಯ-ವ್ಯಯ):**

**ಜಮಾ** **(ರೂಪಾಯಿಗಳಲ್ಲಿ)**

| ಕ್ರ. ಸಂ. | ವಿವರ | 2024-25ನೇ ಸಾಲಿಗೆ ಅಂದಾಜು ಮಾಡಿರುವುದು | 2024-25ನೇ ಸಾಲಿಗೆ ಬಂದ ಆದಾಯ | 2025-26ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2026-27ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|
| 1 | ವ್ಯಾಪಾರ ಲಾಭ | 17,25,00,000 | 23,19,70,111 | 23,00,00,000 | 24,00,00,000 |
| 2 | ಬಡ್ಡಿ | 23,00,00,000 | 23,17,08,379 | 23,00,00,000 | 23,00,00,000 |
| 3 | ಬಾಡಿಗೆ | 27,00,000 | 27,53,014 | 27,00,000 | 28,00,000 |
| 4 | ಇತರೆ | 16,00,000 | 13,80,973 | 16,00,000 | 18,00,000 |
| | **ಒಟ್ಟು ರೂ..** | **40,68,00,000** | **46,78,12,477** | **46,43,00,000** | **47,46,00,000** |

**ವ್ಯಾಪಾರ ಖರ್ಚು:**

| ಕ್ರ. ಸಂ. | ವಿವರ | 2024-25ನೇ ಸಾಲಿಗೆ ಅಂದಾಜು ಮಾಡಿರುವುದು | 2024-25ನೇ ಸಾಲಿಗೆ ಖರ್ಚು ಮಾಡಿರುವುದು | 2024-25 ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2025-26ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2026-27 ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|---|
| 1 | ಬಾಡಿಗೆ | 50,00,000 | 84,71,009 | 34,71,009 | 90,00,000 | 1,00,00,000 |
| 2 | ಲಾರಿ ಮತ್ತು ಗಾಡಿ ಬಾಡಿಗೆ | 35,00,000 | 61,55,178 | 26,55,178 | 65,00,000 | 70,00,000 |
| 3 | ಹಮಾಲಿ | 1,50,00,000 | 1,93,44,950 | 43,44,950 | 2,00,00,000 | 2,20,00,000 |
| 4 | ವ್ಯಾಪಾರದ ಖರ್ಚು | 55,00,000 | 61,23,469 | 6,23,469 | 65,00,000 | 70,00,000 |
| 5 | ಕಮಿಷನ್/ ಏಜೆನ್ಸಿ ಕಮಿಷನ್ | 4,00,00,000 | 6,11,28,643 | 2,11,28,643 | 6,25,00,000 | 6,25,00,000 |
| 6 | ಸೋಡಿ | 65,00,000 | 44,11,730 | 0 | 65,00,000 | 70,00,000 |
| 7 | ಸಾರ್ಟಿಂಗ್ ವೆಚ್ಚ | 50,00,000 | 63,57,463 | 13,57,463 | 70,00,000 | 75,00,000 |
| | **ಒಟ್ಟು ರೂ.** | **8,05,00,000** | **11,19,92,442** | **3,35,80,712** | **11,80,00,000** | **12,30,00,000** |

**ಇತರೆ ಖರ್ಚು**

| ಕ್ರ. ಸಂ. | ವಿವರ | 2024-25ನೇ ಸಾಲಿಗೆ ಅಂದಾಜು ಮಾಡಿರುವುದು | 2024-25ನೇ ಸಾಲಿಗೆ ಖರ್ಚು ಮಾಡಿರುವುದು | 2024-25 ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2025-26ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2026-27 ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|---|
| 1 | ಬಡ್ಡಿ | 17,00,00,000 | 16,96,67,684 | 0 | 17,50,00,000 | 18,00,00,000 |
| 2 | ಸಿಬ್ಬಂದಿ ವೆಚ್ಚ, ಭವಿಷ್ಯ ನಿಧಿ ಆಡಳಿತ ವೆಚ್ಚ ಮತ್ತು ಗ್ರೂಪ್ ಗ್ರಾಚ್ಯುಯಿಟಿ | 10,00,00,000 | 9,62,89,438 | 0 | 10,50,00,000 | 11,00,00,000 |
| 3 | ಕಾವಲು ಮತ್ತು ಭದ್ರತೆ | 1,35,00,000 | 1,51,05,955 | 16,05,955 | 1,65,00,000 | 1,70,00,000 |

| | | | | | | |
|---|---|---|---|---|---|---|
| 4 | ಸಿಬ್ಬಂದಿ ಪ್ರಯಾಣ ಭತ್ಯೆ | 1,50,000 | 1,05,578 | 0 | 1,50,000 | 1,65,000 |
| 5 | ಸದಸ್ಯರ ತರಬೇತಿಗಾಗಿ | 15,00,000 | - | 0 | 15,00,000 | 15,00,000 |
| 6 | ಸಂಘದ ಸಿಬ್ಬಂದಿಗಳ ತರಬೇತಿ & ಅಧ್ಯಯನ ಪ್ರವಾಸಕ್ಕಾಗಿ | 6,00,000 | 2,42,357 | 0 | 10,00,000 | 12,00,000 |
| 7 | ಸಂಘದ ನಿರ್ದೇಶಕರ ಅಧ್ಯಯನ ಪ್ರವಾಸಕ್ಕಾಗಿ | 14,00,000 | 0 | 0 | 20,00,000 | 20,00,000 |
| 8 | ನಿರ್ದೇಶಕರ ಸಭಾಭತ್ಯೆ & ಪ್ರಯಾಣ ಭತ್ಯೆ | 42,00,000 | 29,26,842 | 0 | 40,00,000 | 42,00,000 |
| 9 | ಮುದ್ರಣ ಸಾಮಾಗ್ರಿ & ಡೈರಿ, ಕ್ಯಾಲೆಂಡರ್ ಮುದ್ರಣ ವೆಚ್ಚ | 40,00,000 | 37,11,642 | 0 | 40,00,000 | 42,00,000 |
| 10 | ಅಂಚೆ ಮತ್ತು ದೂರವಾಣಿ | 12,00,000 | 10,66,590 | 0 | 12,00,000 | 14,00,000 |
| 11 | ಜಾಹಿರಾತು ಮತ್ತು ಪ್ರಚಾರ ಹಾಗೂ ಸದಸ್ಯರ ಅಡಿಕೆ ಮಾರಾಟದ ಮೇಲಿನ ಬೋನಸ್ | 15,00,000 | 23,02,297 | 8,02,297 | 20,00,000 | 22,00,000 |
| 12 | ಕಟ್ಟಡ ದುರಸ್ತಿ | 40,00,000 | 34,10,704 | 0 | 1,50,00,000 | 1,00,00,000 |
| 13 | ವಿದ್ಯುಚ್ಛಕ್ತಿ | 18,00,000 | 18,62,476 | 62,476 | 20,00,000 | 20,00,000 |
| 14 | ವಿಮಾ ಖರ್ಚು | 60,00,000 | 56,92,819 | 0 | 60,00,000 | 65,00,000 |
| 15 | ಅತಿಥಿ ಗೃಹದ ನಿರ್ವಹಣೆ | 25,000 | 34,380 | 9,380 | 40,000 | 50,000 |
| 16 | ಸ್ಥಿರಾಸ್ತಿ ನಿರ್ವಹಣೆ | 2,50,000 | 1,44,158 | 0 | 3,00,000 | 3,50,000 |
| 17 | ಚರಾಸ್ತಿಗಳ ನಿರ್ವಹಣೆ | 8,50,000 | 9,37,099 | 87,099 | 10,00,000 | 12,00,000 |
| 18 | ಗಣಕಯಂತ್ರ ಮತ್ತು ತಂತ್ರಾಂಶ ನಿರ್ವಹಣೆ | 22,00,000 | 24,12,289 | 2,12,289 | 26,00,000 | 28,00,000 |
| 19 | ಉದ್ಯಾನವನ ಮತ್ತು ಪ್ಲಾಂಟೇಶನ್ ನಿರ್ವಹಣೆ | 85,000 | 23,185 | 0 | 50,000 | 50,000 |
| 20 | ತೆರಿಗೆಗಳು (ಪುರಸಭೆ ಕಂದಾಯ) | 27,00,000 | 29,65,581 | 2,65,581 | 38,00,000 | 40,00,000 |
| 21 | ಲೈಸೆನ್ಸ್ ಫೀ | 1,00,000 | 64,976 | 0 | 1,00,000 | 1,25,000 |
| 22 | ಪ್ರೊಫೆಷನಲ್ ಫೀ (ವೃತ್ತಿ ಶುಲ್ಕ) | 10,00,000 | 21,38,662 | 11,38,662 | 25,00,000 | 30,00,000 |
| 23 | ಕಾನೂನು ಸಲಹೆ | 30,00,000 | 17,11,848 | 0 | 20,00,000 | 22,50,000 |
| 24 | ವಾರ್ಷಿಕ ಮಹಾಸಭೆ | 38,00,000 | 36,77,253 | 0 | 40,00,000 | 42,00,000 |
| 25 | ಸಭೆಗಳು | 18,00,000 | 3,64,107 | 0 | 18,00,000 | 20,00,000 |
| 26 | ಲೆಕ್ಕಪರಿಶೋಧನಾ ವೆಚ್ಚ | 10,00,000 | 10,00,000 | 0 | 10,00,000 | 10,00,000 |
| 27 | ಆಡಳಿತ ವೆಚ್ಚ | 75,00,000 | 76,88,103 | 1,88,103 | 78,00,000 | 80,00,000 |
| 28 | ಪತ್ರಿಕಾ ಚಂದಾ | 1,50,000 | 1,25,466 | 0 | 1,50,000 | 1,75,000 |
| 29 | ಬ್ಯಾಂಕ್ ಖರ್ಚು & ಸಾಲ ಪ್ರೊಸೆಸಿಂಗ್ ಫೀ | 4,00,000 | 32,30,296 | 28,30,296 | 35,00,000 | 37,50,000 |
| 30 | ವಾಹನ ನಿರ್ವಹಣೆ + ಇಂಧನ ಖರ್ಚು | 25,00,000 | 26,16,644 | 1,16,644 | 30,00,000 | 32,00,000 |
| 31 | ಸಾಲ ವಸೂಲಾತಿ ಖರ್ಚು | 2,50,000 | 1,79,850 | 0 | 3,00,000 | 3,50,000 |
| 32 | ಧನಲಕ್ಷ್ಮೀ ಪೂಜೆ | 75,000 | 85,667 | 10,667 | 1,00,000 | 1,00,000 |

| | | | | | | |
|---|---|---|---|---|---|---|
| 33 | ಇತರೆ ಖರ್ಚುಗಳು (ವೃತ್ತಿ ತೆರಿಗೆ) | 1,00,000 | 90,000 | 0 | 1,25,000 | 1,25,000 |
| 34 | ಸಿಬ್ಬಂದಿ ಮೆಡಿಕ್ಲೈಂ | 20,00,000 | 15,60,783 | 0 | 20,00,000 | 25,00,000 |
| 35 | ದೇಣಿಗೆ | 8,00,000 | 7,00,000 | 0 | 15,00,000 | 15,00,000 |
| 36 | ದಾವಾ ಫೀ & ದಾವಾ ಡಿಕ್ರಿ | 2,00,000 | 3,92,188 | 1,92,188 | 4,50,000 | 5,00,000 |
| 37 | ಚುನಾವಣಾ ವೆಚ್ಚ | 50,00,000 | 86,40,744 | 36,40,744 | - | - |
| 38 | ಮುದ್ರಾಂಕ ಶುಲ್ಕ | 0 | 25,05,900 | 25,05,900 | 1,00,00,000 | - |
| 39 | ಮಾಮ್‌ಕೋಸ್ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಿಸಿದ ಬಾಬ್ತು ಖರ್ಚು | 0 | 12,70,000 | 12,70,000 | 0 | - |
| | **ಒಟ್ಟು ರೂ.** | **34,56,35,000** | **34,69,43,560** | **1,49,38,282** | **38,34,65,000** | **38,35,90,000** |

| | 2025-26 | 2026-27 |
|---|---|---|
| ಅಂದಾಜು ಆದಾಯ | 46,43,00,000 | 47,46,00,000 |
| ಅಂದಾಜು ಇತರೆ ವೆಚ್ಚ | 38,34,65,000 | 38,35,90,000 |
| ಅಂದಾಜು ಲಾಭ | **8,08,35,000** | **9,10,10,000** |

**2024-25ನೇ ಸಾಲಿಗೆ ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಗೆ ಅಂದಾಜು ಮಾಡಿದ ಬಜೆಟ್ ಹಾಗೂ ವೆಚ್ಚದ ವಿವರ, 2025-26 ಮತ್ತು 2026-27ನೇ ಸಾಲುಗಳಿಗೆ ಅಂದಾಜು ಮಾಡಲಾದ ಬಜೆಟ್ ವಿವರ**

| ಕ್ರ. ಸಂ. | ವಿವರ | 2024-25ನೇ ಸಾಲಿಗೆ ಅಂದಾಜು ಮಾಡಿರುವುದು | 2024-25ನೇ ಸಾಲಿಗೆ ಖರ್ಚು ಮಾಡಿರುವುದು | 2024-25ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2025-26ನೇ ಸಾಲಿಗೆ ಅಂದಾಜು ಮಾಡಿರುವುದು | 2026-27ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|---|
| **1** | ಗಣಕಯಂತ್ರ ಖರೀದಿಗೆ + ಯು.ಪಿ.ಎಸ್. | 35,00,000 | 10,38,775 | | 15,00,000 | 20,00,000 |
| **2** | ಪೀಠೋಪಕರಣ ಖರೀದಿಗೆ | 50,00,000 | 13,23,423 | | 20,00,000 | 20,00,000 |
| **3** | ಪುಸ್ತಕಗಳ ಖರೀದಿಗೆ (ಗ್ರಂಥಾಲಯ) | 20,000 | 0 | | 20,000 | 25,000 |
| **4** | ಜನರೇಟರ್ ಖರೀದಿಗೆ | 10,00,000 | 4,36,441 | | 5,00,000 | 7,50,000 |
| **5** | ತೂಕದ ಯಂತ್ರದ ಖರೀದಿಗೆ | 2,00,000 | 1,57,470 | | 2,00,000 | 2,25,000 |
| **6** | ಜೆರಾಕ್ಸ್ ಮತ್ತು ಯಂತ್ರಗಳ ಖರೀದಿಗೆ | 15,00,000 | 11,57,480 | | 10,00,000 | - |
| **7** | ಅಡಿಕೆ ಸಂಸ್ಕರಣಾ ಯಂತ್ರ | 50,00,000 | 38,55,786 | | 20,00,000 | 20,00,000 |
| **8** | ನೋಟು ಎಣಿಕೆ ಯಂತ್ರ | 1,00,000 | 58,983 | | 75,000 | 75,000 |
| **9** | ವಾಹನ | 35,00,000 | 30,46,690 | | 0 | 30,00,000 |
| **10** | ಸಿ.ಸಿ. ಟಿ.ವಿ./ ಬಯೋಮೆಟ್ರಿಕ್ | 10,00,000 | 9,52,583 | | 15,00,000 | 15,00,000 |
| **11** | ಸಿಹಿ ಸುಪಾರಿ ಘಟಕದ ಯಂತ್ರ ಖರೀದಿಗೆ | - | - | - | 2,00,00,000 | - |
| **12** | ಸಾವಯವ ಗೊಬ್ಬರ ತಯಾರಿಕಾ ಘಟಕದ ಯಂತ್ರ ಖರೀದಿಗೆ | - | - | - | 3,00,00,000 | - |
| **13** | ಶುದ್ಧ / ಖನಿಜಯುಕ್ತ ನೀರಿನ ಘಟಕ | - | - | - | 3,00,00,000 | - |
| | **ಒಟ್ಟು** | **2,08,20,000** | **1,20,27,631** | | **8,87,95,000** | **1,25,75,000** |

**ವಿಷಯ 09 :** **ಮುಂಬರುವ ಸಾಲಿಗಾಗಿ ಆಡಳಿತ ಮಂಡಲಿಯು ಸಿದ್ಧಪಡಿಸಿದ ಕರಡು ಕ್ರಿಯಾ ಯೋಜನೆಯನ್ನು ಅನುಮೋದಿಸುವ ಕುರಿತು.**

**ನಿರ್ಣಯ :** ಈಗಾಗಲೇ ಸಂಘದ ಮಾನ್ಯ ಅಧ್ಯಕ್ಷರ ಭಾಷಣದಲ್ಲಿ ಮುಂಬರುವ ಸಾಲಿನ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿರುವುದನ್ನು ಗಮನಿಸಿ, ಸದರಿ ಕಾರ್ಯಕ್ರಮಗಳ ಜಾರಿಗೆ ಸಭೆಯು ಅನುಮೋದನೆ ನೀಡಿತು.

**ವಿಷಯ 10 :** **ಕಾರ್ಯಾಚರಣೆ ಕೊರತೆ ಏನಾದರೂ ಇದ್ದರೆ, ಅದರ ಪುನರವಲೋಕನ ಮತ್ತು ಅಂತಹ ಕೊರತೆಯನ್ನು ನೀಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು.**

**ನಿರ್ಣಯ :** ಯಾವುದು ಇಲ್ಲದಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 11 :** **2024-25ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಗಾಗಿ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಕುರಿತು.**

**ನಿರ್ಣಯ** : ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ನಿಯಮ 1960ರ ನಿಯಮ ಸಂಖ್ಯೆ 29ಬಿ(6)ರಲ್ಲಿ ಪ್ರತಿ ಸಹಕಾರ ಸಂಘದ ಸಾಮಾನ್ಯ ನಿಕಾಯವು ಸಹಕಾರ ಸಂಘಗಳ ಲೆಕ್ಕಪತ್ರಗಳ ಪರಿಶೋಧನೆಗಾಗಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಿದ ಸಂಬಂಧಿತ ಲೆಕ್ಕಪರಿಶೋಧಕರ ತಂಡದಲ್ಲಿರುವ ಅರ್ಹ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧನಾ ಫರ್ಮುಗಳ ಪಟ್ಟಿಯಿಂದ ಲೆಕ್ಕಪರಿಶೋಧನಾ ಫರ್ಮನ್ನು/ಲೆಕ್ಕಪರಿಶೋಧಕರನ್ನು (ಸನ್ನದು ಲೆಕ್ಕಿಗನ ಅಥವಾ ಇಲಾಖಾ ಲೆಕ್ಕಪರಿಶೋಧಕ/ನೌಕರನ) ಆಯ್ಕೆ ಮಾಡತಕ್ಕದ್ದು. ಆದರೆ ಅದೇ ವ್ಯಕ್ತಿಯನ್ನು ನಿರಂತರವಾಗಿ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಒಂದೇ ಸಹಕಾರ ಸಂಘದ ಲೆಕ್ಕಪರಿಶೋಧಕನನ್ನಾಗಿ ಮತ್ತು ಲೆಕ್ಕಪರಿಶೋಧನಾ ಫರ್ಮನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ ಎಂದಿರುತ್ತದೆ ಎಂಬ ಅಂಶವನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

ಶ್ರೀ ಮಧುಕರ ಹೆಗಡೆ & ಕೋ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಸಂಘದ 2023-24 ಮತ್ತು 2024-25ನೇ ಸಾಲಿನ ಅಂದರೆ ಎರಡು ವರ್ಷಗಳ ಕಾಲ ಸಂಘದ ಲೆಕ್ಕಪರಿಶೋಧನೆಯನ್ನು ನಡೆಸಿರುವುದರಿಂದ ಮೇಲ್ಕಂಡ ನಿಯಮದನ್ವಯ 2025-26ನೇ ಸಾಲಿಗೆ ಸನ್ನದು ಲೆಕ್ಕಪರಿಶೋಧಕರನ್ನು ನೇಮಿಸಬೇಕಾಗಿರುತ್ತದೆ. ಆದ್ದರಿಂದ 2025-26 ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಯನ್ನು ಶ್ರೀ ರವೀಂದ್ರನಾಥ್ ಬಿ.ವಿ., ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರಿಂದ ಮಾಡಿಸುವ ಕುರಿತು ಸಂಘದ ಉಪಾಧ್ಯಕ್ಷರು ಸಭೆಯ ಗಮನಕ್ಕೆ ತಂದರು. ನಂತರ ಸಭೆಯು 2025-26ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಯನ್ನು ಶ್ರೀ ರವೀಂದ್ರನಾಥ್ ಬಿ.ವಿ., ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರಿಂದ ಮಾಡಿಸಲು ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು. ಹಾಗೆಯೇ, ಇವರಿಗೆ ನಿಯಮಾನುಸಾರ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸಲು ಆಡಳಿತ ಮಂಡಲಿಗೆ ಅಧಿಕಾರ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 12 :** **ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ ಕುರಿತು.**

**ನಿರ್ಣಯ :** ಈ ಕೆಳಕಂಡಂತೆ 2024-25ನೇ ಸಾಲಿಗೆ ಸೇರ್ಪಡೆಗೊಂಡ ಮತ್ತು ಸದಸ್ಯತ್ವ ವಾಪಾಸು ಪಡೆದ ವಿವರಗಳನ್ನು ಪರಿಶೀಲಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

| ತರಗತಿ | ವರ್ಷದ ಪ್ರಾರಂಭದಲ್ಲಿ | | ವರದಿ ಸಾಲಿನಲ್ಲಿ ಸೇರ್ಪಡೆ | | ಸಾಲಿನಲ್ಲಿ ವಾಪಸಾತಿ | | ವರ್ಷಾಂತ್ಯಕ್ಕೆ | |
|---|---|---|---|---|---|---|---|---|
| | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು |
| 'ಎ' | 31138 | 8,76,15,250 | 1153 | 69,99,000 | 1704 | 43,50,450 | 30587 | 9,02,63,800 |
| 'ಸಿ' | 27 | 2,700 | 20 | 2,000 | - | - | 47 | 4,700 |

**ವಿಷಯ 13 :** **ಸಹಕಾರ ಸಂಘದ ಸಮಿತಿ ಸದಸ್ಯರ, ಪದಾಧಿಕಾರಿಗಳ ಮತ್ತು ನೌಕರರುಗಳ ವರ್ತನಾ ನೀತಿ ಸಂಹಿತೆಗಳನ್ನು ರಚಿಸುವ ಕುರಿತು.**

**ನಿರ್ಣಯ :** ಈ ಬಗೆಗೆ ಅಂಗೀಕೃತವಾದ ನಿಯಮಾವಳಿ ಜಾರಿಯಲ್ಲಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 14 :** **ಸಂಘದ ಸಿಬ್ಬಂದಿಗಳ ಸೇವಾ ನಿಯಮ ತಿದ್ದುಪಡಿ ಕುರಿತು.**

**ನಿರ್ಣಯ :** ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಇತ್ತೀಚೆಗೆ ತಿದ್ದುಪಡಿಯಾದ ಸಹಕಾರ ಸಂಘಗಳ ಕಾಯ್ದೆಗನುಣವಾಗಿ ಪ್ರಸ್ತುತ ಇರುವ ಸಂಘದ ಸಿಬ್ಬಂದಿಗಳ ಸೇವಾ ನಿಯಮದಲ್ಲಿ ಕೆಲವು ಅಂಶಗಳನ್ನು ಪರಿಷ್ಕರಿಸಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 15 :** **ಸಂಘದ ಸದಸ್ಯರು ಮತ್ತು ನಿರ್ದೇಶಕರಿಂದ ಸಂಘದ ಸೇವೆಗಳ ಬಳಕೆಯ ಬಗೆಗೆ ಪರಿಶೀಲನೆ.**

**ನಿರ್ಣಯ :** ಸಂಘದ ಆಡಳಿತ ಮಂಡಲಿ ನಿರ್ದೇಶಕರು ಸಂಘದ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡಿರುತ್ತಾರೆ. ಹಾಗೂ ವರದಿ ಸಾಲಿನಲ್ಲಿ ಸಂಘದ ಬೈಲಾ ಅನ್ವಯ 65 ಕೆ.ಜಿ.ಗಿಂತ ಹೆಚ್ಚಿನ ಅಡಿಕೆ ಹಾಕಿದವರು 15855 ಸದಸ್ಯರು (ಶೇ.51.84) ಮತ್ತು 65 ಕೆ.ಜಿ.ಗಿಂತ ಕಡಿಮೆ ಅಡಿಕೆ ಹಾಕಿದವರು 361 ಸದಸ್ಯರು (ಶೇ.1.18) ಸಂಘದ ಸೇವೆಯನ್ನು ಬಳಸಿಕೊಂಡಿರುತ್ತಾರೆ. ಸಂಘಕ್ಕೆ ಅಡಿಕೆಯನ್ನೇ ಹಾಕದವರು 14371 ಸದಸ್ಯರು (ಶೇ.46.98) ಇರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

ಶ್ರೀ ನಾರಾಯಣ ರಾವ್ ಜಿ ಎಸ್ ಇವರು ಸಂಘಕ್ಕೆ ಅಡಿಕೆಯನ್ನೇ ಹಾಕದ ಸದಸ್ಯರ ಸಂಖ್ಯೆ 14371 ಇದ್ದು, ಕಳೆದ ವರ್ಷಕ್ಕಿಂತ ಈ ವರ್ಷ ಇಂತಹ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದು ಇವರೆಲ್ಲರೂ ಅನರ್ಹ ಸದಸ್ಯರಾಗಿರುತ್ತಾರೆ. ಆದರೆ ಚುನಾವಣೆಯ ಸಂದರ್ಭದಲ್ಲಿ ಇವರೆಲ್ಲರೂ ನ್ಯಾಯಾಲಯದಿಂದ ಆದೇಶ ತರುವ ಮೂಲಕ ಕೊನೇ ಕ್ಷಣದಲ್ಲಿ ಅರ್ಹ ಮತದಾರರಾಗಿ ಮತದಾರರ ಪಟ್ಟಿಯಲ್ಲಿ ಸೇರಿಕೊಳ್ಳುತ್ತಾರೆ. ಇದು ಚುನಾವಣಾ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಇಂತಹ ಅನರ್ಹ ಸದಸ್ಯರು ಸಂಘದಲ್ಲಿ ವ್ಯವಹಾರ ನಡೆಸಬೇಕು ಇಲ್ಲದಿದ್ದಲ್ಲಿ ಷೇರು ಮುಕ್ತಾಯಗೊಳಿಸುವ ಬಗೆಗೆ ಗಂಭೀರವಾಗಿ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಶ್ರೀ ಧೀರರಾಜ್ ಇವರು ಪ್ರಾದೇಶಿಕವಾರು ಅಥವಾ ಕ್ಷೇತ್ರವಾರು ಚುನಾವಣೆಯನ್ನು ನಡೆಸುವುದರಿಂದ ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಮತ್ತು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುತ್ತದೆ ಹಾಗೂ ತಾಲ್ಲೂಕುವಾರು ಅಥವಾ ಕ್ಷೇತ್ರವಾರು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವುದರಿಂದ ಎಲ್ಲಾ ಸದಸ್ಯರು ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ ಇದರಿಂದಾಗಿ ಸದಸ್ಯರು ಅನರ್ಹರಾಗುವುದು ಕಡಿಮೆಯಾಗುತ್ತದೆ ಎಂದು ಸಲಹೆ ನೀಡಿದರು.

ಶ್ರೀ ದಿನೇಶ್ ಕೆ ಸಿ ಇವರು ಚುನಾವಣಾ ಸಮಯದಲ್ಲಿ ಮಾಮ್‌ಕೋಸ್ ಸಂಸ್ಥೆಯ ವತಿಯಿಂದ ಕೇವಿಯೆಟ್ ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗಿತ್ತು. ಯಾವುದೇ ಸದಸ್ಯ 5 ವರ್ಷಗಳಲ್ಲಿ ಕನಿಷ್ಠ 2 ವರ್ಷ ಸಂಘದ ಬೈಲಾದಂತೆ ನಿಗದಿಪಡಿಸಿರುವ ಕನಿಷ್ಠ ವ್ಯವಹಾರವನ್ನು ಮಾಡದೇ ಇದ್ದಲ್ಲಿ ಮತ್ತು 5 ರಲ್ಲಿ ಕನಿಷ್ಠ 2 ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ವಿಫಲವಾದಲ್ಲಿ ಅಂತಹ ಸದಸ್ಯ ಮತದಾನ ಮಾಡಲು ಅನರ್ಹನಾಗುತ್ತಾನೆ ಎಂಬ ವಿಷಯವನ್ನು ಸಂಘದ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತರುವಲ್ಲಿ ವಿಫಲರಾದ್ದರಿಂದ ಅನರ್ಹ ಸದಸ್ಯರು ಚುನಾವಣೆಯಲ್ಲಿ ಮತದಾನ ಮಾಡುವಂತಾಯಿತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ಅರುಣ್ ಇವರು ಷೇರುದಾರರು ಸ್ವಂತ ಖರ್ಚಿನಿಂದ ಮತದಾನ ಹಕ್ಕನ್ನು ನ್ಯಾಯಾಲಯದಿಂದ ತಂದಿರುವುದು. ಮಾಮ್‌ಕೋಸ್ ಶುಲ್ಕವನ್ನು ಭರಿಸಿರುವುದಿಲ್ಲ. ಯಾವುದೇ ರೀತಿಯ ಭ್ರಷ್ಟಚಾರವಿಲ್ಲದೇ

83 ವರ್ಷಗಳಿಂದ ಸಂಸ್ಥೆ ನಡೆದುಕೊಂಡು ಬಂದಿದೆ. ಕ್ಷೇತ್ರವಾರು ಚುನಾವಣೆ ಮಾಡದೇ ಪ್ರಸ್ತುತ ಇರುವ ಪದ್ಧತಿಯೇ ಮುಂದುವರೆಯಲಿ ಎಂದು ತಿಳಿಸಿದರು.

ಶ್ರೀ ದಿನೇಶ ಬಿ ಜಿ ಇವರು ನ್ಯಾಯಲಯ ಮತದಾನದ ಹಕ್ಕು ನೀಡಿರುವುದು, ನ್ಯಾಯಾಲಯ ನೀಡಿರುವ ಹಕ್ಕಿನ ವಿರುದ್ಧ ಚರ್ಚೆಮಾಡುವುದು ಸೂಕ್ತವಲ್ಲ ಎಂದು ತಿಳಿಸಿದರು.

ಶ್ರೀ ನಾಗರಾಜ ಶೆಟ್ರು ಇವರು ಸಹಕಾರಿ ಕಾಯಿದೆ, ಬೈಲಾ ಎಲ್ಲಾ ಇದೆ. ಆದರೂ ಅನರ್ಹ ಸದಸ್ಯರು ಮತದಾನದ ಹಕ್ಕು ತರುವುದು ತಪ್ಪು. ಮೊದಲು ಕಾನೂನು ಬಿಗಿಯಾಗಬೇಕು. ಅದರ ಬಗೆಗೆ ಯೋಚನೆ ಮಾಡಿ. ಅನರ್ಹರಿಗೆ ಮತದಾನದ ಹಕ್ಕು ದೊರಕಬಾರದು. ಇದಕ್ಕೆ ಕಾನೂನಿನಲ್ಲಿ ತಿದ್ದುಪಡಿ ಮಾಡುವಂತೆ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸದಸ್ಯರೊಬ್ಬರು ಷೇರು ಹಾಕಿರುವುದು ವ್ಯವಹಾರ ಮಾಡುವ ಉದ್ದೇಶದಿಂದ. ಆದರೆ ಪ್ರಕೃತಿ ವಿಕೋಪ, ಎಲೆಚುಕ್ಕೆ ರೋಗ, ಅನಾವೃಷ್ಠಿಯಿಂದಾಗಿ ಅಡಿಕೆಯನ್ನು ಹಾಕಿರುವುದಿಲ್ಲ. ಆದ್ದರಿಂದ ಅನರ್ಹರಾಗಿರುತ್ತಾರೆ. ಆದರೆ ಮುಂದಿನ ದಿನಗಳಲ್ಲಿ ಅಡಿಕೆಯನ್ನು ಹಾಕಿ ವ್ಯವಹಾರವನ್ನು ನಡೆಸುತ್ತೇವೆ. ವ್ಯವಹಾರ ಮಾಡಿರುವುದಿಲ್ಲ ಎಂದು ಸದಸ್ಯತ್ವವನ್ನು ರದ್ದುಗೊಳಿಸುವುದು ಸಾಧ್ಯವಿಲ್ಲ. ವ್ಯವಹಾರ ನಡೆಸದ ಸದಸ್ಯರ ಮನವೊಲಿಸಿ. ಮತದಾನದ ಹಕ್ಕನ್ನು ತೆಗೆಯಬೇಡಿ ಎಂದು ಹೇಳಿದರು.

ಶ್ರೀ ಅರವಿಂದ ಇವರು ಲೆಕ್ಕಪರಿಶೋಧನಾ ವರದಿಯನ್ನು 'ಮಾಮ್‌ಕೋಸ್ ಆಪ್'ನಲ್ಲಿ ಮತ್ತು ಸಂಘದ 'ವೆಬ್‌ಸೈಟ್'ನಲ್ಲಿ ಪ್ರಕಟಿಸಬೇಕು ಹಾಗೂ 'ಮಾಮ್‌ಕೋಸ್ ಆಪ್'ನ್ನು ಇನ್ನಷ್ಟು ಉನ್ನತೀಕರಿಸಿ ಐಫೋನ್‌ಗಳಲ್ಲಿಯೂ ಉಪಯೋಗಿಸಲು ಬರುವಂತೆ ಮಾಡಬೇಕು ಎಂದು ಸಲಹೆ ನೀಡಿದಾಗ ವ್ಯವಸ್ಥಾಪಕ ನಿರ್ದೇಶಕರು ವರದಿಯನ್ನು ಮಾಮ್‌ಕೋಸ್ ಆಪ್ ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದರು.

**ವಿಷಯ16 :** **ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ17 :** **ಪದಾಧಿಕಾರಿಗಳೂ ಸೇರಿದಂತೆ ನಿರ್ದೇಶಕರಿಗೆ ಅವರ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಪಟ್ಟ ಸಭೆಗಳಲ್ಲಿ ಅವರು ಹಾಜರಾದುದಕ್ಕೆ ಸಂಬಂಧಿಸಿ ಅವರಿಗೆ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಇತರ ಭತ್ಯೆಗಳ ಪರಿಶೀಲನೆ ಕುರಿತು.**

**ನಿರ್ಣಯ :** 2024-25ನೇ ಸಾಲಿನಲ್ಲಿ, ಅಂದರೆ ದಿನಾಂಕ: 01 ಏಪ್ರಿಲ್ 2024 ರಿಂದ 31 ಮಾರ್ಚ್ 2025ರವರೆಗೆ ಒಟ್ಟು 10 ಆಡಳಿತ ಮಂಡಳಿ ಸಭೆ, 12 ಕಾರ್ಯನಿರ್ವಾಹಕ ಸಮಿತಿ ಸಭೆ, 9 ಲೆಕ್ಕಪರಿಶೋಧನೆ ಮತ್ತು ಹಣಕಾಸು ಸಮಿತಿ ಸಭೆ, 9 ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆ ಹಾಗೂ ಅಡಿಕೆ ಖರೀದಿ ವ್ಯವಹಾರ ಸಮಿತಿಯ 10 ಸಭೆಗಳು ಸೇರಿ ಒಟ್ಟು 50 ಸಭೆಗಳು ನಡೆದಿರುವುದನ್ನು ಗಮನಿಸಿ, ಇದಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ ನಿರ್ದೇಶಕರಿಗೆ ನಿಯಮಾನುಸಾರ ಒಟ್ಟು ರೂ.29,26,842/-ರಷ್ಟು ಭತ್ಯೆ ಪಾವತಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ಈ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಕೆ ವಿ ಗೌಡ ಇವರು ಒಂದು ವರ್ಷದಲ್ಲಿ 50 ಸಭೆಗಳಿಂದ ರೂ.29,26,842.00ಗಳನ್ನು ನಿರ್ದೇಶಕರಿಗೆ ಪಾವತಿಸಿದ್ದೀರಾ ಹಾಗಾದರೆ ನಿರ್ದೇಶಕರಿಗೆ ಒಂದು ಸಭೆಗೆ ಎಷ್ಟು ಸಭಾಭತ್ಯೆ ಪಾವತಿಸಲಾಗುತ್ತದೆ ಅದರ ವಿವರ ನೀಡಿ ಎಂದು ಪ್ರಶ್ನಿಸಿದಾಗ ಶ್ರೀ ದಿನೇಶ್ ಬಿ ಜಿ, ಸಾಗರ ಇವರು ನಿರ್ದೇಶಕರ ಸಭಾಭತ್ಯೆಗಳನ್ನು ಕಾನೂನಿನ ಅನ್ವಯ ಪಾವತಿ ಮಾಡಿರುತ್ತಾರೆ ವೃಥಾ ಈ ಬಗ್ಗೆ ಚರ್ಚೆ ಬೇಡ ಎಂಬುದಾಗಿ ಸಲಹೆ ನೀಡಿದರು.

ಮಾನ್ಯ ಉಪಾಧ್ಯಕ್ಷರು ನಿರ್ದೇಶಕರಿಗೆ ಒಂದು ಸಭೆಗೆ ರೂ.5,000.00ರಂತೆ ಸಭಾಭತ್ಯೆಯನ್ನು ಮತ್ತು ಪ್ರತ್ಯೇಕವಾಗಿ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತದೆ. ಸಭಾಭತ್ಯೆಯು ವಾರ್ಷಿಕ ಸಾಮಾನ್ಯ ಸಭೆಯ ಅನುಮತಿ ಪಡೆದು ನಿಗದಿಪಡಿಸಿದಂತಹ ಮೊತ್ತವಾಗಿದ್ದು ಶ್ರೀ ದಿನೇಶ್ ಬಿ ಜಿ ಇವರು ತಿಳಿಸಿದಂತೆ ಕಾನೂನಿನ ಅಡಿಯಲ್ಲಿಯೇ ನಿರ್ದೇಶಕರ ಭತ್ಯೆಗಳನ್ನು ಪಾವತಿ ಮಾಡಲಾಗುತ್ತಿದೆ ಎಂಬುದನ್ನು ಸಭೆಗೆ ತಿಳಿಸಿದರು.

**ವಿಷಯ 18 :** **ಸಂಘದ ಉಪವಿಧಿ ತಿದ್ದುಪಡಿಯ ಪ್ರಸ್ತಾವನೆಯನ್ನು ಪರಿಶೀಲಿಸಿ, ಅನುಮೋದಿಸುವ ಕುರಿತು.**

**ತೀರ್ಮಾನ :** ಸಂಘದ ಆಡಳಿತ ಮಂಡಳಿಯವರು ಶಿಫಾರಸು ಮಾಡಿದ ಉಪವಿಧಿಗಳ ತಿದ್ದುಪಡಿಯನ್ನು, ವಾರ್ಷಿಕ ಸಭೆಯ ಅನುಮೋದನೆಗಾಗಿ ಸಂಘದ ವ್ಯವಸ್ಥಾಪಕ ನಿರ್ದೇಶಕರು ಮಂಡಿಸಿದರು. ಇದನ್ನು ನಿರ್ದೇಶಕರಾದ ಶ್ರೀ ಕೀರ್ತಿರಾಜ್ ಕೆ ಇವರು ಸೂಚಿಸಿದ್ದನ್ನು ನಿರ್ದೇಶಕರಾದ ಶ್ರೀ ರತ್ನಾಕರ ಕೆ ಇವರು ಅನುಮೋದಿಸಿದರು.

ವ್ಯವಸ್ಥಾಪಕ ನಿರ್ದೇಶಕರು ಸಂಘದ ಕಾಯವ್ಯಾಪ್ತಿಯನ್ನು ಕರ್ನಾಟಕ ರಾಜ್ಯದ ಶಿವಮೊಗ್ಗ, ಚಿಕ್ಕಮಗಳೂರು,ದಾವಣಗೆರೆ, ಚಿತ್ರದುರ್ಗ, ಹಾವೇರಿ, ಹಾಸನ, ತುಮಕೂರು, ಮಂಡ್ಯ, ಚಾಮರಾಜನಗರ, ಉತ್ತರಕನ್ನಡ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ವಿಸ್ತರಿಸಲು ತಿದ್ದುಪಡಿ ಪ್ರಸ್ತಾವನೆಯನ್ನು ಮಂಡಿಸಿದರು.

ಶ್ರೀ ರಂಗನಾಥ ಪಿ ಎನ್ ಇವರು ಮಾಮ್‌ಕೋಸ್ ಎಂಬುದು ಮಲೆನಾಡಿನ ಅಡಿಕೆ ಬೆಳೆಗಾರರ ಸಂಸ್ಥೆಯಾಗಿದ್ದು ಈಗ ಅದರ ಕಾರ್ಯವ್ಯಾಪ್ತಿಯನ್ನು ಬೇರೆ ಬೇರೆ ಜಿಲ್ಲೆಗಳಿಗೆ ವಿಸ್ತರಿಸಿದರೆ ಈ ಸಂಸ್ಥೆಯು ಮಲೆನಾಡಿಗರ ಸಂಸ್ಥೆಯಾಗಿ ಉಳಿಯುವುದಿಲ್ಲ. ಮಲೆನಾಡಿನ ಷೇರುದಾರ ಸದಸ್ಯರಿಗಿಂತ ಬೇರೆ ಭಾಗದ ಸದಸ್ಯರ ಸಂಖ್ಯೆ ಹೆಚ್ಚಾಗಿ ಸಂಸ್ಥೆಯ ಹೆಸರನ್ನೇ ಬದಲಾಯಿಸಬೇಕಾದ ಸಂದರ್ಭ ಬರಬಹುದು ಆದ್ದರಿಂದ ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವುದು ಬೇಡ ಎಂದು ತಿಳಿಸಿದರು.

ಶ್ರೀ ತಿಮ್ಮಪ್ಪ ಎಲ್ ಟಿ ಇವರು 30000 ಸದಸ್ಯರಲ್ಲಿ ಅಡಿಕೆ ಹಾಕಿ ವ್ಯವಹಾರ ನಡೆಸದ ಸದಸ್ಯರ ಮನವೊಲಿಸಿ ವ್ಯವಹಾರವನ್ನು ನಡೆಸುವಂತೆ ಮಾಡಲು ಸಾಧ್ಯವಾಗುತಿಲ್ಲ. ಹೀಗಿರುವಾಗ ಬೇರೆ ಬೇರೆ ಜಿಲ್ಲೆಗಳಿಗೆ ವಿಸ್ತರಣೆ ಏಕೆ?. ಅದರ ಅವಶ್ಯಕತೆ ಇರುವುದಿಲ್ಲ. ಕ್ಷೇತ್ರಗಳು ಜಾಸ್ತಿಯಾಗುತ್ತದೆ. ಈ ವಿಷಯವನ್ನು ಕೈ ಬಿಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಶ್ರೀ ದಿನೇಶ್ ಕೆ ಸಿ, ಇವರು ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವುದು ಸಮಂಜಸವಾದುದಲ್ಲ. ಇದು ಪ್ರಾಯೋಗಿಕವಾಗಿಯೂ ಯಶಸ್ವಿಯಾಗುವಂತಹದ್ದಲ್ಲ ಎಂದು ತಿಳಿಸಿದರು. ಕರ್ನಾಟಕ ರಾಜ್ಯಾದ್ಯಂತ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದ್ದರೂ ಕೂಡಾ ಅಡಿಕೆ ಬೆಳೆಯಲು ಇರುವಂತಹ ಸೌಲಭ್ಯಗಳು ಪ್ರಾದೇಶಿಕವಾಗಿ ಬೇರೆ ಬೇರೆಯಾಗಿವೆ, ಮಲೆನಾಡಿನ ರೈತರಿಗೆ ನೀರಾವರಿ ಸೌಲಭ್ಯ ಇರುವುದಿಲ್ಲ ಹಾಗೂ ಇನ್ನಿತರ ಸಮಸ್ಯೆಗಳಿವೆ ಆದ್ದರಿಂದ ಸಂಘವು ಮಲೆನಾಡಿನ ಅಡಿಕೆ ಬೆಳೆಗಾರರ ಸಂಘವಾಗಿಯೇ ಉಳಿಯಲಿ ಎಂದು ತಿಳಿಸಿದರು.

ಸದಸ್ಯರೊಬ್ಬರು 1939ರಲ್ಲಿ ಸಂಸ್ಥೆ ಪ್ರಾರಂಭವಾದಾಗಲೇ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ಎಂದು ನಾಮಕರಣ ಮಾಡಲಾಗಿದ್ದು ಈಗ ಸಂಘದ ಕಾರ್ಯವ್ಯಾಪ್ತಿಯನ್ನು ಬಯಲುಸೀಮೆಯ ಪ್ರದೇಶಗಳಿಗೆ ವಿಸ್ತರಿಸಿದರೆ ಸಂಘದ ಹೆಸರಿಗೆ ಚ್ಯುತಿಯುಂಟು ಮಾಡಿದಂತಾಗುತ್ತದೆ. ಮಲೆನಾಡಿನ ಪ್ರಾದೇಶಿಕ ಬೆಳೆಯಾದಂತಹ ಅಡಿಕೆ ಬೆಳೆಯ ಪ್ರಾದೇಶಿಕ ಚೌಕಟ್ಟನ್ನು ಮೀರಿ ಸಂಘದ ಕಾರ್ಯವ್ಯಾಪ್ತಿಯನ್ನು ಬೇರೆ ಪ್ರದೇಶಗಳಿಗೆ ವಿಸ್ತರಿಸಲು ಅವಕಾಶ ಕೊಡಬಾರದು ಎಂದು ತಿಳಿಸಿದರು.

ಶ್ರೀ ಬಸವರಾಜಪ್ಪ ಹೆಚ್ ಆರ್ ಇವರು ಸಂಘವು ಮಲೆನಾಡು ಪ್ರದೇಶದ ಅಡಿಕೆ ಬೆಳೆಗಾರರ ಸಂಘವಾಗಿ ಪ್ರಾರಂಭವಾಗಿದ್ದರೂ ಸಹ ಈಗಾಗಲೇ ಬಯಲುಸೀಮೆ ಪ್ರದೇಶದ ಕೆಲವು ತಾಲ್ಲೂಕುಗಳಿಗೆ ತನ್ನ

ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಕಾರ್ಯನಿರ್ವಹಿಸುತ್ತಿದೆ. ಇದರಿಂದಾಗಿ ಸಂಘದ ಸದಸ್ಯರ ಸಂಖ್ಯೆ, ಸಂಘದ ವಹಿವಾಟು ಹಾಗೂ ಲಾಭಾಂಶ ಕೂಡಾ ಹೆಚ್ಚಾಗಿರುತ್ತದೆ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ಅಡಿಕೆ ಬೆಳೆಯು ಕೇವಲ ಮಲೆನಾಡು ಪ್ರದೇಶಕ್ಕೆ ಸೀಮಿತವಾಗಿ ಉಳಿಯದೇ ಮಲೆನಾಡಿಗಿಂತಲೂ ಬೇರೆ ಭಾಗಗಳಲ್ಲಿ ಅಡಿಕೆ ಬೆಳೆಯ ಪ್ರಮಾಣ ಹೆಚ್ಚುತ್ತಿದೆ. ಇನ್ನೂ ಹೆಚ್ಚಿನ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡರೆ  ವ್ಯವಹಾರ ಅಭಿವೃದ್ಧಿಯಾಗುತ್ತದೆ. ಲಾಭದೊರಕುತ್ತದೆ. ಸಹಕಾರಿ ಸಂಸ್ಥೆಯಲ್ಲಿ ಸದಸ್ಯರಾಗಲು ಮಿತಿ ಹೇರಲು ಸಾಧ್ಯವಿಲ್ಲ. ಆದ್ದರಿಂದ ಸಂಘದ ಕಾರ್ಯವ್ಯಾಪ್ತಿಯನ್ನು ಅಡಿಕೆ ಬೆಳೆಯುವ ಬೇರೆ ಬೇರೆ ಪ್ರದೇಶಗಳಿಗೂ ವಿಸ್ತರಣೆ ಮಾಡಲು ವಿರೋಧ ವ್ಯಕ್ತಪಡಿಸಬಾರದು ಎಂದು ವಿನಂತಿಸಿದರು. ಹಾಗೂ ರಾಜ್ಯವ್ಯಾಪ್ತಿಗೆ ವಿಸ್ತರಣೆ ಮಾಡುವಂತೆ ಮನವಿ ಮಾಡಿದರು.

ಶ್ರೀ ದಿನೇಶ್ ಬಿ ಜಿ ಇವರು ಸಂಘದ ಕಾರ್ಯವ್ಯಾಪ್ತಿಯ ಕುರಿತು ಉಪವಿಧಿ ತಿದ್ದುಪಡಿಯ ಪ್ರಸ್ತಾವನೆಯನ್ನು ಯಾವ ಉದ್ದೇಶ ಹಾಗೂ ದೃಷ್ಠಿಕೋನದಿಂದ ಮಂಡಿಸಲಾಗಿದೆ, ಈ ತಿದ್ದುಪಡಿ ಪ್ರಸ್ತಾವನೆಗೆ ಕಾರಣಗಳು  ಏನು ಎಂದು ಆಡಳಿತ ಮಂಡಲಿಯು ತಿಳಿಸಬೇಕಾಗಿ ಕೇಳಿದರು.

ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು ಮಾತನಾಡಿ ಸಂಘವು ಹಿಂದಿನ ವರ್ಷ 403 ಕೋಟಿ ಅಡಿಕೆ ಖರೀದಿ ವ್ಯವಹಾರವನ್ನು ಮಾಡಿತ್ತು ಆದರೆ ಈ ಬಾರಿ 687 ಕೋಟಿ ಅಡಿಕೆ ಖರೀದಿ ವ್ಯವಹಾರವನ್ನು ಮಾಡಿದೆ. ಸಂಘವು 2018ರಿಂದ ಅಡಿಕೆ ಖರೀದಿ ವ್ಯವಹಾರವನ್ನು ಮಾಡುತ್ತಿದ್ದು ಎಲ್ಲಾ ಸದಸ್ಯರ ಸಹಕಾರದಿಂದ ಅಡಿಕೆ ಖರೀದಿ ವಹಿವಾಟು ಉತ್ತಮವಾಗಿ ನಡೆಯುತ್ತಿದೆ ಹಾಗೂ ಸಂಸ್ಥೆಯೂ ಕೂಡಾ ಸದಸ್ಯರಿಗೆ ಉತ್ತಮ ಮಾರುಕಟ್ಟೆ ಧಾರಣೆಯನ್ನು ಒದಗಿಸುತ್ತಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಸಂಘದಲ್ಲಿ ಅಡಿಕೆ ದಾಸ್ತಾನು ಕಡಿಮೆಯಿದ್ದು ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಅಡಿಕೆ ಪೂರೈಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಂಘವು ತನ್ನ ಕಾರ್ಯವ್ಯಾಪ್ತಿಯ ಎಲ್ಲಾ ಶಾಖೆಗಳೂ, ನೇರ ಖರೀದಿ ಕೇಂದ್ರಗಳು ಹಾಗೂ ಇತರೆ ಸಹಕಾರ ಸಂಘಗಳಲ್ಲಿ ಅಡಿಕೆ ಖರೀದಿ ಮಾಡುತ್ತಿದ್ದರೂ ಕೂಡಾ ಬೇಡಿಕೆಗೆ ಅನುಗುಣವಾದಷ್ಟು ದಾಸ್ತಾನು ಲಭ್ಯವಾಗುತ್ತಿಲ್ಲ. ರಾಜ್ಯಮಟ್ಟದಲ್ಲಿ ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಸಭೆಯು ಅನುಮತಿಯನ್ನು ಕೊಟ್ಟರೆ ಸಂಘವು ಬೇಡಿಕೆಗೆ ಅನುಗುಣವಾಗಿ ಅಡಿಕೆಯನ್ನು ಖರೀದಿಸಿ ಮಾರಾಟ ಮಾಡಲು ಸಾಧ್ಯವಾಗುತ್ತದೆ.  ಇದರಿಂದಾಗಿ ಸಂಸ್ಥೆಯೂ ಕೂಡಾ ಬೆಳೆಯುತ್ತದೆ ಆದ್ದರಿಂದ ಸಂಘದ ಕಾರ್ಯವ್ಯಾಪ್ತಿ ಯನ್ನು ವಿಸ್ತರಿಸುವ ತಿದ್ದುಪಡಿ ಪ್ರಸ್ತಾವನೆಗೆ ಸಭೆಯು ಒಪ್ಪಿಗೆ ನೀಡಬೇಕೆಂದು ಕೋರಿದರು.

ಶ್ರೀ ಪ್ರಸನ್ನಕುಮಾರ್ ಎ ಆರ್ ಇವರು ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ 19 ಜಿಲ್ಲೆಗಳಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದೆ. ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆ ಸ್ಥಿರತೆ ಕಾಪಾಡಿಕೊಂಡಿರುವಲ್ಲಿ ಮಾಮ್‌ಕೋಸ್ ಮತ್ತು ಕ್ಯಾಂಪ್ಕೋ ಸಂಸ್ಥೆಗಳ ಪಾತ್ರ ಬಹುಮುಖ್ಯವಾಗಿದ್ದು, ಈ ರೀತಿಯ ಮಾರುಕಟ್ಟೆ ಧಾರಣೆ ಮತ್ತು ಸಂಸ್ಥೆಯ ಬೆಳವಣಿಗೆಯ ದೃಷ್ಠಿಯಿಂದ ಸಂಘದ ಕಾರ್ಯವ್ಯಾಪ್ತಿಯನ್ನು ಅಡಿಕೆ ಟ್ರೇಡಿಂಗ್ ಉದ್ದೇಶಕ್ಕಾಗಿ ಮಾತ್ರ ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಸುವುದು ಉತ್ತಮವಾಗಿದ್ದು, ಸಂಸ್ಥೆಯನ್ನು ಬೆಳೆಸೋಣಾ ಸಭೆಯು ಇದಕ್ಕೆ ಅನುಮತಿಯನ್ನು ನೀಡಬೇಕು ಎಂದು ತಿಳಿಸಿದರು.

ಶ್ರೀ ರಂಗನಾಥ ಪಿ ಎನ್ ಮತ್ತು ಶ್ರೀ ತಿಮ್ಮಪ್ಪ ಎಲ್ ಟಿ ಇವರುಗಳು ಇದಕ್ಕೆ ಪೂರಕವಾಗಿ ಅಡಿಕೆ ಖರೀದಿ ಉದ್ದೇಶಕ್ಕಾಗಿ ಮಾತ್ರ ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಆದರೆ ಶಾಖೆಗಳನ್ನು ತೆರೆಯುವುದು ಅಥವಾ ಆ ಭಾಗದ ಸದಸ್ಯರುಗಳಿಗೆ ಷೇರು ಸದಸ್ಯತ್ವ ನೀಡುವುದು ಬೇಡ ಎಂಬುದಾಗಿ ಅಭಿಪ್ರಾಯಪಟ್ಟರು.

ಶ್ರೀ ನಾರಾಯಣ ರಾವ್ ಜಿ ಎಸ್ ಇವರೂ ಕೂಡಾ ಸಂಘದ ವಿಸ್ತರಿಸಿದ ಕಾರ್ಯಕ್ಷೇತ್ರಗಳಲ್ಲಿ ಶಾಖೆಗಳನ್ನು ತೆರೆಯುವುದು ಬೇಡ ಖರೀದಿ ಕೇಂದ್ರ ಮಾಡಿ (Out let) ವಹಿವಾಟು ಮಾತ್ರ ನಡೆಸಿ. ಹಾಗೂ ಸಂಘದ

ಮುಂದಿನ ಕಾರ್ಯಯೋಜನೆಗಳಲ್ಲಿ ಹಲವಾರು ಯೋಜನೆಗಳನ್ನು ತಿಳಿಸಿರುತ್ತೀರಾ ಇದರೊಂದಿಗೆ ಅಡಿಕೆ ಹಾಳೆ ತಟ್ಟೆಯ ಉತ್ಪಾದನೆಯನ್ನು ಪರಿಗಣನೆಗೆ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಶ್ರೀ ದೇವಕುಮಾರ್ ಇವರು ಸಂಘದ ಕಾರ್ಯವ್ಯಾಪ್ತಿಯನ್ನು ರಾಜ್ಯವ್ಯಾಪ್ತಿಗೆ ವಿಸ್ತರಿಸಿ. ಟ್ರೇಡಿಂಗ್ ವ್ಯವಹಾರವನ್ನು ಮಾಡಿ. ಸದಸ್ಯತ್ವವನ್ನು ಪಡೆಯುವುದು ಬೇಡವೆಂದು ಅಭಿಪ್ರಾಯಪಟ್ಟರು.

ಶ್ರೀ ದಿನೇಶ್ ಕೆ ಸಿ ಇವರು ಸಂಘದ ಚುನಾವಣೆಯನ್ನು ಕ್ಷೇತ್ರವಾರು ನಡೆಸಬೇಕು. ಪ್ರಸ್ತುತ ಇರುವ ಸರ್ಕಾರದ ಅವಧಿಯಲ್ಲಿ ಕ್ಷೇತ್ರವಾರು ಚುನಾವಣೆ ನಡೆಸುವಂತೆ ಸರ್ಕಾರದಿಂದ ನಿರ್ದೇಶನ ಬರುತ್ತದೆ ಎಂದು ಹೇಳಿದರು. ಹಾಗೂ ಷೇರುದಾರರ ಸಭೆಯನ್ನು ತಾಲ್ಲೂಕು ಮಟ್ಟದಲ್ಲಿ ನಡೆಸುವ ಬಗೆಗೆ ಪ್ರಸ್ತಾವನೆಯನ್ನು ಇಟ್ಟಿರುತ್ತೀರಿ. ಆದರೆ ಇದು ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ವಿರುದ್ಧವಾಗಿದ್ದು ಷೇರುದಾರರ ಸಭೆಗಳನ್ನು ನಡೆಸಬಾರದು. ಆದ್ದರಿಂದ ಷೇರುದಾರರ ಸಭೆ ನಡೆಸುವ ಬಗೆಗಿನ ಉಪವಿಧಿ ತಿದ್ದುಪಡಿಯನ್ನು ಕೈಬಿಡಬೇಕು ಎಂದು ಹೇಳಿದರು. ಮುಂದುವರೆದು, ಬೇಡಿಕೆಗೆ ಅನುಗುಣವಾಗಿ ಪೂರೈಸುವಷ್ಟು ಅಡಿಕೆ ದಾಸ್ತಾನು ಮಲೆನಾಡು ಭಾಗದ ರೈತರ ಬಳಿಯೇ ಸಿಗುತ್ತದೆ. ಮಲೆನಾಡಿನಲ್ಲಿ ಮಳೆನೀರಿನ ಹೊರತಾಗಿ ಬೇರೆ ಯಾವುದೇ ನೀರಾವರಿ ಸೌಲಭ್ಯವಿರುವುದಿಲ್ಲ. ಆದ್ದರಿಂದ ಮಲೆನಾಡಿನ ಅಡಿಕೆ ಭಾಗವು ಮಲೆನಾಡಿನ ಭಾಗದ ಸಂಘವಾಗಿಯೇ ಉಳಿಯಲಿ. ಬೇರೆ ಭಾಗದವರು ಬಂದರೆ ನಮ್ಮನ್ನೇ ಪ್ರಶ್ನಿಸುತ್ತಾರೆ. ಅಡಿಕೆ ಖರೀದಿ ಉದೇಶದಿಂದ ಸಂಘದ ಕಾರ್ಯವ್ಯಾಪ್ತಿಯನ್ನು ರಾಜ್ಯಮಟ್ಟಕ್ಕೆ ವಿಸ್ತರಿಸುವ ಅಗತ್ಯ ಇಲ್ಲ.

ಶ್ರೀ ಜಯರಾಂ, ಗೋಂದಿ ಇವರು ತಾಲ್ಲೂಕು ಮಟ್ಟದಲ್ಲಿ ಷೇರುದಾರರ ಸಭೆಯನ್ನು ಮಾಮ್‌ಕೋಸ್ ಸಂಸ್ಥೆಯ ವತಿಯಿಂದಲೇ ನಡೆಸಬೇಕು. ವಿಭಾಗೀಯ ಸಭೆ ನಡೆಸುವುದು ಕರ್ತವ್ಯ. ಕೋಟಿಗಟ್ಟಲೆ ವ್ಯವಹಾರವನ್ನು ನಡೆಸುತ್ತೀರಾ, ಷೇರುದಾರರ ಸಭೆಯನ್ನು ನಡೆಸಿ ಎಂದು ತಿಳಿಸಿದರು.

ಶ್ರೀ ನವೀನ್ ಇವರು, ಸಂಘದ ವಾರ್ಷಿಕ ಸಾಮಾನ್ಯ ಸಭೆಯು ಜಿಲ್ಲಾ ಕೇಂದ್ರದಲ್ಲಿ ನಡೆಯುತ್ತದೆ. ಎಲ್ಲಾ ಸದಸ್ಯರುಗಳು ಈ ಸಾಮಾನ್ಯ ಸಭೆಗೆ ಬರುವುದೇ ಕಷ್ಟವಾಗಿರುತ್ತದೆ ಹಾಗೂ ಈ ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರು ತಮ್ಮ ಸಮಸ್ಯೆ ಅಥವಾ ಅಹವಾಲುಗಳನ್ನು ಹೇಳಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ತಾಲ್ಲೂಕು ವ್ಯಾಪ್ತಿಯಲ್ಲಿ ಷೇರುದಾರರ ಸಭೆಯನ್ನು ನಡೆಸಲೇಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಸಾಕಷ್ಟು ಸದಸ್ಯರು ಷೇರುದಾರರ ಸಭೆಯನ್ನು ನಡೆಸಲೇಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.

ಸದಸ್ಯರೊಬ್ಬರು ಅಡಿಕೆಯೊಂದಿಗೆ ಕೊಕೋ ಮತ್ತು ಕಾಳುಮೆಣಸಿನ ಬೆಳೆಗಳನ್ನು ಖರೀದಿ ಮತ್ತು ವಿಕ್ರಿ ಮಾಡುವುದಾಗಿ ತಿಳಿಸಿರುತ್ತೀರಿ, ಆದರೆ ಕೋಕೋ ಬೆಳೆಯ ಬಗ್ಗೆ ಹೆಚ್ಚಿನ ಮಾಹಿತಿ ಬೆಳೆಗಾರರಿಗೆ ಇರುವುದಿಲ್ಲ ಹಾಗೂ ಇತ್ತೀಚೆಗೆ ಚನ್ನಗಿರಿ ಭಾಗದಲ್ಲಿ ಕಾಳುಮೆಣಸನ್ನು ಬೆಳೆಯಲಾಗುತ್ತಿದ್ದು ಇದಕ್ಕೆ ರೋಗಭಾದೆ ಕಾಡುತ್ತಿದೆ. ಆದ್ದರಿಂದ ಈ ಬಗೆಗೆ ಮಾಹಿತಿ ನೀಡಬೇಕೆಂದು ಕೇಳಿಕೊಂಡರು.

ಶ್ರೀ ನಂದೀಶ್ ಇವರು ಉಪವಿಧಿ ಸಂಖ್ಯೆ 5(33)ರ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿರುತ್ತದೆ ಎಂದು ತಿಳಿಸಿರುತ್ತೀರಿ. ಹಾಗಿದ್ದೂ ಇದರ ತಿದ್ದುಪಡಿ ಪ್ರಸ್ತಾಪವನ್ನು ಮಂಡಿಸಲು ಅನುಮತಿ ಇರುತ್ತದೆಯೇ? ಎಂದು ಪ್ರಶ್ನಿಸಿದಾಗ ಮಾನ್ಯ ಉಪಾಧ್ಯಕ್ಷರು ಈ ತಿದ್ದುಪಡಿಯ ಪ್ರಸ್ತಾವನೆಗೆ ಮಹಾಸಭೆ ಅನುಮತಿ ಕೊಟ್ಟರೆ ತಿದ್ದುಪಡಿ ಪ್ರಸ್ತಾವನೆಯನ್ನು ಮಂಡಿಸಬಹುದು ಎಂದು ತಿಳಿಸಿದರು.

ಶ್ರೀ ರವಿಕುಮಾರ್ ಇವರು ಷೇರುದಾರರ ಸಭೆಯ ಕುರಿತು ಉಪವಿಧಿ ತಿದ್ದುಪಡಿ ಮಂಡಿಸಿ ಎಂದು ತಿಳಿಸಿದರು.

ಶ್ರೀ ಶಶಿಧರ ಪಿ ಎನ್ ಇವರು, ಷೇರುದಾರರ ಸಭೆಯನ್ನು ನಡೆಸುವುದರಿಂದ ಎಷ್ಟು ಖರ್ಚು-ವೆಚ್ಚಗಳಾಗುತ್ತವೆ ಎಂಬುದರ ಬಗ್ಗೆ ಮಾತ್ರ ಚರ್ಚೆ ಮಾಡುತ್ತೇವೆ. ಆದರೆ ಷೇರುದಾರರ ಸಭೆ ನಡೆಸುವುದರಿಂದ ಸಂಘಕ್ಕೆ ಎಷ್ಟು ಅನುಕೂಲವಾಗಿದೆ, ಎಷ್ಟು ಲಾಭ ಬಂದಿದೆ ಎಂಬುದನ್ನು ಅಂಕಿ ಅಂಶಗಳನ್ನು ಗಮನಿಸಿದರೆ ತಿಳಿಯುತ್ತದೆ. ಆಡಳಿತ ಮಂಡಲಿಯವರು ಸಹಕಾರ ಭಾರತಿ ಅಡಿಯಲ್ಲಿ ಷೇರುದಾರರ ಸಭೆಯನ್ನು ನಡೆಸಿರುತ್ತೀರಿ. ಧನ್ಯವಾದಗಳು. ಆದರೆ ಷೇರುದಾರರ ಸಭೆ ಮಾಮ್‌ಕೋಸ್ ವತಿಯಿಂದ ನಡೆಸಬೇಕು. ಉಪವಿಧಿ ತಿದ್ದುಪಡಿ ಮಾಡಿ ಷೇರುದಾರರ ಸಭೆಯನ್ನು ನಡೆಸಲೇಬೇಕು ಎಂದು ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿರುವುದಾಗಿ ತಿಳಿಸಿದರು ಹಾಗೂ ಮಾಮ್‌ಕೋಸ್ ಸಂಸ್ಥೆಯ ವತಿಯಿಂದ ಸಿರಿತಾಂಬೂಲ ಯೋಜನೆಯನ್ನು ಪ್ರಾರಂಭಿಸುವಂತೆ ಸಲಹೆ ನೀಡಿದರು.

ಕಾರ್ಯವ್ಯಾಪ್ತಿಯ ವಿಸ್ತರಣೆಯ ತಿದ್ದುಪಡಿಗೆ ಸಂಬಂಧಿಸಿದಂತೆ ಶ್ರೀ ಸುದರ್ಶನ, ಕೋಡನಕಟ್ಟೆ ಇವರು ಅಡಿಕೆ ಬೆಳೆಯ ಮಾದರಿಯು ಪ್ರದೇಶವಾರು ಬೇರೆ ಬೇರೆ ಇರುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತಂದಾಗ ಈ ಬಗೆಗೆ ಮಾನ್ಯ ಉಪಾಧ್ಯಕ್ಷರು ಉತ್ತರಿಸಿ, ಅಡಿಕೆ ಬೆಳೆಯ ಮಾದರಿಗೆ ತಕ್ಕಂತೆ ಮಾರುಕಟ್ಟೆಯ ದರಕ್ಕೆ ಅನುಗುಣವಾಗಿ ಮಾಮ್‌ಕೋಸ್ ಸಂಸ್ಥೆಯು ರೈತರ ಬೆಳೆಯನ್ನು ಖರೀದಿಸುತ್ತದೆ. ಬಹುಮುಖ್ಯವಾಗಿ ಕೆಂಪಡಿಕೆ ಧಾರಣೆಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಸಂಸ್ಥೆಯ ಉದ್ದೇಶವಾಗಿದ್ದು ಈ ಬಗೆಗೆ ಸಂಘವು ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದರು.

ಸದಸ್ಯರೊಬ್ಬರು, ಸಂಘವು ಸದಸ್ಯರಿಗೆ ಕೊಡುವ ಸಾಲದ ಮೇಲೆ ಶೇ.11 ರಷ್ಟು ಬಡ್ಡಿ ವಿಧಿಸುತ್ತದೆ ಮತ್ತು ಸದಸ್ಯರ ಠೇವಣಿ ಮೇಲೆ ಶೇ.7 ರಷ್ಟು ಬಡ್ಡಿ ನೀಡುತ್ತಿದೆ. ಇವುಗಳ ಮಧ್ಯದ ಅಂತರ ಹೆಚ್ಚಿದ್ದು ಇದನ್ನು ಕಡಿಮೆ ಮಾಡುವ ಸಲುವಾಗಿ ಠೇವಣಿ ಮೇಲಿನ ಬಡ್ಡಿಯನ್ನು ಹೆಚ್ಚಿಸುವಂತೆ ಕೇಳಿಕೊಂಡಾಗ ಮಾನ್ಯ ಉಪಾಧ್ಯಕ್ಷರು ಹಿರಿಯ ನಾಗರಿಕರಿಗೆ 3 ವರ್ಷಗಳ ಅವಧಿ ಠೇವಣಿ ಮೇಲೆ ಬಡ್ಡಿ ದರವನ್ನು ಶೇ.8 ಕ್ಕೆ ಹೆಚ್ಚಿಸಿರುವುದಾಗಿ ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು ಪ್ರಸ್ತಾವಿತ ಉಪವಿಧಿಯನ್ನು ಈ ಕೆಳಕಂಡ ಪ್ರಾವದಾನಗಳ ಬದಲಾವಣೆಯೊಂದಿಗೆ ಅಂಗೀಕರಿಸಲು ತೀರ್ಮಾನಿಸಿ, ಇದಕ್ಕೆ ಅನುಮೋದನೆಯನ್ನು ಪಡೆಯಲು ಸಮುಚಿತ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯಿಸಿತು.

1. ಪ್ರಸ್ತಾವಿತ ಉಪವಿಧಿ ಸಂಖ್ಯೆ ಭಾಗ-1 (3)ಕಾರ್ಯವ್ಯಾಪ್ತಿ (1) ಈ ಸಹಕಾರ ಸಂಘದ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯದ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಾವೇರಿ, ಹಾಸನ, ತುಮಕೂರು, ಮಂಡ್ಯ ಚಾಮರಾಜನಗರ, ಉತ್ತರಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳಿಗೆ ಸೀಮಿತವಾಗಿರುತ್ತದೆ ಎಂದಿರುವುದನ್ನು ರಾಜ್ಯವ್ಯಾಪಿ ವಿಸ್ತರಿಸಲು ಸಭೆಯು ಬಹುಮತದಿಂದ ನಿರ್ಣಯಿಸಿತು.
2. ಉಪವಿಧಿ ಸಂಖ್ಯೆ 5(42)ರಲ್ಲಿ ಅಡಿಕೆ ಸಿಪ್ಪೆಯಿಂದ ಉತ್ಪನ್ನಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದರ ಜೊತೆಗೆ ಅಡಿಕೆ ಹಾಳೆಯ ಉತ್ಪನ್ನಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವ ಪ್ರಾವದಾನವನ್ನು ಸೇರ್ಪಡೆಗೊಳಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

.

| ಕ್ರ. ಸಂ. | ಉಪವಿಧಿ ಸಂಖ್ಯೆ | ಹಾಲಿ ಇರುವ ಪ್ರಾವಧಾನ | ತಿದ್ದುಪಡಿಯಾದ ಉಪವಿಧಿ ಸಂಖ್ಯೆ | ತಿದ್ದುಪಡಿ ನಂತರದ ಪ್ರಾವಧಾನದ ಸ್ವರೂಪ | ತಿದ್ದುಪಡಿಗೆ ಕಾರಣಗಳು |
|---|---|---|---|---|---|
| 1 | **ಭಾಗ–1 3. ಕಾರ್ಯ ವ್ಯಾಪ್ತಿ:** (1) | ಈ ಸಹಕಾರ ಸಂಘದ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ. | **ಭಾಗ–1 3.ಕಾರ್ಯ ವ್ಯಾಪ್ತಿ:** (1) | ಈ ಸಹಕಾರ ಸಂಘದ ಕಾರ್ಯ ವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗಿರುತ್ತದೆ. | ಅಡಿಕೆ ಬೆಳೆಯುವ ಪ್ರದೇಶ ವಿಸ್ತರಣೆಯಾಗುತ್ತಿದ್ದು, ಸದರಿ ಅಡಿಕೆ ಬೆಳೆಯುವ ಪ್ರದೇಶದ ರೈತರನ್ನು ಸದಸ್ಯರನ್ನಾಗಿ ಮಾಡಿಕೊಂಡು ಆ ಭಾಗದ ರೈತರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸುವ ಉದ್ದೇಶದಿಂದ. |
| 2 | (2) | ಅಡಿಕೆ, ಕಾಳುಮೆಣಸು ಮತ್ತಿತರ ತೋಟದ ಬೆಳೆಗಳ ಖರೀದಿ, ವಿಕ್ರಿ, ಸಂಸ್ಕರಣೆ ಇವುಗಳ ವ್ಯವಹಾರಕ್ಕೆ ಕಾರ್ಯ ವ್ಯಾಪ್ತಿಯ ನಿರ್ಬಂಧ ಇರುವುದಿಲ್ಲ. | (2) | ಅಡಿಕೆ, ಕಾಳುಮೆಣಸು, ಕಾಫಿ, ಕೋಕೋ, ತೆಂಗು ಮತ್ತಿತರ ಪ್ಲಾಂಟೇಶನ್/ತೋಟದ ಬೆಳೆಗಳ ಖರೀದಿ, ವಿಕ್ರಿ, ಸಂಸ್ಕರಣೆ ಇವುಗಳ ವ್ಯವಹಾರಕ್ಕೆ ಕಾರ್ಯ ವ್ಯಾಪ್ತಿಯ ನಿರ್ಬಂಧ ಇರುವುದಿಲ್ಲ. | **'ಅಡಿಕೆ'**, **'ಕಾಳುಮೆಣಸು'** ಬೆಳೆಯೊಂದಿಗೆ **'ಕಾಫಿ'**, **'ಕೋಕೋ'** ಮತ್ತು **'ತೆಂಗು'** ಸೇರಿಸಿದೆ. |
| 3 | **4.ಪದ ವ್ಯಾಖ್ಯೆ ಗಳು (ಪರಿಭಾಷೆ ಗಳು)** (3) | **"ಸಂಘ"**: ಎಂದರೆ, ಸಹಕಾರಿ ಕಾಯಿದೆಯನ್ವಯ ನೋಂದಾಯಿತವಾದ, **'ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ., ಶಿವಮೊಗ್ಗ'** ಅಥವಾ **'ಮಾಮ್‌ಕೋಸ್'** ಹಾಗೂ ಇದರ ಪ್ರಧಾನ ಕಛೇರಿ ಮತ್ತು ಯಾವುದೇ ಹೆಸರಿನಿಂದ ಕರೆಯಲ್ಪಡುವ ಇದರ ಶಾಖೆಗಳು. | **4.ಪದ ವ್ಯಾಖ್ಯೆಗಳು (ಪರಿಭಾಷೆಗಳು)** (3) | **"ಸಂಘ"**: ಎಂದರೆ, ಸಹಕಾರಿ ಕಾಯಿದೆಯನ್ವಯ ನೋಂದಾಯಿತವಾದ, **'ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ., ಶಿವಮೊಗ್ಗ'** ಅಥವಾ **'ಮಾಮ್‌ಕೋಸ್'** ಹಾಗೂ ಇದರ ಪ್ರಧಾನ ಕಛೇರಿ, ಶಾಖೆಗಳು, ಏಜೆನ್ಸಿಗಳು, ಡಿಪೋಗಳು, ಔಟ್‌ಲೆಟ್‌ಗಳು ಮತ್ತು ಸಂಘದ ಕಾರ್ಯಚಟುವಟಿಕೆಯ ಭಾಗವಾಗಿ ತೆರೆಯುವ ಯಾವುದೇ ಕೇಂದ್ರಗಳು. | ಪ್ರಧಾನ ಕಚೇರಿ ಸೇರಿದಂತೆ ಶಾಖೆಗಳು, ಏಜೆನ್ಸಿಗಳು, ಡಿಪೋಗಳು, ಔಟ್‌ಲೆಟ್‌ಗಳು ಮತ್ತು ಸಂಘದ ಕಾರ್ಯ ಚಟುವಟಿಕೆಯ ಭಾಗವಾಗಿ ತೆರೆಯುವ ಯಾವುದೇ ಕೇಂದ್ರಗಳೂ ಸಹ ಸಂಘದ ಭಾಗವಾಗಿರುವುದರಿಂದ ಸಂಘದ ವ್ಯಾಖ್ಯೆಗೆ ವಿಶಾಲಾರ್ಥ ಕಲ್ಪಿಸುವ ಉದ್ದೇಶದಿಂದ ತಿದ್ದುಪಡಿಗೆ ಪ್ರಸ್ತಾಪಿಸಿದೆ. |
| 4 | **(೯) ಅಧ್ಯಕ್ಷ:** | ಎಂದರೆ, ಸಹಕಾರಿ ಕಾಯಿದೆ, ನಿಯಮಗಳು ಮತ್ತು ಸಂಘದ ಉಪ ವಿಧಿಗಳ ಪ್ರಕಾರ ಸಂಘದ ಅಧ್ಯಕ್ಷರಾಗಿ | **(೯) ಅಧ್ಯಕ್ಷ:** | ಎಂದರೆ, ಸಹಕಾರಿ ಕಾಯಿದೆ, ನಿಯಮಗಳು ಮತ್ತು ಸಂಘದ ಉಪವಿಧಿಗಳ ಪ್ರಕಾರ ಸಂಘದ | ಸಹಕಾರ ಸಂಘಗಳ ಕಾಯಿದೆ 1959, ಕಲಂ 121ರಲ್ಲಿ ನೀಡಿರುವ ಅವಕಾಶ ದಂತೆ ಸರ್ಕಾರದ ಆದೇಶ ಸಂಖ್ಯೆ:ಸಇ 225 ಸಿಎಲ್‌ಎಂ 2004 ಬೆಂಗಳೂರು |

| | | | | | |
|---|---|---|---|---|---|
| | | ಚುನಾಯಿತರಾಗಿ ಸಂಘದ ಉಪವಿಧಿಗಳ ಪ್ರಕಾರ ಸಂಘದ ಅಧ್ಯಕ್ಷರಾಗಿ ಅಧ್ಯಕ್ಷ ಸ್ಥಾನದ ಕಾರ್ಯ ನಿರ್ವಹಿಸುವವರು. | | ಅಧ್ಯಕ್ಷರಾಗಿ ಅಧ್ಯಕ್ಷ ಸ್ಥಾನದ ಕಾರ್ಯ ನಿರ್ವಹಿಸುವವರು. | ದಿನಾಂಕ 22/01/2005 ಜಾರಿಯಲ್ಲಿರುವವರೆಗೂ ಶಿವಮೊಗ್ಗ ಜಿಲ್ಲಾಧಿಕಾರಿಗಳೇ ಸಂಘದ ಅಧ್ಯಕ್ಷ ರಾಗಿರುವುದರಿಂದ. |
| 5 | **ಭಾಗ-2 ಉದ್ದೇಶಗಳು**<br>**5. ಸಂಘದ ಧ್ಯೇಯೋದ್ದೇಶಗಳು ಈ ಕೆಳಕಂಡಂತಿರುತ್ತವೆ:(1)** | ಸಂಘದ ಸದಸ್ಯರ ಮತ್ತು ಬೆಳೆಗಾರರ ಬಾಗಾಯ್ತು ಉತ್ಪನ್ನಗಳಾದ ಅಡಿಕೆ, ಕಾಳುಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನ ಬೆಳೆಗಳಿಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂತೆ ಎ.ಪಿ.ಎಂ.ಸಿ. ನಿಯಮಗಳಿಗೊಳಪಟ್ಟು ಕಮಿಷನ್ ಏಜೆಂಟ್ ಆಗಿ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು ಹಾಗೂ ಇವುಗಳನ್ನು ಖರೀದಿಸಿ, ಸಂಸ್ಕರಿಸಿ ರಾಜ್ಯದ ಒಳಗೂ ಹೊರಗೂ ಮತ್ತು ದೇಶ ವಿದೇಶಗಳಲ್ಲಿ ವ್ಯಾಪಾರ ಮಾಡುವುದು ಮತ್ತು ಮಾರುಕಟ್ಟೆಯನ್ನು ಕಂಡುಕೊಳ್ಳುವುದು. | **ಭಾಗ-2 ಉದ್ದೇಶಗಳು**<br>**5. ಸಂಘದ ಧ್ಯೇಯೋದ್ದೇಶಗಳು ಈ ಕೆಳಕಂಡಂತಿರುತ್ತವೆ: (1)** | ಸಂಘದ ಸದಸ್ಯರ ಮತ್ತು ಬೆಳೆಗಾರರ ಬಾಗಾಯ್ತು ಉತ್ಪನ್ನಗಳಾದ ಅಡಿಕೆ, ಕಾಳುಮೆಣಸು, ಕಾಫಿ, ಕೋಕೋ, ಏಲಕ್ಕಿ, ಶುಂಠಿ, ತೆಂಗು ಮುಂತಾದ ಪ್ಲಾಂಟೇಶನ್/ತೋಟೋತ್ಪನ್ನ ಬೆಳೆಗಳಿಗೆ ಉತ್ತಮ ಬೆಲೆ ಸಿಗಲು ಅನುಕೂಲ ವಾಗುವಂತೆ ಎ.ಪಿ.ಎಂ.ಸಿ. ನಿಯಮಗಳಿಗೊಳಪಟ್ಟು ಕಮಿಷನ್ ಏಜೆಂಟ್ ಆಗಿ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು ಹಾಗೂ ಇವುಗಳನ್ನು ಖರೀದಿಸಿ, ಸಂಸ್ಕರಿಸಿ ರಾಜ್ಯದ ಒಳಗೂ ಹೊರಗೂ ಮತ್ತು ದೇಶ ವಿದೇಶಗಳಲ್ಲಿ ವ್ಯಾಪಾರ ಮಾಡುವುದು ಮತ್ತು ಮಾರುಕಟ್ಟೆಯನ್ನು ಕಂಡುಕೊಳ್ಳುವುದು. | ಸಂಘದ ಹಲವಾರು ಸದಸ್ಯರ ತೋಟಗಳು ಎಲೆಚುಕ್ಕೆ ರೋಗ ಮತ್ತು ಹಳದಿ ಎಲೆ ರೋಗದ ಕಾರಣದಿಂದ ಹಾಳಾಗಿದ್ದು, ಅಂತಹ ಸದಸ್ಯರು ಅಡಿಕೆಯನ್ನು ಹಾಕಿ ವ್ಯವಹರಿಸುವ ಸ್ಥಿತಿಯಲ್ಲಿ ಇಲ್ಲದ ಕಾರಣ ಅಂತಹ ಸದಸ್ಯರು ತಾವು ಬೆಳೆಯುತ್ತಿರುವ ಕಾಫಿ, ತೆಂಗು ಇತ್ಯಾದಿ ಬೆಳೆಗಳನ್ನು ಸಂಘಕ್ಕೆ ಹಾಕಿ ವ್ಯವಹರಿಸಲು ಅನುಕೂಲ ವಾಗಿಸುವ ದೃಷ್ಟಿಯಿಂದ. |
| 6 | 5(2) | ಉತ್ತಮ ದರ್ಜೆಯ ಅಡಿಕೆ, ಕಾಳುಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸದಸ್ಯರನ್ನು ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಅಗತ್ಯವಾದ ನೆರವು ನೀಡುವುದು. | 5(2) | ಉತ್ತಮ ದರ್ಜೆಯ ಅಡಿಕೆ, ಕಾಳು ಮೆಣಸು, ಕಾಫಿ, ಕೋಕೋ, ಏಲಕ್ಕಿ, ಶುಂಠಿ, ತೆಂಗು ಮುಂತಾದ ಪ್ಲಾಂಟೇಶನ್/ತೋಟೋತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸದಸ್ಯರನ್ನು ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಅಗತ್ಯವಾದ ನೆರವು ನೀಡುವುದು. | ಸಂಘದ ಹಲವಾರು ಸದಸ್ಯರ ತೋಟಗಳು ಎಲೆಚುಕ್ಕೆ ರೋಗ ಮತ್ತು ಹಳದಿ ಎಲೆ ರೋಗದ ಕಾರಣದಿಂದ ಹಾಳಾಗಿದ್ದು, ಅಂತಹ ಸದಸ್ಯರು ಅಡಿಕೆಯನ್ನು ಹಾಕಿ ವ್ಯವಹರಿಸುವ ಸ್ಥಿತಿಯಲ್ಲಿ ಇಲ್ಲದ ಕಾರಣ ಅಂತಹ ಸದಸ್ಯರು ತಾವು ಬೆಳೆ ಯುತ್ತಿರುವ ಕಾಫಿ, ತೆಂಗು ಇತ್ಯಾದಿ ಬೆಳೆಗಳನ್ನು ಸಂಘಕ್ಕೆ ಹಾಕಿ ವ್ಯವಹರಿಸಲು ಅನುಕೂಲ ವಾಗಿಸುವ ದೃಷ್ಟಿಯಿಂದ. |
| 7 | 5(7) | ಸಂಘಕ್ಕೆ ಅಗತ್ಯವಾದ ದುಡಿಯುವ ಬಂಡವಾಳ ಸಂಗ್ರಹಣೆಗಾಗಿ | 5(7) | ಸಂಘಕ್ಕೆ ಅಗತ್ಯವಾದ ದುಡಿಯುವ ಬಂಡವಾಳ ಸಂಗ್ರಹಣೆಗಾಗಿ ಸದಸ್ಯ | ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಬೆಂಗಳೂರು ಇವರು ತಮ್ಮ ಪತ್ರ |

| | | | | | |
|---|---|---|---|---|---|
| | | ಸದಸ್ಯರಿಂದ ವಿವಿಧ ಪ್ರಕಾರದ ಠೇವಣಿಗಳನ್ನು ಸ್ವೀಕರಿಸುವುದು. ಸಂಘದ ಹಾಗೂ ಸಾರ್ವಜನಿಕ ಸರ್ವೋಪಯೋಗಿ ಉದ್ದೇಶಕ್ಕಾಗಿ ಸದಸ್ಯರು ಮತ್ತು ಸಾರ್ವಜನಿಕರಿಂದ ದೇಣಿಗೆ, ಚಂದಾ ಮುಂತಾದವುಗಳ ಮೂಲಕ ನಿಧಿ ಸಂಗ್ರಹಿಸುವುದು ಮತ್ತು ಯಾವುದೇ ವ್ಯಕ್ತಿ, ಹಣಕಾಸಿನ ಸಂಸ್ಥೆಗಳು ಹಾಗೂ ಸಂಘಟನೆಗಳು, ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸರ್ಕಾರದಿಂದ ಸಹಕಾರಿ ಕಾಯಿದೆ, ನಿಯಮಗಳು ಹಾಗೂ ಸಂಘದ ಉಪ ನಿಯಮಗಳಿಗೊಳಪಟ್ಟು ಸಾಲ ಮತ್ತು ಇನ್ನಿತರ ಸಹಾಯ ಪಡೆಯುವುದು ಹಾಗೂ ಈ ಬಗೆಗೆ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆದು ಸ್ಥಿರ ಮತ್ತು ಚರಾಸ್ತಿಗಳನ್ನು ಅಡಮಾನು (Mortgage) ಮಾಡಿ ಸಾಲ ಪಡೆಯುವುದು. | | ರಿಂದ ವಿವಿಧ ಪ್ರಕಾರದ ಠೇವಣಿಗಳನ್ನು ಸ್ವೀಕರಿಸುವುದು. ಸಂಘದ ಹಾಗೂ ಸಾರ್ವಜನಿಕ ಸರ್ವೋಪಯೋಗಿ ಉದ್ದೇಶಕ್ಕಾಗಿ ಸದಸ್ಯರು ಮತ್ತು ಸಾರ್ವಜನಿಕರಿಂದ ದೇಣಿಗೆ, ಚಂದಾ ಮುಂತಾದವುಗಳ ಮೂಲಕ ನಿಧಿ ಸಂಗ್ರಹಿಸುವುದು ಮತ್ತು ಯಾವುದೇ ವ್ಯಕ್ತಿ, ಹಣಕಾಸಿನ ಸಂಸ್ಥೆಗಳು ಹಾಗೂ ಸಂಘಟನೆಗಳು, ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಸರ್ಕಾರದಿಂದ ಸಹಕಾರಿ ಕಾಯಿದೆ, ನಿಯಮಗಳು ಹಾಗೂ ಸಂಘದ ಉಪನಿಯಮಗಳಿಗೊಳಪಟ್ಟು ಸಾಲ ಮತ್ತು ಇನ್ನಿತರ ಸಹಾಯ ಪಡೆಯುವುದು. | ಸಂಖ್ಯೆ: ಆರ್‌ಸಿಎಸ್/ ಎಂಕೆಟಿ–1/ 57/2024–25 ದಿನಾಂಕ 26.11.2024 ರಲ್ಲಿ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28–ಸಿ(2)(ಸಿ)ರನ್ವಯ ಸಂಘದ ಉದ್ದೇಶಗಳನ್ನು ಸಾಧಿಸಲು ಸಂಪನ್ಮೂಲ ಗಳನ್ನು ಕ್ರೋಢೀಕರಿಸಲು ಆಡಳಿತ ಮಂಡಳಿಗೆ ಅಧಿಕಾರ ದತ್ತವಾಗಿರು ವುದರಿಂದ ಸದರಿ ಅವಕಾಶ ದನ್ವಯ ಆಡಳಿತ ಮಂಡಳಿಯ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ ಕಾರಣ. |
| 8 | 5(22) | ಸದಸ್ಯರು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಶಾಲಾ ಕಾಲೇಜುಗಳೇ ಮುಂತಾದ ವಿವಿಧ ಸ್ತರದ ಶೈಕ್ಷಣಿಕ ಸಂಸ್ಥೆ ಗಳನ್ನು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯ ಗಳನ್ನು, ಕೃಷಿ ಹಾಗೂ ಸಹಕಾರಿ ಶಿಕ್ಷಣ ತರಬೇತಿ ಕೇಂದ್ರಗಳನ್ನು, ವ್ಯಾಯಾಮ ಶಾಲೆ (ಜಿಮ್) ಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು. | 5(22) | ಸದಸ್ಯರು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಶಾಲಾ ಕಾಲೇಜುಗಳೇ ಮುಂತಾದ ವಿವಿಧ ಸ್ತರದ ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯ ಗಳನ್ನು, ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಕೃಷಿ ಹಾಗೂ ಸಹಕಾರಿ ಶಿಕ್ಷಣ ತರಬೇತಿ ಕೇಂದ್ರಗಳನ್ನು, ವ್ಯಾಯಾಮ ಶಾಲೆ (ಜಿಮ್) ಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು. | ಸ್ಪರ್ಧಾತ್ಮಕ ಪರೀಕ್ಷೆಗೂ ತರಬೇತಿ ನೀಡುವ ಉದ್ದೇಶದಿಂದ. |

| | | | | | |
|---|---|---|---|---|---|
| 9 | 5(24) | ಸಾರ್ವಜನಿಕ ಸುರಕ್ಷತೆಗಾಗಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಶುದ್ಧ ನೀರಿನ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು ಮತ್ತು ಶುದ್ಧ ನೀರನ್ನು ಸರಬರಾಜು ಮಾಡುವುದು. | 5(24) | ಸಾರ್ವಜನಿಕ ಸುರಕ್ಷತೆಗಾಗಿ ಶುದ್ಧ ಕುಡಿಯುವ ನೀರು ಅಥವಾ ಖನಿಜ ಯುಕ್ತ ನೀರು ಒದಗಿಸಲು ಉತ್ಪಾದನಾ ಘಟಕಗಳನ್ನು ಸ್ಥಾಪಿಸಿ ಮಾರಾಟ ಮಾಡುವುದು ಅಥವಾ ಶುದ್ಧ/ ಖನಿಜಯುಕ್ತ ನೀರನ್ನು **'ಮಾಮ್‌ಕೋಸ್'** ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡುವುದು. | ಖನಿಜಯುಕ್ತ ನೀರಿನ ಉತ್ಪಾದನಾ ಘಟಕವನ್ನು ಸ್ಥಾಪಿಸುವ ಉದ್ದೇಶದಿಂದ ಮತ್ತು ಶುದ್ಧ/ ಖನಿಜಯುಕ್ತ ನೀರನ್ನು **'ಮಾಮ್‌ಕೋಸ್'** ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡುವ ಉದ್ದೇಶದಿಂದ. |
| 10 | 5(26) | ಸದಸ್ಯರಿಗೆ ಅಗತ್ಯವಾದ ಅಡಿಕೆ ಸುಲಿಯುವ ಯಂತ್ರ ಮುಂತಾದ ಕೃಷಿ ಉಪಕರಣಗಳನ್ನು ಖರೀದಿಸಿ ಬಾಡಿಗೆಗೆ ನೀಡುವುದು ಮತ್ತು ಕೃಷಿ ಸೇವಾ ಕೇಂದ್ರಗಳನ್ನು ತೆರೆಯುವುದು. | 5(26) | ಸದಸ್ಯರಿಗೆ ಅಗತ್ಯವಾದ ಅಡಿಕೆ ಸುಲಿಯುವ ಯಂತ್ರ ಮುಂತಾದ ಕೃಷಿ ಉಪಕರಣಗಳನ್ನು ಖರೀದಿಸಿ ಬಾಡಿಗೆಗೆ ನೀಡುವುದು ಹಾಗೂ ಕೃಷಿ ಉಪಕರಣಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದು ಹಾಗೂ ಕೃಷಿ ಸೇವಾ ಕೇಂದ್ರಗಳನ್ನು ತೆರೆಯುವುದು. | ಅಡಿಕೆ ಸುಲಿಯುವ ಯಂತ್ರ ಮುಂತಾದ ಕೃಷಿ ಉಪಕರಣಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ಉದ್ದೇಶದಿಂದ. |
| 11 | 5(28) | ಗೊಬ್ಬರ, ಕ್ರಿಮಿನಾಶಕಗಳು, ವ್ಯವಸಾಯೋಪಕರಣಗಳು, ಕೃಷಿ ಯಂತ್ರೋಪಕರಣಗಳ ತಯಾರಿಕಾ ಕಂಪನಿಗಳ ಉತ್ಪನ್ನಗಳನ್ನು ಸಗಟಾಗಿ ಖರೀದಿಸಿ, ಸಗಟು ಹಾಗೂ ಚಿಲ್ಲರೆಯಾಗಿ ಮಾರಾಟ ಮಾಡಲು ಅಂತಹ ಕಂಪನಿಗಳ ಮಾರಾಟದ ಏಜೆನ್ಸಿಯನ್ನು (ಡೀಲರ್‌ಶಿಪ್) ಪಡೆಯುವುದು. | 5(28) | ಬಾಗಾಯ್ತು ಕೃಷಿಗೆ ಅಗತ್ಯವಾದ ಸಾವಯವ ಗೊಬ್ಬರ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು, ಕೀಟ ನಾಶಕಗಳು, ವ್ಯವಸಾಯೋಪ ಕರಣಗಳು, ಕೃಷಿ ಯಂತ್ರೋಪ ಕರಣಗಳ ತಯಾರಿಕಾ ಕಂಪನಿಗಳ ಉತ್ಪನ್ನಗಳನ್ನು ಸಗಟಾಗಿ ಖರೀದಿಸಿ, ಸಗಟು ಹಾಗೂ ಚಿಲ್ಲರೆಯಾಗಿ ಮಾರಾಟ ಮಾಡಲು ಅಂತಹ ಕಂಪನಿಗಳ ಮಾರಾಟದ ಏಜೆನ್ಸಿಯನ್ನು (ಡೀಲರ್‌ಶಿಪ್) ಪಡೆಯುವುದು. | **'ಕ್ರಿಮಿನಾಶಕ'ದಂತೆ** **'ಕೀಟನಾಶಕ'**ವನ್ನು ಮಾರಾಟ ಮಾಡುವ ದೃಷ್ಟಿಯಿಂದ. |

| | | | | | |
|---|---|---|---|---|---|
| 12 | 5(33) | ಹೊಸದಾಗಿ ಸೇರ್ಪಡೆ | 5(33) | ಆಡಳಿತ ಮಂಡಳಿ ಅಗತ್ಯವಿದೆ ಯೆಂದು ನಿರ್ಧರಿಸಿದಾಗ ಸಂಘದ ವಿವಿಧ ಶಾಖೆ/ಏಜೆನ್ಸಿಗಳಲ್ಲಿ ಅಥವಾ ಆಡಳಿತ ವ್ಯಾಪ್ತಿಯ ಯಾವುದೇ ಸ್ಥಳ/ಸ್ಥಳಗಳಲ್ಲಿ ಸಂಘದ ಸದಸ್ಯರಿಗೆ ತರಬೇತಿಯನ್ನು ನೀಡುವುದು ಮತ್ತು ಸದಸ್ಯರ ಸಮಾಲೋಚನಾ/ ಸಂಪರ್ಕ/ಜಾಗೃತಿ ಅಥವಾ ಷೇರುದಾರರ ಸಭೆಗಳನ್ನು ನಡೆಸಿ, ಸದಸ್ಯರ ಅನಿಸಿಕೆ, ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಆಡಳಿತ ಮಂಡಳಿ ಮುಂದೆ ಅಥವಾ ಅಗತ್ಯವಿದ್ದಾಗ ಸರ್ವ ಸದಸ್ಯರ ಸಭೆಯ ಮುಂದೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವುದು. | ಸಂಘದ ಉಪವಿಧಿ ತಿದ್ದುಪಡಿಗೆ ಸಂಬಂಧಿಸಿ ದಂತೆ ಮಾನ್ಯ ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯದಲ್ಲಿ ದಾಖಲಿಸಿದ ಮೇಲ್ಮನವಿ ಸಂಖ್ಯೆ: ಆರ್‌ಸಿಎಸ್/ಡಿಎಪಿ/ಡಿ1/21/2023–24ಕ್ಕೆ ಸಂಬಂಧಿಸಿದಂತೆ ಮಾನ್ಯ ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕಲಮು 106ರಡಿಯಲ್ಲಿ ದಿನಾಂಕ 01.03.2025 ರಂದು ಮಾಡಿರುವ ಆದೇಶದ ಹಿನ್ನೆಲೆಯಲ್ಲಿ **'ಯಾವುದೇ ಹೆಸರಿನಿಂದ ಕರೆಯಲ್ಪಡುವ'** ಎಂಬ ವಾಕ್ಯವನ್ನು ಕೈಬಿಟ್ಟು ಹೊಸದಾಗಿ ತಿದ್ದುಪಡಿಗೆ ಮಂಡಿಸಿದೆ. |
| 13 | 5(34) | ಹೊಸದಾಗಿ ಸೇರ್ಪಡೆ | 5(34) | ಸದಸ್ಯರು ಕಾಫಿ ಮತ್ತು ತೆಂಗು ಬೆಳೆಯಲು ಪ್ರೋತ್ಸಾಹಿಸುವುದು, ಖರೀದಿ ಮಾಡುವುದು, ಮಾರಾಟಕ್ಕೆ ವ್ಯವಸ್ಥೆ ಮಾಡುವುದು, ಕಾಫಿ ಮತ್ತು ತೆಂಗಿನ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿ ತಿದ್ದುಪಡಿಗೆ ಮಂಡಿಸಿದೆ. |
| 14 | 5(35) | ಹೊಸದಾಗಿ ಸೇರ್ಪಡೆ | 5(35) | ಸಂಘದ ಸದಸ್ಯರ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ವಿವಿಧ ಉತ್ಪನ್ನಗಳು/ವಸ್ತುಗಳನ್ನು ಒಳಗೊಂಡ ಸೂಪರ್ ಮಾರ್ಕೆಟ್ ತೆರೆಯುವುದು ಮತ್ತು ನಿರ್ವಹಿಸುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |

| | | | | | |
|---|---|---|---|---|---|
| 15 | 5(36) | ಹೊಸದಾಗಿ ಸೇರ್ಪಡೆ | 5(36) | ಸದಸ್ಯರಿಂದ ಖರೀದಿಸಿದ ಅಡಿಕೆ ಯನ್ನು ಮೌಲ್ಯವರ್ಧನೆ ಮಾಡುವ ಉದ್ದೇಶದಿಂದ ಸುವಾಸಿತ/ ಸುವಾಸಿತವಲ್ಲದ/ಸಿಹಿ ಅಡಿಕೆ ಪುಡಿ/ ಪಾನ್ ಮಸಾಲಾ ಉದ್ದಿಮೆಯನ್ನು ಸ್ಥಾಪನೆ ಮಾಡುವುದು ಮತ್ತು ಉತ್ಪನ್ನಗಳನ್ನು ಮಾರಾಟ ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 16 | 5(37) | ಹೊಸದಾಗಿ ಸೇರ್ಪಡೆ | 5(37) | ಯಾವುದೇ ಕಾನೂನಿನ ಅಡಿಯಲ್ಲಿ ನೋಂದಣಿ ಹೊಂದಿ ಸಾವಯವ, ಎರೆಹುಳು ಗೊಬ್ಬರಗಳನ್ನು ತಯಾರಿಸುವ ಉದ್ದಿಮೆಯನ್ನು ಸ್ಥಾಪನೆ ಮಾಡುವುದು ಮತ್ತು ಈ ಗೊಬ್ಬರ ವನ್ನು ಮಾರಾಟ ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶ ದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 17 | 5(38) | ಹೊಸದಾಗಿ ಸೇರ್ಪಡೆ | 5(38) | ಗೃಹೋಪಯೋಗಿ ವಸ್ತುಗಳ ಉತ್ಪಾದನೆ ಮಾಡಿ ಮಾರಾಟ ಮಾಡುವುದು ಅಥವಾ ಖರೀದಿ ದಾರರಿಂದ ಖರೀದಿಸಿ ಮಾರಾಟ ಮಾಡುವುದು ಅಥವಾ ಕಂಪನಿಯ ಡೀಲರ್‌ಶಿಪ್ ಪಡೆದು ಮಾರಾಟ ಮಾಡುವುದು ಮತ್ತು ಅಗತ್ಯವಿದ್ದಲ್ಲಿ ಈ ಬಗ್ಗೆ ಸಾಲವನ್ನು ನೀಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 18 | 5(39) | ಹೊಸದಾಗಿ ಸೇರ್ಪಡೆ | 5(39) | ಸಂಘದಿಂದ ಟ್ರ್ಯಾಕ್ಟರ್, ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ಮಾರಾಟ ಮಳಿಗೆಯನ್ನು ತೆರೆಯುವುದು ಮತ್ತು ಸದಸ್ಯರಿಗೆ ವಾಹನ ಸಾಲವನ್ನು ನೀಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 19 | 5(40) | ಹೊಸದಾಗಿ ಸೇರ್ಪಡೆ | 5(40) | ಸಂಘದ ಶಾಖೆಗಳ ಮೂಲಕ ಸಿದ್ಧ ಉಡುಪುಗಳ ಅಂಗಡಿಯನ್ನು ತೆರೆದು ನಿರ್ವಹಿಸುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |

| | | | | | |
|---|---|---|---|---|---|
| 20 | 5(41) | ಹೊಸದಾಗಿ ಸೇರ್ಪಡೆ | 5(41) | ಸಂಘದಿಂದ ಹೋಟೆಲ್ ಉದ್ದಿಮೆಯನ್ನು ನಿರ್ವಹಿಸುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 21 | 5(42) | ಹೊಸದಾಗಿ ಸೇರ್ಪಡೆ | 5(42) | ಅಡಿಕೆ ಸಿಪ್ಪೆ, ಅಡಿಕೆ ಹಾಳೆಯಿಂದ ಉತ್ಪನ್ನಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 22 | 5(43) | ಹೊಸದಾಗಿ ಸೇರ್ಪಡೆ | 5(43) | ಸದಸ್ಯರ ವಿವಿಧ ರೀತಿಯ ಹೂಡಿಕೆಯ ಅಗತ್ಯತೆಗಳನ್ನು ಪೂರೈಸಲು ವಿವಿಧ ಸೇವೆ ನೀಡುವುದು ಮತ್ತು ಅದಕ್ಕಾಗಿ ಅಂತಹ ಸೇವೆ ನೀಡುವ ಸಂಸ್ಥೆ ಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 23 | 5(44) | ಹೊಸದಾಗಿ ಸೇರ್ಪಡೆ | 5(44) | ಸಂಘದ ವ್ಯಾವಹಾರಿಕ ಅನುಕೂಲ ಕ್ಕಾಗಿ ಇತರೆ ಆರ್ಥಿಕ ನೆರವು ನೀಡುವ ಸಂಸ್ಥೆಗಳೊಂದಿಗೆ ಒಪ್ಪಂದ ಏರ್ಪಡಿಸಿಕೊಳ್ಳುವುದು. | ಸಂಘದ ವ್ಯವಹಾರ ವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 24 | 5(45) | ಹೊಸದಾಗಿ ಸೇರ್ಪಡೆ | 5(45) | ಪ್ರಿಂಟಿಂಗ್, ಸ್ಕ್ರೀನ್ ಪ್ರಿಂಟಿಂಗ್, ಜಾಹಿರಾತು ಸೇವೆ ಹಾಗೂ ಇನ್ನಿತರ ಕೈಗಾರಿಕಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. | ಸಂಘದ ವ್ಯವಹಾರ ವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 25 | 5(46) | ಹೊಸದಾಗಿ ಸೇರ್ಪಡೆ | 5(46) | ರಾಷ್ಟ್ರೀಯ ತೋಟಗಾರಿಕೆ ಮಂಡಳಿ ಯಿಂದ ಸಾಲ ಸೌಲಭ್ಯಗಳನ್ನು ಪಡೆದು ತೋಟಗಾರಿಕೆ ಉತ್ಪಾದನೆಗಳ ದಾಸ್ತಾನು ಸಂಸ್ಕರಣೆ ಹಾಗೂ ಮಾರಾಟದ ವ್ಯವಸ್ಥೆ ಮಾಡುವುದು. | ಸಂಘದ ವ್ಯವಹಾರ ವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 26 | 5(47) | ಹೊಸದಾಗಿ ಸೇರ್ಪಡೆ | 5(47) | ರಬ್ಬರ್ ಸ್ಟಾಂಪ್, ಕವರ್ಸ್, ಫೈಲ್ಸ್, ಬುಕ್ ಬೈಂಡಿಂಗ್, ಪೆನ್ನು, ಪೆನ್ಸಿಲ್ ಹಾಗೂ ಸೋಪು, ಪೌಡರ್‌ಗಳನ್ನು ತಯಾರಿಸುವ ಘಟಕಗಳನ್ನು ಸ್ಥಾಪಿಸು ವುದು ಮತ್ತು ಉತ್ಪಾದಿಸಿದ ವಸ್ತುಗಳ ಮಾರಾಟ ವ್ಯವಸ್ಥೆ ಮಾಡುವುದು. | ಸಂಘದ ವ್ಯವಹಾರ ವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |

| | | | | | |
|---|---|---|---|---|---|
| 27 | 5(48) | ಹೊಸದಾಗಿ ಸೇರ್ಪಡೆ | 5(48) | ಸರ್ಕಾರದಿಂದ ಅನುದಾನ ಪಡೆದ ಮತ್ತು ಪಡೆಯುವ ಸಂಸ್ಥೆಗಳು ಉತ್ಪಾದಿಸುವ ಹಾಗೂ ಇತರ ಉತ್ಪಾದಕರಿಂದ ಉತ್ಪಾದಿಸಲ್ಪಡುವ ವಸ್ತುಗಳನ್ನು ಮಾರಾಟ ಮಾಡಲು ಅವರ ಪ್ರತಿನಿಧಿಯಾಗಿ ಅಥವಾ ಮಧ್ಯಸ್ಥಗಾರರಾಗಿ ಅಥವಾ ವ್ಯಾಪಾರ ವಹಿವಾಟುದಾರರಾಗಿ ಅಥವಾ ಉಪ ವ್ಯಾಪಾರಸ್ಥರಾಗಿ ಕಾರ್ಯನಿರ್ವಹಿಸುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 28 | 5(49) | ಹೊಸದಾಗಿ ಸೇರ್ಪಡೆ | 5(49) | ಸಂಘದ ಸದಸ್ಯರಿಗೆ ಸಾಲಗಳ ನಿರ್ವಹಣೆ ಮತ್ತು ಭದ್ರತೆ ಕಲ್ಪಿಸುವಲ್ಲಿ ಹೆಚ್ಚಿನ ಅನುಕೂಲಕ್ಕಾಗಿ ಇತರೆ ವಿಮಾ ಸಂಸ್ಥೆಗಳ ಜೊತೆ ಒಡಂಬಡಿಕೆಯೊಂದಿಗೆ ಜೀವ ವಿಮೆ ಹಾಗೂ ಸಾಮಾನ್ಯ ವಿಮೆ ವ್ಯವಸ್ಥೆಯನ್ನು ಜಾರಿಗೊಳಿಸುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 29 | 5(50) | ಹೊಸದಾಗಿ ಸೇರ್ಪಡೆ | 5(50) | ಸಂಘದ ಸದಸ್ಯರು ಹಾಗೂ ರೈತರ ಅನುಕೂಲಕ್ಕಾಗಿ ಅವಶ್ಯವಿರುವ ಎಲ್ಲಾ ವಸ್ತುಗಳನ್ನು, ದವಸ ಧಾನ್ಯಗಳನ್ನು ಮತ್ತು ರೈತ ಬೆಳೆಯುವ ಎಲ್ಲಾ ಬೆಳೆಗಳ ಫಸಲುಗಳನ್ನು ಕೊಳ್ಳಲು, ಮಾರಾಟ ಮಾಡಲು ಮತ್ತು ಶೇಖರಣೆ ಮಾಡಲು ಪೂರಕವಾದ ಮಾರಾಟ ಮಳಿಗೆ, ಶೇಖರಣೆ ಮಳಿಗೆ, ಶೀಥಲೀಕರಣ ಘಟಕ ಹಾಗೂ ಇತರೆ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |

| | | | | | |
|---|---|---|---|---|---|
| 30 | 5(51) | ಹೊಸದಾಗಿ ಸೇರ್ಪಡೆ | 5(51) | ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ಅರೆ ಸರ್ಕಾರಿ/ಇತರೆ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಸಂಘದ ಸದಸ್ಯರಿಗೆ ಉಪಯೋಗವಾಗುವಂತಹ ಸಾಲ ಸೌಲಭ್ಯವನ್ನು ನೀಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 31 | 5(52) | ಹೊಸದಾಗಿ ಸೇರ್ಪಡೆ | 5(52) | ಸಂಘದಿಂದ ಎಲ್ಲಾ ಮಾದರಿಯ ವಾಹನಗಳ ಟೈಯರ್‌ಗಳ ಮಾರಾಟ ಮಳಿಗೆಯನ್ನು ತೆರೆಯುವುದು ಅಥವಾ ಕಂಪನಿಯ ಡೀಲರ್‌ಶಿಪ್ ಪಡೆದು ಮಾರಾಟ ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 32 | 5(53) | ಹೊಸದಾಗಿ ಸೇರ್ಪಡೆ | 5(53) | ಸಂಘದಿಂದ ಸಸ್ಯೋದ್ಯಮ (ನರ್ಸರಿ) ಪ್ರಾರಂಭಿಸುವುದು ಮತ್ತು ಮಾರಾಟ ಮಾಡುವುದು. | ಸಂಘದ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹೊಸದಾಗಿ ಸೇರ್ಪಡೆ ಮಾಡಿದೆ. |
| 33 | 5(34) | ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಸಂಘದ ಅಭಿವೃದ್ಧಿಗೆ ಪೂರಕ ವಾಗುವ ಹಾಗೂ ಕಾನೂನು ಮತ್ತು ಸಾಮಾಜಿಕ ಹಿತಾಸಕ್ತಿಗೆ ವಿರುದ್ಧ ವಾಗಿಲ್ಲದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. | 5(54) | ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಸಂಘದ ಅಭಿವೃದ್ಧಿಗೆ ಪೂರಕವಾಗುವ ಹಾಗೂ ಕಾನೂನು ಮತ್ತು ಸಾಮಾಜಿಕ ಹಿತಾಸಕ್ತಿಗೆ ವಿರುದ್ಧವಾಗಿಲ್ಲದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. | ಕ್ರಮ ಸಂಖ್ಯೆಯಲ್ಲಿ ಬದಲಾವಣೆಯಾಗಿರುತ್ತದೆ. |
| 34 | **ಭಾಗ–3 ದುಡಿಯುವ ಬಂಡವಾಳ 10)** | **ನಿಧಿಗಳ ತೊಡಗಿಸುವಿಕೆ/ವಿನಿಯೋಗ:** ಸಂಘದ ವ್ಯವಹಾರಗಳಲ್ಲಿ ತೊಡಗಿಸ ಲಾಗದೇ ಉಳಿದ ದುಡಿಯುವ ಬಂಡವಾಳ ಅಥವಾ ಸಂಘದ ನಿವ್ವಳ ಲಾಭದಿಂದ ನಿರ್ಮಿಸಿ, ಸಂಘದ ವ್ಯವಹಾರಗಳಲ್ಲಿ ಉಪಯೋಗಿಸಿಕೊಳ್ಳ ಬಾರದ ನಿಧಿಗಳು ಹಾಗೂ ಸಂಘದ ಸಿಬ್ಬಂದಿ ವರ್ಗಕ್ಕೆ ಸಂಬಂಧಿಸಿದ ನಿಧಿಗಳನ್ನು, ಸಹಕಾರಿ ಕಾಯಿದೆ ಕಲಮು 58(ಇ) ನಲ್ಲಿ ತಿಳಿಸಿದಂತೆ, ರಿಸರ್ವ್ ಬ್ಯಾಂಕ್ ನಿಯಂತ್ರಣ | **ಭಾಗ–3 ದುಡಿಯುವ ಬಂಡವಾಳ 10)** | **ನಿಧಿಗಳ ತೊಡಗಿಸುವಿಕೆ/ವಿನಿಯೋಗ:** ಸಂಘದ ವ್ಯವಹಾರಗಳಲ್ಲಿ ತೊಡಗಿಸ ಲಾಗದೇ ಉಳಿದ ದುಡಿಯುವ ಬಂಡವಾಳ ಅಥವಾ ಸಂಘದ ನಿವ್ವಳ ಲಾಭದಿಂದ ನಿರ್ಮಿಸಿ, ಸಂಘದ ವ್ಯವಹಾರಗಳಲ್ಲಿ ಉಪಯೋಗಿಸಿ ಕೊಳ್ಳಬಾರದ ನಿಧಿಗಳು ಹಾಗೂ ಸಂಘದ ಸಿಬ್ಬಂದಿ ವರ್ಗಕ್ಕೆ ಸಂಬಂಧಿಸಿದ ನಿಧಿಗಳನ್ನು, ಕರ್ನಾಟಕ ಸಹಕಾರ ಸಂಘಗಳ | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959 ಕಲಮು 58 ರಂತೆ. |

| | | | | | |
|---|---|---|---|---|---|
| | | ದಲ್ಲಿರುವ ತಾನು ಆರಿಸಿದ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದವರೆಗೆ, ಮೇಲ್ಕಂಡ ಉಪಬಂಧಗಳಿಗೆ ಒಳಪಟ್ಟು ಆ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿದಂತೆ, ತೊಡಗಿಸತಕ್ಕದ್ದು. | | ಕಾಯಿದೆ, 1959 ಕಲಮು 58ರಲ್ಲಿ ತಿಳಿಸಿದಂತೆ, ಹೂಡಿಕೆ ಮಾಡತಕ್ಕದ್ದು. | |
| 35 | **ಭಾಗ–4**<br>13) | **ನಾಮ ನಿರ್ದೇಶನ :** ಸಂಘದ ಸದಸ್ಯರು ತಮ್ಮ ಮರಣಾನಂತರ ತಮ್ಮ ಷೇರಿನ ಹಣ ಅಥವಾ ಲಾಭಾಂಶ ಅಥವಾ ತಮಗೆ ಬರಬೇಕಾದ ಯಾವುದೇ ಬಗೆಯ ಹಣ ಅಥವಾ ಹಿತಾಸಕ್ತಿಗಳನ್ನು ಪಡೆಯಲು ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಬಹುದು. ಆದರೆ, ಈ ನಾಮ ನಿರ್ದೇಶನವನ್ನು ತಮ್ಮ ಸದಸ್ಯತ್ವದ ಅವಧಿಯಲ್ಲಿ ಬೇಕಾದಾಗ ನಿಗದಿತ ಶುಲ್ಕ ರೂ.50–00 ಮತ್ತು ಕಾಲಕಾಲಕ್ಕೆ ಅನ್ವಯವಾಗುವ ಜಿ.ಎಸ್.ಟಿ. ಮತ್ತು ಇತರ ತೆರಿಗೆಯನ್ನು ಪಾವತಿಸಿ ಬದಲಾವಣೆ ಮಾಡಬಹುದು. ಈ ನಾಮ ನಿರ್ದೇಶನವು ನಿಗದಿತ ನಮೂನೆಯಲ್ಲಿದ್ದು, ಅದರಲ್ಲಿ ಸಹಿ ಮಾಡಿರಬೇಕು ಹಾಗೂ ಈ ಉದ್ದೇಶಕ್ಕಾಗಿ ಸಂಘದಲ್ಲಿರುವ ರಿಜಿಸ್ಟರಿನಲ್ಲಿ ಅದು ನಮೂದಾಗಿರತಕ್ಕದ್ದು | **ಭಾಗ–4**<br>13) | **ನಾಮ ನಿರ್ದೇಶನ:** ಸಂಘದ ಸದಸ್ಯರು ತಮ್ಮ ಮರಣಾನಂತರ ತಮ್ಮ ಷೇರಿನ ಹಣ ಅಥವಾ ಲಾಭಾಂಶ ಅಥವಾ ತಮಗೆ ಬರಬೇಕಾದ ಯಾವುದೇ ಬಗೆಯ ಹಣ ಅಥವಾ ಹಿತಾಸಕ್ತಿಗಳನ್ನು ಪಡೆಯಲು ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಬಹುದು. ಆದರೆ, ಈ ನಾಮ ನಿರ್ದೇಶನವನ್ನು ತಮ್ಮ ಸದಸ್ಯತ್ವದ ಅವಧಿಯಲ್ಲಿ ಬೇಕಾದಾಗ ಆಡಳಿತ ಮಂಡಳಿಯು ನಿಗದಿಪಡಿಸಿದ ಶುಲ್ಕ ವನ್ನು ಮತ್ತು ಕಾಲಕಾಲಕ್ಕೆ ಅನ್ವಯ ವಾಗುವ ಜಿ.ಎಸ್.ಟಿ ಮತ್ತು ಇತರ ತೆರಿಗೆಯನ್ನು ಪಾವತಿಸಿ ಬದಲಾವಣೆ ಮಾಡ ಬಹುದು. ಈ ನಾಮ ನಿರ್ದೇಶನವು ನಿಗದಿತ ನಮೂನೆಯಲ್ಲಿದ್ದು, ಅದರಲ್ಲಿ ಸಹಿ ಮಾಡಿರಬೇಕು ಹಾಗೂ ಈ ಉದ್ದೇಶಕ್ಕಾಗಿ ನಿಗದಿತ ನಮೂನೆಯಲ್ಲಿ ವಿವರಗಳನ್ನು ಪಡೆಯತಕ್ಕದ್ದು. | ಸಂಘದ ವ್ಯವಹಾರವು ಸಂಪೂರ್ಣವಾಗಿ ಗಣಕೀಕೃತಗೊಂಡಿರುವ ಕಾರಣ ನಾಮ ನಿರ್ದೇಶನದ ವಿವರವು ತಂತ್ರಾಂಶದಲ್ಲಿ ಲಭ್ಯವಿರುವುದರಿಂದ ಕೈಬರಹದ ಮೂಲಕ ರಿಜಿಸ್ಟರಿನಲ್ಲಿ ನಮೂದಿಸುವುದನ್ನು ಕೈಬಿಡುವ ಉದ್ದೇಶದಿಂದ. |

| | | | | | |
|---|---|---|---|---|---|
| 36 | **18. ಸದಸ್ಯತ್ವಕ್ಕೆ ಅನರ್ಹತೆಗಳು (2)** | ರಾಜಕೀಯ ಸ್ವರೂಪದ್ದಲ್ಲದ, ನೈತಿಕ ಅಪರಾಧಕ್ಕಾಗಿ ಶಿಕ್ಷಿಸಲ್ಪಟ್ಟು, ಅಂಥ ಶಿಕ್ಷೆ ರದ್ದಾಗಿರದಿದ್ದರೆ ಅಥವಾ ಅಂಥ ಅಪರಾಧ ಕ್ಷಮಿಸಲ್ಪಟ್ಟಿರದಿದ್ದರೆ ಮತ್ತು ಅಂಥ ಶಿಕ್ಷೆ ಮುಗಿದಂದಿನಿಂದ ಐದು ವರ್ಷಗಳ ಅವಧಿ ಗತಿಸಿರದಿದ್ದರೆ, | **18. ಸದಸ್ಯತ್ವಕ್ಕೆ ಅನರ್ಹತೆಗಳು (2)** | ರಾಜಕೀಯ ಸ್ವರೂಪದ್ದಲ್ಲದ, ನೈತಿಕ ಅಧಃಪತನ ಸ್ವರೂಪದ ಅಪರಾಧಕ್ಕಾಗಿ ಶಿಕ್ಷಿಸಲ್ಪಟ್ಟು, ಅಂಥ ಶಿಕ್ಷೆ ರದ್ದಾಗಿರ ದಿದ್ದರೆ ಅಥವಾ ಅಂಥ ಅಪರಾಧ ಕ್ಷಮಿಸಲ್ಪಟ್ಟಿರದಿದ್ದರೆ ಮತ್ತು ಅಂಥ ಶಿಕ್ಷೆ ಮುಗಿದಂದಿನಿಂದ ಐದು ವರ್ಷಗಳ ಅವಧಿ ಗತಿಸಿರದಿದ್ದರೆ, | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಕಲಂ 17(1)(ಬಿ) ರಲ್ಲಿ ಉಲ್ಲೇಖವಾದಂತೆ ಉಂಟಾಗಿರುವ ಪದಗಳ ವ್ಯತ್ಯಾಸವನ್ನು ಸರಿಪಡಿಸಿದೆ. |
| 37 | **28. ಸಹಸದಸ್ಯ: ಸಹಸದಸ್ಯರ ಹಕ್ಕು ಮತ್ತು ಹೊಣೆ ಗಾರಿಕೆ ಗಳು:(1)** | **27.** ಸಹ ಸದಸ್ಯರು ಸಂಘಕ್ಕೆ ಅಡಿಕೆ ಅಥವಾ ಕಾಳುಮೆಣಸನ್ನು ಹಾಕಿ ಅದರ ಮೇಲೆ ಆಧಾರ ಸಾಲವನ್ನು ಸಂಘದ ನಿಯಮಾವಳಿಗಳನ್ವಯ ಪಡೆಯಲು ಅರ್ಹರಿರುತ್ತಾರೆ. | **28. ಸಹ ಸದಸ್ಯ: ಸಹ ಸದಸ್ಯರ ಹಕ್ಕು ಮತ್ತು ಹೊಣೆಗಾರಿಕೆಗಳು : (1)** | **27.** ಸಹ ಸದಸ್ಯರು ಸಂಘಕ್ಕೆ ಅಡಿಕೆ ಅಥವಾ ಕಾಳುಮೆಣಸು ಅಥವಾ ಕಾಫಿಯನ್ನು ಹಾಕಿ ಅದರ ಮೇಲೆ ಆಧಾರ ಸಾಲವನ್ನು ಸಂಘದ ನಿಯಮಾವಳಿಗಳನ್ವಯ ಪಡೆಯಲು ಅರ್ಹರಿರುತ್ತಾರೆ. | **'ಅಡಿಕೆ'** ಮತ್ತು **'ಕಾಳುಮೆಣಸು'** ಗಳಂತೆ **'ಕಾಫಿ'**ಯನ್ನು ಸಹ ಆಧಾರವಾಗಿಟ್ಟು ಸಾಲ ಪಡೆಯಲು ಅನುಕೂಲ ವಾಗುವಂತೆ. |
| 38 | **ಭಾಗ–5 ಸಾಮಾನ್ಯ ಸಭೆಗಳು 32(1)** | **ವಾರ್ಷಿಕ ಸಾಮಾನ್ಯ ಸಭೆ :** ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಘದ ಆಡಳಿತ ಮಂಡಳಿ ಪ್ರತಿವರ್ಷ ತಪ್ಪದೇ **ಸೆಪ್ಟೆಂಬರ್ 25**ನೇ ತಾರೀಖಿನೊಳಗಾಗಿ ಕರೆದು ನಡೆಸತಕ್ಕದ್ದು. ಸಕಾರಣವಿಲ್ಲದೆ ನಿಗದಿತ ಅವಧಿಯೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆದು, ನಡೆಸಲು ತಪ್ಪಿದಲ್ಲಿ, ಅದಕ್ಕೆ ಕಾರಣರಾದವರು **ಸಹಕಾರಿ ಕಾಯಿದೆ ಕಲಮು 27(2) ಮತ್ತು 29ಸಿ(3)** ಮೇರೆಗೆ ಸೂಕ್ತ ಕಾನೂನು ಕ್ರಮಕ್ಕೆ ಒಳಗಾಗುವರು. | **ಭಾಗ–5 ಸಾಮಾನ್ಯ ಸಭೆಗಳು 32(1)** | **ವಾರ್ಷಿಕ ಸಾಮಾನ್ಯ ಸಭೆ :** ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಘದ ಆಡಳಿತ ಮಂಡಳಿ ಪ್ರತಿವರ್ಷ ತಪ್ಪದೇ **ಸೆಪ್ಟೆಂಬರ್ 25**ನೇ ತಾರೀಖಿನೊಳಗಾಗಿ ಕರೆದು ನಡೆಸತಕ್ಕದ್ದು. ಸಕಾರಣವಿಲ್ಲದೆ ನಿಗದಿತ ಅವಧಿಯೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯಲು ತಪ್ಪಿದಲ್ಲಿ, ಅದಕ್ಕೆ ಕಾರಣರಾದವರು **ಸಹಕಾರಿ ಕಾಯಿದೆ ಕಲಮು 27(2) ಮತ್ತು 29ಸಿ(3)** ಮೇರೆಗೆ ಸೂಕ್ತ ಕಾನೂನು ಕ್ರಮಕ್ಕೆ ಒಳಗಾಗುವರು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಮು 27(2) ಮತ್ತು 29ಸಿ(3) ಪ್ರಾವಧಾನದನ್ವಯ. |
| 39 | **33. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕು 33(1)** | ವಾರ್ಷಿಕ ಸಾಮಾನ್ಯ ಸಭೆ ನಿಗದಿಯಾದ ದಿನಾಂಕಕ್ಕಿಂತ ಕನಿಷ್ಠ 15 ದಿನಗಳ ಮುಂಚೆ ಸಂಘದ ಸಾಲ ಮತ್ತು ಷೇರು ಬಾಕಿ ಹಾಗೂ ಇತರೆ ಬಾಕಿ ಪಾವತಿಸಬೇಕಾದ ಸದಸ್ಯರಿಗೆ, ಸುಸ್ತಿ ಬಾಕಿ ಪಾವತಿಸಲು 30 | **33. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕು 33(1)** | ವಾರ್ಷಿಕ ಸಾಮಾನ್ಯ ಸಭೆ ನಿಗದಿಯಾದ ದಿನಾಂಕಕ್ಕಿಂತ ಕನಿಷ್ಠ 21 ದಿನಗಳ ಮುಂಚೆ ಸಂಘದ ಸಾಲ ಮತ್ತು ಷೇರು ಬಾಕಿ ಹಾಗೂ ಇತರೆ ಬಾಕಿ ಪಾವತಿಸಬೇಕಾದ ಸದಸ್ಯರಿಗೆ, ಸುಸ್ತಿ ಬಾಕಿ ಪಾವತಿಸಲು 45 ದಿನ | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959, ಕಲಮು 20(ಸಿ) ಪ್ರಾವಧಾನದನ್ವಯ. |

| | | | | | |
|---|---|---|---|---|---|
| | | ದಿನಗಳಿಗೆ ಕಡಿಮೆ ಇಲ್ಲದ ನೋಟೀಸು ನೀಡ ಲಾಗಿದ್ದು, ಈ 15 ದಿನಗಳ ಅವಧಿಯೊಳ ಗಾಗಿ ಸದ್ರಿ ಸುಸ್ತಿ ಬಾಕಿಯನ್ನು ಅವರು ಸಂಘಕ್ಕೆ ಪೂರ್ತಿಯಾಗಿ ಪಾವತಿಸ ದಿದ್ದಲ್ಲಿ ಅವರನ್ನು ಸುಸ್ತಿ ಬಾಕಿದಾರ ರೆಂದು ಪರಿಗಣಿಸಲಾಗುವುದರಿಂದ ಅವರಿಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕಿರುವುದಿಲ್ಲ. | | ಗಳಿಗೆ ಕಡಿಮೆ ಇಲ್ಲದಂತೆ ನೋಟೀಸು ನೀಡತಕ್ಕದ್ದು. ಈ 21 ದಿನಗಳ ಅವಧಿ ಯೊಳಗಾಗಿ ಸದ್ರಿ ಸುಸ್ತಿ ಬಾಕಿಯನ್ನು ಅವರು ಸಂಘಕ್ಕೆ ಪೂರ್ತಿಯಾಗಿ ಪಾವತಿಸದಿದ್ದಲ್ಲಿ ಅವರನ್ನು ಸುಸ್ತಿ ಬಾಕಿದಾರರೆಂದು ಪರಿಗಣಿಸಲಾಗು ವುದರಿಂದ ಅವರಿಗೆ ಸಾಮಾನ್ಯ ಸಭೆ ಯಲ್ಲಿ ಮತ ನೀಡುವ ಹಕ್ಕಿರುವುದಿಲ್ಲ. | |
| 40 | **51) ಆಡಳಿತ ಮಂಡಳಿ ಕರ್ತವ್ಯ ಹಾಗೂ ಜವಾಬ್ದಾರಿಗಳು: 51(2) (ಐ)** | ಸಂಘದ ಉದ್ದೇಶಗಳ ಸಾಧನೆಗಾಗಿ ಅಗತ್ಯವಾದ ಚರ, ಸ್ಥಿರಾಸ್ತಿಗಳನ್ನು ಆರ್ಜಿಸಿಕೊಳ್ಳುವುದು ಮತ್ತು ಅನಗತ್ಯವಾದಲ್ಲಿ ಸಾಮಾನ್ಯ ಸಭೆ ಅನುಮತಿ ಪಡೆದು ಮಾರಾಟ ಮಾಡು ವುದು. ಹಾಗೂ ಸಂಘದ ಅವಶ್ಯಕತೆ ಗನುಗುಣವಾಗಿ ಸಹಕಾರಿ ಬ್ಯಾಂಕು ಗಳಿಂದ/ರಾಷ್ಟ್ರೀಕೃತ ಬ್ಯಾಂಕುಗಳಿಂದ/ ವಾಣಿಜ್ಯ ಬ್ಯಾಂಕುಗಳಿಂದ/ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲದ ಬಗೆಗೆ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆದು ಸ್ಥಿರ ಮತ್ತು ಚರಾಸ್ತಿಗಳನ್ನು ಅಡಮಾನು (Mortgage) ಮಾಡಿ ಸಾಲ ಪಡೆಯುವುದು. | **51) ಆಡಳಿತ ಮಂಡಳಿ ಕರ್ತವ್ಯ ಹಾಗೂ ಜವಾಬ್ದಾರಿಗಳು: 51(2)(ಐ)** | ಸಂಘದ ಉದ್ದೇಶಗಳ ಸಾಧನೆಗಾಗಿ ಅಗತ್ಯವಾದ ಚರ, ಸ್ಥಿರಾಸ್ತಿಗಳನ್ನು ಆರ್ಜಿಸಿಕೊಳ್ಳುವುದು ಮತ್ತು ಅನಗತ್ಯ ವಾದಲ್ಲಿ ಸಾಮಾನ್ಯ ಸಭೆ ಅನುಮತಿ ಪಡೆದು ಮಾರಾಟ ಮಾಡುವುದು. ಹಾಗೂ ಸಂಘದ ಅವಶ್ಯಕತೆಗನು ಗುಣವಾಗಿ ಸಹಕಾರಿ ಬ್ಯಾಂಕುಗಳಿಂದ / ರಾಷ್ಟ್ರೀಕೃತ ಬ್ಯಾಂಕುಗಳಿಂದ/ ವಾಣಿಜ್ಯ ಬ್ಯಾಂಕುಗಳಿಂದ/ ಹಣಕಾಸು ಸಂಸ್ಥೆ ಗಳಿಂದ ಸಾಲವನ್ನು ಪಡೆಯುವುದು. | ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: ಆರ್‌ಸಿಎಸ್/ ಎಂಕೆಟಿ–1/ 57/2024–25 ದಿನಾಂಕ 26.11.2024ರಲ್ಲಿ ಸಹಕಾರ ಸಂಘಗಳ ಅಧಿ ನಿಯಮ 1959ರ ಪ್ರಕರಣ 28–ಸಿ(2)(ಸಿ)ರನ್ವಯ ಸಂಘದ ಉದ್ದೇಶಗಳನ್ನು ಸಾಧಿಸಲು ಸಂಪನ್ಮೂಲ ಗಳನ್ನು ಕ್ರೋಢೀಕರಿಸಲು ಆಡಳಿತ ಮಂಡಳಿಗೆ ಅಧಿಕಾರ ದತ್ತವಾಗಿರುವುದ ರಿಂದ ಸದರಿ ಅವಕಾಶ ದನ್ವಯ ಆಡಳಿತ ಮಂಡಳಿಯು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ ಕಾರಣ. |
| 41 | **51(2) (ಕ್ಯೂ)** | ಸಂದರ್ಭಾನುಸಾರ ಕಾನೂನು ವ್ಯವಹರಣೆಗಳನ್ನು ಪ್ರಾರಂಭಿಸುವುದು ಅಥವಾ ಎದುರಿಸುವುದು ಮತ್ತು ಅಂತಹ ವ್ಯವಹರಣೆಗಳಲ್ಲಿ ಸಂಘವನ್ನು ಸಮರ್ಥಿಸುವುದು ಮತ್ತು ಅಗತ್ಯವಾದಲ್ಲಿ ರಾಜಿ ಮಾಡಿಕೊಳ್ಳುವುದು, | **51(2) (ಕ್ಯೂ)** | ಸಂದರ್ಭಾನುಸಾರ ನ್ಯಾಯಾಲಯದ ಪ್ರಕರಣಗಳಲ್ಲಿ ರಾಜಿ ಮಾಡಿಕೊಳ್ಳುವುದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959 ಕಲಮು 29–ಜಿ(4)(ಜೆ) ಪ್ರಕಾರ ಸಂಘದ ಪರವಾಗಿ ದಾವೆ ಹೂಡುವುದು ಮತ್ತು ದಾವೆಯನ್ನು ಎದುರಿಸುವುದು ವ್ಯವಸ್ಥಾಪಕ ನಿರ್ದೇಶಕರ ಅಧಿಕಾರ ವ್ಯಾಪ್ತಿಗೆ ಬರುವುದರಿಂದ. |

| | | | | | |
|---|---|---|---|---|---|
| 42 | **51(2) (ಎಬಿ)** | ಸಂಘದ ವ್ಯವಹಾರಗಳ ಸಂಬಂಧದ ಕಾನೂನು ಸಲಹೆ ಪಡೆಯಲು, ಕಾನೂನು ಸಲಹೆಗಾರರನ್ನು ನೇಮಿಸಿಕೊಳ್ಳುವುದು ಮತ್ತು ಅವರ ಸಂಭಾವನೆ ನಿಗದಿ ಮಾಡುವುದು, | **51(2) (ಎಬಿ)** | ಸಂಘದ ವ್ಯವಹಾರಗಳ ಸಂಬಂಧ ಕಾನೂನು ಸಲಹೆ ಪಡೆಯಲು ಕಾನೂನು ಸಲಹೆಗಾರರನ್ನು ಹಾಗೂ ತಾಂತ್ರಿಕ ಸಲಹೆಯನ್ನು ಪಡೆಯಲು ತಾಂತ್ರಿಕ ತಜ್ಞರನ್ನು ನೇಮಿಸಿ ಕೊಳ್ಳುವುದು ಮತ್ತು ಅವರ ಸಂಭಾವನೆ ನಿಗದಿ ಮಾಡುವುದು. | ಸಂಘಕ್ಕೆ ಹಲವಾರು ಸಂದರ್ಭಗಳಲ್ಲಿ ತಾಂತ್ರಿಕ ಸಲಹೆಯ ಅಗತ್ಯತೆ ಇರುವುದರಿಂದ ತಾಂತ್ರಿಕ ತಜ್ಞರನ್ನು ನೇಮಿಸಿಕೊಳ್ಳುವ ದೃಷ್ಟಿಯಿಂದ. |
| 43 | **51(2) (ಎಇ)** | ಸಂಘದ ಖಾಯಂ ಉಪಸಮಿತಿಗಳಾದ ಕಾರ್ಯ ನಿರ್ವಾಹಕ ಸಮಿತಿ, ಲೆಕ್ಕ ಪರಿಶೋಧನೆ ಮತ್ತು ಹಣಕಾಸು ಸಮಿತಿ, ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿಗಳೊಂದಿಗೆ ಅಗತ್ಯ ವಾದಲ್ಲಿ ಶಾಖಾ ಸಲಹಾ ಸಮಿತಿಗಳನ್ನು ರಚಿಸುವುದು ಮತ್ತು ಅವುಗಳ ನಿರ್ಣಯ ಗಳನ್ನು ಪರಿಶೀಲಿಸಿ, ಅಂಗೀಕಾರದ ಬಗ್ಗೆ ತೀರ್ಮಾನಿಸುವುದು, | **51(2) (ಎಇ)** | ಸಂಘದ ಖಾಯಂ ಉಪಸಮಿತಿ ಗಳಾದ ಕಾರ್ಯ ನಿರ್ವಾಹಕ ಸಮಿತಿ, ಲೆಕ್ಕ ಪರಿಶೋಧನೆ ಮತ್ತು ಹಣಕಾಸು ಸಮಿತಿ, ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಹಾಗೂ ತೋಟೋತ್ಪನ್ನಗಳ ಖರೀದಿ ಮತ್ತು ಮಾರಾಟ ವ್ಯವಹಾರ ಸಮಿತಿಗಳನ್ನು ರಚಿಸುವುದು ಮತ್ತು ಅವುಗಳ ನಿರ್ಣಯ ಗಳನ್ನು ಪರಿಶೀಲಿಸಿ, ಅಂಗೀಕಾರದ ಬಗ್ಗೆ ತೀರ್ಮಾನಿಸುವುದು, | ಸಂಘಕ್ಕೆ ಶಾಖಾ ಸಲಹಾ ಸಮಿತಿ ಅಗತ್ಯತೆ ಇಲ್ಲದಿರು ವುದರಿಂದ ಇದನ್ನು ಕೈಬಿಡುವ ಉದ್ದೇಶದಿಂದ ಮತ್ತು ಸಂಘವು ಖರೀದಿ ಮತ್ತು ಮಾರಾಟ ವ್ಯವಹಾರ ಮಾಡುತ್ತಿರುವುದರಿಂದ ತೋಟೋತ್ಪನ್ನಗಳ ಖರೀದಿ ಮತ್ತು ಮಾರಾಟ ವ್ಯವಹಾರ ಸಮಿತಿಯನ್ನು ಹೊಸದಾಗಿ ಸೇರ್ಪಡೆ ಮಾಡಿದೆ. |
| 44 | **51(3)**<br>**ಖಾಯಂ ಉಪ ಸಮಿತಿಗಳು:**<br>**ಎ)** | ಎ) ಸಂಘದ ವ್ಯವಹಾರಗಳ ಸುಗಮ ಕಾರ್ಯ ನಿರ್ವಹಣೆಗಾಗಿ ಖಾಯಂ ಆಗಿ, ಆಡಳಿತ ಮಂಡಳಿ ಸದಸ್ಯರಿಂದ ರಚಿಸಲ್ಪಟ್ಟ ಈ ಕೆಳಕಂಡ ಉಪಸಮಿತಿಗಳಿರತಕ್ಕದ್ದು.<br>**1. ಕಾರ್ಯ ನಿರ್ವಾಹಕ ಸಮಿತಿ *(Executive Committee)***<br>**2. ಲೆಕ್ಕ ಪರಿಶೋಧನೆ ಮತ್ತು ಹಣಕಾಸು ಸಮಿತಿ *(Audit and Finance Committee)***<br>**3. ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ** | **51(3)**<br>**ಖಾಯಂ ಉಪ ಸಮಿತಿಗಳು:**<br>**ಎ)** | ಎ) ಸಂಘದ ವ್ಯವಹಾರಗಳ ಸುಗಮ ಕಾರ್ಯ ನಿರ್ವಹಣೆಗಾಗಿ ಖಾಯಂ ಆಗಿ, ಆಡಳಿತ ಮಂಡಳಿ ಸದಸ್ಯರಿಂದ ರಚಿಸಲ್ಪಟ್ಟ ಈ ಕೆಳಕಂಡ ಉಪಸಮಿತಿಗಳಿರತಕ್ಕದ್ದು.<br>**1. ಕಾರ್ಯನಿರ್ವಾಹಕ ಸಮಿತಿ *(Executive Committee)***<br>**2. ಲೆಕ್ಕ ಪರಿಶೋಧನೆ ಮತ್ತು ಹಣಕಾಸು ಸಮಿತಿ *(Audit and Finance Committee)***<br>**3. ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ *(Building Construction and Maintainance Committee)*** | ಸಂಘಕ್ಕೆ ಶಾಖಾ ಸಲಹಾ ಸಮಿತಿ ಅಗತ್ಯತೆ ಇಲ್ಲದಿರು ವುದರಿಂದ ಇದನ್ನು ಕೈಬಿಡುವ ಉದ್ದೇಶದಿಂದ ಮತ್ತು ಸಂಘವು ಖರೀದಿ ಮತ್ತು ಮಾರಾಟ ವ್ಯವಹಾರ ಮಾಡುತ್ತಿರುವುದರಿಂದ ತೋಟೋತ್ಪನ್ನಗಳ ಖರೀದಿ ಮತ್ತು ಮಾರಾಟ ವ್ಯವಹಾರ ಸಮಿತಿಯನ್ನು ಹೊಸದಾಗಿ ಸೇರ್ಪಡೆ ಮಾಡಿದೆ. |

| | | | | | |
|---|---|---|---|---|---|
| | | ***(Building Construction and Maintainance Committee)***<br><br>**4. ಶಾಖಾ ಸಲಹಾ ಸಮಿತಿ *(Branch Advisory Committee)*** | | **4. ತೋಟೋತ್ಪನ್ನಗಳ ಖರೀದಿ ಮತ್ತು ಮಾರಾಟ ವ್ಯವಹಾರ ಸಮಿತಿ *(Horti- cultural Produce Purchase and Sales Committee)*** | |
| 45 | **56) ಆಡಳಿತ ಮಂಡಳಿ ನಿರ್ದೇಶಕರ ಸೇವೆ: (1) ಪ್ರಯಾಣ ಭತ್ಯೆ:** | (ಎ) ಬಸ್ಸಿನಲ್ಲಿ – ಬಸ್ಸಿನ ದರದ ಒಂದೂವರೆ ಪಟ್ಟು.<br>(ಬಿ) ರೈಲಿನಲ್ಲಿ – ಪ್ರಥಮ ದರ್ಜೆ ಅಥವಾ ಹವಾ ನಿಯಂತ್ರಿತ 3 ಟಯರ್‌ನ ದರ<br>(ಸಿ) ಇತರೆ ವಿಧಾನದಲ್ಲಿ ಕಾಲಕಾಲಕ್ಕೆ ಅನ್ವಯವಾಗುವ ಪ್ರತಿ ಕಿ.ಮೀ. ದರದಂತೆ | **56) ಆಡಳಿತ ಮಂಡಳಿ ನಿರ್ದೇಶಕರ ಸೇವೆ: (1) ಪ್ರಯಾಣ ಭತ್ಯೆ:** | (ಎ) ಬಸ್ಸಿನಲ್ಲಿ – ಬಸ್ಸಿನ ದರದ ಒಂದೂವರೆ ಪಟ್ಟು.<br>(ಬಿ) ರೈಲಿನಲ್ಲಿ – ಹವಾ ನಿಯಂತ್ರಿತ ಪ್ರಥಮ ದರ್ಜೆ ಪ್ರಯಾಣದ ದರ<br>(ಸಿ) ವಿಮಾನದಲ್ಲಿ – ವಿಮಾನದ ಎಕಾನಮಿ ತರಗತಿಯ ದರ<br>(ಡಿ) ಕಾರಿನಲ್ಲಿ – ಸ್ವಂತ ಅಥವಾ ಬಾಡಿಗೆ ವಾಹನದಲ್ಲಿ ಪ್ರಯಾಣಿಸಿದಾಗ ಆಡಳಿತ ಮಂಡಲಿಯು ಕಾಲಕಾಲಕ್ಕೆ ಪ್ರತಿ ಕಿ.ಮೀ.ಗೆ ನಿಗದಿಪಡಿಸುವ ದರದಲ್ಲಿ | ಇತ್ತೀಚಿನ ದಿನಗಳಲ್ಲಿ ವಿಮಾನ ಪ್ರಯಾಣವು ಅಗತ್ಯವಾಗಿರುವುದರಿಂದ ಇದನ್ನು ಸೇರಿಸಲಾಗಿದೆ ಹಾಗೂ ಆಡಳಿತ ಮಂಡಳಿ ಸದಸ್ಯರು ಬಸ್ ಪ್ರಯಾಣ ಕ್ಕಿಂತ ಹೆಚ್ಚಾಗಿ ಸ್ವಂತ/ ಬಾಡಿಗೆ ವಾಹನದಲ್ಲಿ ಪ್ರಯಾಣ ಮಾಡುತ್ತಿರು ವುದರಿಂದ ಕಾರಿನ ಪ್ರಯಾಣವನ್ನು ಹೊಸದಾಗಿ ಸೇರಿಸುವ ದೃಷ್ಟಿಯಿಂದ. |
| 46 | **56(2) ದಿನಭತ್ಯೆ** | ದಿನಭತ್ಯೆಯನ್ನು ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು.<br>1. ಆರು ಗಂಟೆವರೆಗೆ ತಂಗಿದ್ದರೆ – ಭತ್ಯೆ ಪಡೆಯಲು ಅರ್ಹರಲ್ಲ,<br>2. ಆರು ಗಂಟೆಗೆ ಮೀರಿ ಹನ್ನೆರಡು ಗಂಟೆಯವರೆಗೆ – ಅರ್ಧ ದಿನ ಭತ್ಯೆ,<br>3. ಹನ್ನೆರಡು ಗಂಟೆ ಮೀರಿ ಇಪ್ಪತ್ನಾಲ್ಕು ಗಂಟೆವರೆಗೆ – ಪೂರ್ಣ ದಿನ ಭತ್ಯೆ,<br>4. ಇಪ್ಪತ್ನಾಲ್ಕು ಗಂಟೆ ಮೀರಿದಲ್ಲಿ ದಿನಭತ್ಯೆಯನ್ನು ಮೇಲಿನಂತೆ ಲೆಕ್ಕ ಹಾಕತಕ್ಕದ್ದು. | **56(2) ದಿನಭತ್ಯೆ** | ಸಂಘದ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ವೆಚ್ಚವನ್ನು ಮರುಪಾವತಿ ಪಡೆಯಲು ಆಡಳಿತ ಮಂಡಳಿ ಸದಸ್ಯರು ಹಕ್ಕುಳ್ಳವ ರಾಗಿರತಕ್ಕದ್ದು. | ಆಡಳಿತ ಮಂಡಳಿ ಸದಸ್ಯರು ಕಾರ್ಯ ನಿಮಿತ್ತ ತೆರಳಿದಾಗ ವಾಸ್ತವ ವೆಚ್ಚವನ್ನು ಪಡೆಯಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ. |

| | | | | | |
|---|---|---|---|---|---|
| 47 | **56(3) (ಎ)** | ಸಭಾ ಭತ್ಯೆಯನ್ನು ಆಡಳಿತ ಮಂಡಳಿ ಮತ್ತು ಉಪ ಸಮಿತಿ ಸಭೆಗಳಿಗೆ ಹಾಜರಾದಾಗ ಮಾತ್ರ ಪಾವತಿಸತಕ್ಕದ್ದು. | **56(3) (ಎ)** | ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರುಗಳಿಗೆ ಸಭಾ ಭತ್ಯೆಯನ್ನು ಆಡಳಿತ ಮಂಡಳಿ ಮತ್ತು ಉಪ ಸಮಿತಿ ಸಭೆಗಳಿಗೆ ಹಾಜರಾದಾಗ ಮಾತ್ರ ಪಾವತಿಸತಕ್ಕದ್ದು. | ಪದ ವಾಕ್ಯಗಳ ನಿಖರ ಅರ್ಥಪೂರ್ಣತೆಗಾಗಿ. |
| 48 | **ಭಾಗ–7 ಆಡಳಿತ ಮಂಡಳಿ ಸಭೆಗಳು 61) ಆಡಳಿತ ಮಂಡಳಿ ಸಭೆ ಕರೆಯುವುದು ಹಾಗೂ ನಡೆಸುವುದು (1)** | ಸಂಘದ ವ್ಯವಹಾರ ಮತ್ತು ಆಡಳಿತ ನಿರ್ವಹಣೆಯ ಅಗತ್ಯಗಳನ್ನನುಸರಿಸಿ ಸಂಘದ ವ್ಯವಸ್ಥಾಪಕ ನಿರ್ದೇಶಕರು ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಸಭೆಯಲ್ಲಿ ಚರ್ಚಿಸುವ ವಿಷಯಗಳನ್ನು ನಿರ್ದಿಷ್ಟಪಡಿಸಿಕೊಂಡು, ಅವರ ಅನುಮತಿ ಪಡೆದು ಕನಿಷ್ಠ ತಿಂಗಳಿಗೊಮ್ಮೆ ಅಥವಾ ತಿಂಗಳಲ್ಲಿ ಅಗತ್ಯವಾದಷ್ಟು ಬಾರಿ ಆಡಳಿತ ಮಂಡಳಿ ಸಭೆ ಕರೆಯತಕ್ಕದ್ದು. ಸಹಕಾರಿ ಕಾಯಿದೆ ಹಾಗೂ ನಿಯಮಗಳಲ್ಲಿ ಹೇಳಲಾದ ನಿಯಮಗಳಿಗನುಸಾರ ಆಡಳಿತ ಮಂಡಳಿ ಸಭೆಗಳಿಗೆ ಸಂಬಂಧಿಸಿದ ಕಾರ್ಯ ಕಲಾಪ ಮತ್ತಿತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. | **ಭಾಗ–7 ಆಡಳಿತ ಮಂಡಳಿ ಸಭೆಗಳು 61) ಆಡಳಿತ ಮಂಡಳಿ ಸಭೆ ಕರೆಯುವುದು ಹಾಗೂ ನಡೆಸುವುದು (1)** | ಸಂಘದ ವ್ಯವಹಾರ ಮತ್ತು ಆಡಳಿತ ನಿರ್ವಹಣೆಯ ಅಗತ್ಯಗಳನ್ನನುಸರಿಸಿ ಸಂಘದ ವ್ಯವಸ್ಥಾಪಕ ನಿರ್ದೇಶಕರು ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಸಭೆಯಲ್ಲಿ ಚರ್ಚಿಸುವ ವಿಷಯಗಳನ್ನು ನಿರ್ದಿಷ್ಟ ಪಡಿಸಿಕೊಂಡು, ಅವರ ಅನುಮತಿ ಪಡೆದು ಎರಡು ನಿರಂತರ ಸಭೆಗಳ ಮಧ್ಯದ ಅಂತರವು ಮೂರು ತಿಂಗಳನ್ನು ಮೀರದೆ ಅಥವಾ ತಿಂಗಳಲ್ಲಿ ಅಗತ್ಯವಾದಷ್ಟು ಬಾರಿ ಆಡಳಿತ ಮಂಡಳಿ ಸಭೆ ಕರೆಯತಕ್ಕದ್ದು. ಸಹಕಾರಿ ಕಾಯಿದೆ ಹಾಗೂ ನಿಯಮಗಳಲ್ಲಿ ಹೇಳಲಾದ ನಿಯಮಗಳಿಗನುಸಾರ ಆಡಳಿತ ಮಂಡಳಿ ಸಭೆಗಳಿಗೆ ಸಂಬಂಧಿಸಿದ ಕಾರ್ಯಕಲಾಪ ಮತ್ತಿತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ ಸಂಖ್ಯೆ 14–ಎಕೆ(1) ಮತ್ತು (2)ರ ಪ್ರಾವಧಾನದನ್ವಯ. |
| 49 | **61(2)** | ಸಂಘದ ವ್ಯವಸ್ಥಾಪಕ ನಿರ್ದೇಶಕರು ಆಡಳಿತ ಮಂಡಳಿ ಸಭೆ ಕರೆಯುವ ಬಗ್ಗೆ ಸ್ಪಷ್ಟ ಏಳು ದಿವಸಗಳ ಅಥವಾ ತುರ್ತು ಸಂದರ್ಭಗಳಲ್ಲಿ ಸ್ಪಷ್ಟ ಮೂರು ದಿವಸಗಳ ನೋಟೀಸನ್ನು ಸಂಘದ ಎಲ್ಲಾ ಆಡಳಿತ ಮಂಡಳಿ ಸದಸ್ಯರಿಗೆ ಮುದ್ದಾಂ ಅಥವಾ ಕೊರಿಯರ್ ಅಥವಾ ಸ್ಪೀಡ್ ಪೋಸ್ಟ್ ಅಥವಾ ಈ– | **61(2)** | ಸಂಘದ ವ್ಯವಸ್ಥಾಪಕ ನಿರ್ದೇಶಕರು ಆಡಳಿತ ಮಂಡಳಿ ಸಭೆ ಕರೆಯುವ ಬಗ್ಗೆ ಸ್ಪಷ್ಟ ಏಳು ದಿವಸಗಳ ಅಥವಾ ತುರ್ತು ಸಂದರ್ಭಗಳಲ್ಲಿ ಸ್ಪಷ್ಟ ಮೂರು ದಿವಸಗಳ ನೋಟೀಸನ್ನು ಸಂಘದ ಎಲ್ಲಾ ಆಡಳಿತ ಮಂಡಳಿ ಸದಸ್ಯರಿಗೆ ಮುದ್ದಾಂ ಅಥವಾ ಕೊರಿಯರ್ ಅಥವಾ ಸ್ಪೀಡ್ ಪೋಸ್ಟ್ | ತುರ್ತು ಸಂದರ್ಭಗಳಲ್ಲಿ ಪರಿಚಲನೆ ಮೂಲಕ (Circular Meeting) ಸಭೆಯನ್ನು ಕರೆಯಲು ಅವಕಾಶ ಕಲ್ಪಿಸುವ ಉದ್ದೇಶದಿಂದ |

| | | | | | |
|---|---|---|---|---|---|
| | | ಮೇಲ್ ಮೂಲಕ ಕಳುಹಿಸತಕ್ಕದ್ದು. ಅಂತಹ ನೋಟೀಸಿನಲ್ಲಿ ಸ್ಪಷ್ಟವಾಗಿ ಸಭಾ ದಿನಾಂಕ, ವೇಳೆ, ಸ್ಥಳ ಮತ್ತು ಸಭೆಯಲ್ಲಿ ಚರ್ಚಿಸುವ ವಿಷಯಗಳ ಬಗ್ಗೆ ಸಿದ್ಧಪಡಿಸಿದ ಪಟ್ಟಿ (ಅಜೆಂಡಾ) ತಿಳಿಸಿರತಕ್ಕದ್ದು. ಸಂಘದ ವ್ಯವಸ್ಥಾಪಕ ನಿರ್ದೇಶಕರು ಸದ್ರಿ ನೋಟೀಸಿನೊಂದಿಗೆ, ಅಜೆಂಡಾದಲ್ಲಿನ ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಸಾಧಕ–ಬಾಧಕಗಳು, ಕಾನೂನಿಗೆ ಸಂಬಂಧಪಟ್ಟ ಅಂಶಗಳು ಮತ್ತು ಹಣಕಾಸಿನ ತೊಡಕುಗಳ ಬಗ್ಗೆ ವಿವರವಾದ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸತಕ್ಕದ್ದು. | | ಅಥವಾ ಈ–ಮೇಲ್ ಮೂಲಕ ಕಳುಹಿಸತಕ್ಕದ್ದು. ಅಂತಹ ನೋಟೀಸಿನಲ್ಲಿ ಸ್ಪಷ್ಟವಾಗಿ ಸಭಾ ದಿನಾಂಕ, ವೇಳೆ, ಸ್ಥಳ ಮತ್ತು ಸಭೆಯಲ್ಲಿ ಚರ್ಚಿಸುವ ವಿಷಯಗಳ ಬಗ್ಗೆ ಸಿದ್ಧಪಡಿಸಿದ ಪಟ್ಟಿ (ಅಜೆಂಡಾ) ನೀಡತಕ್ಕದ್ದು.<br>ಅಜೆಂಡಾದಲ್ಲಿನ ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಸಾಧಕ–ಬಾಧಕಗಳು,ಕಾನೂನಿಗೆ ಸಂಬಂಧಪಟ್ಟ ಅಂಶಗಳು ಮತ್ತು ಹಣಕಾಸಿನ ತೊಡಕುಗಳ ಬಗ್ಗೆ ವಿವರವಾದ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸತಕ್ಕದ್ದು.<br>ತುರ್ತು ಸಂದರ್ಭದಲ್ಲಿ ಆಡಳಿತ ಮಂಡಳಿ ಸಭೆಯನ್ನು ಕರೆಯಲು ಸಾಕಷ್ಟು ಕಾಲಾವಕಾಶವಿಲ್ಲದಿದ್ದಾಗ ಯಾವ ವಿಷಯ/ವಿಷಯಗಳ ಕುರಿತು ನಿರ್ಣಯದ ಅವಶ್ಯಕತೆ ಇದೆಯೋ ಅಂತಹ ವಿಷಯ/ವಿಷಯಗಳ ಕುರಿತು ಸಾಧಕ–ಬಾಧಕ, ಅನ್ವಯವಾಗುವ ಕಾನೂನು, ಉಂಟಾಗಬಹುದಾದ ಆರ್ಥಿಕ ಪರಿಣಾಮಗಳನ್ನೊಳಗೊಂಡ ವಿವರವಾದ ಟಿಪ್ಪಣಿ ಹಾಗೂ ಸ್ವೀಕರಿಸಬೇಕಾದ ಮಾದರಿ, ನಿರ್ಣಯವನ್ನೊಳಗೊಂಡ ಪತ್ರವನ್ನು ಪರಿಚಲನೆಯ (Circular Meeting) ಮೂಲಕ ಅನುಮೋದನೆ ಪಡೆದು ಜಾರಿಗೊಳಿಸತಕ್ಕದ್ದು. ಒಂದುವೇಳೆ ಈ ರೀತಿ ಪರಿಚಲನೆಗಳ (Circular Meeting) ಮೂಲಕ ನಡೆಸಲಾದ ಸಭೆಯಲ್ಲಿ ಯಾವುದೇ | |

| | | | | | |
|---|---|---|---|---|---|
| | | | | ಬಹುಮತ ಬಾರದಿದ್ದರೆ, ಅಂತಹ ವಿಷಯ/ ವಿಷಯಗಳ ಕುರಿತು ಮೂರು ಸ್ಪಷ್ಟ ದಿನಗಳ ನೋಟಿಸು ನೀಡಿ ಆಡಳಿತ ಮಂಡಳಿ ಸಭೆಯನ್ನು ಕರೆದು ನಿರ್ಣಯ ಕೈಗೊಳ್ಳತಕ್ಕದ್ದು. | |
| 50 | **61(3)** | ಆಡಳಿತ ಮಂಡಳಿ ಸಭೆ ನಡೆಸಲು ಕನಿಷ್ಟ ಹತ್ತು ಜನ ಅಥವಾ ಆಡಳಿತ ಮಂಡಳಿ ಒಟ್ಟು ಚುನಾಯಿತ ನಿರ್ದೇಶಕರ ಸಂಖ್ಯೆಯ ಅರ್ಧಕ್ಕಿಂತ ಜಾಸ್ತಿ ನಿರ್ದೇಶಕರ ಹಾಜರಾತಿ, ಇದರಲ್ಲಿ ಯಾವುದು ಹೆಚ್ಚೋ ಅಷ್ಟು ಹಾಜರಾತಿ ಅವಶ್ಯಕ ಕೋರಂ ಆಗಿರತಕ್ಕದ್ದು. ಯಾವುದೇ ಆಡಳಿತ ಮಂಡಳಿಯ ಸಭೆಯು ಪ್ರಾರಂಭವಾಗುವುದಕ್ಕೆ ಮುನ್ನ ಸಭೆಗೆ ಹಾಜರಿರುವಂತಹ ಎಲ್ಲಾ ಸದಸ್ಯರು ಈ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು ಹಾಗೂ ಯಾವುದೇ ಕಲಾಪಗಳ ನಿರ್ವಹಣೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಅಂಥ ಕಲಾಪವನ್ನು ನಿರ್ವಹಿಸತಕ್ಕದ್ದಲ್ಲ. | **61(3)** | ಆಡಳಿತ ಮಂಡಳಿ ಸಭೆ ನಡೆಸಲು ಆಡಳಿತ ಮಂಡಲಿಯ ಬಲದ ಶೇಕಡಾ 50ರ ನಂತರದ ಪೂರ್ಣ ಸಂಖ್ಯೆಯ ಹಾಜರಾತಿ ಅವಶ್ಯಕ ಕೋರಂ ಆಗಿರತಕ್ಕದ್ದು. ಯಾವುದೇ ಆಡಳಿತ ಮಂಡಳಿಯ ಸಭೆಯು ಪ್ರಾರಂಭವಾಗುವುದಕ್ಕೆ ಮುನ್ನ ಸಭೆಗೆ ಹಾಜರಿರುವಂತಹ ಎಲ್ಲಾ ಸದಸ್ಯರು ಈ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು ಹಾಗೂ ಯಾವುದೇ ಕಲಾಪಗಳ ನಿರ್ವಹಣೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಅಂಥ ಕಲಾಪವನ್ನು ನಿರ್ವಹಿಸತಕ್ಕದ್ದಲ್ಲ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ ಸಂಖ್ಯೆ 14–ಎಕೆ(4) ಪ್ರಾವಧಾನದನ್ವಯ. |
| 51 | **61(14)** | ಸಂಘದ ಉಪ ನಿಯಮಗಳ ಪ್ರಕಾರ ನಿಗದಿತವಾಗಿ ಕನಿಷ್ಟ ತಿಂಗಳಿಗೊಮ್ಮೆ ಕರೆಯಬೇಕಾದ ಆಡಳಿತ ಮಂಡಳಿ ಸಭೆಯನ್ನು ಕರೆಯಲು ತಪ್ಪಿದಲ್ಲಿ ಅಥವಾ ಆಡಳಿತ ಮಂಡಳಿಯ ಅರ್ಧಕ್ಕಿಂತ ಹೆಚ್ಚು ಚುನಾಯಿತ ಸದಸ್ಯರು ತುರ್ತಾಗಿ ಸಂಘದ ಹಿತಾಸಕ್ತಿಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ವಿಷಯವನ್ನು ಚರ್ಚಿಸಿ ತೀರ್ಮಾನಿಸಲು ಆಡಳಿತ ಮಂಡಳಿ | **61(14)** | ಸಂಘದ ಉಪ ನಿಯಮಗಳ ಪ್ರಕಾರ ಎರಡು ನಿರಂತರ ಸಭೆಗಳ ಮಧ್ಯದ ಅಂತರವು ಮೂರು ತಿಂಗಳನ್ನು ಮೀರದಂತೆ ಕರೆಯಬೇಕಾದ ಆಡಳಿತ ಮಂಡಳಿ ಸಭೆಯನ್ನು ಕರೆಯಲು ತಪ್ಪಿದಲ್ಲಿ ಅಥವಾ ಆಡಳಿತ ಮಂಡಳಿಯ ಅರ್ಧಕ್ಕಿಂತ ಹೆಚ್ಚು ಚುನಾಯಿತ ಸದಸ್ಯರು ತುರ್ತಾಗಿ ಸಂಘದ ಹಿತಾಸಕ್ತಿಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ವಿಷಯವನ್ನು | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ ಸಂಖ್ಯೆ 14–ಎಕೆ(1) ಪ್ರಾವಧಾನದನ್ವಯ. |

| | | | | | |
|---|---|---|---|---|---|
| | | ಸಭೆ ಕರೆಯಲು ಲಿಖಿತವಾಗಿ ಸಂಘದ ವ್ಯವಸ್ಥಾಪಕ ನಿರ್ದೇಶಕನನ್ನು ಕೋರಿಕೊಂಡಲ್ಲಿ, ಸಂಘದ ವ್ಯವಸ್ಥಾಪಕ ನಿರ್ದೇಶಕರು ಇದನ್ನು ಅಧ್ಯಕ್ಷರ ಗಮನಕ್ಕೆ ತಂದು, ಅವರು ಸಭೆ ಕರೆಯಲು ಒಪ್ಪಿಗೆ ನೀಡದಿದ್ದರೂ ಸಹ ತಕ್ಷಣ ಅಥವಾ ನಿರ್ದೇಶಕರುಗಳ ಕೋರಿಕೆ ಸ್ವೀಕರಿಸಿದ ದಿನಾಂಕದಿಂದ ನಂತರದ ಹತ್ತು ದಿನಗಳೊಳಗಾಗಿ ಮಾಸಿಕ ಸಭೆಯಲ್ಲಿ ಮಾಮೂಲಾಗಿ ಚರ್ಚಿಸುವ ವಿಷಯವನ್ನು ಅಥವಾ ನಿರ್ದೇಶಕರು ಸೂಚಿಸಿದ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನಿಸಲು, ಅಧ್ಯಕ್ಷರ ಒಪ್ಪಿಗೆಗಾಗಿ ಕಾಯದೇ ಆಡಳಿತ ಮಂಡಳಿ ಸಭೆಯನ್ನು ಕರೆಯತಕ್ಕದ್ದು. | | ಚರ್ಚಿಸಿ ತೀರ್ಮಾನಿಸಲು ಆಡಳಿತ ಮಂಡಳಿ ಸಭೆ ಕರೆಯಲು ಲಿಖಿತವಾಗಿ ಸಂಘದ ವ್ಯವಸ್ಥಾಪಕ ನಿರ್ದೇಶಕನನ್ನು ಕೋರಿಕೊಂಡಲ್ಲಿ, ಸಂಘದ ವ್ಯವಸ್ಥಾಪಕ ನಿರ್ದೇಶಕರು ಇದನ್ನು ಅಧ್ಯಕ್ಷರ ಗಮನಕ್ಕೆ ತಂದು, ಅವರು ಸಭೆ ಕರೆಯಲು ಒಪ್ಪಿಗೆ ನೀಡದಿದ್ದರೂ ಸಹ ತಕ್ಷಣ ಅಥವಾ ನಿರ್ದೇಶಕರುಗಳ ಕೋರಿಕೆ ಸ್ವೀಕರಿಸಿದ ದಿನಾಂಕದಿಂದ ನಂತರದ ಹತ್ತು ದಿನಗಳೊಳಗಾಗಿ ಮಾಸಿಕ ಸಭೆಯಲ್ಲಿ ಮಾಮೂಲಾಗಿ ಚರ್ಚಿಸುವ ವಿಷಯವನ್ನು ಅಥವಾ ನಿರ್ದೇಶಕರು ಸೂಚಿಸಿದ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನಿಸಲು, ಅಧ್ಯಕ್ಷರ ಒಪ್ಪಿಗೆಗಾಗಿ ಕಾಯದೇ ಆಡಳಿತ ಮಂಡಳಿ ಸಭೆಯನ್ನು ಕರೆಯತಕ್ಕದ್ದು. | |
| 52 | **ಭಾಗ–8 63) ಮುಖ್ಯ ಕಾರ್ಯ ನಿರ್ವಾಹಕನ/ ವ್ಯವಸ್ಥಾಪಕ ನಿರ್ದೇಶಕನ ಕರ್ತವ್ಯ ಮತ್ತು ಜವಾಬ್ದಾರಿಗಳು: (ಇ)** | ಸದಸ್ಯರಿಂದ ಸಾಲ ಮತ್ತು ಮುಂಗಡಗಳ ಮಂಜೂರಾತಿಗಾಗಿ ಬರುವ ಅರ್ಜಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಕಾಯಿದೆ ಸಲಹೆ ಪಡೆದು, ಸಾಲ ಮಂಜೂರಾತಿಯ ಬಗ್ಗೆ ತನ್ನ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿ, ಮಂಜೂ ರಾತಿಗಾಗಿ ಸಂಬಂಧಪಟ್ಟ ಸಮಿತಿ ಸಭೆಯಲ್ಲಿ ಮಂಡಿಸುವುದು ಹಾಗೂ ಮಂಜೂರಾದ ಸಾಲಗಳ ಸಂಬಂಧ ಪಡೆಯಬೇಕಾದ ಎಲ್ಲಾ ದಾಖಲೆಗಳನ್ನು ಪಡೆದು ನಿಯಮಾನುಸಾರ ಸಾಲವನ್ನು ವಿತರಿಸುವುದು. | **ಭಾಗ–8 63) ಮುಖ್ಯ ಕಾರ್ಯ ನಿರ್ವಾಹಕನ/ ವ್ಯವಸ್ಥಾಪಕ ನಿರ್ದೇಶಕನ ಕರ್ತವ್ಯ ಮತ್ತು ಜವಾಬ್ದಾರಿಗಳು: (ಇ)** | ಸದಸ್ಯರಿಂದ ಸಾಲ ಮಂಜೂರಾತಿಗಾಗಿ ಬರುವ ಅರ್ಜಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ಪರಿಶೀಲಿಸಿ, ಅಗತ್ಯ ವಾದಲ್ಲಿ ಕಾನೂನು ಸಲಹೆ ಪಡೆದು, ಸಾಲ ಮಂಜೂರಾತಿಯ ಬಗ್ಗೆ ತನ್ನ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿ, ಮಂಜೂರಾತಿಗಾಗಿ ಸಂಬಂಧಪಟ್ಟ ಸಮಿತಿ ಸಭೆಯಲ್ಲಿ ಮಂಡಿಸುವುದು ಹಾಗೂ ಮಂಜೂರಾದ ಸಾಲಗಳ ಸಂಬಂಧ ಪಡೆಯಬೇಕಾದ ಎಲ್ಲಾ ದಾಖಲೆಗಳನ್ನು ಪಡೆದು ನಿಯಮಾನು ಸಾರ ಸಾಲವನ್ನು ವಿತರಿಸಲು ಸಂಬಂಧಿಸಿದವರಿಗೆ ನಿರ್ದೇಶಿಸುವುದು. | ಪ್ರಸ್ತುತ ಶಾಖೆ ಮತ್ತು ಏಜೆನ್ಸಿಗಳಲ್ಲಿ ಮಾತ್ರ ಮುಂಗಡವನ್ನು ನೀಡುತ್ತಿರುವ ಕಾರಣ ತಿದ್ದುಪಡಿ ಅಗತ್ಯವಿರುತ್ತದೆ. |

| | | | | | |
|---|---|---|---|---|---|
| 53 | **ಭಾಗ–9 ಸಾಲಗಳು 64) ಸಾಲದ ಲಭ್ಯತೆ: (ಆ)** | ಸಂಘದ ಸಹ ಸದಸ್ಯರಿಗೆ ('ಸಿ' ತರಗತಿ ಸದಸ್ಯರು) ಮತ್ತು ನಾಮಮಾತ್ರ ಸದಸ್ಯರಿಗೆ ('ಡಿ' ತರಗತಿ ಸದಸ್ಯರು) ಮಾಲು ಆಧಾರ ಸಾಲ ಮತ್ತು ಠೇವಣಿ ಆಧಾರ ಸಾಲವನ್ನು ಮಾತ್ರ ಸಂಘದ ನಿಯಮಗಳಿಗೊಳಪಟ್ಟು ನೀಡಬಹುದು | **ಭಾಗ–9 ಸಾಲಗಳು 64) ಸಾಲದ ಲಭ್ಯತೆ: (ಆ)** | ಸಂಘದ ಸಹ ಸದಸ್ಯರಿಗೆ ('ಸಿ' ತರಗತಿ ಸದಸ್ಯರು) ಮತ್ತು ನಾಮ ಮಾತ್ರ ಸದಸ್ಯರಿಗೆ ('ಡಿ' ತರಗತಿ ಸದಸ್ಯರು) ಬೆಳೆ/ಕಟಾವು ಸಾಲವನ್ನು ಹೊರತುಪಡಿಸಿ ಮಾಲು ಆಧಾರ ಸಾಲ, ಠೇವಣಿ ಆಧಾರ ಸಾಲ ಹಾಗೂ ಸಂಘದಿಂದ ನೀಡಲ್ಪಡುವ ಇನ್ನಿತರ ಸಾಲವನ್ನು ಮಾತ್ರ ಸಂಘದ ನಿಯಮಗಳಿಗೊಳಪಟ್ಟು ನೀಡಬಹುದು. | ಸಂಘದ ವ್ಯವಹಾರದ ಅಭಿವೃದ್ಧಿಯ ದೃಷ್ಟಿಯಿಂದ ಚಿನ್ನಾಭರಣ ಸಾಲ, ಕೃಷಿ ಯಂತ್ರೋಪಕರಣಗಳ ಮೇಲೆ ಸಾಲ, ಸ್ಥಿರಾಸ್ತಿ ಖರೀದಿ ಸಾಲ ಇತ್ಯಾದಿ ಸಾಲಗಳನ್ನು ನೀಡುವ ಉದ್ದೇಶದಿಂದ. |
| 54 | **65) ಸಂಘ ದಿಂದ ನೀಡುವ ಸಾಲಗಳ ವಿಧಗಳು:** | ಹೊಸದಾಗಿ ಸೇರ್ಪಡೆ | **65) ಸಂಘ ದಿಂದ ನೀಡುವ ಸಾಲಗಳ ವಿಧಗಳು:** | (ಜೆ) ಚಿನ್ನಾಭರಣ ಸಾಲ<br>(ಕೆ) ಗೃಹೋಪಯೋಗಿ ಸಾಲ<br>(ಎಲ್) ಕೃಷಿ ಉಪಕರಣಗಳು/ ಸಲಕರಣೆಗಳು/ಯಂತ್ರೋಪಕರಣಗಳ ಸಾಲ<br>ಎಂ) ಶಿಕ್ಷಣ ಸಾಲ<br>ಎನ್) ಸ್ಥಿರಾಸ್ತಿ ಖರೀದಿ ಸಾಲ<br>ಒ) ಟ್ರ್ಯಾಕ್ಟರ್/ದ್ವಿಚಕ್ರ/ನಾಲ್ಕು ಚಕ್ರ ವಾಹನ ಸಾಲ | ಪ್ರಸ್ತುತ ನೀಡುತ್ತಿರುವ ಸಾಲದ ಜೊತೆಯಲ್ಲಿ ಸದಸ್ಯರಿಗೆ ಅನುಕೂಲ ವಾಗುವ ಇತರೆ ಸೌಲಭ್ಯಗಳನ್ನು ನೀಡುವ ಉದ್ದೇಶದಿಂದ |
| 55 | **ಭಾಗ–12 ಠೇವಣಿ ಗಳು 82)** | **ಠೇವಣಿ ರಿಜಿಸ್ಟರ್‌ಗಳು ಹಾಗೂ ದಾಖಲಾತಿಗಳು:** ಸಂಘದ ವ್ಯವಸ್ಥಾಪಕ ನಿರ್ದೇಶಕರು ಬೇರೆ ಬೇರೆ ವಿಧದ ಠೇವಣಿಗಳು ಹಾಗೂ ಠೇವಣಿ ದಾರರ ಠೇವಣಿಗಳ ಬಗ್ಗೆ ಪ್ರತ್ಯೇಕ ರಿಜಿಸ್ಟರ್‌ಗಳು ಹಾಗೂ ಲೆಕ್ಕಗಳನ್ನಿಡತಕ್ಕದ್ದು. ನಗದು ಠೇವಣಿ ಪತ್ರಗಳ ದಾಸ್ತಾನು ರಿಜಿಸ್ಟರನ್ನು ನಿರ್ವಹಿಸಿ, ಯಾವುದೇ ದಿನಾಂಕಕ್ಕೆ ಉಪಯೋಗಿಸಿದ ಮತ್ತು ಉಪಯೋಗಿಸಿಲ್ಲದ ನಗದು ಪತ್ರಗಳ ವಿವರಗಳನ್ನು ರಿಜಿಸ್ಟರಿನಲ್ಲಿ ಬರೆದಿಟ್ಟು, ಸಂಬಂಧಪಟ್ಟವರ ಪರಿಶೀಲನೆಗೆ ಹಾಜರ್ ಪಡಿಸತಕ್ಕದ್ದು. ಉಳಿತಾಯ ಹಾಗೂ ಚಾಲ್ತಿ ಠೇವಣಿಗಳ ಸಂಬಂಧ | **ಭಾಗ–12 ಠೇವಣಿಗಳು 82)** | **ಠೇವಣಿ ರಿಜಿಸ್ಟರ್‌ಗಳು ಹಾಗೂ ದಾಖಲಾತಿಗಳು:** ಸಂಘದ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅವರಿಂದ ನಿರ್ದೇಶಿಸಲ್ಪಟ್ಟವರು ಬೇರೆ ಬೇರೆ ವಿಧದ ಠೇವಣಿಗಳು ಹಾಗೂ ಠೇವಣಿದಾರರ ಠೇವಣಿಗಳ ಬಗ್ಗೆ ಗಣಕೀಕೃತ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು. ನಗದು ಠೇವಣಿ ಪತ್ರಗಳ ಗಣಕೀಕೃತ ದಾಸ್ತಾನು ರಿಜಿಸ್ಟರನ್ನು ನಿರ್ವಹಿಸಿ, ಯಾವುದೇ ದಿನಾಂಕಕ್ಕೆ ಉಪಯೋಗಿಸಿದ ಮತ್ತು ಉಪಯೋಗಿಸಿಲ್ಲದ ನಗದು ಪತ್ರಗಳ ವಿವರಗಳನ್ನು ಸಂಬಂಧಪಟ್ಟವರ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. | ಪ್ರಸ್ತುತ ಸಂಘದ ಎಲ್ಲಾ ವ್ಯವಹಾರಗಳು ಗಣಕೀಕೃತ ಗೊಂಡಿರುವುದರಿಂದ. |

| | | | | | |
|---|---|---|---|---|---|
| | | ಠೇವಣಿದಾರರಿಗೆ ಪಾಸ್ ಪುಸ್ತಕ ನೀಡಿ ವ್ಯವಹಾರದ ವಿವರಗಳನ್ನು ಕಾಲಕಾಲಕ್ಕೆ ಅದರಲ್ಲಿ ನಮೂದಿಸಿ ಕೊಡತಕ್ಕದ್ದು. ನಿಗದಿತ ಠೇವಣಿಗಳ ಸಂಬಂಧದಲ್ಲಿ ವಾಯಿದೆ ದಿನಾಂಕಕ್ಕೆ ಅವುಗಳು ಫಲಿತವಾಗುವ ಬಗ್ಗೆ, ಠೇವಣಿದಾರರಿಗೆ ವಾಯಿದೆ ದಿನಾಂಕಕ್ಕೆ 15 ದಿನಗಳ ಮೊದಲು ತಿಳುವಳಿಕೆ ನೀಡಬಹುದು. | | ಉಳಿತಾಯ ಹಾಗೂ ಚಾಲ್ತಿ ಠೇವಣಿಗಳ ಸಂಬಂಧ ಠೇವಣಿದಾರರಿಗೆ ಪಾಸ್ ಪುಸ್ತಕ ನೀಡಿ ವ್ಯವಹಾರದ ವಿವರಗಳನ್ನು ಕಾಲಕಾಲಕ್ಕೆ ಅದರಲ್ಲಿ ನಮೂದಿಸಿ ಕೊಡತಕ್ಕದ್ದು. ನಿಗದಿತ ಠೇವಣಿಗಳ ಸಂಬಂಧದಲ್ಲಿ ವಾಯಿದೆ ದಿನಾಂಕಕ್ಕೆ ಅವುಗಳು ಫಲಿತವಾಗುವ ಬಗ್ಗೆ, ಠೇವಣಿದಾರರಿಗೆ ವಾಯಿದೆ ದಿನಾಂಕಕ್ಕೆ 15 ದಿನಗಳ ಮೊದಲು ತಿಳುವಳಿಕೆ ನೀಡಬಹುದು. | |
| 56 | **ಭಾಗ–13 ಸಿಬ್ಬಂದಿ ಸೇವೆಗಳು 84) ಸಿಬ್ಬಂದಿ ಸೌಲಭ್ಯಗಳು** | **3) ಹಣಕಾಸಿನ ಸೌಲಭ್ಯಗಳು:**<br>ಡಿ) ಮನೆ ನಿರ್ಮಾಣ/ಖರೀದಿ/ದುರಸ್ತಿ ಸಾಲ | **ಭಾಗ–13 ಸಿಬ್ಬಂದಿ ಸೇವೆಗಳು 84) ಸಿಬ್ಬಂದಿ ಸೌಲಭ್ಯಗಳು** | **3) ಹಣಕಾಸಿನ ಸೌಲಭ್ಯಗಳು:**<br>ಡಿ) ಮನೆ ನಿರ್ಮಾಣ/ಖರೀದಿ/ ದುರಸ್ತಿ/ನಿವೇಶನ ಖರೀದಿ ಸಾಲ | ಸಂಘದ ಸಿಬ್ಬಂದಿಗಳಿಗೆ ನಿವೇಶನ ಖರೀದಿ ಸಾಲವನ್ನೂ ಸಹ ನೀಡುವ ಉದ್ದೇಶದಿಂದ |
| 57 | **ಭಾಗ–14 86) ನಿವ್ವಳ ಲಾಭದ ವಿಲೇವಾರಿ:** | **ಎ) ಸಹಕಾರಿ ಕಾಯಿದೆ ಕಲಮು 57(1)** ರ ಉಪಬಂಧಗಳಿಗೊಳಪಟ್ಟು ಸಂಘದ ನಿವ್ವಳ ಲಾಭವನ್ನು ಸಂಘದ ಸಾಮಾನ್ಯ ಸಭೆಯು ಈ ಕೆಳಕಂಡಂತೆ ವಿಲೇವಾರಿ ಮಾಡತಕ್ಕದ್ದು.<br>* 3. ಶೇ.20ಕ್ಕೆ ಮೀರದಂತೆ ಕಟ್ಟಡ ನಿಧಿಗೆ,<br>8. ಶೇ.10 ಕ್ಕೆ ಮೀರದಂತೆ ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗೆ, | **ಭಾಗ–14 86) ನಿವ್ವಳ ಲಾಭದ ವಿಲೇವಾರಿ:** | **ಎ) ಸಹಕಾರಿ ಕಾಯಿದೆ ಕಲಮು 57(1)** ರ ಉಪಬಂಧಗಳಿಗೊಳಪಟ್ಟು ಸಂಘದ ನಿವ್ವಳ ಲಾಭವನ್ನು ಸಂಘದ ಸಾಮಾನ್ಯ ಸಭೆಯು ಈ ಕೆಳಕಂಡಂತೆ ವಿಲೇವಾರಿ ಮಾಡತಕ್ಕದ್ದು.<br>* 3. ಶೇ.30ಕ್ಕೆ ಮೀರದಂತೆ ಕಟ್ಟಡ ನಿಧಿಗೆ,<br>8. ಶೇ.5ಕ್ಕೆ ಮೀರದಂತೆ ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗೆ, | ಸಂಘದಲ್ಲಿ ಅಡಿಕೆ, ಕಾಳುಮೆಣಸು ಇತ್ಯಾದಿ ದಾಸ್ತಾನು ಮಾಡಲು ಗೋದಾಮು ಕಟ್ಟಡದ ಅವಶ್ಯಕತೆ ಇರುವುದರಿಂದ ಹಾಗೂ ಪ್ರಸ್ತುತ ಕಟ್ಟಡ ನಿಧಿಯಲ್ಲಿ ಮೊತ್ತ ಕಡಿಮೆ ಇರುವುದರಿಂದ ಕಟ್ಟಡ ನಿಧಿಯನ್ನು ಹೆಚ್ಚಿಸಲು ಹಾಗೂ ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗೆ ಹೆಚ್ಚಿನ ಮೊಬಲಗು ಅವಶ್ಯಕತೆ ಇಲ್ಲದಿರು ವುದರಿಂದ ಇದರ ಪ್ರಮಾಣವನ್ನು ಕಡಿಮೆ ಮಾಡುವ ದೃಷ್ಟಿಯಿಂದ. |
| 58 | **86(ಬಿ)** | ನಿವ್ವಳ ಲಾಭವನ್ನು **ಉಪನಿಯಮ 86 (ಎ)** ಕ್ರ.ಸಂ.1 ರಿಂದ 6 ರವರೆಗಿನ ವಿನಿಯೋಗದ ನಂತರ ಉಳಿದ ಬಾಬುಗಳಿಗೆ, ಉಳಿದ ಲಾಭದ ಪ್ರಮಾಣವನ್ನನುಸರಿಸಿ ಲಾಭದ ಹಂಚಿಕೆ ಮಾಡಬಹುದು. | **86(ಬಿ)** | ನಿವ್ವಳ ಲಾಭವನ್ನು **ಉಪನಿಯಮ 86 (ಎ)** ಕ್ರ.ಸಂ.1 ಮತ್ತು 2 ರ ವಿನಿಯೋಗದ ನಂತರ ಉಳಿದ ಬಾಬುಗಳಿಗೆ, ಉಳಿದ ಲಾಭದ ಪ್ರಮಾಣವನ್ನನುಸರಿಸಿ ಲಾಭದ ಹಂಚಿಕೆ ಮಾಡಬಹುದು. | ಕ್ರಮಸಂಖ್ಯೆಯನ್ನು ಸರಿಯಾಗಿಸುವ ಉದ್ದೇಶದಿಂದ. |

| | | | | | |
|---|---|---|---|---|---|
| 59 | **ಭಾಗ–16 ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು 89) ಕಾಯ್ದಿಟ್ಟ ನಿಧಿ (Reserve Fund) (2)** | ಕಾಯ್ದಿಟ್ಟ ನಿಧಿಯನ್ನು ಸಂಘದ ದೈನಂದಿನ ವ್ಯವಹಾರದಲ್ಲಿ ಬಳಸಿ ಕೊಳ್ಳದೆ **ಸಹಕಾರಿ ಕಾಯಿದೆ ಕಲಮು 58**(ಇ)ನಲ್ಲಿ ತಿಳಿಸಲಾದಂತೆ ಸಂಘದ ವ್ಯವಹಾರದಿಂದ ಪ್ರತ್ಯೇಕವಾಗಿ ಠೇವಣಿ ಮಾಡತಕ್ಕದ್ದು. ಆದರೆ, ಸಂಘದಲ್ಲಿ ಆಸ್ತಿ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಮಾತ್ರ ಅನಿವಾರ್ಯವಾದಲ್ಲಿ, ರಿಜಿಸ್ಟ್ರಾರರು ವಿಧಿಸಬಹುದಾದ ಷರತ್ತುಗಳು ಮತ್ತು ಅನುಮತಿಸ ಬಹುದಾದಷ್ಟು ಪ್ರಮಾಣದಲ್ಲಿ ಈ ನಿಧಿಯಿಂದ ಹಣವನ್ನು ಉಪಯೋಗಿಸಿಕೊಳ್ಳಬಹುದು. ಉಪಯೋಗಿಸಿಕೊಂಡ ಹಣವನ್ನು ಮುಂದಿನ ವರ್ಷದ ಲಾಭದಿಂದ ರಿಜಿಸ್ಟ್ರಾರರು ನಿಗದಿಪಡಿಸುವ ಅವಧಿಯೊಳಗಾಗಿ ಕಾಯ್ದಿಟ್ಟ ನಿಧಿಗೆ ಮರುಪಾವತಿಸತಕ್ಕದ್ದು. | **ಭಾಗ–16 ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು 89) ಕಾಯ್ದಿಟ್ಟ ನಿಧಿ (Reserve Fund) (2)** | ಕಾಯ್ದಿಟ್ಟ ನಿಧಿಯನ್ನು ಸಂಘದ ದೈನಂದಿನ ವ್ಯವಹಾರದಲ್ಲಿ ಬಳಸಿಕೊಳ್ಳದೆ **ಸಹಕಾರಿ ಕಾಯಿದೆ ಕಲಮು 58**ರಲ್ಲಿ ತಿಳಿಸಲಾದಂತೆ ಸಂಘದ ವ್ಯವಹಾರದಿಂದ ಪ್ರತ್ಯೇಕ ವಾಗಿ ಠೇವಣಿ ಮಾಡತಕ್ಕದ್ದು. ಆದರೆ, ಸಂಘದಲ್ಲಿ ಆಸ್ತಿ ನಿರ್ಮಾಣ ಮಾಡುವ ಉದ್ದೇಶ ಕ್ಕಾಗಿ ಮಾತ್ರ ಅನಿವಾರ್ಯ ವಾದಲ್ಲಿ, ರಿಜಿಸ್ಟ್ರಾರರು ವಿಧಿಸ ಬಹುದಾದ ಷರತ್ತುಗಳು ಮತ್ತು ಅನುಮತಿಸಬಹುದಾದಷ್ಟು ಪ್ರಮಾಣದಲ್ಲಿ ಈ ನಿಧಿಯಿಂದ ಹಣವನ್ನು ಉಪಯೋಗಿಸಿ ಕೊಳ್ಳಬಹುದು. ಉಪಯೋಗಿಸಿ ಕೊಂಡ ಹಣವನ್ನು ಮುಂಬರುವ ವರ್ಷದ ಲಾಭದಿಂದ ರಿಜಿಸ್ಟ್ರಾರರು ನಿಗದಿಪಡಿಸುವ ಅವಧಿಯೊಳಗಾಗಿ ಕಾಯ್ದಿಟ್ಟ ನಿಧಿಗೆ ಮರುಪಾವತಿಸತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959 ಕಲಮು 58 ರಂತೆ. |

**ವಿಷಯ 19 : ಯಾವುದೇ ಪೂರಕ ಸಂಸ್ಥೆಯೇನಾದರೂ ಇದ್ದರೆ, ಅವುಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪುನರವಲೋಕಿಸುವ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 20 : ಯಾವುದೇ ಇತರ ಸಹಕಾರ ಸಂಘಗಳಲ್ಲಿ ಆ ಸಂಘದ ಸದಸ್ಯತ್ವವನ್ನು ಅನುಮೋದಿಸುವ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 21 : ನಿರ್ದೇಶಕರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರ ಪಟ್ಟಿಯ ಪರಿಗಣನೆ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 22 : ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ತೀರ್ಮಾನದ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 23 : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ ಕುರಿತು.**

**ನಿರ್ಣಯ :** ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 24 : ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸ್ವ-ಇಚ್ಛಾ ಸಂಯೋಜನೆ, ವಿಭಜನೆ, ವರ್ಗಾವಣೆ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 25 : ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪರಿಶೀಲನೆ ಕುರಿತು.**

**ನಿರ್ಣಯ :** ದಿನಾಂಕ:31-03-2015ಕ್ಕೆ ಮೀಸಲು ನಿಧಿಯಲ್ಲಿ ರೂ.14.55 ಕೋಟಿಗಳಿದ್ದು, ದಿನಾಂಕ:23-12-2015ರಂದು ಸಹಕಾರ ಸಂಘಗಳ ನಿಬಂಧಕರಿಂದ ರೂ.12.25 ಕೋಟಿಗಳನ್ನು ಕಟ್ಟಡ ಕಾಮಗಾರಿಗೆ ವಿನಿಯೋಗಿಸಲು ಅನುಮತಿ ಪಡೆದು, ಅದರಂತೆ ಖರ್ಚು ಬರೆದು ಕಟ್ಟಡ ನಿಧಿಗೆ ವರ್ಗಾಯಿಸಿರುವುದನ್ನು ಮತ್ತು ದಿನಾಂಕ 31 ಮಾರ್ಚ್ 2025ರ ಅಂತ್ಯಕ್ಕೆ ರೂ.3,05,50,000.00 (ಮೂರು ಕೋಟಿ ಐದು ಲಕ್ಷದ ಐವತ್ತು ಸಾವಿರ)ಗಳನ್ನು ಪುನಃಭರಣ ಮಾಡಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು. ಹಾಗೂ ಉಳಿದ ಒಂದು ಕೋಟಿ ಮೊಬಲಗನ್ನು ಮುಂದಿನ ಸಾಲುಗಳಲ್ಲಿ ಪುನಃಭರಣ ಮಾಡಲಾಗುವುದಾಗಿ ಮತ್ತು ಮೀಸಲು ಅಥವಾ ಇತರೆ ನಿಧಿಗಳ ಸಾಂಪತ್ತಿಕ ವಿವರಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 26 : ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲ ಹಾಗೂ ಠೇವಣಿ ಸಂಗ್ರಹದ ಬಗೆಗೆ ಮಿತಿ ನಿರ್ಧರಿಸುವ ಕುರಿತು.**

**ನಿರ್ಣಯ :** ಸಂಘದ ಉಪವಿಧಿ ಸಂಖ್ಯೆ:9ರ ಅನ್ವಯ ಸಾಮಾನ್ಯ ನಿಕಾಯವು ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮೊತ್ತವನ್ನು ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲದ ಮೊತ್ತವನ್ನು ನಿಗದಿಪಡಿಸಬೇಕಿರುವುದನ್ನು ಹಾಗೂ ಈ ಬಗೆಗೆ ಆಡಳಿತ ಮಂಡಳಿಯವರು ನೀಡಿದ ಟಿಪ್ಪಣಿಯನ್ನು ಪರಿಶೀಲಿಸಿ, 2025-26ನೇ ಸಾಲಿಗೆ ಈ ಠೇವಣಿ ಮೊತ್ತವನ್ನು ರೂ.300.00 ಕೋಟಿಗಳಿಗೆ ಮತ್ತು ಸಾಲದ ಮೊತ್ತವನ್ನು ರೂ.200.00 ಕೋಟಿಗಳಿಗೆ ನಿಗದಿಪಡಿಸುವ ಬಗೆಗೆ ಸಭೆಯಲ್ಲಿ ಮಂಡಿಸಲಾಯಿತು.

ಶ್ರೀ ದಿನೇಶ್ ಕೆ ಸಿ ಇವರು ಸಂಘದ ಅಡಿಕೆ ಖರೀದಿ ವ್ಯಾಪ್ತಿಯನ್ನು ರಾಜ್ಯಾದ್ಯಂತ ವಿಸ್ತರಿಸುವ ಉದ್ದೇಶವನ್ನು ತಿಳಿಸಿರುತ್ತೀರಾ, ಆದ್ದರಿಂದ ರೂ.200.00 ಕೋಟಿಗಳಿಗೆ ಸಾಲದ ಮೊತ್ತವನ್ನು

ನಿಗದಿಪಡಿಸಿದರೆ ಖರೀದಿ ವಹಿವಾಟು ನಡೆಸಲು ಸಾಧ್ಯವಾಗುವುದಿಲ್ಲ. ಸಾಲದ ಮೊತ್ತವನ್ನು ರೂ.1,000 ಕೋಟಿಗಳಿಗೆ ನಿಗದಿಪಡಿಸಿ ಸಭೆಯ ಅನುಮತಿ ಪಡೆದುಕೊಳ್ಳಿ ಎಂದು ತಿಳಿಸಿದರು.

ಶ್ರೀ ಜಯರಾಂ ಗೋಂಧಿ ಇವರು ಸಾಲದ ಮೊತ್ತವನ್ನು ರೂ.1,000.00 ಕೋಟಿಗಳಿಗೆ ನಿಗದಿಪಡಿಸಿಕೊಳ್ಳುವಂತೆ ಶ್ರೀ ದಿನೇಶ್ ಕೆ ಸಿ ಇವರು ಉತ್ತಮವಾದ ಸಲಹೆಯನ್ನು ನೀಡಿರುವುದಕ್ಕೆ ಧನ್ಯವಾದಗಳನ್ನು ತಿಳಿಸುವಂತೆ ಕೋರಿದಾಗ ಮಾನ್ಯ ಉಪಾಧ್ಯಕ್ಷರು ಶ್ರೀ ದಿನೇಶ್ ಕೆ ಸಿ ಇವರ ಸಲಹೆ ಉತ್ತಮವಾಗಿದೆ ಎಂದು ಆಡಳಿತ ಮಂಡಲಿಯ ಪರವಾಗಿ ಧನ್ಯವಾದಗಳನ್ನು ತಿಳಿಸಿದರು.

ನಂತರ ಸಭೆಯು 2025-26ನೇ ಸಾಲಿಗೆ ಠೇವಣಿ ಸಂಗ್ರಹದ ಮಿತಿಯನ್ನು ರೂ.300.00 ಕೋಟಿಗಳಿಗೆ ಮತ್ತು ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲದ ಮೊತ್ತವನ್ನು ರೂ.1,000.00 ಕೋಟಿಗಳಿಗೆ ನಿಗದಿಪಡಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 27 : ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 28 : ಸಂಘದ ಸದಸ್ಯರು ಮತ್ತು ವರ್ತಕರಿಂದ ಬರಬೇಕಾದ ಬಡ್ಡಿ ಬಾಕಿ ಮೊತ್ತಕ್ಕೆ ವಿನಾಯಿತಿ ನೀಡಿರುವ ವಿವರಗಳ ಪರಿಶೀಲನೆ.**

**ನಿರ್ಣಯ :** ಸಂಘದ ಹಿಂದಿನ ಹಲವಾರು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಸದಸ್ಯ ರೈತರ ಹಾಗೂ ವರ್ತಕರ ಪ್ರತಿಯೊಂದು ಪ್ರಕರಣಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಪ್ರತಿಯೊಂದು ಪ್ರಕರಣದಲ್ಲಿನ ಪರಿಸ್ಥಿತಿಯನ್ನು, ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟು ಪೂರ್ಣ/ಭಾಗಶಃ ಬಡ್ಡಿಯನ್ನು ಕೈಬಿಡುವ, ಭಾಗಶಃ ಅಸಲು/ಪೂರ್ಣ ಅಸಲು ಹಾಗೂ ಬಡ್ಡಿ ಕೈಬಿಡುವ ಮೂಲಕ ಹಾಗೂ ಅಸಲನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಸದರಿ ಮೊಬಲಗನ್ನು ಹೋಕುಬಾಕಿ ನಿಧಿಗೆ ಖರ್ಚು ಹಾಕಿ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಅವಶ್ಯಕ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಆಡಳಿತ ಮಂಡಲಿಗೆ ಸಂಪೂರ್ಣ ಅಧಿಕಾರ ನೀಡಲು ಸರ್ವಾನುಮತದಿಂದ ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಇಂತಹ ಪ್ರಕರಣಗಳ ಬಗ್ಗೆ ಆಡಳಿತ ಮಂಡಲಿ ಸಭೆಯಲ್ಲಿ ಪರಿಶೀಲಿಸಿ, ಇತ್ಯರ್ಥಪಡಿಸಿಕೊಂಡಿರುವುನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡು ಅನುಮೋದನೆಯನ್ನು ನೀಡಿತು.

ಮುಂದುವರೆದು, ಮಾನ್ಯ ಉಪಾಧ್ಯಕ್ಷರು ಸಂಘದಲ್ಲಿ ಜಾರಿಯಲ್ಲಿದ್ದ ಏಕಕಾಲಿಕ ಸಾಲ ತೀರುವಳಿ ಯೋಜನೆಯು 2024ರ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯಗೊಂಡಿರುವುದನ್ನು ಸಭೆಯ ಗಮನಕ್ಕೆ ತಂದರು ಹಾಗೂ ಪ್ರಸ್ತುತ ಇನ್ನೂ ಹಲವು ರೈತರ ಹಾಗೂ ವರ್ತಕರ ಪ್ರಕರಣಗಳು ಇತ್ಯರ್ಥವಾಗದೆ ಮುಂದುವರೆಯುತ್ತಿರುವ ಬಗೆಗೆ ಪ್ರಸ್ತಾಪಿಸಿದಾಗ, ಶ್ರೀ ಪ್ರಸನ್ನಕುಮಾರ್ ಎ ಆರ್ ಇವರು ಇಂತಹ ಪ್ರಕರಣಗಳಲ್ಲಿ ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ಪರಿಶೀಲಿಸಿ, ಅಲ್ಲಿನ ಸಂದರ್ಭಕ್ಕನುಗುಣವಾಗಿ ಅವುಗಳನ್ನು ಇತ್ಯರ್ಥಪಡಿಸಿ, ಖೈದುಗೊಳಿಸುವುದು ಸೂಕ್ತವೆಂದು ಸಲಹೆ ಮಾಡಿದರು. ಕ್ಲಿಷ್ಟಕರವಾಗಿ ಮುಂದುವರೆಯುತ್ತಿರುವ ಇಂತಹ ಎಲ್ಲಾ ಪ್ರಕರಣಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ, ಇವುಗಳನ್ನು ಆದಷ್ಟು ಶೀಘ್ರವಾಗಿ ಖೈದುಗೊಳಿಸಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

ನಂತರ ಸಭೆಯು ಸದಸ್ಯ ರೈತರ ಹಾಗೂ ವರ್ತಕರ ಪ್ರತಿಯೊಂದು ಪ್ರಕರಣಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಪ್ರತಿಯೊಂದು ಪ್ರಕರಣದಲ್ಲಿನ ಪರಿಸ್ಥಿತಿಯನ್ನು, ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟು ಪೂರ್ಣ/ಭಾಗಶಃ ಬಡ್ಡಿಯನ್ನು ಕೈಬಿಡುವ, ಭಾಗಶಃ ಅಸಲು/ಪೂರ್ಣ ಅಸಲು ಹಾಗೂ ಬಡ್ಡಿ ಕೈಬಿಡುವ ಮೂಲಕ ಹಾಗೂ ಅಸಲನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಸದರಿ ಮೊಬಲಗನ್ನು ಹೋಕುಬಾಕು ನಿಧಿಗೆ ಖರ್ಚು ಹಾಕಿ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಅವಶ್ಯಕ

ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಆಡಳಿತಮಂಡಳಿಗೆ ಸಂಪೂರ್ಣ ಅಧಿಕಾರ ನೀಡಲು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 29 :** **ಸಂಘದ ಸದಸ್ಯರಿಂದ ಬಂದಿರುವ ಪತ್ರಗಳ ಕುರಿತು.**

**ನಿರ್ಣಯ :** ಸಂಘದ ಸದಸ್ಯರುಗಳು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ಬಯಸಿ, ಕಳುಹಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಂದರ್ಭದಲ್ಲಿ ಹಾಜರಿದ್ದ ಸದಸ್ಯರು ಕಳುಹಿಸಿದ ವಿಷಯಗಳ ಕುರಿತು ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

| ಕ್ರ.ಸಂ | ಸದಸ್ಯರ ಹೆಸರು | ಪ್ರಶ್ನೆ | ಉತ್ತರ |
|---|---|---|---|
| 1 | **ಶ್ರೀ ವಿಜೇಂದ್ರ ಗೌಡ್ರು (ಷೇ.ಕ್ರ.ಸಂ.43540) ತಲಗುಂದ, ಸೊರಬ ತಾಲ್ಲೂಕು** | 1. ಕಳೆದ ಹಲವಾರು ವರ್ಷಗಳಿಂದ ಬೆಳೆ ವಿಮೆಯನ್ನು ಕಟ್ಟುತ್ತಿದ್ದೇನೆ. ಆದರೆ, ಈ ಯೋಜನೆಯ ಅನುಷ್ಠಾನ ಸಮರ್ಪಕವಾಗಿಲ್ಲ. ಇದರ ಪ್ರಯೋಜನ ನಮ್ಮ ಎಲ್ಲಾ ಬೆಳೆಗಾರರಿಗೆ ಸರಿಯಾಗಿ ತಲುಪುತ್ತಿಲ್ಲ. ಇದು ತುಂಬಾ ಅವೈಜ್ಞಾನಿಕವಾಗಿದೆ. ಇದರ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಇದರ ಸಂಪೂರ್ಣ ಪ್ರಯೋಜನ ಎಲ್ಲಾ ಬೆಳೆಗಾರರಿಗೆ ತಲುಪುವಂತಾಗಬೇಕು. | 1. ಬೆಳೆ ವಿಮೆ ಯೋಜನೆಯು ಸರ್ಕಾರದ ಯೋಜನೆಯಾಗಿದ್ದು, ಸಂಘದ ವ್ಯಾಪ್ತಿಗೆ ಬರುವುದಿಲ್ಲ. ಆದಾಗ್ಯೂ, ತಾವು ಬೆಳೆ ವಿಮೆ ಕುರಿತಂತೆ ನಿರ್ದಿಷ್ಟವಾಗಿ ಎದುರಿಸುತ್ತಿರುವ ಸಮಸ್ಯೆ ಏನೆಂಬುದನ್ನು ತಿಳಿಸಿದರೆ ಸಂಘದ ವತಿಯಿಂದ ಸರ್ಕಾರಕ್ಕೆ/ಮಾನ್ಯ ಜಿಲ್ಲಾಧಿಕಾರಿಗಳಿಗೆ ಸೂಕ್ತ ಮನವಿ ಸಲ್ಲಿಸಲು ಕ್ರಮವಿಡಲಾಗುವುದು. |
| | | 2. ಸೊರಬ ತಾಲ್ಲೂಕಿನಲ್ಲಿ ಅತಿ ಹೆಚ್ಚು ಬೆಳೆಗಾರರಿದ್ದು, ಇಲ್ಲಿ ಸರಿಯಾದ ಸ್ವಂತ ಕಟ್ಟಡದ ಅವಶ್ಯಕತೆ ಇರುತ್ತದೆ. ಸೊರಬ ಮತ್ತು ಆನವಟ್ಟಿ ಪಟ್ಟಣಗಳಲ್ಲಿ ಮಾಮ್‌ಕೋಸ್ ಕಚೇರಿ ಮತ್ತು ಸ್ವಂತ ಕಟ್ಟಡವನ್ನು ಆದಷ್ಟು ಶೀಘ್ರದಲ್ಲಿ ಮಂಜೂರು ಮಾಡಲು ವಿನಂತಿ. | 2. ಸಂಘದಲ್ಲಿನ ನಿಧಿಯ ಲಭ್ಯತೆ ಆಧರಿಸಿ ಮುಂದಿನ ದಿನಗಳಲ್ಲಿ ಸೊರಬ ಮತ್ತು ಆನವಟ್ಟಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮವಿಡಲಾಗುವುದು. |
| 2 | **ಶ್ರೀ ಪಿ.ಎನ್.ರಂಗನಾಥ (ಷೇ.ಕ್ರ.ಸಂ.12221) ಪಡವಗೋಡು ಸಾಗರ ತಾಲ್ಲೂಕು** | 1. ಸಿಪ್ಪೆಗೋಟನ್ನು ರೈತರು ಸಂಘದ ಶಾಖೆಯಿಂದ ವಾಪಾಸ್ಸು ಪಡೆಯುವ ಸಂದರ್ಭದಲ್ಲಿ ಒಂದು ಚೀಲಕ್ಕೆ ರೂ.130.00 ಅನ್ನು ರೈತರಿಂದ ಪಡೆಯುತ್ತಿದ್ದು, ಇದನ್ನು ಕಡಿಮೆ ಮಾಡಲು ವಿನಂತಿ. | 1. ಸಂಘಕ್ಕೆ ಉಂಟಾಗುತ್ತಿರುವ ವೆಚ್ಚಕ್ಕಿಂತ ಕಡಿಮೆ ಶುಲ್ಕವನ್ನು ಸಿಪ್ಪೆಗೋಟು ವಾಪಸು ಪಡೆಯುವಾಗ ವಿಧಿಸುತ್ತಿದ್ದು, ನಿಗದಿ ಪಡಿಸಿರುವ ಈ ದರವು ಸೂಕ್ತ ವಾಗಿದ್ದು, ಸದಸ್ಯರು ಸಹಕರಿಸಲು ಕೋರಿದೆ. ಹಾಗೂ ಈ ದರವೂ ಇತರೆ ಸಹಕಾರ ಸಂಸ್ಥೆಗಳು ವಿಧಿಸುವ ದರಕ್ಕಿಂತ ಕಡಿಮೆ ಇರುತ್ತದೆ. |
| | | 2. ಷೇರುದಾರರ ಸಭೆಯಲ್ಲಿ ಷೇರುದಾರರಿಗೆ ಪ್ರಥಮ ಆದ್ಯತೆಯನ್ನು ನೀಡಿ. ಆ ಬಗ್ಗೆ ಚರ್ಚೆಯಾಗಿ ನಂತರ ಅಧ್ಯಕ್ಷರ ಭಾಷಣವಾದರೆ ಷೇರುದಾರರ ಸಭೆಯ ಉದ್ದೇಶ ಸಫಲವಾಗುತ್ತದೆ ಮತ್ತು ಅರ್ಥಗರ್ಭಿತವಾಗುತ್ತದೆ. | 2. ಸಲಹೆಯನ್ನು ಗಮನಿಸಲಾಗಿದೆ. |
| | | 3. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಸಂಘದ ಸದಸ್ಯರ ಪರವಾಗಿ ಒಟ್ಟು 14 ಪ್ರಕರಣಗಳಲ್ಲಿ ರೂ.12.07 ಲಕ್ಷ ಗಳನ್ನು ಸಂಘವು ಕ್ಲೈಮ್ ಮಾಡಿದ್ದು, ತೀರ್ಮಾನ ಏನಾಗಿರುತ್ತದೆ? | 3. ಜಿಲ್ಲಾ ಗ್ರಾಹಕರ ಆಯೋಗದಲ್ಲಿ ದಾಖಲಿಸಲಾದ ಪ್ರಕರಣದಲ್ಲಿ ಗ್ರಾಹಕರ ಆಯೋಗವು ಸಂಘದ ವಾದಕ್ಕೆ ಮನ್ನಣೆ ನೀಡದೇ, ಸಂಘದ ವಿರುದ್ಧವಾಗಿ ತೀರ್ಪು ನೀಡಿರುತ್ತದೆ. ಜಿಲ್ಲಾ ಗ್ರಾಹಕರ ಆಯೋಗದ ತೀರ್ಪಿನ ವಿರುದ್ಧ ರಾಜ್ಯ ಗ್ರಾಹಕರ ವ್ಯಾಜ್ಯಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮವಿಡಲಾಗಿದೆ. |
| | | 4. ಕಳೆದ ವರ್ಷ ಸಾಗರದ ಷೇರುದಾರರ ಸಭೆಯಲ್ಲಿ ಕೋಲ್ಡ್ ಸ್ಟೋರೇಜ್ ಮಾಡುವುದಾಗಿ ತಿಳಿಸಿದ್ದು, ಇದುವರೆಗೂ ಕಾರ್ಯಗತವಾಗಿಲ್ಲ. ಈ ವರ್ಷ ಷೇರುದಾರರ ಸಭೆಯಲ್ಲಿ ಗೊಬ್ಬರದ ತಯಾರಿಕಾ ಘಟಕವನ್ನು ಮಾಡುವುದಾಗಿ ತಿಳಿಸಿರುತ್ತೀರಿ. ನಿರೀಕ್ಷಿಸಬಹುದೇ? | 4. ಆಡಳಿತ ಮಂಡಲಿಯಲ್ಲಿ ಸಾಧಕ-ಬಾಧಕವನ್ನು ಪರಿಶೀಲಿಸಿ, ಶೀಥಲೀಕರಣ ಘಟಕ ಸ್ಥಾಪಿಸುವ ವಿಚಾರವನ್ನು ಸಧ್ಯಕ್ಕೆ ಮುಂದೂಡಲು ನಿರ್ಣಯಿಸಲಾಗಿದೆ. ಗೊಬ್ಬರ ತಯಾರಿಕಾ ಘಟಕವನ್ನು ಸ್ಥಾಪಿಸುವ ಕುರಿತು ಸಂಘದ ಉಪವಿಧಿ |

| | | | |
|---|---|---|---|
| | | | ತಿದ್ದುಪಡಿಗೆ ಮಂಡಿಸಿದ್ದು, ತಿದ್ದುಪಡಿ ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| | | 5. ಸಾಗರ ಶಾಖೆಯ ಪಕ್ಕದಲ್ಲಿ 5 ಎಕರೆ ಜಾಗವಿದ್ದು, ಸಿಪ್ಪೆಗೋಟು ಸುಲಿಯುವ ಯಂತ್ರವನ್ನು ಸ್ಥಾಪಿಸಿದಲ್ಲಿ ಷೇರುದಾರರಿಗೆ ಅನುಕೂಲವಾಗುತ್ತದೆ. ಸಂಘದಿಂದ ಒಂದಿಷ್ಟು ಜನರಿಗೆ ಕೆಲಸವೂ ಸಿಕ್ಕಂತಾಗುತ್ತದೆ. | 5. ಸಾಗರ ಶಾಖೆಯ ಪಕ್ಕದಲ್ಲಿನ 5 ಎಕರೆ ಜಾಗದಲ್ಲಿ ಸಾವಯವ ಗೊಬ್ಬರ ಉತ್ಪಾದನಾ ಘಟಕ ಪ್ರಾರಂಭಿಸಲು ಯೋಜಿಸಲಾಗಿರುತ್ತದೆ. ಸಿಪ್ಪೆಗೋಟು ಸುಲಿಯುವ ಯಂತ್ರವನ್ನು ಸ್ಥಾಪಿಸುವ ಕುರಿತು ಬೇರೆ ಸ್ಥಳದ ಲಭ್ಯತೆ, ಸಾಧಕ-ಬಾಧಕವನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು. |
| | | 6. ನಿರ್ದೇಶಕರಿಗೆ ನೀಡಿದ ಭತ್ಯೆ ಇತ್ಯಾದಿಗಳನ್ನು ಒಟ್ಟಾಗಿ ಪ್ರಕಟಿಸಿದ್ದು, ಬೇರೆ ಸಂಸ್ಥೆಯಲ್ಲಿದ್ದಂತೆ ಪ್ರತಿಯೊಬ್ಬ ನಿರ್ದೇಶಕರೂ ಪಡೆದ ಭತ್ಯೆಯನ್ನು ಪ್ರತ್ಯೇಕವಾಗಿ ಪ್ರಕಟಿಸುವುದು. | 6. ಲೆಕ್ಕಪರಿಶೋಧನಾ ವರದಿಯ ಅನುಬಂಧದೊಂದಿಗೆ ತಾವು ಕೇಳಿರುವ ಮಾಹಿತಿಯು ಲಭ್ಯವಿರುತ್ತದೆ. ಕಛೇರಿ ಕೆಲಸದ ವೇಳೆಯಲ್ಲಿ ಕಛೇರಿಗೆ ಬೇಟಿ ನೀಡಿ ಪರಿಶೀಲಿಸಬಹುದಾಗಿರುತ್ತದೆ. |
| | | 7 ಸದಸ್ಯರಿಗೆ ಶೇ.15 ರಷ್ಟು ಲಾಭಾಂಶವನ್ನು ನೀಡುವುದು. | 8 ಸಾಧಕ-ಭಾದಕಗಳನ್ನು ಗಮನಿಸಿ ಕ್ರಮವಿಡಲಾಗುವುದು. |
| 3 | **ಶ್ರೀ ಕೆ.ವಿ.ಗೌಡ<br>(ಷೇ.ಕ್ರ.ಸಂ.10316)<br>ಬಿನ್ ಬಂಗಾರಪ್ಪ ಗೌಡ<br>ಕಾಸರಗುಪ್ಪೆ ಗ್ರಾಮ, ಸೊರಬ ತಾಲ್ಲೂಕು** | 1. ಖರೀದಿ ವಿಭಾಗ ನಿಜಕ್ಕೂ ಲಾಭವಿದೆಯೇ? ಅಥವಾ ಸ್ಟಾಕ್ ವ್ಯಾಲ್ಯೂ ಜಾಸ್ತಿ ಮಾಡಿ ಲಾಭ ತೋರಿಸಿದ್ದೀರಾ? | 1. ಸಂಘದ ಆರ್ಥಿಕ ತಃಖ್ತೆಯು ನೈಜ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತಿದೆ. ಸಂಘವು ಅಂತಿಮ ದಾಸ್ತಾನನ್ನು ಭಾರತೀಯ ಲೆಕ್ಕಶಾಸ್ತ್ರ ಮಾನದಂಡ-02ರಲ್ಲಿ ತಿಳಿಸಿದ Weightage Average Cost ವೈಜ್ಞಾನಿಕ ಮಾನದಂಡಗಳ ಮೇಲೆ ಮಾಡಲಾಗಿದ್ದು. ಅಂತಿಮ ದಾಸ್ತಾನಿನ ಮಾರುಕಟ್ಟೆ ಮೌಲ್ಯ ಲೆಕ್ಕಾಚಾರ ಹಾಕಲಾದ ಮೌಲ್ಯಕ್ಕಿಂತ ಹೆಚ್ಚಿರುತ್ತದೆ. |
| | | 2. ಎಲ್ಲಾ ಸಿಬ್ಬಂದಿಗಳಿಗೆ ಸಮವಸ್ತ್ರ ಕೊಡುವ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಾ? | 2. ಈಗಾಗಲೇ ಸಂಘದ ಜವಾನರು, ಅಟೆಂಡರ್, ಹಮಾಲರು, ವಾಹನ ಚಾಲಕರಿಗೆ ಸಮವಸ್ತ್ರ ನೀಡಲಾಗಿದೆ. ಉಳಿದ ಸಿಬ್ಬಂದಿಗಳಿಗೂ ಸಮವಸ್ತ್ರ ನಿಗದಿಪಡಿಸುವ ಕುರಿತು ಪರಿಶೀಲಿಸಲಾಗಿದ್ದು, ಸಂಘಕ್ಕೆ ಅಧಿಕ ಆರ್ಥಿಕ ಹೊರೆ ಎನಿಸುವ ಕಾರಣ ಕೈಬಿಡಲಾಗಿದೆ. |
| | | 3. ಸಾಗರ ಶಾಖೆಯಲ್ಲಿ ಅಡಿಕೆ ಧಾರಣೆ ತುಂಬಾ ಕಡಿಮೆ ಇದ್ದು, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ? | 3. ಮಾಮ್‌ಕೋಸ್‌ನಿಂದ ಖರೀದಿಸಿದ ಸದಸ್ಯರ ಅಡಿಕೆಗೆ ಉತ್ತಮ ಧಾರಣೆ ನೀಡಲಾಗುತ್ತಿದ್ದು, ಖಾಸಗಿ ವರ್ತಕರಿಗೂ ಸಹ ಉತ್ತಮ ಧಾರಣೆ ನೀಡುವಂತೆ ಕೋರಲಾಗಿದೆ. |
| | | 4. ಸೊರಬ ಶಾಖೆಗೆ ವರ್ತಕರು ಬರುತ್ತಾ ಇಲ್ಲ. ಧಾರಣೆ ತುಂಬಾ ಕಡಿಮೆ ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ? | 4. ಸಾಗರ ಮತ್ತು ಶಿವಮೊಗ್ಗದಿಂದ ವರ್ತಕರು ಟೆಂಡರ್‌ಗೆ ಹೋಗುತ್ತಿದ್ದು, ಇನ್ನೂ ಹಲವು ವರ್ತಕರ ಮನವೊಲಿಸಿ, ಟೆಂಡರ್ ಬರೆಯಲು ಕೋರಲಾಗಿದೆ. |
| | | 5. ನೌಕರರಿಗೆ ಅನುಕೂಲವಾಗುವಂತೆ ಹೆಚ್ಚಿನದಾಗಿ ಸ್ಥಳೀಯರಿಗೆ ಕೆಲಸ ನಿರ್ವಹಿಸಲು ಕೊಟ್ಟರೆ ಅವರಿಗೂ ಅನುಕೂಲ ಸಂಸ್ಥೆಗೂ ಅನುಕೂಲವಾಗುವುದಿಲ್ಲವೆ? | 5. ಸಂಘದ ಆಡಳಿತ ಮಂಡಲಿ ಅನುಮೋದಿಸಿದ ವರ್ಗಾವಣಾ ನೀತಿಗನುಗುಣವಾಗಿ ವರ್ಗಾವಣೆ ಮಾಡಲಾಗುತ್ತಿದೆ. ವರ್ಗಾವಣೆಯು ಆಡಳಿತಾತ್ಮಕ |

| | | | |
|---|---|---|---|
| | | | ವಿಷಯವಾಗಿದ್ದು, ಸುಗಮ ಆಡಳಿತ ನಿರ್ವಹಣೆ ದೃಷ್ಟಿಯಿಂದ ಸಿಬ್ಬಂದಿಯನ್ನು ಒಂದು ಶಾಖೆಯಿಂದ ಇನ್ನೊಂದು ಶಾಖೆಗೆ ವರ್ಗಾವಣೆ ಮಾಡುವುದು ಅನಿವಾರ್ಯವಾಗಿರುತ್ತದೆ. ಸ್ಥಳೀಯ ನೌಕರರಿಗೆ ಹತ್ತಿರದ ಶಾಖೆಯಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ನೀಡುವುದರ ಬದಲಾಗಿ ಎಲ್ಲಾ ಶಾಖೆಗಳಲ್ಲಿಯೂ ಕೆಲಸ ನಿರ್ವಹಿಸಲು ಅವಕಾಶ ನೀಡಿದಲ್ಲಿ ಸಿಬ್ಬಂದಿಗಳಲ್ಲಿ ವೃತ್ತಿ ಪರತೆ ಹೆಚ್ಚಿ, ಉತ್ತಮ ಕಾರ್ಯದಕ್ಷತೆಯಿಂದ ಕಾರ್ಯನಿರ್ವಹಿಸಲು ಸಹಕಾರಿಯಾಗಿರುತ್ತದೆ. |
| **4** | **ಶ್ರೀ ಪಿ.ಎನ್.ಶಶಿಧರ (ಷೇ.ಕ್ರ.ಸಂ.18944) ಹರತಾಳು, ಹೊಸನಗರ ತಾಲ್ಲೂಕು** | 1. ಸಂಘದಿಂದಲೇ ಮೈಲುತುತ್ತ ತಯಾರಿಸಿ ಮಾಮ್‌ಕೋಸ್ ಬ್ರಾಂಡ್ನಲ್ಲೇ (ಪಿ.ಸಿ.ಎಂ. ಹಾಗೂ ಚಿಕ್ಕಮಗಳೂರು ಕೆಮಿಕಲ್ಸ್ ಕಂಪನಿಗಳ ತುತ್ತ ಟೆಂಡರ್ ಮೂಲಕ ಖರೀದಿಸಿ ಮಾಮ್‌ಕೋಸ್ ಮೊಹರು ಹಾಕುವ ಬದಲು) ನೇರವಾಗಿ ಷೇರುದಾರರಿಗೆ ಗುಣಮಟ್ಟದ ರಿಯಾಯಿತಿ ದರದ ತುತ್ತ ಒದಗಿಸುವುದು. ಅಲ್ಲದೆ, ಹೊರಗಡೆ ಕೂಡ ಟೆಂಡರ್ ಮೂಲಕ ಮಾರಾಟ ಮಾಡಬಹುದು. | 1. ಸಂಘದಿಂದಲೇ ಮೈಲುತುತ್ತ ತಯಾರಿಸುವುದು ಕಾರ್ಯ ಸಾಧುವಲ್ಲದ ಕಾರಣ ಪ್ರಸ್ತುತ ಸಂಘದಿಂದ ಮೈಲುತುತ್ತ ತಯಾರಿಸುವುದು ಸಾಧ್ಯವಿರುವುದಿಲ್ಲ. |
| | | 2. ಸಂಘದಿಂದಲೇ ಮಾಮ್‌ಕೋಸ್ ಬ್ರಾಂಡೆಡ್ ಸುಪಾರಿ ತಯಾರಿಸಿ ಮಾರುಕಟ್ಟೆ ಮಾಡುವುದು. | 2. ಈ ಕುರಿತು ಸಾಧಕ-ಬಾಧಕಗಳನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು. |
| | | 3. ಹಲವು ದಿನಗಳ ಕಾಲ ಕಾಯ್ದಿರಿಸಬಹುದಾದ ಆರೋಗ್ಯವರ್ಧಕ `ಸಿರಿ ತಾಂಬೂಲ' (ಅಡಿಕೆ, ವೀಳ್ಯದೆಲೆ, ಸುಣ್ಣ, ಏಲಕ್ಕಿ, ಲವಂಗ, ಜಾಯಿಪತ್ರೆ, ಕೇಸರಿ ಹಾಗೂ ಕೊಬ್ಬರಿ ಮಿಶ್ರಣ) ಅಡಿಕೆಯು ನಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುವುದರಿಂದ ಅಡಿಕೆಯ ಉಪ ಉತ್ಪನ್ನಕ್ಕಾಗಿ `ಸಿರಿ ತಾಂಬೂಲ' ವನ್ನು ಸದೃಢ ಸಮಾಜಕ್ಕೆ ಆರೋಗ್ಯವರ್ಧಕವಾಗಿ ಬಳಸುವಂತಾಗಬೇಕು. ಅಲ್ಲದೆ, ಅಡಿಕೆ ಜೊತೆಗೆ ಬೆಳೆಯಬಹುದಾದ ವೀಳ್ಯದೆಲೆಗೆ ನ್ಯಾಯ ಒದಗಿಸಿದಂತಾಗುತ್ತದೆ. | 3. ಈ ಕುರಿತು ಸಂಘದ ಉಪವಿಧಿ ತಿದ್ದುಪಡಿಗೆ ಮಂಡಿಸಿದೆ. ಸಾಧಕ-ಬಾಧಕಗಳನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು |
| | | 4. ರೈತರಿಗೆ ಅಗತ್ಯವಿರುವ ಸಮಗ್ರ ಕೃಷಿ ಉಪಕರಣಗಳ ಮಾರಾಟ ಮಳಿಗೆ ಆರಂಭಿಸುವುದು, ಆಯ್ದ ತಯಾರಕರಿಂದ ನೇರವಾಗಿ ಕೃಷಿ ಉಪಕರಣಗಳನ್ನು ಖರೀದಿಸಿ, ಗುಣಮಟ್ಟದ ಕೃಷಿ ಉಪಕರಣಗಳನ್ನು ಸ್ಪರ್ಧಾತ್ಮಕ ದರದಲ್ಲಿ ದೊರಕುವಂತೆ ಮಾಡುವುದು. | 4. ಈ ಕುರಿತು ಸಂಘದ ಉಪವಿಧಿ ತಿದ್ದುಪಡಿಗೆ ಮಂಡಿಸಿದೆ. ಸಾಧಕ-ಬಾಧಕಗಳನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು. |

| | | | |
|---|---|---|---|
| 5 | **ಶ್ರೀ ಎ.ಆರ್.ಪ್ರಸನ್ನಕುಮಾರ್ (ಷೇ.ಕ್ರ.ಸಂ.12534) ಬಿನ್ ರಾಜಾಚಾರ್ ಬಾಳಗಾರು, ಕುಡುಮಲ್ಲಿಗೆ ಅಂಚೆ ತೀರ್ಥಹಳ್ಳಿ ತಾಲ್ಲೂಕು** | 1. ಮಾಮ್‌ಕೋಸ್‌ನ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳನ್ನು ಮಾತ್ರ ಸೇರಿಸಿ ಉಪವಿಧಿ ತಿದ್ದುಪಡಿಗೆ ಮಂಡಿಸಿರುವುದು ಸರಿಯಷ್ಟೆ. ಆದರೆ, ಸಂಸ್ಥೆಯು ತನ್ನ ವ್ಯವಹಾರವನ್ನು ವಿಸ್ತರಿಸುವ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುವುದರಿಂದ ಕಾರ್ಯವ್ಯಾಪ್ತಿಯನ್ನು `ಕರ್ನಾಟಕ ರಾಜ್ಯದಾದ್ಯಂತ' ವಿಸ್ತರಿಸುವುದು ಸೂಕ್ತ. ಅಲ್ಲದೆ, ರಾಜ್ಯದ ಮೂರು ಕಂದಾಯ ವಿಭಾಗಗಳು ಸಹ ಉದ್ದೇಶಿತ ಕಾರ್ಯ ವ್ಯಾಪ್ತಿಯಲ್ಲಿ ಬಂದಿರುವುದರಿಂದ ಮುಂದಿನ ಆಡಳಿತಾತ್ಮಕ ಹಿತದೃಷ್ಟಿಯಿಂದಲೂ ಕೂಡ `ರಾಜ್ಯ ವ್ಯಾಪ್ತಿ' ಗೆ ಸೇರಿಸುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯವಾಗಿದೆ. | 1. ತಮ್ಮ ಸಲಹೆ ಸೂಕ್ತವಾದುದು, ಉಪವಿಧಿ ತಿದ್ದುಪಡಿಗಾಗಿ ವಿಷಯವನ್ನು 85ನೇ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಿದ್ದು, ಸಾಮಾನ್ಯ ಸಭೆ ನಿರ್ಣಯದಂತೆ ಕ್ರಮವಿಡಲಾಗುವುದು. |
| | | 2. ಇತ್ತೀಚೆಗೆ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2025ಕ್ಕೆ ಗೌ.ರಾಜ್ಯಪಾಲರಿಂದ ಒಪ್ಪಿಗೆ ಪಡೆಯಲಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಪ್ರಕರಣ 12(1)ರ ಅನ್ವಯ ಪ್ರತಿಯೊಂದು ಸಹಕಾರ ಸಂಘವು ಈ ಅಧಿನಿಯಮಕ್ಕೆ ಅಥವಾ ನಿಯಮಗಳಿಗೆ ಕಾಲಕಾಲಕ್ಕೆ ಮಾಡಲ್ಪಟ್ಟ ತಿದ್ದುಪಡಿಗಳಿಗೆ ಅನುಸಾರವಾಗಿ ಸದರಿ ತಿದ್ದುಪಡಿಗಳು ಜಾರಿಗೆ ಬರುವ ದಿನಾಂಕದಿಂದ 90 ದಿನಗಳೊಳಗೆ ತನ್ನ ಉಪವಿಧಿಗಳಿಗೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡತಕ್ಕದ್ದಾಗಿರುತ್ತದೆ. ಮಾಮ್‌ಕೋಸ್ ಸಂಸ್ಥೆಯು ಈಗಾಗಲೇ ಈ ಸಭೆಯಲ್ಲಿ ಹಲವು ಉಪವಿಧಿ ತಿದ್ದುಪಡಿಗೆ ಮಂಡಿಸಿರುವುದರಿಂದ ಮೇಲ್ಕಂಡಂತೆ ಸರ್ಕಾರವು ತಿದ್ದುಪಡಿಗೆ ಸೂಚಿಸಿರುವ ಅಂಶಗಳಿಗೆ ಪುನಃ ವಿಶೇಷ ಮಹಾಸಭೆ ಕರೆದು ಮಂಡಿಸುವುದಕ್ಕಿಂತ ಈ ಸಭೆಯಲ್ಲಿಯೇ ಅಗತ್ಯ ತಿದ್ದುಪಡಿಗಳನ್ನು ಸೇರಿಸಿಕೊಂಡು ಉಪವಿಧಿ ತಿದ್ದುಪಡಿ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಇದರಿಂದ ಸಂಸ್ಥೆಗೆ ವೆಚ್ಚವೂ ಕಡಿಮೆಯಾಗುತ್ತದೆ. | 2. ಇತ್ತೀಚೆಗೆ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2025ಕ್ಕೆ ಅನುಗುಣವಾಗಿ ಇನ್ನೂ ಹಲವು ಪ್ರಾವಧಾನಗಳಿಗೆ ಸರ್ಕಾರದಿಂದ ನಿಯಮ ರಚನೆಯಾಗಿರುವುದಿಲ್ಲ. ನಿಯಮ ರಚನೆಯ ನಂತರ ಸಂಘದ ಉಪವಿಧಿಗೆ ಅಗತ್ಯವಾಗಿರುವ ತಿದ್ದುಪಡಿಗಳನ್ನು ಮಾಡಲು ಕ್ರಮವಿಡಲಾಗುವುದು. |
| | | 3. ಈ ಬಾರಿ ಆಡಳಿತ ಮಂಡಲಿಯವರು ಸಹಕಾರ ಭಾರತಿ ವತಿಯಿಂದ ಷೇರುದಾರರ ಸಭೆಯನ್ನು ನಡೆಸಿದ್ದು, ಹೆಚ್ಚಿನ ಸದಸ್ಯರು ಇದರಲ್ಲಿ ಭಾಗವಹಿಸಿರುವುದು ಕಂಡು ಬಂದಿರುವುದಿಲ್ಲ. ಮಾಮ್‌ಕೋಸ್ ವತಿಯಿಂದಲೇ ಇದನ್ನು ನಡೆಸಿದ್ದರೆ, ಅಧಿಕ ಪ್ರಮಾಣದಲ್ಲಿ ಸದಸ್ಯರು ಭಾಗವಹಿಸಲು ಮತ್ತು ಸಂಸ್ಥೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಅವಕಾಶವಾಗುತ್ತಿತ್ತು. ನಮ್ಮ ಸಹಕಾರ ಸಂಘಗಳ ಧ್ಯೇಯೋದ್ದೇಶಗಳಲ್ಲಿಯೂ ಕೂಡ ಸದಸ್ಯರಿಗೆ ಶಿಕ್ಷಣ ನೀಡುವುದು, ಕಾಲಕಾಲಕ್ಕೆ ಮಾಹಿತಿ ನೀಡುವುದು ಮುಂತಾದವುಗಳು ಸಂಸ್ಥೆಯ ಜವಾಬ್ದಾರಿ ಮತ್ತು | 3. ಉಪವಿಧಿ ತಿದ್ದುಪಡಿಗೆ ಮಂಡಿಸಲಾಗಿದ್ದು, ಉಪವಿಧಿ ತಿದ್ದುಪಡಿಯ ನಂತರ ಸಂಘದ ವತಿಯಿಂದಲೇ ಶೇರುದಾರರ ಸಭೆಯನ್ನು ನಡೆಸಲು ಕ್ರಮವಿಡಲಾಗುವುದು. |

| | | | |
|---|---|---|---|
| | | ಹೊಣೆಗಾರಿಕೆಯಾಗಿರುತ್ತದೆ. ಈ ನಿಟ್ಟಿನಲ್ಲಿ ಮಾಮ್‌ಕೋಸ್ ವತಿಯಿಂದ ಪ್ರತಿ ಸಾಲಿನಲ್ಲಿಯೂ ಕೂಡ ಷೇರುದಾರರ ಸಮಾಲೋಚನಾ ಸಭೆಯನ್ನು ನಡೆಸಬೇಕು ಹಾಗೂ ಇದರ ವೆಚ್ಚವನ್ನು ಸಂಸ್ಥೆಯಿಂದಲೇ ಭರಿಸಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿರುತ್ತದೆ. | |
| 6 | **ಶ್ರೀ ಬಿ.ಆರ್.ಗಣಪತಿ (ಷೇ.ಕ್ರ.ಸಂ.7406) ಬಿನ್ ರಾಮಕೃಷ್ಣ, ಬೆಳೆಯೂರು ಬೇಳೂರು ಅಂಚೆ ಸಾಗರ ತಾಲ್ಲೂಕು** | 1. ಬೆಳೆ ಸಾಲ ಪಡೆಯುವ ರೈತರು ಪ್ರತಿ ವರ್ಷ ವಂಶವೃಕ್ಷ ಕೊಡಬೇಕಾಗಿರುವುದರಿಂದ ಹೆಚ್ಚಿಗೆ ಖರ್ಚು ಮತ್ತು ವೃಥಾ ತಿರುಗಾಟ ಬರುತ್ತಿರುವ ಕುರಿತು. ಈ ವ್ಯವಸ್ಥೆ ಉಳಿದ ಯಾವುದೇ ಸಹಕಾರ ಸಂಘಗಳಲ್ಲಿಯೂ ಇಲ್ಲದಿರುವುದರಿಂದ ಇದನ್ನು ರದ್ದುಗೊಳಿಸುವ ಬಗ್ಗೆ. | 1. ಬೆಳೆ ಸಾಲ ಪಡೆದ ಬಹಳಷ್ಟು ಪ್ರಕರಣಗಳಲ್ಲಿ ಸಕಾಲದಲ್ಲಿ ಸಾಲ ಮರು ಪಾವತಿಯಾಗದೆ ಸಹಕಾರ ಸಂಘಗಳ ಅಧಿನಿಯಮ 1959, ಕಲಂ 70ರ ಪ್ರಕಾರ ದಾವಾ ದಾಖಲು ಮಾಡಬೇಕಾಗುತ್ತದೆ. ಮೃತ ಸದಸ್ಯರ ದಾವಾ ಪ್ರಕರಣದಲ್ಲಿ ಅವರ ಕುಟುಂಬದ ವಾರಸುದಾರರ ವಿವರ ಅತ್ಯಾವಶ್ಯಕವಿರುವುದರಿಂದ ವಂಶವೃಕ್ಷ ಕಡ್ಡಾಯವಾಗಿ ಬೇಕಾಗಿರುತ್ತದೆ. ಈ ಕುರಿತು ಸಂಘದ ಕಾನೂನು ಸಲಹೆಗಾರರರಿಂದ ಕಾನೂನು ಸಲಹೆ ಪಡೆದುಕೊಂಡಿದ್ದು, ಸದರಿಯವರು ಕಡ್ಡಾಯವಾಗಿ ಪ್ರತಿ ವರ್ಷ ವಂಶವೃಕ್ಷ ಪಡೆದುಕೊಳ್ಳಲೇಬೇಕೆಂದು ತಿಳಿಸಿರು ವುದರಿಂದ ವಂಶವೃಕ್ಷ ಪಡೆದುಕೊಳ್ಳಲಾಗುತ್ತಿದೆ. ಆದಾಗ್ಯೂ ರೈತ ಸದಸ್ಯರಿಗೆ ಅನುಕೂಲ ಕಲ್ಪಿಸುವ ದೃಷ್ಠಿಯಿಂದ ಪ್ರಮಾಣ ಪತ್ರದ ಮೂಲಕವೂ ಪಡೆದುಕೊಳ್ಳಲಾಗುತ್ತಿದೆ. |
| | | 2. ಅಂತ್ಯ ಸಂಸ್ಕಾರಕ್ಕೆ ರೂ.5,000.00 ಕೊಡುತ್ತಿದ್ದು, ಕಾಲಕ್ಕೆ ತಕ್ಕಂತೆ ಪರಿಷ್ಕರಿಸುವ ಕುರಿತು. | 2. ಸಂಘದಲ್ಲಿನ ನಿಧಿ ಲಭ್ಯತೆ ಆಧರಿಸಿ ಸೂಕ್ತ ಕ್ರಮವಿಡಲಾಗುವುದು. |
| | | 3. ಸರ್ಕಾರ ಪ್ರತಿ ವರ್ಷ ಪಹಣಿಯಲ್ಲಿ ಬೆಳೆ ನಮೂದು ಮಾಡುತ್ತಿದ್ದು, ನನ್ನ ತೋಟ ನೂರಾರು ವರ್ಷ ಹಳೆಯದಾಗಿದ್ದು, ಒಂದು ವರ್ಷ ನೀಲಗಿರಿ, ಮತ್ತೊಂದು ವರ್ಷ ಅಕೇಶಿಯಾ ಈ ರೀತಿ ತಪ್ಪಾಗಿ ನಮೂದಿಸಿದೆ. ಇದನ್ನು ಸರಿಪಡಿಸಿಕೊಳ್ಳಲು ನಮಗೆ ವೃಥಾ ತಿರುಗಾಟ ಮತ್ತು ಅನಾವಶ್ಯಕ ಖರ್ಚು ಬರುತ್ತದೆ. ತಪ್ಪಾಗಿ ಬೆಳೆ ನಮೂದು ಮಾಡಿರುವ ಸರ್ಕಾರಿ ನೌಕರರಿಗೆ ಯಾವುದೇ ಶಿಕ್ಷೆ ಇರುವುದಿಲ್ಲ. ಜೊತೆಗೆ ನಮಗೆ ಸಾಲ ಪಡೆಯಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು | 3. ಇದು ಹಲವು ರೈತರ ಜ್ವಲಂತ ಸಮಸ್ಯೆಯಾಗಿದ್ದು, ಈ ಸಮಸ್ಯೆಯ ಕುರಿತು ಮಾನ್ಯ ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳ ಗಮನ ಸೆಳೆಯಲಾಗುವುದು. |

| | | | |
|---|---|---|---|
| | | ಸಂಸ್ಥೆಯ ಮಾನ್ಯ ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಪಹಣಿ ಪ್ರತಿ ಲಗತ್ತಿಸಿರುತ್ತೇನೆ. | |
| 7 | **ಶ್ರೀ ಟಿ.ಸುದರ್ಶನ ಕುಮಾರ್ (ಷೇ.ಕ್ರ.ಸಂ.15829) ಕೋಡನಕಟ್ಟೆ, ಸೊರಬ ತಾಲ್ಲೂಕು** | ಮಾಮ್‌ಕೋಸ್ ಸಂಸ್ಥೆಯು ಶಿವಮೊಗ್ಗ ಮತ್ತು ತೀರ್ಥಹಳ್ಳಿಯ ಕೆಲವು ಖಾಸಗಿ ಆಸ್ಪತ್ರೆಯ ಜೊತೆ ಸಂಯೋಜನೆಗೊಂಡು ಸದಸ್ಯರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುತ್ತಿರುವುದು ಸ್ವಾಗತಾರ್ಹ. ಅದೇ ರೀತಿ ಸಾಗರದಲ್ಲಿ ಖಾಸಗಿ ಆಸ್ಪತ್ರೆ ಜೊತೆ ಒಪ್ಪಂದ ಮಾಡಿಕೊಂಡು ರಿಯಾಯಿತಿ ದರದಲ್ಲಿ ಚಿಕಿತ್ಸೆ ಒದಗಿಸಬೇಕು. ಇದರಿಂದ ಸಾಗರ, ಸೊರಬ ಪ್ರಾಂತ್ಯದ ಸದಸ್ಯರಿಗೆ ಅನುಕೂಲವಾಗುತ್ತದೆ. | ತಮ್ಮ ಸಲಹೆ ಉತ್ತಮವಾದುದು. ಸಾಗರ, ಸೊರಬ ಭಾಗದ ಆಸ್ಪತ್ರೆಗಳನ್ನು ಸಂಪರ್ಕಿಸಿಕೊಂಡು ಪರಸ್ಪರ ತಿಳುವಳಿಕೆ ಒಪ್ಪಂದ ಮಾಡಿಕೊಂಡು ಸದಸ್ಯರಿಗೆ ಅನುಕೂಲ ಕಲ್ಪಿಸಲು ಪ್ರಯತ್ನಿಸಲಾಗುವುದು. |
| 8 | **ಶ್ರೀ ಜಯರಾಮ್ (ಗೋಂದಿ) (ಷೇ.ಕ್ರ.ಸಂ.31179) ಗೋಂದಿ ಗ್ರಾಮ, ಹಿರಿಯೂರು ಭದ್ರಾವತಿ** | ದಿನಾಂಕ 09.09.2025ರಂದು ನಡೆಯುವ ಸಂಘದ ವಾರ್ಷಿಕ ಮಹಾಸಭೆಯ ಬೈಲಾ ತಿದ್ದುಪಡಿ ವಿಷಯ ಪುಟ ಸಂಖ್ಯೆ:62ರಲ್ಲಿ ನಮೂದಿಸಿದ ಕ್ರಮ ಸಂಖ್ಯೆ:5(33) ಹೊಸದಾಗಿ ಸೇರ್ಪಡೆಗೊಳಿಸುವ ವಿಷಯದಲ್ಲಿ ಸಹಕಾರಿ ಸಂಸ್ಥೆಯಲ್ಲಿ ಎಲ್ಲಾ ಸಹಕಾರಿ ಸದಸ್ಯರಿಗೆ ಅನಕೂಲ ಮಾಡಿಕೊಡಲು ನೀವು ತಾಲ್ಲೂಕು ಮಟ್ಟದ ಪೂರ್ವಭಾವಿ ವಿಭಾಗ ಸಭೆ ಕರೆಯುತ್ತಿರುವುದು ಸರಿಯಷ್ಟೆ, ಈ ಸಭೆಯನ್ನು ಕರೆಯುವುದು ಉತ್ತಮ ಬೆಳವಣಿಗೆ. ಸರ್ವ ಸದಸ್ಯರ ಸಭೆಯಲ್ಲಿ ಅತೀ ಹೆಚ್ಚು 4-6 ಸಾವಿರ ಜನ ಸೇರಿ ಚರ್ಚಿಸಲು (ಸಮಸ್ಯೆ) ತಿಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನೀವು ತಾಲ್ಲೂಕುವಾರು ಸಭೆ ನಡೆಸಿ ಸದಸ್ಯರ ಸಮಸ್ಯೆಯನ್ನು ಆಲಿಸುವುದು ಒಳ್ಳೆಯ ಉದ್ದೇಶ. ನೀವು ಈ ಭಾರಿ ಸಹಕಾರ ಭಾರತಿ ಎಂಬ ಸಂಸ್ಥೆಯಡಿಯಲ್ಲಿ ಸಭೆ ನಡೆಸಿರುತ್ತೀರಿ. ನಮ್ಮ ಸಂಸ್ಥೆಯು ರೈತರ ಅಭಿವೃದ್ಧಿಗಾಗಿ ಇರುವ ಸಂಸ್ಥೆಯಾಗಿದ್ದು, ನಮ್ಮ ಸಹಕಾರ ಸಂಸ್ಥೆಯಡಿಯಲ್ಲಿ ವಿಭಾಗೀಯ ಸಭೆಯನ್ನು ಮಾಡಬೇಕಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ, ಇದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇರುತ್ತದೆ. ಆದ್ದರಿಂದ ಈ ವಿಷಯವನ್ನು ಮಹಾಸಭೆಯಲ್ಲಿ ನಮ್ಮ ಅಭಿಪ್ರಾಯವನ್ನು ಪರಿಗಣಿಸಬೇಕಾಗಿ ವಿನಂತಿ. | ಉಪವಿಧಿ ತಿದ್ದುಪಡಿಗೆ ಮಂಡಿಸಲಾಗಿದ್ದು, ಉಪವಿಧಿ ತಿದ್ದುಪಡಿಯ ನಂತರ ಸಂಘದ ವತಿಯಿಂದಲೇ ಶೇರುದಾರರ ಸಭೆಯನ್ನು ನಡೆಸಲು ಕ್ರಮವಿಡಲಾಗುವುದು. |

ಸದಸ್ಯರೊಬ್ಬರು ಶಿವಮೊಗ್ಗದಲ್ಲಿ ಸಿಪ್ಪೆಗೋಟು ಖರೀದಿ ಕೇಂದ್ರವನ್ನು ಪ್ರಾರಂಭಿಸುವಂತೆ ತಿಳಿಸಿದರು.

ಶ್ರೀ ಗಣಪತಿ ಬಿ ಆರ್ ಇವರು ಸಂಘದ ಸದಸ್ಯರಿಗೆ ಬೆಳೆಸಾಲ ನೀಡುವಂತಹ ಸಂದರ್ಭದಲ್ಲಿ ವಂಶವೃಕ್ಷವನ್ನು ಪಡೆದುಕೊಳ್ಳುತ್ತಿರುವುದು ಸದಸ್ಯರಿಗೆ ತೊಂದರೆಯಾಗುತ್ತಿದೆ. ಬೇರೆ ಯಾವುದೇ ಸಹಕಾರ ಸಂಘಗಳಲ್ಲಿ ಈ ಪದ್ಧತಿ ಇರುವುದಿಲ್ಲ ಆದರೆ ಮಾಮ್‌ಕೋಸ್‌ನಲ್ಲಿ ಮಾತ್ರ ವಂಶವೃಕ್ಷವನ್ನು ಕೇಳಲಾಗುತ್ತಿದೆ ಎಂದು ಹೇಳಿದರು. ಇದಕ್ಕೆ ಮಾನ್ಯ ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಉತ್ತರಿಸಿ, ಸದಸ್ಯರ ಉತ್ತರಾಧಿಕಾರಿ ಅಥವಾ ವಾರಸುದಾರರನ್ನು ಗುರುತಿಸಲು ಹಾಗೂ ಸಂವಹನದ ದೃಷ್ಠಿಯಿಂದ ಸದಸ್ಯರಿಂದ ಸ್ವಯಂ ದೃಢೀಕೃತ ವಂಶವೃಕ್ಷವನ್ನು ಪಡೆದುಕೊಳ್ಳಲಾಗುತ್ತಿದೆ. ಸಂಘದಲ್ಲಿ ಈಗಾಗಲೇ ಸುಸ್ತಿದಾರರಾಗಿರುವಂತಹ ಹಲವಾರು ಸದಸ್ಯರ ಪ್ರಕರಣಗಳಲ್ಲಿ ವಾರಸುದಾರರನ್ನು ಗುರುತಿಸಲು ಹಾಗೂ ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ ಆದಕಾರಣ ಈಗ ಸರಳವಾದಂತಹ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದರು. ಈ ಬಗೆಗೆ ಸದಸ್ಯರೊಬ್ಬರು ವಂಶವೃಕ್ಷವನ್ನು ಪ್ರತಿ ವರ್ಷ ಪಡೆಯುವ ಬದಲು ಮೂರು ವರ್ಷಗಳಿಗೊಮ್ಮೆ ಪಡೆಯುವ ಕುರಿತು ಪರಿಶೀಲಿಸುವಂತೆ ಸಲಹೆ ನೀಡಿದರು.

**ವಿಷಯ 30 : ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರ ವಿಚಾರಗಳು.**

ಶ್ರೀ ದಿನೇಶ್ ಕೆ ಸಿ ಇವರು ಸಂಘದಿಂದ ನೀಡಲಾಗುತ್ತಿರುವ ಅಂತ್ಯ ಸಂಸ್ಕಾರದ ಮೊತ್ತವನ್ನು ರೂ.5,000.00 ದಿಂದ ರೂ.10,000.00ಕ್ಕೆ ಹೆಚ್ಚಿಸುವಂತೆ ತಿಳಿಸಿದರು. ಹಾಗೂ ಎಲೆಚುಕ್ಕಿ ರೋಗದಿಂದಾಗಿ ರೈತರು ಸಾಕಷ್ಟು ನಷ್ಟ ಅನುಭವಿಸಿದ್ದು ಈ ಬಗೆಗೆ ರೈತರಿಗೆ ಪರಿಹಾರ ನೀಡುವಂತೆ ಸಂಘದಿಂದ ಸರ್ಕಾರಕ್ಕೆ  ಮನವಿ ಸಲ್ಲಿಸಬೇಕು ಹಾಗೂ ತೋಟಗಳಿಗೆ ವಿಮೆ ಮಾಡಿಸುವ ಕುರಿತು ವಿಮಾ ಕಂಪನಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀ ಗಣಪತಿ ಬಿ ಆರ್ ಇವರು ಕಂದಾಯ ಇಲಾಖೆಯಿಂದ ಪಹಣಿಯಲ್ಲಿ ಬೆಳೆ ನಮೂದಿಸುವಾಗ ಅಡಿಕೆ ಬದಲಾಗಿ ಬೇರೆ ಬೇರೆ ಬೆಳೆಗಳನ್ನು ನಮೂದಿಸುತ್ತಿದ್ದು ಇದರಿಂದಾಗಿ ರೈತರು ಬೆಳೆಸಾಲ ಪಡೆಯಲು ಸಾಧ್ಯವಾಗದೇ ಕಛೇರಿಗಳಿಗೆ ಅಲೆದಾಡುವಂತಾಗುತ್ತಿದೆ. ಆದ್ದರಿಂದ ಈ ಬಗೆಗೆ ರೈತರ ಜಮೀನುಗಳಿಗೆ ಖುದ್ದು ಭೇಟಿ ನೀಡಿ ಪಹಣಿಯಲ್ಲಿ ಸರಿಯಾಗಿ ಬೆಳೆ ನಮೂದಿಸುವ ಕುರಿತು ಇಲಾಖೆಯ ನೌಕರರಿಗೆ ಆದೇಶಿಸುವಂತೆ  ಮಾನ್ಯ ಜಿಲ್ಲಾಧಿಕಾರಿಗಳಿಗೆ ವಿನಂತಿಸಿದರು. ಈ ಬಗೆಗೆ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯವರೊಂದಿಗೆ ಮಾತನಾಡುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಶ್ರೀ ಕೆ ವಿ ಗೌಡ ಇವರು ಸದಸ್ಯರಿಗೆ ಸಾಲದ ಮೇಲೆ ವಿಧಿಸುತ್ತಿರುವ ಬಡ್ಡಿ ದರವನ್ನು ಕಡಿಮೆ ಮಾಡುವಂತೆ ತಿಳಿಸಿದಾಗ ಮಾನ್ಯ ಉಪಾಧ್ಯಕ್ಷರು ಈ ಬಗೆಗೆ ಆಡಳಿತ ಮಂಡಲಿ ಸಭೆಯಲ್ಲಿ ಪರಿಶೀಲಿಸಿ ತೀರ್ಮಾನಿಸುವುದಾಗಿ ತಿಳಿಸಿದರು.

ಶ್ರೀ ಕೃಷ್ಣಮೂರ್ತಿ ಇವರು ಮಾಮ್‌ಕೋಸ್ ಸಂಸ್ಥೆಯಿಂದ ಅಡಿಕೆಯ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸುವ ಯೋಜನೆಗಳನ್ನು ಪ್ರಾರಂಭಿಸುವ ಬಗೆಗೆ ಸಲಹೆ ನೀಡಿದರು.

ಸದಸ್ಯರೊಬ್ಬರು ಮಲೆನಾಡು ಭಾಗದಲ್ಲಿ ಮಂಗ, ಕಾಡುಕೋಣ ಮುಂತಾದ ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆಗಳನ್ನು ರಕ್ಷಿಸಿಕೊಳ್ಳುವುದು ಕಷ್ಟವಾಗಿದ್ದು ಇದಕ್ಕೆ ಬಂದೂಕು ಪರವಾನಿಗೆ ಕೊಡಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ವಿನಂತಿಸಿದಾಗ ಇದಕ್ಕೆ ಉತ್ತರಿಸಿದ ಮಾನ್ಯ ಜಿಲ್ಲಾಧಿಕಾರಿಗಳು ಸಮರ್ಪಕವಾದ ಕಾರಣಗಳೊಂದಿಗೆ ಮನವಿ ಸಲ್ಲಿಸಿದರೆ ಬಂದೂಕು ಪರವಾನಿಗೆ ನೀಡಲಾಗುತ್ತದೆ ಎಂದು ತಿಳಿಸಿದರು.

ಶ್ರೀ ರಘು ಜಿ ಎಂ, ಇವರು ಕೃಷಿ ವಿಶ್ವವಿದ್ಯಾನಿಯದ ಜೊತೆ ತೋಟಗಾರ್ಸ್ ಹಾಗೂ ಕ್ಯಾಂಪ್ಕೋದಂತಹ ಸಂಸ್ಥೆಗಳ ಸಹಯೋಗದೊಂದಿಗೆ ಅಡಿಕೆ ಬೆಳೆ ಕುರಿತಾದ ಸಂಶೋಧನೆ ನಡೆಸಬೇಕು ಹಾಗೂ

ಯಶಸ್ವಿನಿ ಯೋಜನೆಯ ಜೊತೆಗೇ ಈ ಹಿಂದೆ ಇದ್ದಂತಹ ಆರೋಗ್ಯ ವಿಮಾ ಯೋಜನೆಯನ್ನು ಪುನಃ ಆರಂಭಿಸಬೇಕು ಎಂದು ಸಲಹೆ ನೀಡಿದರು.

ಶ್ರೀ ಸುಬ್ರಹ್ಮಣ್ಯ ಹೆಚ್ ಟಿ ಇವರು ಈಗಾಗಲೇ ಶ್ರೀ ಶಶಿಧರ ಪಿ ಎನ್ ಇವರು ಪ್ರಸ್ತಾಪಿಸಿರುವ ಸಿರಿತಾಂಬೂಲ ಯೋಜನೆಯನ್ನು ಮಾಮ್‌ಕೋಸ್ ಸಂಸ್ಥೆ ಆದಷ್ಟು ಬೇಗ ಪ್ರಾರಂಭಿಸಬೇಕು ಎಂದು ಸಲಹೆ ನೀಡಿದರು.

**ವಂದನಾರ್ಪಣೆ**

ಸಂಘದ ನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ಕೆ ವಿ ಇವರು ವಂದನಾರ್ಪಣೆಯಲ್ಲಿ – ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಿಗೆ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸೂಕ್ತ ಸಲಹೆಗಳನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸಂಘದ ಸರ್ವ ಸದಸ್ಯರಿಗೆ, ಸಂಘದ ಮಾನ್ಯ ಉಪಾಧ್ಯಕ್ಷರಿಗೆ, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಸಂಘದ ಲೆಕ್ಕಪರಿಶೋಧನೆ ಮಾಡಿದ ಸನ್ನದು ಲೆಕ್ಕಪರಿಶೋಧಕರಿಗೆ, ಸಂಘದ ಮಾಜಿ ಉಪಾಧ್ಯಕ್ಷರು, ನಿರ್ದೇಶಕರಿಗೆ, ಸಂಘದ ಸಿಬ್ಬಂದಿಗಳಿಗೆ, ಸ್ಥಳಾವಕಾಶವನ್ನು ಮಾಡಿಕೊಟ್ಟಂತಹ ಪ್ರೇರಣಾ ಸಂಸ್ಥೆಯವರಿಗೆ, ಅಂಚೆ ಇಲಾಖೆಯವರಿಗೆ, ಯಂತ್ರಗಳ ಪ್ರದರ್ಶನದ ವ್ಯವಸ್ಥೆ ಮಾಡಿದವರಿಗೆ, ಶಾಮಿಯಾನ-ಮೈಕ್ ವ್ಯವಸ್ಥೆ ಮಾಡಿದವರಿಗೆ, ಉಟೋಪಚಾರದ ವ್ಯವಸ್ಥೆ ಮಾಡಿದವರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
ಗುರುದತ್ತ ಹೆಗಡೆ, ಐ.ಎ.ಎಸ್
ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ
ಸಂಘದ ಅಧ್ಯಕ್ಷರು

## ದಿನಾಂಕ 20 ಸೆಪ್ಟಂಬರ್ 2025ರಂದು ನಡೆದ ಸಂಘದ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮಗಳ ವಿವರ

1. 2025-26ನೇ ಸಾಲಿನಲ್ಲಿ ಗುಂಪು ವಿಮಾ ಯೋಜನೆ ಅಡಿ 15501 ಜನ ಸದಸ್ಯರು ಮತ್ತು 15557 ಕೃಷಿ ಕೂಲಿ ಕಾರ್ಮಿಕರು, 344 ಕುಟುಂಬದ ಸದಸ್ಯರು ಸೇರಿದಂತೆ ಒಟ್ಟು 31402 ಜನ ನೋಂದಾಯಿತರಾಗಿದ್ದು, ಈ ಸಾಲಿನಲ್ಲಿ 76 ಪ್ರಕರಣಗಳಲ್ಲಿ ರೂ. 77,78,224.00 ಕ್ಲೈಂ ಸೌಲಭ್ಯ ದೊರೆತಿರುತ್ತದೆ.

2. ಸಂಘದ ಸದಸ್ಯರಿಗೆ ಸ್ಪರ್ಧಾತ್ಮಕ ದರದಲ್ಲಿ **`ಮಾಮ್‌ಕೋಸ್ ಸಸ್ಯಚೈತನ್ಯ'** ಮತ್ತು **`ಮಾಮ್‌ಕೋಸ್ ವಸುಧಾ ಸಿರಿ'** ಸಾವಯವ ಗೊಬ್ಬರವನ್ನು, ಅಗ್ರಿಲೈಮ್, ಡೋಲೋಮೈಟ್ ಸುಣ್ಣವನ್ನು ಮಾರಾಟ ಮಾಡಲಾಗುತ್ತಿದೆ. ಹಾಗೆಯೇ, ಉತ್ತಮ ಗುಣಮಟ್ಟದ ಬೇವಿನ ಪುಡಿಯನ್ನು ಶ್ರೀ ಕಲ್ಲೇಶ್ವರ ಕಾಯರ್ ಇಂಡಸ್ಟ್ರೀಸ್ ಅಂಡ್ ಆರ್ಗ್ಯಾನಿಕ್ ಮ್ಯಾನ್ಯುರ್, ಅಜ್ಜಂಪುರ ಮತ್ತು ಶ್ರೀ ಕ್ಷಿತಿಜ ಕ್ರಾಪ್ ಸೈನ್ಸ್, ಬೆಂಗಳೂರು ಇವರಿಂದ ಖರೀದಿಸಿ, ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

3. 2025-26ನೇ ಸಾಲಿನಲ್ಲಿ ಟೆಂಡರ್ ಮೂಲಕ ಶಾಖೆಗಳಲ್ಲಿ 56,971.454 ಕ್ವಿಂಟಾಲ್, ನೇರ ಖರೀದಿ ಮೂಲಕ 34,049.343 ಕ್ವಿಂಟಾಲ್ ಹಾಗೂ ಬೇರೆ ಸಹಕಾರ ಸಂಘಗಳಲ್ಲಿ 38,995.502 ಕ್ವಿಂಟಾಲ್ ಅಡಿಕೆಯನ್ನು ಖರೀದಿಸಿದ್ದು, ಒಟ್ಟು 1,30,016.299 ಕ್ವಿಂಟಾಲ್ ಅಡಿಕೆ ಖರೀದಿ ಆಗಿರುತ್ತದೆ ಮತ್ತು 1,30,216.230 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡಲಾಗಿರುತ್ತದೆ. ಹಾಗೆಯೇ, ಒಟ್ಟು 550.342 ಕ್ವಿಂಟಾಲ್ ಕಾಳುಮೆಣಸನ್ನು ಖರೀದಿಸಿದ್ದು, 456.530 ಕ್ವಿಂಟಾಲ್ ಕಾಳುಮೆಣಸನ್ನು ಮಾರಾಟ ಮಾಡಲಾಗಿರುತ್ತದೆ.

4. ಈ ಸಾಲಿನಲ್ಲಿ ಶಿವಮೊಗ್ಗದ ಆದರ್ಶ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಆಶೀರ್ವಾದ ಕಣ್ಣಿನ ಆಸ್ಪತ್ರೆ, ವಾಸನ್ ಐ ಕೇರ್, ಪ್ರಸಾದ್ ನೇತ್ರಾಲಯ (ಶಿವಮೊಗ್ಗ ಮತ್ತು ತೀರ್ಥಹಳ್ಳಿ), ಸನ್ ಸ್ಪೆಷಾಲಿಟಿ ಆಸ್ಪತ್ರೆ (ಬೋನ್ & ಸ್ಪೈನ್), ತೀರ್ಥಹಳ್ಳಿ ತಾಲ್ಲೂಕು ಆರಗದಲ್ಲಿರುವ ಸಂಜೀವಿನಿ ಕ್ಯಾನ್ಸರ್ ಸೇವಾ ಟ್ರಸ್ಟ್ ಮತ್ತು ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ, ಆಸ್ಪತ್ರೆಯವರೊಂದಿಗೆ ರಿಯಾಯಿತಿ ದರದ ಚಿಕಿತ್ಸೆಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಸಾಗರದ ಭಾಗವತ ಆಸ್ಪತ್ರೆಯವರೊಂದಿಗೆ ಮಾತುಕತೆ ನಡೆದು ಒಡಂಬಡಿಕೆ ಮಾಡಿಕೊಳ್ಳುವ ಹಂತದಲ್ಲಿದೆ.

5. ಶೃಂಗೇರಿಯಲ್ಲಿರುವ ಸಂಘದ ನಿವೇಶನದಲ್ಲಿ ಗೋದಾಮು ಮತ್ತು ಶಿಕಾರಿಪುರ ಹಾಗೂ ಸೊರಬದಲ್ಲಿ ಶಾಖಾ ಕಟ್ಟಡವನ್ನು ನಿರ್ಮಾಣ ಮಾಡುವ ಕುರಿತು ಕ್ರಮವಿಡಲಾಗುತ್ತಿದೆ.

6. ಸಂಘದ ವತಿಯಿಂದ ಸೂಪರ್ ಮಾರ್ಕೆಟ್ ತೆರೆಯುವ ಕುರಿತು ಸೂಕ್ತ ಸ್ಥಳ ಮತ್ತು ಸಾಧಕ-ಬಾಧಕಗಳನ್ನು ಪರಿಶೀಲಿಸಿ ಕ್ರಮವಿಡಲಾಗುವುದು.

7. ಗುಂಪುವಿಮಾ ಯೋಜನೆ ಕುರಿತು ಕರಪತ್ರದ ಮೂಲಕ, ಸಂಘದ ಮೊಬೈಲ್ ಆಪ್ ಮೂಲಕ, ಮತ್ತು ಶಾಖೆಗೆ ಬರುವ ಸದಸ್ಯರಿಗೆ ಮಾಹಿತಿ ನೀಡುವ ಮೂಲಕ ಹೆಚ್ಚಿನ ಪ್ರಚಾರ ನೀಡಲಾಗುತ್ತಿದೆ.

8. ದಿನಾಂಕ 31 ಮಾರ್ಚ್ 2025ಕ್ಕೆ ಇದ್ದಂತೆ ಸಂಘದಲ್ಲಿ ಸತತ 5 ವರ್ಷಗಳಿಂದ (2020-21 ರಿಂದ 2024-25ನೇ ಸಾಲಿನವರೆಗೆ) ಅಡಿಕೆ ಹಾಕಿ ವ್ಯವಹರಿಸದೇ ಇರುವ 5048 ಸದಸ್ಯರಿಗೆ ನೋಂದಣಿ ಅಂಚೆ ಮೂಲಕ ನೋಟಿಸ್ ನೀಡಿದ್ದು, ಇದರಲ್ಲಿ 503 ನೋಟಿಸ್‌ಗಳು ಸದಸ್ಯರು ಮೃತರಾದ ಕಾರಣ ವಾಪಸು ಬಂದಿರುತ್ತದೆ. ಈ ಮೃತ ಸದಸ್ಯರಲ್ಲಿ ಸಾಲ ಸುಸ್ತಿ ಬಾಕಿಯಾಗಿರುವ, ಈಗಾಗಲೇ ಷೇರು ಮುಕ್ತಾಯಗೊಳಿಸಿರುವ ಮತ್ತು ಇನ್ನಿತರ ಕಾರಣಗಳಿಂದ 97 ಪ್ರಕರಣಗಳನ್ನು ಹೊರತುಪಡಿಸಿ ಉಳಿದ 406 ಪ್ರಕರಣಗಳಲ್ಲಿ ಷೇರು ಖಾತೆ ಮುಕ್ತಾಯಗೊಳಿಸಿ, ಷೇರು ಹಣವನ್ನು ಅಮಾನತ್ತು ಖಾತೆಗೆ ವರ್ಗಾಯಿಸಲು ಕ್ರಮಕೈಗೊಳ್ಳಲಾಗಿದೆ.

   ಮುಂದುವರೆದು, ದಿನಾಂಕ 01 ಏಪ್ರಿಲ್ 2016 ರಿಂದ 31 ಡಿಸೆಂಬರ್ 2025ರವರೆಗೆ ಸಂಘದಿಂದ ನೀಡುವ ಅಂತ್ಯಸಂಸ್ಕಾರದ ಆರ್ಥಿಕ ಸೌಲಭ್ಯವನ್ನು ಪಡೆದು ಈವರೆಗೂ ಷೇರು ವಾಪಸು ಪಡೆಯದ ಒಟ್ಟು 705 ಸದಸ್ಯರ ಕುಟುಂಬದವರಿಗೆ ನೊಂದಣಿ ಅಂಚೆ ಮೂಲಕ ಪತ್ರಿಸಿದ್ದು, ಈ ಪತ್ರ ತಲುಪಿದ 30 ದಿನಗಳೊಳಗಾಗಿ ಸೂಕ್ತ ದಾಖಲೆಗಳನ್ನು ನೀಡಿ ಮೃತ ಸದಸ್ಯರ ಷೇರು ಖಾತೆಯನ್ನು ಮುಕ್ತಾಯಗೊಳಿಸುವ ಬಗ್ಗೆ ಕ್ರಮ

ಕೈಗೊಳ್ಳುವಂತೆ ತಿಳಿಸಿದ್ದು, ಸೂಕ್ತ ದಾಖಲೆ ನೀಡಿ ಷೇರು ಮುಕ್ತಾಯಗೊಳಿಸದ ಪ್ರಕರಣಗಳಲ್ಲಿ ಅಂತಹ ಸದಸ್ಯರ ಷೇರು ಮೊಬಲಗನ್ನು ಮತ್ತು ಅವರ ಬಾಬ್ತು ಸಂಘದಲ್ಲಿರುವ ಇನ್ನಿತರ ಪಾವತಿ ಮೊಬಲಗನ್ನು ಅಮಾನತ್ತು ಖಾತೆಗೆ ವರ್ಗಾಯಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

9. ತೀರ್ಥಹಳ್ಳಿಯಲ್ಲಿ ಸಂಘದ ಕಾರ್ಯಚಟುವಟಿಕೆಗೆ ಅನುಕೂಲವಾಗುವಂತಹ ನಿವೇಶನವನ್ನು ಖರೀದಿಸಲಾಗಿದೆ.

10. ಸಂಘದ 2025-26 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಶ್ರೀ ರವೀಂದ್ರನಾಥ್ ಬಿ.ವಿ., ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರಿಗೆ ನೀಡಲಾಗಿದೆ.

11. ಸಂಘದ ಉಪವಿಧಿ ತಿದ್ದುಪಡಿಗೆ ಸಂಬಂಧಿಸಿದಂತೆ ಕೆಲವು ಅಂಶಗಳಿಗೆ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಇವರು ಅನುಮೋದನೆ ನೀಡಿರುತ್ತಾರೆ.

12. 2025-26ನೇ ಸಾಲಿಗೆ ಠೇವಣಿ ಸಂಗ್ರಹದ ಮಿತಿಯನ್ನು ರೂ.300.00 ಕೋಟಿಗಳಿಗೆ ಮತ್ತು ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲದ ಮೊತ್ತವನ್ನು ರೂ.1,000.00 ಕೋಟಿಗಳಿಗೆ ನಿಗದಿಪಡಿಸಲಾಗಿದೆ.

13. ವರದಿ ಸಾಲಿನಲ್ಲಿ ಸದಸ್ಯರ 47 ಪ್ರಕರಣಗಳಲ್ಲಿ ಮತ್ತು ವರ್ತಕರ 02 ಪ್ರಕರಣಗಳಲ್ಲಿ ಬಡ್ಡಿ ವಿನಾಯಿತಿ ನೀಡಿ ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿದೆ.

14. ಸದಸ್ಯರ ಆರೋಗ್ಯ ವಿಮೆಗೆ ಸಂಬಂಧಿಸಿದಂತೆ ಜಿಲ್ಲಾ ಗ್ರಾಹಕರ ಆಯೋಗದ ತೀರ್ಪಿನ ವಿರುದ್ಧ, ರಾಜ್ಯ ಗ್ರಾಹಕರ ವ್ಯಾಜ್ಯಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣಾ ಹಂತದಲ್ಲಿರುತ್ತದೆ.

15. `ಮಾಮ್‌ಕೋಸ್ ಬ್ರಾಂಡೆಡ್ ಸುಪಾರಿ ತಯಾರಿಕೆ' ಮತ್ತು `ಸಿರಿ ತಾಂಬೂಲ' ತಯಾರಿಕೆಯ ಕುರಿತು ಸಿ.ಎಫ್.ಟಿ.ಆರ್.ಐ.ರವರೊಂದಿಗೆ ಚರ್ಚಿಸಿದ್ದು, ಸಾಧಕ-ಬಾಧಕಗಳನ್ನು ಗಮನಿಸಿ, ಅಗತ್ಯ ಕ್ರಮವಿಡಲಾಗುವುದು.

16. ಸಂಘದಿಂದ `ಸದಸ್ಯರ ಸಮಾಲೋಚನಾ ಸಭೆ'ಯನ್ನು ನಡೆಸುವ ಕುರಿತು ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಇವರು ಉಪವಿಧಿ ತಿದ್ದುಪಡಿ ಮಾಡಿ ನೋಂದಾಯಿಸಿದ್ದು, ಆ ಪ್ರಕಾರ ಈ ಸಾಲಿನಲ್ಲಿ `ಸದಸ್ಯರ ಸಮಾಲೋಚನಾ ಸಭೆ'ಯನ್ನು ನಡೆಸಲು ಕ್ರಮವಿಟ್ಟಿದೆ.

17. ಸಂಘದ ಕಾಸ್ಟ್ ಆಫ್ ಫಂಡ್‌ಗೆ ಅನುಗುಣವಾಗಿ ಬಡ್ಡಿ ದರ ನಿರ್ಧರಣೆ ಮಾಡಿದ್ದು, ಈಗ ಸಾಲದ ಮೇಲೆ ವಿಧಿಸುತ್ತಿರುವ ಬಡ್ಡಿದರ ನ್ಯಾಯಸಮ್ಮತವಾಗಿರುತ್ತದೆ.

18. ಸಂಘದಿಂದ ಆರೋಗ್ಯ ವಿಮಾ ಯೋಜನೆಯನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿತ್ತು. ಇದಕ್ಕಾಗಿ ವಿಮಾ ಕಂಪನಿಯವರು ಕನಿಷ್ಠ 100 ಜನರಾದರೂ ನೋಂದಣಿ ಆಗಬೇಕೆಂದು ತಿಳಿಸಿದ್ದು, ಆದರೆ ಸದಸ್ಯರು ಹೆಚ್ಚಿನ ಆಸಕ್ತಿ ತೋರಿಸದ ಕಾರಣ ಕೇವಲ 7-8 ಜನ ಮಾತ್ರ ನೊಂದಣಿ ಮಾಡಿಕೊಂಡಿದ್ದರಿಂದ ಈ ಯೋಜನೆಯನ್ನು ಕೈಬಿಡಲಾಗಿರುತ್ತದೆ.

*****

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ (ಮಾಮ್‌ಕೋಸ್)

## ಅಭಿವೃದ್ಧಿ ತಃಖ್ತೆ

(ರೂಪಾಯಿಗಳಲ್ಲಿ)

| ಕ್ರ.ಸಂ. | ವಿವರ | 2023–24 | 2024–25 | 2025–26 |
|---|---|---|---|---|
| 1 | ಸದಸ್ಯತ್ವ ('ಎ'ಮತ್ತು'ಸಿ'ತರಗತಿ) | 31,165 | 30634 | 31698 |
| 2 | ಪಾವತಿಯಾದ ಷೇರು ಬಂಡವಾಳ | 8,76,17,950 | 9,02,68,500 | 9,31,48,600 |
| 3 | **ನಿಧಿಗಳು:** | | | |
| | ಆಪದ್ಧನ (ರಿಜರ್ವ್) ನಿಧಿ | 22,58,75,091 | 27,29,64,681 | 29,94,88,668 |
| | ಇತರೆ ನಿಧಿಗಳು | 60,75,90,477 | 66,61,81,911 | 100,75,89,395 |
| 4 | ಠೇವಣಿಗಳು | 207,37,02,286 | 237,48,25,422 | 306,44,04,679 |
| 5 | ಸ್ವಂತ ಬಂಡವಾಳ | 92,10,83,518 | 102,94,15,092 | 149,55,96,319 |
| 6 | ದುಡಿಯುವ ಬಂಡವಾಳ | 420,79,61,717 | 462,68,85,453 | 630,90,20,404 |
| 7 | ಅಡಿಕೆ & ಕಾಳುಮೆಣಸು ಸಂಗ್ರಹಣೆ (ಮೂಟೆ) | 3,03,910 | 2,58,877 | 3,46,747 |
| 8 | ಅಡಿಕೆ & ಕಾಳುಮೆಣಸು ಮಾರಾಟ (ಮೂಟೆ) | 2,71,554 | 2,86,606 | 2,64,734 |
| 9 | ಅಡಿಕೆ ಮತ್ತು ಕಾಳುಮೆಣಸು ಖರೀದಿ | 403,92,87,071 | 687,19,44,730 | 729,68,63,270 |
| 10 | ಅಡಿಕೆ ಮಾರಿದ ಬೆಲೆ (ಕಮಿಷನ್ ಮಾರಾಟ) | 579,92,42,332 | 465,96,12,839 | 489,42,53,301 |
| 11 | ಬಂದ ಕಮೀಷನ್ | 9,45,48,153 | 6,96,61,522 | 7,23,46,859 |
| 12 | ಅಡಿಕೆ ಮತ್ತು ಕಾಳುಮೆಣಸು ಮಾರಾಟ | 382,43,51,501 | 613,42,07,813 | 724,94,53,460 |
| 13 | ಕೊಳೆ ರೋಗದ ಔಷಧಿ ಮತ್ತು ಖಾಲಿ ಚೀಲ & ಇತರೆ ಮಾರಾಟ | 12,33,40,773 | 11,45,24,950 | 14,02,57,981 |
| 14 | ಸದಸ್ಯರಿಗೆ ವಿತರಿಸಿದ ಅಡಿಕೆ ಆಧಾರ ಸಾಲ | 233,99,79,130 | 171,23,17,998 | 374,08,81,567 |
| 15 | ಆಧಾರ ಸಾಲ ವಸೂಲಾದದ್ದು | 221,37,00,013 | 229,94,84,823 | 209,86,90,372 |
| 16 | ಕಟಾವು ಸಾಲ | 33,33,12,296 | 33,99,14,229 | 32,71,90,521 |
| 17 | ಕಟಾವು ಸಾಲ ವಸೂಲಾದದ್ದು | 28,37,67,568 | 34,50,27,388 | 32,14,17,175 |
| 18 | ಕೊಳೆ ರೋಗ ಔಷಧದ ಸಾಲ | 77,88,534 | 52,52,300 | 43,20,911.00 |
| 19 | ಕೊಳೆ ರೋಗ ಔಷಧದ ಸಾಲ ವಸೂಲಾದದ್ದು | 87,28,472 | 65,52,558 | 44,37,543.00 |
| 20 | ವರ್ತಕರಿಗೆ ಕೊಟ್ಟ ಕ್ರೆಡಿಟ್ | 833,18,46,139 | 859,81,14,165 | 847,08,21,867 |
| 21 | ವರ್ತಕರಿಂದ ವಸೂಲಿ | 843,07,07,258 | 883,92,54,046 | 849,17,56,380 |
| 22 | (ಅ) ನಗದು ಮತ್ತು ಬ್ಯಾಂಕ್ ಶಿಲ್ಕು | 28,28,70,867 | 25,35,80,169 | 4,80,77,049 |
| | (ಆ) ಹೊರಗಡೆ ಠೇವಣಿ | 20,87,70,123 | 26,87,82,106 | 31,38,00,095 |
| | (ಇ) ನೆಲೆಗೊಳಿಸಿದ ಸ್ಥಿರ ಆಸ್ತಿಗಳು | 31,64,42,759 | 32,08,48,545 | 30,02,98,878 |
| 23 | ವ್ಯಾಪಾರ ಲಾಭ | 13,82,18,123 | 23,19,70,111 | 36,15,03,070 |
| 24 | ನಿವ್ವಳ ಲಾಭ | 5,25,35,836 | 5,52,62,459 | 9,53,69,655 |
| 25 | ಆಡಿಟ್ ವರ್ಗೀಕರಣ | 'ಎ' | 'ಎ' | 'ಎ' |

## ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ (ಮಾಮ್‌ಕೋಸ್)

## ಸಂಘದ ಅಭಿವೃದ್ಧಿಯನ್ನು ತೋರಿಸುವ ತಃಖ್ತೆ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಸದಸ್ಯರ ಸಂಖ್ಯೆ | ವಸೂಲಾದ ಷೇರು ಹಣ | ಡಿಪಾಸಿಟ್‌ಗಳು | ರಿಸರ್ವ್ ಫಂಡ್ | ಇತರೆ ಫಂಡ್‌ಗಳು | ಬಂದ ಅಡಿಕೆ & ಕಾಳುಮೆಣಸು ಮೂಟೆಗಳು | ನಿವ್ವಳ ಲಾಭ | ಡಿವಿಡೆಂಡ್ ಶೇ. | ಆಡಿಟ್ ವರ್ಗೀಕರಣ |
|---|---|---|---|---|---|---|---|---|---|---|
| 1 | 1939–40 | 659 | 0.16 | – | – | – | 5121 | 0.04 | 6.25 | – |
| 2 | 1949–50 | 2538 | 0.75 | 2.76 | 0.42 | 0.91 | 16002 | 0.34 | 6.25 | – |
| 3 | 1959–60 | 2349 | 1.11 | 10.94 | 1.48 | 4.38 | 23113 | 1.03 | 6.25 | – |
| 4 | 1969–70 | 3474 | 3.16 | 13.86 | 6.16 | 12.06 | 34934 | 3.09 | 9.0 | – |
| 5 | 1999–00 | 12399 | 169.78 | 2264.52 | 365.60 | 700.71 | 128501 | 202.41 | 25.0 | 'ಎ' |
| 6 | 2000–01 | 13124 | 207.69 | 2714.01 | 421.35 | 777.74 | 137992 | 223.17 | 25.0 | 'ಎ' |
| 7 | 2001–02 | 13810 | 237.71 | 2846.95 | 473.43 | 849.95 | 139580 | 120.59 | 15.0 | 'ಬಿ' |
| 8 | 2002–03 | 14883 | 259.63 | 2676.34 | 554.90 | 932.04 | 183443 | 114.27 | 15.0 | 'ಬಿ' |
| 9 | 2003–04 | 15888 | 272.54 | 2638.52 | 555.52 | 940.83 | 166842 | 108.35 | 15.0 | 'ಬಿ' |
| 10 | 2004–05 | 16218 | 276.92 | 2507.33 | 645.80 | 1066.88 | 103833 | 118.98 | 15.0 | 'ಬಿ' |
| 11 | 2005–06 | 16778 | 297.10 | 2178.21 | 677.79 | 1062.05 | 128350 | 154.17 | 15.0 | 'ಎ' |
| 12 | 2006–07 | 17814 | 347.83 | 1754.45 | 739.47 | 1061.35 | 164488 | 170.80 | 15.0 | 'ಎ' |
| 13 | 2007–08 | 18440 | 410.72 | 1628.39 | 832.15 | 1123.79 | 168920 | 189.77 | 15.0 | 'ಎ' |
| 14 | 2008–09 | 19084 | 437.94 | 1701.56 | 889.59 | 1194.86 | 201900 | 200.45 | 15.0 | 'ಎ' |
| 15 | 2009–10 | 19671 | 472.28 | 2822.08 | 948.83 | 1290.10 | 244087 | 233.50 | 15.0 | 'ಎ' |
| 16 | 2010–11 | 19047 | 513.00 | 3460.84 | 1016.36 | 1388.45 | 260170 | 241.62 | 15.0 | 'ಎ' |
| 17 | 2011–12 | 18719 | 537.15 | 3437.25 | 1226.53 | 1495.16 | 265284 | 276.91 | 15.0 | 'ಎ' |
| 18 | 2012–13 | 19390 | 569.48 | 4544.34 | 1261.54 | 1615.12 | 266041 | 280.94 | 15.0 | 'ಎ' |
| 19 | 2013–14 | 20488 | 600.93 | 6303.15 | 1333.44 | 1752.43 | 285357 | 319.04 | 15.0 | 'ಎ' |
| 20 | 2014–15 | 21303 | 627.24 | 9455.86 | 1455.57 | 1869.84 | 262893 | 351.41 | 15.0 | 'ಎ' |
| 21 | 2015–16 | 22342 | 659.98 | 10041.34 | 1398.82 | 2373.61 | 251601 | 305.43 | 15.0 | 'ಎ' |
| 22 | 2016–17 | 23724 | 688.63 | 13197.98 | 1705.81 | 2577.06 | 278693 | 419.59 | 15.0 | 'ಎ' |
| 23 | 2017–18 | 24631 | 717.08 | 11776.14 | 1407.51 | 3316.71 | 233533 | 403.64 | 15.0 | 'ಎ' |
| 24 | 2018–19 | 25494 | 741.43 | 11761.97 | 1128.94 | 3870.59 | 246627 | 306.30 | 15.0 | 'ಎ' |
| 25 | 2019–20 | 26191 | 761.97 | 14492.37 | 1218.51 | 4046.71 | 218175 | 301.65 | 10.0 | 'ಎ' |
| 26 | 2020–21 | 27153 | 778.15 | 17,296.83 | 1,214.82 | 4488.43 | 242333 | 332.16 | 10.0 | 'ಎ' |
| 27 | 2021–22 | 28394 | 793.39 | 20259.83 | 1532.09 | 4883.62 | 254187 | 391.96 | 10.0 | 'ಎ' |
| 28 | 2022–23 | 29737 | 811.43 | 20373.89 | 2092.22 | 5760.03 | 270091 | 441.57 | 10.0 | 'ಎ' |
| 29 | 2023–24 | 31165 | 876.17 | 20737.02 | 2258.75 | 6075.90 | 303910 | 525.35 | 10.0 | 'ಎ' |
| 30 | 2024–25 | 30634 | 902.68 | 23748.25 | 2729.64 | 6661.81 | 258877 | 552.62 | 10.0 | 'ಎ' |
| 31 | 2025–26 | 31698 | 931.48 | 30644.04 | 2994.88 | 10075.89 | 346747 | 953.69 | – | 'ಎ' |

ಮುದ್ರಿತ ಪ್ರತಿ

ತೆರೆದ ಅಂಚೆ



ಇವರಿಗೆ,

ಇವರಿಂದ,

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ (ಮಾಮ್‌ಕೋಸ್)
ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ – 577 204